ಗುರುವಾರ, ಏಪ್ರಿಲ್ 28, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 117 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಅಡುಗೆ ಎಣ್ಣೆ ಕೊರತೆ: ದರ ಏರಿಕೆ ಬರೆ

ರಾಗಿ ನೋಂದಣಿ ಸ್ಥಗಿತ: ರೈತರಿಗೆ ಲಾಠಿ ಏಟು 4

ಅಜಯ್ ದೇವಗನ್ ಟ್ವೀಟ್‌ಗೆ ವ್ಯಾಪಕ ಆಕ್ರೋಶ 5

ಸೆನ್ಸೆಕ್ಸ್	ನಿಫ್ಟಿ	₹/$
56,819 ▼	17,038 ▼	76.55 ▲

ಪ್ರಧಾನಿ ನರೇಂದ್ರ ಮೋದಿ ಆರೋಪಕ್ಕೆ ವಿರೋಧ ಪಕ್ಷಗಳಿಂದ ಆಕ್ಷೇಪ

‘ಕೆಲ ರಾಜ್ಯಗಳಿಂದ ಅನ್ಯಾಯ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಪೆಟ್ರೋಲ್ ಮತ್ತು ಡೀಸೆಲ್‌ನ ಬೆಲೆ ಏರಿಕೆಯ ಹೊರೆಯನ್ನು ಜನರ ಮೇಲಿಂದ ಇಳಿಸಲು ಕಳೆದ ನವೆಂಬರ್‌ನಲ್ಲಿ ಕೇಂದ್ರ ಸರ್ಕಾರವು ಎಕ್ಸೈಸ್ ಸುಂಕವನ್ನು ಇಳಿಸಿತ್ತು. ರಾಜ್ಯಗಳೂ ತಮ್ಮ ಪಾಲಿನ ತೆರಿಗೆಯನ್ನು ಕಡಿತ ಮಾಡುವಂತೆ ಕೋರಿಕೊಂಡಿದ್ದೆವು. ಕೆಲವು ರಾಜ್ಯಗಳು ತೆರಿಗೆ ಕಡಿತ ಮಾಡಿದ್ದವು. ಕೆಲವು ರಾಜ್ಯಗಳು ತೆರಿಗೆ ಕಡಿತ ಮಾಡದೆ, ಅದರ ಲಾಭವನ್ನು ಜನರಿಗೆ ನೀಡಿಲ್ಲ. ಈ ಮೂಲಕ, ಆ ರಾಜ್ಯಗಳು ತಮ್ಮ ನಾಗರಿಕರಿಗೆ ಅನ್ಯಾಯ ಮಾಡಿವೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಆರೋಪಿಸಿದ್ದಾರೆ.

ಪ್ರಧಾನಿ ಅವರ ಈ ಆರೋಪಕ್ಕೆ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ.

ದೇಶದಲ್ಲಿನ ಕೋವಿಡ್ ಪರಿಸ್ಥಿತಿಯನ್ನು ಕುರಿತು ಚರ್ಚಿಸಲು ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಜತೆಗೆ ಬುಧವಾರ ಆಯೋಜಿಸಲಾಗಿದ್ದ ವಿಡಿಯೊ ಸಂವಾದದಲ್ಲಿ ಮೋದಿ ಅವರು ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

ಕೋವಿಡ್ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಈ ವಿಷಯ ಪ್ರಸ್ತಾಪಿಸಿದಕ್ಕೆ ಟಿಎಂಸಿ ಆಕ್ಷೇಪ ವ್ಯಕ್ತಪಡಿಸಿದೆ.

5ನೇ ಪುಟ ನೋಡಿ

‘ಜಿಎಸ್‌ಟಿ ಬಾಕಿ ನೀಡಿ’

ಮುಂಬೈನಲ್ಲಿ ಬಿಕರಿಯಾಗುವ ಪ್ರತಿ ಲೀಟರ್ ಡೀಸೆಲ್‌ನಲ್ಲಿ ಕೇಂದ್ರ ಸರ್ಕಾರಕ್ಕೆ ₹24.38 ತೆರಿಗೆ ಸಂದಾಯವಾದರೆ, ರಾಜ್ಯ ಸರ್ಕಾರಕ್ಕೆ ₹22.37 ತೆರಿಗೆ ದೊರೆಯುತ್ತದೆ. ಪ್ರತಿ ಲೀಟರ್ ಪೆಟ್ರೋಲ್‌ನಲ್ಲಿ ಕೇಂದ್ರಕ್ಕೆ ₹31.58, ರಾಜ್ಯಕ್ಕೆ ₹32.55 ತೆರಿಗೆ ಸಂದಾಯವಾಗುತ್ತಿದೆ. ರಾಜ್ಯ ಸರ್ಕಾರದಿಂದ ಮಾತ್ರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾಗುತ್ತಿಲ್ಲ. ದೇಶದ ಒಟ್ಟು ನೇರ ತೆರಿಗೆ ಆದಾಯದಲ್ಲಿ ಮಹಾರಾಷ್ಟ್ರದ ಪಾಲು ಶೇ 38.3ರಷ್ಟಿದೆ. ದೇಶದ ಒಟ್ಟು ಜಿಎಸ್‌ಟಿಯಲ್ಲಿ ರಾಜ್ಯದ ಪಾಲು ಶೇ 15ರಷ್ಟಿದೆ. ಆದರೆ, ಕೇಂದ್ರ ಸರ್ಕಾರದ ಒಟ್ಟು ತೆರಿಗೆ ಆದಾಯದಲ್ಲಿ ಮಹಾರಾಷ್ಟ್ರಕ್ಕೆ ದೊರೆಯುವುದು ಶೇ 5.5ರಷ್ಟು ಮಾತ್ರ. ಕೇಂದ್ರವು ಮಹಾರಾಷ್ಟ್ರಕ್ಕೆ ₹ 26,500 ಕೋಟಿ ಜಿಎಸ್‌ಟಿ ಪರಿಹಾರ ನೀಡಬೇಕಿದೆ. ಅದನ್ನು ಮೊದಲು ನೀಡಲಿ

ಉದ್ಧವ್ ಠಾಕ್ರೆ, ಮಹಾರಾಷ್ಟ್ರ ಮುಖ್ಯಮಂತ್ರಿ

ವಿಶೇಷ ಸಂದರ್ಭದಲ್ಲಿ ಸೆಸ್ ಮತ್ತು ಸರ್‌ಚಾರ್ಜ್‌ಗಳನ್ನು ಆರು ತಿಂಗಳಿಂದ ಒಂದು ವರ್ಷದ ಸೀಮಿತ ಅವಧಿಯವರೆಗೆ ಮಾತ್ರ ಏರಿಕೆ ಮಾಡಲು ಕಾನೂನಿನಲ್ಲಿ ಅವಕಾಶವಿದೆ. ಆದರೆ ಕೇಂದ್ರ ಸರ್ಕಾರವು ಸೆಸ್ ಮತ್ತು ಸರ್‌ಚಾರ್ಜ್‌ಗಳನ್ನು ಏರಿಕೆ ಮಾಡಿದೆ. ಆದರೆ ವರ್ಷಗಳ ನಂತರವೂ ಇಳಿಕೆ ಮಾಡಿಲ್ಲ. ಇದರಿಂದಲೇ ಬೆಲೆ ಏರಿಕೆಯಾಗುತ್ತಿದೆ. ಕೇರಳ ಸರ್ಕಾರವು ಆರು ವರ್ಷಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು (ವ್ಯಾಟ್) ಒಂದು ರೂಪಾಯಿಯಷ್ಟೂ ಏರಿಕೆ ಮಾಡಿಲ್ಲ. ತೆರಿಗೆ ಕಡಿತ ಮಾಡಿ ಎಂದು ನಮಗೆ ಹೇಳಿದರೆ, ಎಲ್ಲಿಂದ ಕಡಿತ ಮಾಡುವುದು? ಜನರ ಹಾದಿತಪ್ಪಿಸುವಂತಹ ಮಾತುಗಳನ್ನು ಪ್ರಧಾನಿ ಆಡಬಾರದು

ಕೆ.ಎನ್.ಬಾಲಗೋಪಾಲ್, ಕೇರಳ ಹಣಕಾಸು ಸಚಿವ

ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯನ್ನು ನಿಯಂತ್ರಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ತಮ್ಮ ಆರ್ಥಿಕ ನಿರ್ವಹಣೆಯ ವೈಫಲ್ಯದ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಮೋದಿ ಅವರು ರಾಜ್ಯಗಳನ್ನು ದೂಷಿಸುತ್ತಿದ್ದಾರೆ. ಕೇಂದ್ರ ಸರ್ಕಾರವು ಎಕ್ಸೈಸ್ ಸುಂಕ ಕಡಿತ ಮಾಡಿದ್ದು ಅತ್ಯಂತ ಕಡಿಮೆ ಮತ್ತು ತೀರಾ ತಡವಾಗಿ. ರಾಜ್ಯಗಳಿಗೆ ನೀಡಬೇಕಿರುವ ಜಿಎಸ್‌ಟಿ ಪರಿಹಾರ ಬಾಕಿಯನ್ನು ಕೇಂದ್ರ ಸರ್ಕಾರ ಮೊದಲು ಚುಕ್ತಾ ಮಾಡಲಿ

ಸೌಗತಾ ರಾಯ್, ಟಿಎಂಸಿ ಸಂಸದ

‘ಏರಿಕೆ ವಾಪಸ್ ಪಡೆಯಿರಿ’

‘ಕಾಂಗ್ರೆಸ್‌ನ ಯುಪಿಎ ಸರ್ಕಾರವಿದ್ದಾಗ ಪ್ರತಿ ಲೀಟರ್ ಪೆಟ್ರೋಲ್ ಮೇಲೆ ₹9.48 ಮತ್ತು ಪ್ರತಿ ಲೀಟರ್ ಡೀಸೆಲ್ ಮೇಲೆ ₹3.56 ಎಕ್ಸೈಸ್ ಸುಂಕ ವಿಧಿಸಲಾಗುತ್ತಿತ್ತು. ಮೋದಿ ಸರ್ಕಾರದಲ್ಲಿ ಪ್ರತಿ ಲೀಟರ್ ಪೆಟ್ರೋಲ್‌ಗೆ ₹27.90 ಮತ್ತು ಪ್ರತಿ ಲೀಟರ್ ಡೀಸೆಲ್‌ಗೆ ₹21.80 ಎಕ್ಸೈಸ್ ಸುಂಕ ವಿಧಿಸಲಾಗುತ್ತಿದೆ. ನೀವು ಪ್ರತಿ ಲೀಟರ್ ಪೆಟ್ರೋಲ್ ಮೇಲೆ ₹18.42 ಮತ್ತು ಪ್ರತಿ ಲೀಟರ್ ಡೀಸೆಲ್ ಮೇಲೆ ₹18.24ರಷ್ಟು ಮಾಡಿದ ಏರಿಕೆಯನ್ನು ವಾಪಸ್ ಪಡೆಯಿರಿ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಆಗ್ರಹಿಸಿದ್ದಾರೆ.

‘ಆರ್ಥಿಕ ಪರಿಸ್ಥಿತಿ ಆಧರಿಸಿ ನಿರ್ಧಾರ’

ಬೆಂಗಳೂರು: ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ಇಳಿಕೆ ಕುರಿತಂತೆ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಆಧರಿಸಿ ತೀರ್ಮಾನಿಸಲಾಗುವುದು ಎಂದು ಸಿ.ಎಂ ಬಸವರಾಜ ಬೊಮ್ಮಾಯಿ ಹೇಳಿದರು.

5ನೇ ಪುಟ ನೋಡಿ

‘ಪಿಎಂ ಸ್ವಾನಿಧಿ’ ಎರಡು ವರ್ಷ ಮುಂದುವರಿಕೆ

ನವದೆಹಲಿ (ಪಿಟಿಐ): ಬೀದಿ ಬದಿ ವ್ಯಾಪಾರಿಗಳಿಗೆ ಕಿರುಸಾಲ ನೀಡುವ ‘ಪಿಎಂ ಸ್ವಾನಿಧಿ’ ಯೋಜನೆಯನ್ನು 2024ರ ಡಿಸೆಂಬರ್‌ವರೆಗೆ ಮುಂದುವರಿಸಲು ಕೇಂದ್ರ ಸರ್ಕಾರ ಬುಧವಾರ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಮೇಲಿನ ಸಂಪುಟ ಸಮಿತಿ ಸಭೆಯು ಈ ಯೋಜನೆಯ ಮುಂದುವರಿಕೆಗೆ ಅನುಮೋದನೆ ನೀಡಿತು ಎಂದು ಕೇಂದ್ರ ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪಿಎಸ್‌ಐ ಅಕ್ರಮ: ಅಮೃತ್ ಪಾಲ್ ವರ್ಗ

ಬೆಂಗಳೂರು: 545 ಪಿಎಸ್‌ಐ ಹುದ್ದೆಗಳಿಗೆ ನೇಮಕಾತಿಯ ಅಕ್ರಮಗಳು ಹೊರಬರುತ್ತಿರುವ ಮಧ್ಯೆಯೇ ಪೊಲೀಸ್ ನೇಮಕಾತಿ ಮಂಡಳಿ ಎಡಿಜಿಪಿ ಅಮೃತ್ ಪಾಲ್ ಅವರನ್ನು ರಾಜ್ಯ ಸರ್ಕಾರ ಬುಧವಾರ ವರ್ಗಾವಣೆ ಮಾಡಿದೆ.

ಅಪರಾಧ ಮತ್ತು ತಾಂತ್ರಿಕ ಸೇವೆ ಘಟಕದ ಎಡಿಜಿಪಿ ಆರ್.ಹಿತೇಂದ್ರ ಅವರಿಗೆ ಪೊಲೀಸ್ ನೇಮಕಾತಿ ಮಂಡಳಿ ಎಡಿಜಿಪಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಅಮೃತ್ ಪಾಲ್ ಅವರನ್ನು ಆಂತರಿಕ ಭದ್ರತಾ ವಿಭಾಗದ ಎಡಿಜಿಪಿಯಾಗಿ ನೇಮಿಸಲಾಗಿದೆ.

ಅಕ್ರಮಗಳು ಖಚಿತವಾದಂತೇ ಪಾಲ್ ಅವರ ವರ್ಗಾವಣೆಗೆ ಪೊಲೀಸ್ ವಲಯದಲ್ಲೇ ಒತ್ತಡ ಹೆಚ್ಚಾಗಿತ್ತು.

‘ಅಕ್ರಮ ಕುರಿತು ಕೆಲ ಅಭ್ಯರ್ಥಿಗಳು ನೇರವಾಗಿ ದೂರು ನೀಡಿದ್ದರೂ ಪಾಲ್ ನಿರ್ಲಕ್ಷ್ಯ ವಹಿಸಿದ್ದರು. ಪ್ರಕರಣದಲ್ಲಿ ಇಲಾಖೆಯ ಕೆಲ ಅಧಿಕಾರಿಗಳೂ ಶಾಮೀಲಾಗಿರುವ ಶಂಕೆಗಳಿವೆ. ಅಮೃತ್ ಪಾಲ್ ಅಲ್ಲದೆ, ಪರೀಕ್ಷೆ ಪ್ರಕ್ರಿಯೆಯಲ್ಲಿ ಭಾಗಿಯಾದ ಕೆಲ ಅಧಿಕಾರಿಗಳ ವರ್ಗಾವಣೆ ಕುರಿತು ಚರ್ಚೆ ನಡೆದಿದೆ’ ಎಂದು ಗೃಹ ಇಲಾಖೆ ಮೂಲಗಳು ಹೇಳಿವೆ.

ಕೋವಿಡ್ 4ನೇ ಅಲೆ ನಿಯಂತ್ರಣಕ್ಕಾಗಿ ಸಿ.ಎಂಗಳ ಜತೆಗೆ ಸಭೆ

ಅನಗತ್ಯ ನಿರ್ಬಂಧ ಬೇಡ: ಪ್ರಧಾನಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ನಿಯಂತ್ರಿಸುವ ವಿಚಾರದಲ್ಲಿ ಅನಗತ್ಯ ನಿರ್ಬಂಧಗಳನ್ನು ಹೇರಬಾರದು ಎಂದು ಪ್ರಧಾನಿ ನರೇಂದ್ರ ಮೋದಿ ಸೂಚಿಸಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೋವಿಡ್ ನಾಲ್ಕನೇ ಅಲೆ ನಿಯಂತ್ರಿಸುವ ಸಂಬಂಧ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಪ್ರಧಾನಿ ಬುಧವಾರ ನಡೆಸಿದ ವಿಡಿಯೊ ಸಂವಾದದಲ್ಲಿ ಭಾಗವಹಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಅಗತ್ಯ ಇರುವಷ್ಟು ನಿರ್ಬಂಧಗಳನ್ನು ಮಾತ್ರ ಜಾರಿಗೊಳಿಸಲು ಪ್ರಧಾನಿ ನಿರ್ದೇಶನ ನೀಡಿದ್ದಾರೆ’ ಎಂದರು.

‘ಲಸಿಕೆ ನೀಡುವುದನ್ನು ಚುರುಕುಗೊಳಿಸಬೇಕು. 6 ವರ್ಷದಿಂದ 12 ವರ್ಷದೊಳಗಿನ ಮಕ್ಕಳಿಗೆ ಶಾಲೆಗಳಲ್ಲಿ ಲಸಿಕಾ ಅಭಿಯಾನ ನಡೆಸಬೇಕು. 15ರಿಂದ 18 ವರ್ಷದೊಳಗಿನವರು, 60 ವರ್ಷ ಮೇಲ್ಪಟ್ಟವರಿಗೂ ಆದ್ಯತೆ ಮೇಲೆ ಲಸಿಕೆ ನೀಡಬೇಕು ಎಂದು ಸೂಚಿಸಿದ್ದಾರೆ. ಅದರಂತೆ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದರು.

‘ಸರ್ಕಾರಿ ಆಸ್ಪತ್ರೆಗಳು, ಖಾಸಗಿ ಆಸ್ಪತ್ರೆಗಳು, ವೈದ್ಯಕೀಯ ಕಾಲೇಜುಗಳಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗೆ ಸಿದ್ಧತೆಗೂ ಪ್ರಧಾನಿ ಸಲಹೆ ನೀಡಿದ್ದಾರೆ. ಅಲ್ಲದೆ, ಆಸ್ಪತ್ರೆಗಳಲ್ಲಿ ಅಗ್ನಿ ಅವಘಡಗಳನ್ನು ತಪ್ಪಿಸಲು ಅಗ್ನಿಶಾಮಕ ಸೌಲಭ್ಯಗಳ ಕುರಿತು ತಪಾಸಣೆಗೂ ಸೂಚಿಸಿದ್ದಾರೆ. ಈ ಬಗ್ಗೆಯೂ ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದರು.

ರಾಜ್ಯದಲ್ಲಿ ಕೋವಿಡ್ ಸ್ಥಿತಿಗತಿ ಕುರಿತು ಪ್ರಧಾನಿಯವರಿಗೆ ಮಾಹಿತಿ ನೀಡಲಾಯಿತು. ಏಪ್ರಿಲ್ 9 ರ ಬಳಿಕ ಬೆಂಗಳೂರಿನಲ್ಲಿ ಸೋಂಕು ಪ್ರಕರಣಗಳ ದೃಢಪ್ರಮಾಣ ಸ್ವಲ್ಪ ಏರಿಕೆಯಾಗಿದೆ. ರಾಜ್ಯದಲ್ಲಿ ನಿತ್ಯ ಬೆಂಗಳೂರಿನಲ್ಲಿ 10,000, ಉಳಿದ ಕಡೆ 20,000 ಮಾದರಿಗಳ ಪರೀಕ್ಷೆ ನಡೆಯುತ್ತಿದೆ. ಅಂತರರಾಷ್ಟ್ರೀಯ ಪ್ರಯಾಣಿಕರಲ್ಲಿ ಶೇ 2ರಷ್ಟು ಮಂದಿಗೆ ಪರೀಕ್ಷೆ ಮಾಡಲಾಗುತ್ತಿದೆ. ಎಂಟು ದೇಶಗಳಿಂದ ಬರುವವರ ಮೇಲೆ ನಿಗಾ ಇರಿಸಲಾಗುತ್ತಿದೆ. ಈ ಎಲ್ಲ ವಿವರಗಳನ್ನು ಪ್ರಧಾನಿಯವರಿಗೆ ನೀಡಲಾಯಿತು ಎಂದರು.

ರಾಜ್ಯದ ಆಸ್ಪತ್ರೆಗಳಲ್ಲಿ ಆಮ್ಲಜನಕ ಸಂಗ್ರಹಣಾ ಸಾಮರ್ಥ್ಯ ಹೆಚ್ಚಿಸಲು, 1,100 ಟನ್ ಆಮ್ಲಜನಕ ಸಂಗ್ರಹಿಸಿಟ್ಟುಕೊಳ್ಳುವ ಸಾಮರ್ಥ್ಯ ವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ 50,000 ಹಾಸಿಗೆಗಳು, ಖಾಸಗಿ ಆಸ್ಪತ್ರೆಗಳಲ್ಲಿ 1 ಲಕ್ಷ ಹಾಸಿಗೆಗಳು ಕೋವಿಡ್ ರೋಗಿಗಳ ಚಿಕಿತ್ಸೆಗೆ ಲಭ್ಯವಿವೆ ಎಂದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಗುರುವಾರ ಉಷ್ಣಾಂಶ 36° ಗರಿಷ್ಠ 23° ಕನಿಷ್ಠ

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ. ನಂತರ ಬಿಸಿಲು ಇರಲಿದೆ

ಮುನ್ಸೂಚನೆ: ಶುಕ್ರವಾರ 36° 23° | ಶನಿವಾರ 36° 23° | ಭಾನುವಾರ 36° 23°

ಗುರುವಾರ • ಏಪ್ರಿಲ್ 28, 2022 ✹ ಸೂರ್ಯೋದಯ: 6:01 ಸೂರ್ಯಾಸ್ತ : 6:34 ಚಂದ್ರೋದಯ: ರಾ. 3:39 ಚಂದ್ರಾಸ್ತ: ಮ. 3:48 ಬುಧವಾರದ ಹವಾಮಾನ : ಗರಿಷ್ಠ 35° ಕನಿಷ್ಠ 23° ಪ್ರಜಾವಾಣಿ

ನಿಧನ



ಶ್ರೀಮತಿ ರಾಮಕ್ಕ
95 ವರ್ಷಗಳು
ದಿ: ಬಿ.ಜಯರಾಂ ರವರ ಧರ್ಮಪತ್ನಿ

ಇವರು ದಿನಾಂಕ: 27.04.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ 28.04.2022ರ ಮಧ್ಯಾಹ್ನ 12 ಗಂಟೆಗೆ ರಾಧ ಫಾರ್ಮ್‌ಹೌಸ್, ಮೋರ್ ಎದುರು, ಬಾಗಲೂರು ರಸ್ತೆ, ಕಟ್ಟೀಗೇನಹಳ್ಳಿ, ಬೆಂಗಳೂರು-64 ರಲ್ಲಿ ನೇರವೇರಿಸಲಾಗುವುದು.

ಇಂತಿ ದುಃಖತಪ್ತ:
ಮಕ್ಕಳು ಮತ್ತು ಮೊಮ್ಮಕ್ಕಳು
ಮೊಬೈಲ್: 9845091138, 9845344442, 9916949594.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ರಾಮನಗರ ವಿಭಾಗ, ಸಂಚಾರ ಶಾಖೆ, ಮೊದಲನೇ ಮಹಡಿ, ವಾಹನ ನಿಲ್ದಾಣ, ಐಜೂರು ವೃತ್ತ, ರಾಮನಗರ–562 159.

ಸಂಖ್ಯೆ.ಕರಾಸಾ.ರಾನವಿ.ಸಂ.ವಾ/165/170/22–23 ದಿ.22.04.2022

"ಸಂಧಾನ ಪ್ರಕಟಣೆ ಸಂಖ್ಯೆ:01&02/2022–23"

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು, ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ **ಚನ್ನಪಟ್ಟಣ, ಕೋಡಂಬಳ್ಳಿ, ಆನೇಕಲ್, ಕೋಡಿಹಳ್ಳಿ, ದೊಡ್ಡ ಮರಳವಾಡಿ, ಕನಕಪುರ ಹಾಗೂ ಮಾಗಡಿ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ/ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗೆ 05 ವರ್ಷಗಳವರೆಗೆ / ತೆರೆದ ಸ್ಥಳದ ಮಳಿಗೆಗೆ 03 ವರ್ಷಗಳವರೆಗೆ ಹಾಗೂ ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಖಾಲಿ ಇರುವ ಹೋರ್ಡಿಂಗ್ಸ್ / ಗ್ಲೋಸೈನ್ಸ್ / ಪ್ಲಾಟ್‌ಫಾರಂ ಫಲಕಗಳ ಜಾಹೀರಾತುಗಳಿಗೆ 05 ವರ್ಷಗಳವರೆಗೆ ಸಂಧಾನದ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ದಿ:18.05.2022ರಂದು 15.00 ಗಂಟೆಗೆ** ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು / ಪ್ರತಿನಿಧಿಗಳ ಎದುರು ಸಂಧಾನ ಸಭೆಯನ್ನು ನಡೆಸಲಾಗುವುದು. ಸಂಧಾನ ಅರ್ಜಿಗಳನ್ನು **ದಿನಾಂಕ: 23.04.2022 ರಿಂದ ದಿನಾಂಕ:17.05.2022ರ 15.00 ಗಂಟೆಗಳವರೆಗೆ** ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562159ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಮೊಬೈಲ್ ಸಂ:7760990861 ಹಾಗೂ 7760990852.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ : ರಾಮನಗರ

ವಾಸಾಸಂಇ/ವಾಪ್ರ/ಜಗದಾಳೆ ಅಡ್ವರ್ಟೈಸಿಂಗ್/309/2022–23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸೌಮ್ಯಾ ಮನೆಯಲ್ಲಿದ್ದ ದಾಖಲೆ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಮಲ್ಲೇಶ್ವರ ಠಾಣೆ ಪೊಲೀಸರು, ಮೈಸೂರಿಗೆ ಭೇಟಿ ನೀಡಿ ಆರೋಪಿ ಸೌಮ್ಯಾ ಅವರ ಮನೆಯಲ್ಲಿ ತಪಾಸಣೆ ನಡೆಸಿದ್ದಾರೆ.

'ತನಿಖಾ ತಂಡದವರು ಮೈಸೂರಿಗೆ ತೆರಳಿ ಸೌಮ್ಯಾ ಅವರ ಮನೆಯಲ್ಲಿ ಶೋಧಕಾರ್ಯ ನಡೆಸಿದ್ದಾರೆ. ಅಲ್ಲಿ ಕೆಲ ಮಹತ್ವದ ದಾಖಲೆಗಳು ಲಭ್ಯವಾಗಿದ್ದು, ಅವುಗಳನ್ನು ಜಪ್ತಿ ಮಾಡಿದ್ದಾರೆ' ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ 'ಪ್ರಜಾವಾಣಿ'ಗೆ ತಿಳಿಸಿದರು.

'ಸೌಮ್ಯಾ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಪ್ರೊ.ಎಚ್. ನಾಗರಾಜ್ ಅವರ ವಿಚಾರಣೆ ಮುಂದುವರಿಸಲಾಗಿದೆ. ಅವರಿಂದ ಕೆಲ ಮಾಹಿತಿಗಳನ್ನು ಕಲೆಹಾಕಲಾಗಿದೆ. ಅದರ ಆಧಾರದಲ್ಲಿ ತನಿಖೆ ನಡೆಸಲಾಗುತ್ತಿದೆ' ಎಂದರು.

'ಸೌಮ್ಯಾ ಹಾಗೂ ನಾಗರಾಜ್ ಅವರನ್ನು ಬಿಟ್ಟು ಮತ್ಯಾರನ್ನೂ ವಿಚಾರಣೆಗೆ ಕರೆಸಿಲ್ಲ. ತನಿಖೆಗೆ 60 ದಿನಗಳ ಕಾಲಾವಕಾಶ ಇದೆ. ಪರೀಕ್ಷಾ ಅಕ್ರಮ ಹೇಗೆ ನಡೆಯಿತು, ಇದರಲ್ಲಿ ಯಾರೆಲ್ಲಾ ಭಾಗಿಯಾಗಿದ್ದಾರೆ, ಪರೀಕ್ಷೆಯ ದಿನ ಯಾರಿಗೆಲ್ಲಾ ಪ್ರಶ್ನೆಪತ್ರಿಕೆ ಸೋರಿಕೆಯಾಗಿತ್ತು, ಅವರಿಗೆ ಅದು ಹೇಗೆ ಲಭಿಸಿತು.... ಹೀಗೆ ವಿವಿಧ ಆಯಾಮಗಳಿಂದಲೂ ತನಿಖೆ ನಡೆಸಿ ಮಾಹಿತಿ ಕಲೆ ಹಾಕಲಾಗುತ್ತಿದೆ. ಅಗತ್ಯವಿದ್ದರೆ ಮತ್ತಷ್ಟು ಮಂದಿಯನ್ನು ವಿಚಾರಣೆಗೆ ಕರೆಸಿ ಅವರಿಂದಲೂ ಮಾಹಿತಿ ಸಂಗ್ರಹಿಸುತ್ತೇವೆ' ಎಂದೂ ಹೇಳಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೋವಿಡ್ ಲಸಿಕೆ: ಶೇ 96 ಮಂದಿಗೆ ಎರಡನೇ ಡೋಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಲಸಿಕೆ ಕಾರ್ಯಕ್ರಮದಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಲಾಗಿದೆ. 18 ರ್ಷ ಮೇಲಿನವರಲ್ಲಿ ಶೇ 102 ರಷ್ಟು ಮಂದಿ ಮೊದಲ ಡೋಸ್ ಹಾಗೂ ಶೇ 96 ರಷ್ಟು ಮಂದಿ ಎರಡನೇ ಡೋಸ್ ಪಡೆದುಕೊಂಡಿದ್ದಾರೆ ಎಂದು ಬಿಬಿಎಂಪಿ ತಿಳಿಸಿದೆ.

15ರಿಂದ 17 ವರ್ಷ ವಯೋಮಾನದ ಎಲ್ಲ ಮಕ್ಕಳು ಮೊದಲ ಡೋಸ್ ಪಡೆದುಕೊಂಡಿದ್ದಾರೆ. 12-14 ವರ್ಷ ವಯೋಮಾನದ ಮಕ್ಕಳು ಕನಿಷ್ಠ ಒಂದು ಡೋಸ್ ಪಡೆದುಕೊಂಡಿದ್ದಾರೆ. ಎಲ್ಲ ಅರ್ಹ ಫಲಾನುಭವಿಗಳಿಗೆ ಆದಷ್ಟು ಶೀಘ್ರವಾಗಿ ಲಸಿಕೆ ನೀಡುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿವೆ.

'ಕೋವಿಡ್ ನಾಲ್ಕನೇ ಅಲೆಯನ್ನು ಸಮರ್ಥವಾಗಿ ಎದುರಿಸಲು ಎಲ್ಲ ಅರ್ಹ ಫಲಾನುಭವಿಗಳು ಆದಷ್ಟು ಬೇಗ ಮುನ್ನೆಚ್ಚರಿಕಾ ಲಸಿಕೆ ಹಾಕಿಸಿಕೊಳ್ಳುವುದು ಅಗತ್ಯ. ಅರ್ಹ ಫಲಾನುಭವಿಗಳು ನಿಮ್ಮ ಹತ್ತಿರದ ಲಸಿಕಾ ಕೇಂದ್ರಕ್ಕೆ ಭೇಟಿ ನೀಡಬಹುದು. 60 ವರ್ಷ ಮೇಲಿನವರು, ಆರೋಗ್ಯ ಕಾರ್ಯಕರ್ತರು ಮತ್ತು ಮುಂಚೂಣಿ ಕಾರ್ಯಕರ್ತರು ಸರ್ಕಾರಿ ಕೋವಿಡ್ ಲಸಿಕಾ ಕೇಂದ್ರಗಳಲ್ಲಿ ಉಚಿತವಾಗಿ ಮುನ್ನೆಚ್ಚರಿಕೆ ಡೋಸ್ ಪಡೆಯಬಹುದು' ಎಂದು ಬಿಬಿಎಂಪಿ ವಿಶೇಷ ಆಯುಕ್ತ ಡಾ.ಕೆ.ವಿ.ತ್ರಿಲೋಕಚಂದ್ರ ತಿಳಿಸಿದರು.

ಬಿಬಿಎಂಪಿಯ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೋವಿಶೀಲ್ಡ್ (18 ವರ್ಷ ಮೇಲಿನವರಿಗೆ) ಕೋವ್ಯಾಕ್ಸಿನ್ (15 ವರ್ಷ ಮೇಲಿನವರಿಗೆ), ಕೋರ್ಬೆವ್ಯಾಕ್ಸ್ (12-14 ವರ್ಷದೊಳಗಿನವರಿಗೆ) ಒಂದನೇ ಡೋಸ್ , ಎರಡನೇ ಡೋಸ್ ಮತ್ತು ಮುನ್ನೆಚ್ಚರಿಕೆ ಡೋಸ್ (ಮುಂಚೂಣಿ ಕಾರ್ಯಕರ್ತರು, ಆರೋಗ್ಯ ಕಾರ್ಯಕರ್ತರು, ಮತ್ತು 60 ವರ್ಷ ಮೇಲಿನವರಿಗೆ) ಅನ್ನು ಉಚಿತವಾಗಿ ನೀಡಲಾಗುತ್ತಿದೆ.

18 ರಿಂದ 59 ವರ್ಷದೊಳಗಿನವರು ಖಾಸಗಿ ಲಸಿಕಾ ಕೇಂದ್ರಗಳಲ್ಲಿ (ಖಾಸಗಿ ಆಸ್ಪತ್ರೆ ಅಥವಾ ಲಸಿಕೆ ಕೇಂದ್ರ) ಮುನ್ನೆಚ್ಚರಿಕೆ ಡೋಸ್ ಪಡೆದುಕೊಳ್ಳಬಹುದು. ಖಾಸಗಿ ಕೇಂದ್ರಗಳಲ್ಲಿ ಪ್ರತಿ ಡೋಸ್‌ಗೆ ₹ 386 ದರ ನಿಗದಿಪಡಿಸಲಾಗಿದೆ. ವಿವರಗಳಿಗೆ apps.bbmpgov.in ನೋಡಬಹುದು ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಗಾಂಜಾ ಮಾರಾಟ: ವಿದ್ಯಾರ್ಥಿಗಳ ಬಂಧನ

ಬೆಂಗಳೂರು: ಗಾಂಜಾ ಮಾರಾಟ ಜಾಲದಲ್ಲಿ ಸಕ್ರಿಯರಾಗಿದ್ದ ನಾಲ್ವರು ವಿದ್ಯಾರ್ಥಿಗಳನ್ನು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳು ಬಂಧಿಸಿದ್ದಾರೆ.

'ಬಂಧಿತರೆಲ್ಲ ಕೇರಳದವರು. ಯಲಹಂಕ ನ್ಯೂ ಟೌನ್ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ಆರೋಪಿಗಳು ನಗರದ ಪ್ರತಿಷ್ಠಿತ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದರು. ಇವರಿಂದ 2 ಕೆ.ಜಿ.ಗಾಂಜಾ, ನಾಲ್ಕು ಮೊಬೈಲ್ ಹಾಗೂ ಎಲೆಕ್ಟ್ರಾನಿಕ್ ತೂಕದ ಯಂತ್ರ ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹1.5 ಲಕ್ಷ. ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ್ರಿನ್ಸ್ ಜುವೆಲ್ಲರಿಯಲ್ಲಿ ಕೊಡುಗೆಗಳು

ಬೆಂಗಳೂರು: ಅಕ್ಷಯ ತೃತೀಯಾ ಸಂದರ್ಭದಲ್ಲಿ ಪ್ರಿನ್ಸ್ ಜುವೆಲ್ಲರಿಯು ಗ್ರಾಹಕರಿಗೆ ಹಲವು ಕೊಡುಗೆಗಳನ್ನು ಘೋಷಿಸಿದೆ. ಗ್ರಾಹಕರು ಮುಂಚಿತವಾಗಿ ಚಿನ್ನವನ್ನು ಆನ್‌ಲೈನ್ (www. princejewellery.com) ಮೂಲಕ ಅಥವಾ ಮಳಿಗೆಗಳ ಮೂಲಕ ಬುಕ್ ಮಾಡಿ, ಅಕ್ಷಯ ತೃತೀಯಾ ದಿನ ಅವುಗಳನ್ನು ಪಡೆದುಕೊಳ್ಳಬಹುದು.

ಬುಕ್ ಮಾಡುವ ಸಂದರ್ಭದಲ್ಲಿನ ಬೆಲೆಗೆ ಚಿನ್ನ ಸಿಗುತ್ತದೆ. ಹಳೆಯ ಚಿನ್ನದ ಆಭರಣಗಳನ್ನು ಹೊಸ ಆಭರಣಗಳ ಜೊತೆ ವಿನಿಮಯ ಮಾಡಿಕೊಂಡರೆ, ಪ್ರತಿ ಗ್ರಾಂಗೆ ₹ 200 ಉಳಿತಾಯ ಆಗುತ್ತದೆ. ಪ್ರಮಾಣೀಕೃತ ವಜ್ರದ ಆಭರಣಗಳಿಗೆ ಶೇ 15ರಷ್ಟು ರಿಯಾಯಿತಿ, ಬೆಳ್ಳಿಯ ಆಭರಣಗಳಿಗೆ ಮೇಕಿಂಗ್ ವೆಚ್ಚದಲ್ಲಿ ಶೇ 25ರಷ್ಟು ರಿಯಾಯಿತಿ ಇರಲಿದೆ. ಕೊಡುಗೆಯು ಬೆಂಗಳೂರು, ಚೆನ್ನೈ, ಕೊಯಮತ್ತೂರು ಮತ್ತು ತಿರುವನಂತಪುರದ ಮಳಿಗೆಗಳಲ್ಲಿ ಲಭ್ಯವಿರಲಿದೆ.

ಜೆಸಿಟಿಯುನಿಂದ ಮೇ 1ಕ್ಕೆ ಸಭೆ

ಬೆಂಗಳೂರು: ಮೇ ದಿನದ ಅಂಗವಾಗಿ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯು ಮೇ 1ರಂದು ಪುರಭವನದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆ ಮತ್ತು ಬಹಿರಂಗ ಸಭೆ ಹಮ್ಮಿಕೊಂಡಿದೆ.

ಬೆಳಿಗ್ಗೆ 10 ಗಂಟೆಗೆ ಮೆರವಣಿಗೆ ಹೊರಡಲಿದೆ. 11 ಗಂಟೆಗೆ ನಡೆಯಲಿರುವ ಸಭೆಯನ್ನು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಉದ್ಘಾಟಿಸಲಿದ್ದಾರೆ. ಚಿಂತಕ ಜಿ.ರಾಮಕೃಷ್ಣ ಭಾಗವಹಿಸಲಿದ್ದಾರೆ. ಪ್ರೊ.ಬಾಬು ಮ್ಯಾಥ್ಯೂ ಮಾತನಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

THE KARNATAKA STATE CRICKET ASSOCIATION

M. Chinnaswamy Stadium, Cubbon Road, Bangalore - 560 001.

Tender Notice for In-Stadia Advertisement and Other Services

India Vs South Africa 5th T-20 Match (Night)

T20 (Night) match between India and South Africa is proposed to be held at M. Chinnaswamy Stadium, Bangalore on Sunday, 19th June 2022.

Reputed registered vendors are invited to submit their tender bids for:

(A) IN-STADIA ADVERTISING RIGHTS INCLUDING ADDITIONAL BRANDING SPACE IN THE STADIUM, (B) TICKETING AND GATE CONTROL RIGHTS,(C) BRANDING RIGHTS ON THE DIGITAL VIDEO SCORE BOARD (D) EVENT MANAGEMENT SERVICES.

Quotations are also invited for various services as follows:-

(1) Security Services, (2) Housekeeping and Cleaning (3) Sanitization of premises and related COVID protocol services (4) Baggage Scanner on rent, (5) Match Entertainment, (6) Catering services, (7) Generator and electrical works, (8) Public address system, (9) Event insurance, (10) Food stalls at various stands, (11) Food Safety Officer, (12) Chief Security Officer, (13) Mobile Bio Toilets, (14) and any other services inside the Stadium

Only reputed vendors having statutory compliances including GST compliance are eligible to apply.

Vendor's representatives may visit the stadium for inspection and to collect the documents from CFO's Office at KSCA, M.Chinnaswamy Stadium and submit their tender bids/quotations in sealed covers on or before 4.00 PM Tuesday 10th May, 2022.

Sd/-
Hon. Secretary, KSCA

ನೈಋತ್ಯ ರೈಲ್ವೆ

ನಿರ್ಮಾಣ ಸಂಸ್ಥೆ, ನೈರುತ್ಯ ರೈಲ್ವೇಯು ಕಂದಾಯ/ಅರಣ್ಯ ಇಲಾಖೆಗಳಿಂದ ಕಂದಾಯ ನಿರೀಕ್ಷಕರಾಗಿ ಅಥವಾ ಸಮಾನವಾಗಿ ನಿವೃತ್ತಿ ಹೊಂದಿದವರು ಅರ್ಹ ನಿವೃತ್ತ ರಾಜ್ಯ ಸರ್ಕಾರಿ ನೌಕರರಿಂದ ಅಥವಾ ಸಮಾನವಾದ ಅಥವಾ ಕರ್ನಾಟಕ ರಾಜ್ಯ ಸರ್ಕಾರದ ಪೇ ಬ್ಯಾಂಡ್ 27650–52650, 30350–58250 ರಲ್ಲಿ ವೇತನ ಶ್ರೇಣಿ ಹೊಂದಿದ್ದ ಅಥವಾ 7ನೇ ಸಿಪಿಸಿ ಯ ಪೇ ಲೆವೆಲ್–7 ಅಥವಾ ತತ್ಸಮಾನದಲ್ಲಿ ನಿಯಮಿತ ಗ್ರೂಪ್ 'ಸಿ' ಪೋಸ್ಟ್ ಹೊಂದಿದ್ದವರಿಂದ **ಭೂ ಸ್ವಾಧೀನ ಅಸೋಸಿಯೇಟ್** ಆಗಿ ಗುತ್ತಿಗೆ ಆಧಾರದ ಮೇಲೆ ಮರು – ತೊಡಗಿಸಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸುತ್ತದೆ.

ಒಟ್ಟು ಅವಶ್ಯಕತೆ ಇರುವ ಹುದ್ದೆಗಳ ಸಂಖ್ಯೆ 8 .

ಒಂದೇ ಮತ್ತು ಸ್ಪಷ್ಟವಾದ ಪಿಡಿಎಫ್ ಫೈಲ್‌ನಲ್ಲಿ ಇಮೇಲ್ **recruitment.cnswr@gmail.com** ಮೂಲಕ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **10/05/2022** ಆಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ **www.swr.indianrailways.gov.in ->About Us-> Construction Organisation-> Recruitment** ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಬ್ಬಂದಿ ಅಧಿಕಾರಿ
ನಿರ್ಮಾಣ / ಬೆಂಗಳೂರು ಕಂಟೋನ್ಮೆಂಟ್

PUB/61/AAV/PRB/SWR/2022-23

S.W.Railways | SWRRLY | SWRRLY

ಸಾರ್ವಜನಿಕ ಸೂಚನೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ನಮ್ಮ ಕಕ್ಷೀದಾರರು ಈ ಕೆಳಕಂಡ ಷೆಡ್ಯೂಲ್ ನಲ್ಲಿ ತಿಳಿಸಿರುವ ಸ್ವತ್ತನ್ನು ಸ್ವತ್ತಿನ ಮಾಲೀಕರಾದ 1) ಶ್ರೀ.ಎಲ್.ರವಿ ಶಂಕರ್ ಬಿನ್ ಶ್ರೀ ಲಕ್ಷ್ಮೀ ನಾರಾಯಣಪ್ಪ, ಔಂ.16/18, ದೊಡ್ಡಕೆರೆ ಬಾಹ್ಮಣರ ಬೀದಿ, ಆನೇಕಲ್ ಟೌನ್, ಬೆಂಗಳೂರು ನಗರ ಜಿಲ್ಲೆ – 562106. ಆಧಾರ್ ನಂ.4948 4398 0676, 2) ಶ್ರೀಮತಿ.ಸರಸ್ವತಮ್ಮ ಕೋಂ ಲೇಟ್ ಚಂದ್ರಪ್ಪ, ಶ್ರೀ ಲೋಕೇಶ್ ಬಿನ್ ಶ್ರೀ ಲೇಟ ಚಿಕ್ಕದೇವಯ್ಯ ಮತ್ತು ಇತರರ ಪರವಾಗಿ ನೊಂದಾಯಿತ ಜಿಪಿಎ ಪ್ರತಿನಿಧಿಯಾದ ಶ್ರೀ. ಎಲ್. ರವಿ ಶಂಕರ್ 3) ಶ್ರೀ.ಸಿ.ಮುನಿಯಪ್ಪ, ಬಿನ್ ಶ್ರೀ ಲೇಟ್ ಚಿಕ್ಕ ನಂಜಪ್ಪ @ ಅಣ್ಣಯ್ಯಪ್ಪ. ಮತ್ತು ಇತರರ ಪರವಾಗಿ ನೋದಾಯಿತ ಜಿಪಿಎ ಪ್ರತಿನಿಧಿಯಾದ ಶ್ರೀ.ಪ್ರಸನ್ನ.ಪಿ ಬಿನ್ ಶ್ರೀ.ಪ್ರಕಾಶ್.ಎಸ್ ನಂ.22/8, "ಶ್ರೀ ಮಂಜುನಾಥ ನಿಲಯ", 2ನೇ ಡಿ ಮೇನ್, ಗೋಕುಲ್, ಯಶವಂತಪುರ, ಬೆಂಗಳೂರು–560022 ಆಧಾರ್ ನಂ.7841 2596 0821 ("ಜಮೀನಿನ ಮಾಲೀಖರು). ಇವರ ಜಮೀನಾದ ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಕಸಬ–2 ಹೋಬಳಿ, ಕರ್ಪೂರ ಗ್ರಾಮದಲ್ಲಿರುವ ಕೃಷಿ ಜಮೀನಿಗೆ ಸಂಬಂಧಿಸಿದ ಸರ್ವೆನಂ.162/4 ವಿಸ್ತೀರ್ಣ 03 ಗುಂಟೆಗಳು, ಮತ್ತು ಸರ್ವೆ ನಂ.145/6 ವಿಸ್ತೀರ್ಣ 8 ಗುಂಟೆಗಳು, ಸರ್ವೆ ನಂ.144/7 ವಿಸ್ತೀರ್ಣ 10 ಗುಂಟೆಗಳು, ಸರ್ವೆ ನಂ.149/11 ವಿಸ್ತೀರ್ಣ 11 ಗುಂಟೆಗಳು, ಮತ್ತು ಸರ್ವೆ ನಂ.151/4 ವಿಸ್ತೀರ್ಣ 01 ಗುಂಟೆಗಳು & ಸರ್ವೆ ನಂ.141/3 ವಿಸ್ತೀರ್ಣ 09 ಗುಂಟೆಗಳ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಆಸಕ್ತರಾಗಿದ್ದು (ಈ ಕೆಳಗೆ ಷೆಡ್ಯೂಲ್‌ನಲ್ಲಿ ಸಂಪೂರ್ಣ ವಿವರಗಳನ್ನು ವಿವರಿಸಲಾಗಿದ್ದು ಇನ್ನುಮುಂದೆ "ಷೆಡ್ಯೂಲ್ ಸ್ವತ್ತು" ಎಂದು ಸಂಬೋಧಿಸಲಾಗುತ್ತದೆ.

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಎಲ್ಲಾ ಅಥವಾ ಯಾವುದೇ ಷೆಡ್ಯೂಲ್ ಸ್ವತ್ತಿನ ಮೇಲೆ ಅಧಿಕಾರವನ್ನು, ಹಕ್ಕುಗಳನ್ನು, ಚಾರ್ಜ್, ಲೀನ್ ಅಥವಾ ಮತ್ತಾವುದೇ ವಿಧದ ಹಿತಾಸಕ್ತಿಯನ್ನು ಹೊಂದಿದ್ದಲ್ಲಿ ಅಂತಹ ವ್ಯಕ್ತಿ/ವ್ಯಕ್ತಿಗಳು ಷೆಡ್ಯೂಲ್ ಸ್ವತ್ತಿನ ಮೇಲೆ ತಮ್ಮ ಮಾಲೀಕತ್ವವನ್ನು ರುಜುವಾತು ಮಾಡುವ ದಾಖಲೆಗಳು ಯಾವುದಾದರು ಇದ್ದಲ್ಲಿ ಮತ್ತು ಪ್ರಸ್ತಾಪಿತ ಮಾರಾಟಕ್ಕೆ ಅವರ ಆಕ್ಷೇಪಣೆಗಳನ್ನು ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಅಂತಹ ಕ್ಲೇಮ್/ಕ್ಲೇಮ್‌ಗಳು, ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅವುಗಳನ್ನು ರುಜುವಾತು ಮಾಡುವ ದಾಖಲೆಗಳ ಸಹಿತ ಈ ಸಾರ್ವಜನಿಕ ತಿಳುವಳಿಕೆ ಪ್ರಕಟವಾದ 07 (ಏಳು ದಿನಗಳ) ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಸಲ್ಲಿಸುವುದು. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳನ್ನು ನಮಗೆ ಸಲ್ಲಿಸದಿದ್ದಲ್ಲಿ ಮೇಲ್ಕಾಣಿಸಿದ ಮಾಲೀಕರುಗಳು ಷೆಡ್ಯೂಲ್ ಸ್ವತ್ತಿನ ಮೇಲೆ ಅಧಿಕಾರ ಹಿತಾಸಕ್ತಿ ಮತ್ತು ಹಕ್ಕುಗಳನ್ನು ಹೊಂದಿದ್ದಾರೆ ಎಂದು ಪರಿಬಾವಿಸಲಾಗುವುದು. ತದನಂತರ ನಮ್ಮ ಕಕ್ಷೀದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಅನಿರ್ಬಂಧಿತವಾಗಿ ಮುಂದುವರೆಯಲಿದ್ದಾರೆ ಎಂದು ತಿಳಿಯುವುದು.

ಷೆಡ್ಯೂಲ್ ಸ್ವತ್ತು

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಕಸಬಾ–2 ಹೋಬಳಿ, ಕರ್ಪೂರ ಗ್ರಾಮದಲ್ಲಿರುವ ಕೆಳಗೆ ವಿವರಿಸಿರುವ ವಿವಿಧ ಸರ್ವೆ ನಂಬರ್‌ಗಳಿಗೆ ಸಂಬಂಧಿಸಿದ ಸ್ವತ್ತುಗಳು, ಒಟ್ಟು ವಿಸ್ತೀರ್ಣಗಳು.

ಕ್ರ.ಸಂ	ಸರ್ವೆ ನಂ.	ವಿಸ್ತೀರ್ಣ		ಚಕ್ಕುಬಂದಿ	ಮಾಲೀಕರು
		ಎಕರೆ/ಗಳು	ಗುಂಟೆ/ಗಳು		
1.	162/4	00	03	ಪೂರ್ವಕ್ಕೆ: ಸರ್ವೆ ನಂ.162/2ರ ಜಮೀನು ಪಶ್ಚಿಮಕ್ಕೆ: ಸರ್ವೆ ನಂ.144ರ ಜಮೀನು ಉತ್ತರಕ್ಕೆ: ಸರ್ವೆ ನಂ.162/2ರ ಜಮೀನು ದಕ್ಷಿಣಕ್ಕೆ: ರಸ್ತೆ	ಶ್ರೀ. ಎಲ್. ರವಿ ಶಂಕರ್
2.	145/6	00	08	ಪೂರ್ವಕ್ಕೆ: ಸರ್ವೆ ನಂ.144/4ರ ಜಮೀನು ಪಶ್ಚಿಮಕ್ಕೆ: ಸರ್ವೆ ನಂ.146/2ರ ಜಮೀನು ಉತ್ತರಕ್ಕೆ: ಸರ್ವೆ ನಂ.145/3ರ ಜಮೀನು ದಕ್ಷಿಣಕ್ಕೆ: ಸರ್ವೆ ನಂ.144/5ರ ಜಮೀನು	ಶ್ರೀ. ಎಲ್. ರವಿ ಶಂಕರ್
3.	144/7	00	10	ಪೂರ್ವಕ್ಕೆ: ಸರ್ವೆ ನಂ.162/2ರ ಜಮೀನು ಪಶ್ಚಿಮಕ್ಕೆ: ಸರ್ವೆ ನಂ.145/4ರ ಜಮೀನು ಉತ್ತರಕ್ಕೆ: ಸರ್ವೆ ನಂ.144/3ರ ಜಮೀನು ದಕ್ಷಿಣಕ್ಕೆ: ಸರ್ವೆ ನಂ.144/4ರ ಜಮೀನು	ಶ್ರೀ. ಎಲ್. ರವಿ ಶಂಕರ್
4.	149/11	00	11	ಪೂರ್ವಕ್ಕೆ: ಸರೋಜಮ್ಮನವರ ಜಮೀನು ಪಶ್ಚಿಮಕ್ಕೆ: ಕರ್ನೂರು ಯಲ್ಲಪ್ಪನವರ ಜಮೀನು ಉತ್ತರಕ್ಕೆ: ಕರಗದ ತಿಮ್ಮಯ್ಯನವರ ಜಮೀನು ದಕ್ಷಿಣಕ್ಕೆ: ಡಿ ಕೆಂಪಯ್ಯನವರ ಜಮೀನು	ಶ್ರೀಮತಿ. ಸರಸ್ವತಮ್ಮ & ಶ್ರೀ ಲೋಕೇಶ್ ಮತ್ತು ಇತರರ ಪರವಾಗಿ ನೊಂದಾಯಿತ ಜಿಪಿಎ ಪ್ರತಿನಿಧಿಯಾಗಿ ಶ್ರೀ ಎಲ್.ರವಿ ಶಂಕರ್
5.	151/4	00	01	ಪೂರ್ವಕ್ಕೆ: ಕಾಲು ತಿಮ್ಮಯ್ಯನವರ ಜಮೀನು ಪಶ್ಚಿಮಕ್ಕೆ: ಕರಗದ ತಿಮ್ಮಯ್ಯನವರ ಜಮೀನು ಉತ್ತರಕ್ಕೆ: ಪಟೇಲ್ ರಾಮಯ್ಯನವರ ಜಮೀನು ದಕ್ಷಿಣಕ್ಕೆ: ಹೆಚ್. ಒ. ಕೆಂಪಯ್ಯನವರ ಜಮೀನು	ಶ್ರೀಮತಿ. ಸರಸ್ವತಮ್ಮ & ಶ್ರೀ ಲೋಕೇಶ್ ಮತ್ತು ಇತರರ ಪರವಾಗಿ ನೊಂದಾಯಿತ ಜಿಪಿಎ ಪ್ರತಿನಿಧಿಯಾಗಿ ಶ್ರೀ ಎಲ್.ರವಿ ಶಂಕರ್
6.	141/3	00	09	ಪೂರ್ವಕ್ಕೆ: ನಾಗರತ್ನಮ್ಮನವರ ಜಮೀನು ಪಶ್ಚಿಮಕ್ಕೆ: ಚಿಕ್ಕನಹಳ್ಳಿ ಯಲ್ಲಪ್ಪನವರ ಜಮೀನು ಉತ್ತರಕ್ಕೆ: ಖಾಸಗಿ ಸ್ವತ್ತು ದಕ್ಷಿಣಕ್ಕೆ: ರಸ್ತೆ.	ಶ್ರೀ. ಸಿ.ಮುನಿಯಪ್ಪ ಮತ್ತು ಇತರರ ಪರವಾಗಿ ನೊಂದಾಯಿತ ಜಿಪಿಎ ಪ್ರತಿನಿಧಿಯಾಗಿ ಶ್ರೀ ಪ್ರಸನ್ನ. ಪಿ

28ನೇ ಏಪ್ರಿಲ್, 2022 ದಿನದಂದು

ಮಂಜುನಾಥ ರೆಡ್ಡಿ ಆರ್, ವಕೀಲರು, ಕಛೇರಿ ನಂ.39, ಎಮ್.ಹೆಚ್. ಟವರ್ಸ್, ರೈಲ್ವೆ ಪ್ಯಾರಲಲ್ ರಸ್ತೆ, ನೆಹರು ನಗರ (ಶೇಷಾದ್ರಿಪುರಂ ಕಾಲೇಜು ಹತ್ತಿರ), ಕುಮಾರ ಪಾರ್ಕ್, ಬೆಂಗಳೂರು–560020.
ಫೋನ್: **080-23563344, manjunath.reddy@bluejay.in**

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ (ಹೆಚ್‌ಎಸ್‌ಎಫ್‌ಸಿ)

ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ಅಂತರಿಕ್ಷ ಭವನ, ಬೆಂಗಳೂರು – 94.
ದೂ: (080)22172614/2613

150 YEARS OF CELEBRATING THE MAHATMA

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಕಂಡ ಕಾಮಗಾರಿಗಾಗಿ ಇ–ಟೆಂಡರಿಂಗ್ ಮೂಲಕ ಆನ್‌ಲೈನ್ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ಹೆಸರು ಮತ್ತು ಎನ್‌ಐಟಿ ಸಂಖ್ಯೆ	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಪೂರ್ಣಗೊಳಿಸುವ ಅವಧಿ	ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ	ಇಎಂಡಿ ರೂ.ಗಳಲ್ಲಿ
1	ಬೆಂಗಳೂರು ಮಾರತಹಳ್ಳಿಯಲ್ಲಿನ ಟಿಎಫ್, ಹೆಚ್‌ಎಸ್‌ಎಫ್‌ಸಿ ಕಟ್ಟಡದಲ್ಲಿ ಸಿವಿಲ್, ಪಿಹೆಚ್, ಎಲೆಕ್ಟ್ರಿಕಲ್, ಎಸಿ, ತೋಟಗಾರಿಕೆ ಮತ್ತು ಹೌಸ್‌ಕೀಪಿಂಗ್ ಕಾಮಗಾರಿಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ನಿರ್ವಹಣಾ ಗುತ್ತಿಗೆ. **ಹೆಚ್‌ಎಸ್‌ಎಫ್‌ಸಿ/ಸಿಎಂಜಿ/ಎಂಎಂ/ಸಿ/28/ 2022–23 ಮತ್ತು ದಿನಾಂಕ: 27.04.2022**	ರೂ.61.64 ಲಕ್ಷ	12 ತಿಂಗಳು	28.04.2022 (11.00ಗಂಟೆ) ರಿಂದ 04.05.2022 (23.58 ಗಂಟೆ)	05.05.2022 23.00 ಗಂಟೆವರೆಗೆ	06.05.2022 11.30 ಗಂಟೆವರೆಗೆ	ರೂ. 1,23,280/–

ಟೆಂಡರ್ ವಿಜಾರ್ಡ್‌ನಲ್ಲಿ ನೋಂದಣಿ ಮಾಡಿಕೊಂಡು ಟೆಂಡರ್ ಸಂಸ್ಕರಣಾ ಶುಲ್ಕ ಪಾವತಿಸುವುದರ ಮೂಲಕ ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್ **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮಾರಾಟಗಾರರ ನೋಂದಣಿ ವಿಧಾನವನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು ಮೆ॥ ಐಟಿಐ ಲಿಮಿಟೆಡ್‌ಗೆ ಇ–ಗೇಟ್‌ವೇ ಮೂಲಕ ಪಾವತಿಸುವುದು.

ಆಸಕ್ತ ಟೆಂಡರ್‌ದಾರರು ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ) ವಿವರಗಳಿಗಾಗಿ ವೆಬ್‌ಸೈಟ್ **www.isro.gov.in** ನೋಡುವುದು ಮತ್ತು ಹೆಚ್ಚಿನ ಮಾಹಿತಿ ಹಾಗೂ ಟೆಂಡರ್ ದಸ್ತಾವೇಜುಗಳ ಖರೀದಿಗೆ **www.tenderwizard.com/ISRO** ಗೆ ಭೇಟಿ ನೀಡುವುದು. ತೊಂದರೆಯಾದಲ್ಲಿ ಟೆಂಡರ್‌ದಾರರು ಶ್ರೀ ಧನ್‌ರಾಜ್ ರವರನ್ನು (ಮೆ॥ ಐಟಿಐ ಲಿಮಿಟೆಡ್‌ನ ಪ್ರತಿನಿಧಿ) ಮೊಬೈಲ್ ಸಂಖ್ಯೆ: 9686115308 ಮೂಲಕ ಸಂಪರ್ಕಿಸುವುದು.

ಸಹಿ/- ಸಮೂಹ ನಿರ್ದೇಶಕರು, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Teachers/ Professors

JANASEVA VIDYA KENDRA
Boys Residential School
Channenahalli 20th K.M. Magadi Main Road, Bangalore-562130. Email: 123jsvkhighschool@gmail.com
WANTED TEACHERS
M.Sc, OR B.Sc. B.Ed (PCM)
MA. OR B.A., B.Ed., (English, Social & Kannada)
(English & Kannada Medium Both)
Hindi Teachers (B.Ed)
Wardens (Graduates)
Walk-in Interview
02.05.2022 Monday at 10 AM. at Janaseva Vidyakendra
Contact: 7022428464 9480609078
-Hon Secretary

REQUIRED LADY Teachers for Nursery and Primary Classes with good spoken English.Qualification 2nd PUC/ any Degree, Kindly contact on 9535984562.

Accounts & Finance

WANTED EXPERIENCED Accountant with Computer Knowledge for Garments Show Room in Sultanpet Bengaluru Contact:9341254336

BUSINESS

Business to Business

Business

START_THREAD Business at Home_forTassels,Machine Embroideries.Dealer_enquiry solicited.Gemini Rayon_Embroidery Threads.Call:8095809223

Finance

WANTED INVESTOR 12Cr, 16 Flats Buy Back After 48 Months 10Cr with Flat: 8892501007/ 9606701007

Business Offers

Finance

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

NRI'S INVESTMENT And Finance Available On Low Interest Against Properties,Land & Building,Sites,Flats, Converted& Agriculture Lands Call: 7411265189

BEAUTY & HEALTH

Health Clinic

ANU SPA Massage Therapy Available near Ring RoadBharath Petrol Bunk, Koramangala. Contact: 9035930397/ 6364271680.

MATRIMONIAL

Wedding Arrangements

Cards

WEDDING CARDS WITH PRINTING AT FACTORY RATES AT YOUR DOORSTEP (ALL INDIAN LANGUAGES). Call: 9880324530

REAL ESTATE SELLING

House

Nagarabhavi

NAGARABAVI 40X42 E/S Corner House Near BDA Complex 30X40 East Site Near Ambedkar College: 9449121380

Sites

Hosur Road

APPROX ONE Acre Industrial Land near Attibele Off: Hosur Road for Sale. Brokers Excuse. Contact: 9620938350/ 9844243147.

PUBLIC NOTICE

ಸಾರ್ವಜನಿಕ ಪ್ರಕಟಣೆ

ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರು ಈ ಕೆಳಗಿನ ಷೆಡ್ಯೂಲ್ ಸ್ವತ್ತನ್ನು ಇದರ ಮಾಲೀಕರಾದ ಆರ್. ಮಂಜುನಾಥ್ ಬಿನ್ ದಿವಂಗತ. ರೇವಣಪ್ಪ ರವರಿಂದ ಖರೀದಿಮಾಡಲು ಅಪೇಕ್ಷಿಸಿದ್ದು, ಮೇಲೆ ತಿಳಿಸಿರುವ ಮಾಲೀಕರ ಹೊರತಾಗಿ ಬೇರೆ ಯಾವುದೇ ಇತರೆ ವ್ಯಕ್ತಿಗಳು ಹಿತಾಸಕ್ತಿ ಹೊಂದಿದ್ದಲ್ಲಿ ಅಥವಾ ಉತ್ತರ ವಾರಸ್ಸುದಾರರು ಇದ್ದಲ್ಲಿ ಈ ಪತ್ರಿಕೆಯಲ್ಲಿ ಪ್ರಕಟಿಸಿದ ದಿನಾಂಕದಿಂದ 7 (ಏಳು) ದಿನಗಳಲ್ಲಿ ಸಂಭಂದಪಟ್ಟ ಈ ಕೆಳಕಂಡ ಸಹಿದಾರರ ಕಛೇರಿಗೆ ತಲುಪುವಂತೆ ಸಂಬಂದಪಟ್ಟ ಕಾಗದ ಪತ್ರಗಳನ್ನು ಕಳಿಸತಕ್ಕದ್ದು. ಸದರಿ ವಾಯಿದೆಯೊಳಗೆ ಯಾವುದೆ ಕ್ಲೇಮ್ ಬಾರದಿದ್ದಲ್ಲಿ ಈ ಸ್ವತ್ತಿನ ಬಗ್ಗೆ ಯಾವುದೇ ಕ್ಲೇಮ್‌ಗಳು/ ತಂಟೆತಕರಾರುಗಳು/ ವಾರಸುದಾರರು ಇಲ್ಲವೆಂದು ಭಾವಿಸಿ ಮತ್ತು 7 ದಿನಗಳ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸದೆ ನನ್ನ ಕಕ್ಷಿದಾರರ ಪರವಾಗಿ ಮುಂದಿನ ವ್ಯವಹಾರಗಳನ್ನು ನಿರ್ವಹಿಸಲಾಗುವುದು.

ಷೆಡ್ಯೂಲ್ ವಿವರ

ಬೆಂಗಳೂರು, ಬನಶಂಕರಿ 6ನೇ ಹಂತ 1ನೇ ಬ್ಲಾಕ್,(ಸರ್ವೆ ನಂ.25ರ ತುರಹಳ್ಳಿ)ಬಿ.ಡಿ.ಎ ಪ್ರಕಾರ 1317ನೇ ನಂಬರ್ ಸ್ವತ್ತಿಕ್ಕೆ ಚಕ್ಕುಬಂದಿ:
ಪೂರ್ವಕ್ಕೆ: ಅರಣ್ಯ ಸ್ವತ್ತು,
ಪಶ್ಚಿಮಕ್ಕೆ: ರಸ್ತೆ,
ಉತ್ತರಕ್ಕೆ: 1316ನೇ ನಂಬರ್ ಸೈಟು,
ದಕ್ಷಿಣಕ್ಕೆ: ಬಿ.ಡಿ.ಎ ಲ್ಯಾಂಡ್
ಈ ಮಧ್ಯೆ ಇರುವ ಪೂರ್ವ ಪಶ್ಚಿಮ: 12.00 (ಹನ್ನೆರಡು) ಮೀಟರ್‌ಗಳು, ಉತ್ತರ ದಕ್ಷಿಣ : 9.00 (ಒಂಭತ್ತು) ಮೀಟರ್‌ಗಳು, ಒಟ್ಟು 108.00 ಚದರ ಮೀಟರ್‌ಗಳು ಅಳತೆಯ ಸ್ವತ್ತು

(ಕೆ.ಎಸ್.ವಿಜಯ) ವಕೀಲರು
ನಂ.3/2, 3ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು–560018. Mob: 94486-13617/ 99860-41593.

CHANGE OF NAME

I, **Akshaykumar Nagarajgari** R/a, # 892, 8th Block, Vishweshwaraiah Layout, Viswaneedam Post, have changed my name to **AKSHAY KUMAR NAGARAJ** vide affidavit dated 25-04-2022 before Notary P. N. Nagesha, Bangalore. Henceforth, I shall be called **AKSHAY KUMAR NAGARAJ** only.

I, Venkataswamy Reddy H R, Residing #3 3rd Main Nanjappa Layout Arakere Bannerghatta Road Bangalore-76 have changed my son's name from HITESH YASHWIN REDDY V to HITESH V REDDY vide affidavit dated 26/04/2022 before Hegde Ganapati Venkataraman Notary Bangalore

I, AMARINDER KAUR BATH, Residing at A-402, Orchid Woods Hennur Bagaluru Road Kothanur Post Bengaluru- 560077 have changed my name to AMARINDER KAUR vide affidavit dated 27.04.2022, before notary L. Gopalakrishna, Bangalore. Henceforth I shall be called AMARINDER KAUR only

I, JOSEPH RAVI CHANDER @ D J RAVI CHANDER S/o A Dorai Raj R/a No. 19 St.Johns Church Road, Bangalore- 560005, hereby I declare that above mentioned both names are one and the same person. Vide affidavit dated 27.04.2022 before notary N. Nagappa, Bangalore.

14816364N HAV/MT SATISH KUMAR PANDEY 2ATC My MOTHER Name records SAVITHA Instead of SAVITA DEVI Notary K.V MANI Bangalore

I, SREEMATHI M.H, Residing at #757, 9th Cross, Vidyamanya Nagar Viswaneedam Post Bengaluru- 560091 Karnataka state have changed my name to SRIMATHI. C.K. vide affidavit dated 27.04.2022, before notary Sivakumara M.N. Bengaluru. Henceforth I shall be known as SRIMATHI. C.K. only.

Lost

I, RAVINDRA BABU S have lost the original **M.Phil Certificate** issued by PRIST University, Thanjavur in transit. Finder please **contact : 98805 25788**

TOURS & TRAVEL

Travel

SEND YOUR Parents to NEPAL MUKTINATH. We take care of them. We do Muktinath every month. NALANDA TRAVELS, Kundapura, Mobile: 8310028157

PERSONAL

Change of Name

14825384H HAV/MT ASHOK KUMAR MISHRA 2ATC My DAUGHTER Name records SAKHHI Instead of SAKSHI MISHRA Notary K.V MANI Bangalore

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

PROPERTY CORNER

ಅಂತರರಾಷ್ಟ್ರೀಯ ಮಟ್ಟದ 'ಫಿಟ್ನೆಸ್ ಕೋಚ್' ● ಪ್ರೊ ಕಬಡ್ಡಿ ತರಬೇತುದಾರನಾಗಿ ಆಯ್ಕೆ

'ಆರ್ಚರಿ'ಯಿಂದ ಬದಲಾದ ಬದುಕು

● ಶಿವರಾಜ ರಾಮನಾಳ

ಹೊಸ ಬೆಳಕು

ಬೆಂಗಳೂರು: ಕಾಲೇಜಿನಲ್ಲಿ ಸಾಮಾನ್ಯ ವಿದ್ಯಾರ್ಥಿಯಾಗಿದ್ದ ಯುವಕ ಇಂದು ರಾಷ್ಟ್ರಮಟ್ಟದ ಫಿಟ್ನೆಸ್ ತರಬೇತುದಾರರಾಗಿ ಹೆಸರು ಗಳಿಸಿದ್ದಾರೆ. ಅವರ ಈ ಸಾಧನೆಗೆ ನೆರವಾದದ್ದು ಕಾಲೇಜಿನಲ್ಲಿದ್ದಾಗ ಆಯ್ಕೆ ಮಾಡಿಕೊಂಡಿದ್ದ ಆರ್ಚರಿ!

ನಗರದ ಸರ್ಜಾಪುರ ನಿವಾಸಿ, 28ರ ಹರೆಯದ ಮಹೇಶ್ ಅವರು ಪ್ರೊ ಕಬಡ್ಡಿ ಲೀಗ್ ಗುಜರಾತ್ ತಂಡದ ಫಿಟ್ನೆಸ್ ಕೋಚ್ (ತರಬೇತುದಾರ) ಆಗಿ ಕಾರ್ಯನಿರ್ವಹಿಸಿದ್ದಾರೆ. ಅವರು ಅಂತರರಾಷ್ಟ್ರೀಯ ಕ್ರೀಡಾಪಟುಗಳಿಗೆ ದೇಹಾರೋಗ್ಯದ ಬಗ್ಗೆ ಮಾರ್ಗದರ್ಶನ ನೀಡುತ್ತಾರೆ.

ಕ್ರೀಡೆಯಲ್ಲಿ ಆಸಕ್ತಿ ಹೊಂದಿರದ ಮಹೇಶ್, ಆರ್ಚರಿ ಆಯ್ಕೆ ಮಾಡಿಕೊಂಡಿದ್ದು ಆಕಸ್ಮಿಕ. ಕಾಲೇಜಿನಲ್ಲಿ ನೀಡಿದ ಕ್ರೀಡಾ ಪ್ರಕಟಣೆಯಿಂದ ಪ್ರೇರಿತಗೊಂಡು ಶಿಕ್ಷಕರ ಸಲಹೆಯಂತೆ ಅವರು ಆರ್ಚರಿಗೆ ಸೇರಿದರು. ಮಹೇಶ್ ಅವರ ತಂದೆ ಕಾರು ಚಾಲಕರಾಗಿ ಕೆಲಸ ಮಾಡುತ್ತಾ ತಮ್ಮ ಇಬ್ಬರು ಮಕ್ಕಳಿಗೆ ವಿದ್ಯಾಭ್ಯಾಸ ನೀಡುತ್ತಿದ್ದರು. ಆರ್ಥಿಕ ಸಂಕಷ್ಟದ ಕುಟುಂಬದಿಂದ ಕ್ರೀಡೆಗೆ ನೆರವು ಸಾಧ್ಯವಿರಲಿಲ್ಲ. ಆರ್ಚರಿ ಕಿಟ್ ಖರೀದಿಸಲು ಮಹೇಶ್ ಪರದಾಟ ನಡೆಸಿದ್ದರು. ಸ್ಥಳೀಯ ಶಾಸಕರೊಬ್ಬರ ನೆರವಿನಿಂದ ಆರ್ಚರಿ ಅಭ್ಯಾಸ ಆರಂಭಿಸಿ ರಾಜ್ಯ, ರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನ ನೀಡಿದರು.



ಪ್ರೊ ಕಬಡ್ಡಿ ಕೋಚ್ ಆಗಿ ಮಹೇಶ್

ಆರ್ಚರಿಯಿಂದ ಮಹೇಶ್ ಕಾಲೇಜಿನಲ್ಲಿ ಒಂದು ವಿಷಯದ ಪರೀಕ್ಷೆಗೆ ಹಾಜರಾಗಲಿಲ್ಲ. ಅತ್ತ ಕಾಲೇಜು ಮುಗಿಯುತ್ತಿದ್ದಂತೆ ಅವರು ಸಂಕಷ್ಟಕ್ಕೆ ಸಿಲುಕಿದರು. ಕುಟುಂಬದ ಹದಗೆಟ್ಟ ಆರ್ಥಿಕ ಪರಿಸ್ಥಿತಿಯಿಂದ ಕೆಲಸಕ್ಕೆ ಹೋಗುವ ಅನಿವಾರ್ಯತೆ, ಕ್ರೀಡೆಯಲ್ಲಿನ ಆಸ್ಥೆ... ಇವುಗಳ ನಡುವಿನ ಆಯ್ಕೆ ಕಗ್ಗಂಟಾಯಿತು. ಕುಟುಂಬ ನಿರ್ವಹಣೆಗಾಗಿ ಕೆಲಸಕ್ಕೆ ಹೋಗುವ ಅನಿವಾರ್ಯತೆ ಎದುರಾಯಿತು.

ಕೆಲಸ ಇಲ್ಲದ ಎಷ್ಟೋ ದಿನ ಮಹೇಶ್ ಕ್ರೀಡಾಂಗಣದಲ್ಲಿ ಟಿಕೆಟ್ ಕಲೆಕ್ಷನ್ ಮಾಡುವ ಕೆಲಸ ಮಾಡಿದರು. ಬಳಿಕ ಜಿಮ್ ತರಬೇತುದಾರನ ಕೆಲಸದಿಂದ ಮಹೇಶ್ ಜೀವನದ ದಿಕ್ಕು ಬದಲಾಯಿತು. ಆರ್ಚರಿಯಲ್ಲಿ ಕಲಿತ ಪಟ್ಟುಗಳು ಕೂಡಾ ಇದಕ್ಕೆ ಪೂರಕವಾದವು. ತರಬೇತಿಯ ವೈಜ್ಞಾನಿಕ ಅಂಶಗಳು, ಮಾರುಕಟ್ಟೆ, ವ್ಯವಹಾರ ಮೊದಲಾದ ಅಂಶಗಳ ಬಗ್ಗೆ ಜಿಮ್‌ನಲ್ಲಿ ಮಾಹಿತಿ ಪಡೆದರು.

ಜಿಮ್‌ನಲ್ಲಿ ಕೆಲಸ ತೊರೆದ ನಂತರ ಯುವಜನ ಸೇವಾ ಮತ್ತು ಸಬಲೀಕರಣ ಇಲಾಖೆಯಲ್ಲಿ ಮಹೇಶ್ ತರಬೇತುದಾರರಾಗಿ ಗುತ್ತಿಗೆ ಆಧಾರದ ಮೇಲೆ ಕೆಲಸಕ್ಕೆ ಸೇರಿ ಕ್ರೀಡಾಪಟುಗಳಿಗೆ ಫಿಟ್ನೆಸ್ ತರಬೇತಿ ನೀಡಲು ಆರಂಭಿಸಿದರು. ಆದರೆ, ಕೋವಿಡ್ ಸಂದರ್ಭದಲ್ಲಿ ಕೆಲಸ ಕಳೆದುಕೊಳ್ಳುವಂತಾಯಿತು.

ಕೆಲವು ದಿನಗಳ ಬಳಿಕ ವಿಜಯ ಬ್ಯಾಂಕ್, ಒಲಂಪಿಕ್ ಸಂಸ್ಥೆಯಂಥ ಕ್ರೀಡಾ ತಂಡಗಳಿಗೆ ತರಬೇತಿ ನೀಡಿದರು. ಹೀಗೆ ತರಬೇತಿ ನೀಡಿದ ಕಬಡ್ಡಿ ತಂಡದ ನಾಲ್ವರು ಯುವಕರು ಪ್ರೊ ಕಬಡ್ಡಿ ಲೀಗ್‌ಗೆ ಆಯ್ಕೆಯಾದರು. ಈ ಮೂಲಕ ಅವರು ಮಹೇಶ್ ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ.



ಕಾರ್ಯಕ್ರಮದಲ್ಲಿ (ಎಡದಿಂದ ನಾಲ್ಕನೆಯವರು) ಹೇಮಲತಾ ಮಹಿಷಿ ಅವರು ಎಸ್‌.ಶೋಭಾ ಅವರಿಂದ ಪುಸ್ತಕ ಪಡೆದರು. (ಎಡದಿಂದ) ಎಐಎಂಎಸ್‌ಎಸ್ ಸಂಘಟನೆಯ ಎ.ಶಾಂತಾ, ಸುಧಾ ಕಾಮತ್, ಹೇಮಾವತಿ ಇದ್ದಾರೆ –ಪ್ರಜಾವಾಣಿ ಚಿತ್ರ

ಲೇಖಕಿ ಹೇಮಲತಾ ಮಹಿಷಿ ಪ್ರತಿಪಾದನೆ

ನೇತಾಜಿ ದಾಖಲೆ ಗೋಪ್ಯವಿಡುವ ಅಗತ್ಯವಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಕಣ್ಮರೆ ಕುರಿತ ದಾಖಲೆ ಬಿಡುಗಡೆ ಮಾಡುವುದಾಗಿ ಈಗಿನ ಬಿಜೆಪಿ ಸರ್ಕಾರವೇ ವಾಗ್ದಾನ ನೀಡಿತ್ತು. ಆದರೆ, ಅದು ಈವರೆಗೆ ಬಹಿರಂಗವಾಗಲೇ ಇಲ್ಲ. ಅದನ್ನು ಗೋಪ್ಯವಾಗಿಡುವ ಅಗತ್ಯವೇ ಇಲ್ಲ' ಎಂದು ಲೇಖಕಿ ಹೇಮಲತಾ ಮಹಿಷಿ ಹೇಳಿದರು.

ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯು (ಎಐಎಂಎಸ್‌ಎಸ್) ನಗರದಲ್ಲಿ ಬುಧವಾರ ಆಯೋಜಿಸಿದ್ದ 'ನೇತಾಜಿ ಸುಭಾಷ್‌ಚಂದ್ರ ಬೋಸ್' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸ್ವಾತಂತ್ರ್ಯ ಹೋರಾಟ ಗಾಂಧೀಜಿ, ಕಾಂಗ್ರೆಸ್, ನೇತಾಜಿ ಅವರಿಂದಲೇ ಪ್ರಾರಂಭವಾಗಿದ್ದಲ್ಲ. ಅದು ಶತಮಾನಗಳ ಹಿಂದಿನಿಂದಲೇ ಆರಂಭಗೊಂಡ ಹೋರಾಟ. ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ಅನೇಕರಿದ್ದಾರೆ. ಹೋರಾಟದ ಹೆಸರಲ್ಲಿ ಕೆಲವರಿಗೆ ಅಗತ್ಯಕ್ಕೂ ಮೀರಿದ ಗೌರವ, ಅಧಿಕಾರಗಳೂ ಸಿಕ್ಕಿವೆ. ಆದರೆ, ನೇತಾಜಿ ಅವರನ್ನು ಕಡೆಗಣಿಸುವುದು ಸರಿಯಲ್ಲ' ಎಂದು ಹೇಳಿದರು.

'ಪುಸ್ತಕದಲ್ಲಿ ನೇತಾಜಿ ಅವರ ಚಿತ್ರಗಳು ಸೊಗಸಾಗಿ ಮೂಡಿವೆ. ಪುಸ್ತಕ ಓದಿದಾಗ ಅವರ ಸ್ಥೂಲಚಿತ್ರ ಕಣ್ಣ ಮುಂದೆ ಬರುತ್ತದೆ ಹಾಗೂ ಅವರು ಒಬ್ಬರಾಗಿಯೇ ಎಷ್ಟೆಲ್ಲ ಕೆಲಸಗಳನ್ನು ಮಾಡಿದ್ದರು ಎಂಬ ವಿಚಾರಗಳ ಮೇಲೂ ಪುಸ್ತಕ ಬೆಳಕು ಚೆಲ್ಲಿದೆ' ಎಂದು ಹೇಳಿದರು.

ಸಂಘಟನೆಯ ಉಪಾಧ್ಯಕ್ಷೆ ಸುಧಾ ಕಾಮತ್,'ಗಾಂಧೀಜಿ ಮತ್ತು ನೇತಾಜಿ ನಡುವೆ ವೈಯಕ್ತಿಕ ಸಂಘರ್ಷ ಇರಲಿಲ್ಲ. ಅವರಿಬ್ಬರ ವಿಚಾರಧಾರೆಗಳ ನಡುವೆ ಸಂಘರ್ಷವಿತ್ತು. ಸ್ವಾತಂತ್ರ್ಯ ಹೋರಾಟ ನೇತಾಜಿ ಅವರ ಹಾದಿಯಲ್ಲಿ ಸಾಗಿದ್ದರೆ, ಶೋಷಣೆರಹಿತ ಸಮಾಜ ನಿರ್ಮಾಣ ಆಗುತ್ತಿತ್ತು' ಎಂದರು.

ರಾಜ್ಯ ಕಾರ್ಯದರ್ಶಿ ಎಸ್. ಶೋಭಾ, 'ಜನರನ್ನು ವಿಭಜಿಸುತ್ತಿರುವ ಶಕ್ತಿಗಳನ್ನು ಹತ್ತಿಕ್ಕಬೇಕು. ಇದಕ್ಕಾಗಿ ನಾವೆಲ್ಲ ಒಗ್ಗೂಡಬೇಕು' ಎಂದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಪುಸ್ತಕ ಬಿಡುಗಡೆ ಮಾಡಿದರು.

ಪುಸ್ತಕ ಪರಿಚಯ
- **ಪುಸ್ತಕ:** ನೇತಾಜಿ ಸುಭಾಷ್ ಚಂದ್ರ ಬೋಸ್
- **ಪ್ರಕಾಶಕರು:** ಎಸ್.ಶೋಭಾ
- **ಪುಟ:** 64
- **ದರ:** ₹20

ಸಿ.ಎಂ ಬೊಮ್ಮಾಯಿ ನಾಳೆ ದೆಹಲಿಗೆ

ಬೆಂಗಳೂರು: ದೇಶದ ಎಲ್ಲ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳು ಮತ್ತು ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಪಾಲ್ಗೊಳ್ಳುವುದಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ದೆಹಲಿಗೆ ತೆರಳುವರು.

ಶನಿವಾರ ಸಮ್ಮೇಳನ ನಡೆಯಲಿದೆ. ಮುಖ್ಯಮಂತ್ರಿಯವರು ಶುಕ್ರವಾರ ರಾತ್ರಿಯೇ ದೆಹಲಿಗೆ ತೆರಳುವರು. ಶನಿವಾರ ಸಮ್ಮೇಳನದಲ್ಲಿ ಪಾಲ್ಗೊಳ್ಳುವರು. ಅವರು ದೆಹಲಿಯಿಂದ ವಾಪಸಾಗುವ ಸಮಯ ಇನ್ನೂ ನಿಗದಿಯಾಗಿಲ್ಲ ಎಂದು ಅವರ ಸಚಿವಾಲಯದ ಮೂಲಗಳು ತಿಳಿಸಿವೆ.

ಸರ್ಕಾರದ ಮಧ್ಯಪ್ರವೇಶಕ್ಕೆ ಕರ್ನಾಟಕ ಪಠ್ಯಪುಸ್ತಕ ಮುದ್ರಕರ ಸಂಘ ಆಗ್ರಹ

ಮುದ್ರಣ ಸಾಮಗ್ರಿ ಬೆಲೆ ಹೆಚ್ಚಳ ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಚ್ಚಾ ಕಾಗದ ಹಾಗೂ ಮುದ್ರಣ ಸಾಮಗ್ರಿಗಳ ಬೆಲೆ ಹೆಚ್ಚಳದಿಂದ ಮುದ್ರಣ ವಲಯ ತತ್ತರಿಸಿದೆ. ಮುದ್ರಣಕಾರರು ಸಮಸ್ಯೆಗೆ ಸಿಲುಕಿದ್ದಾರೆ. ರಾಜ್ಯ ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಈ ಸಮಸ್ಯೆ ಪರಿಹರಿಸಬೇಕು' ಎಂದು ಒತ್ತಾಯಿಸಿ ಕರ್ನಾಟಕ ಪಠ್ಯಪುಸ್ತಕ ಮುದ್ರಕರ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದ್ದಾರೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಸೇರಿದ್ದ ಸದಸ್ಯರು 'ಎಂಪಿಎಂ ಕಾರ್ಖಾನೆ ಆರಂಭಿಸಿ', 'ಏರಿಕೆ ಆಗಿರುವ ಮುದ್ರಣ ಕಾಗದದ ಬೆಲೆ ಇಳಿಸಿ', 'ಬೀದಿ ಪಾಲಾಗುತ್ತಿರುವ ಮುದ್ರಣ ಕಾರ್ಮಿಕರನ್ನು ಉಳಿಸಿ' ಎಂಬ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು.

'1 ಟನ್ ಕಾಗದದ ಬೆಲೆ ಸುಮಾರು ₹60 ಸಾವಿರದಿಂದ ₹90 ಸಾವಿರಕ್ಕೆ ಏರಿಕೆಯಾಗಿದೆ. ಹೀಗಾದರೆ ನಾವು ಉದ್ಯಮ ನಡೆಸುವುದಾದರೂ ಹೇಗೆ. ಶಾಯಿ (ಇಂಕ್), ಪ್ಲೇಟ್ ಹಾಗೂ ಇತರ ರಾಸಾಯನಿಕ ವಸ್ತುಗಳ ಬೆಲೆ ಗಗನಮುಖಿಯಾಗಿದೆ. ಇದರಿಂದ ಪಠ್ಯಪುಸ್ತಕ, ವೃತ್ತಪತ್ರಿಕೆಗಳನ್ನು ಮುದ್ರಣ ಮಾಡಲಾಗದ ಪರಿಸ್ಥಿತಿ ಎದುರಾಗಿದೆ. ನಮ್ಮ ಸಮಸ್ಯೆಯನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಸ್ಥಳೀಯ ಮುದ್ರಕರ ಬೇಡಿಕೆಗೆ ಅನುಗುಣವಾಗಿ ಆದ್ಯತೆಯ ಮೇಲೆ ಅಗತ್ಯ ಪ್ರಮಾಣದಲ್ಲಿ ಕಾಗದ ಪೂರೈಸುವಂತೆ ಕಾಗದ ಸರಬರಾಜು ಮಾಡುವ ಕಾರ್ಖಾನೆಗಳಿಗೆ ನಿರ್ದೇಶಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.



ಕರ್ನಾಟಕ ಪಠ್ಯ ಪುಸ್ತಕ ಮುದ್ರಕರ ಸಂಘದ ಅಧ್ಯಕ್ಷ ಸತ್ಯಕುಮಾರ್, ಉಪಾಧ್ಯಕ್ಷ ಗೋಪಾಲಕೃಷ್ಣ, ಖಜಾಂಚಿ ನಾಗಸುಂದರ್ ಹಾಗೂ ವಿ.ಶ್ರೀನಿವಾಸ್ ಅವರ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳು ಮತ್ತು ಮುದ್ರಣ ಕ್ಷೇತ್ರದ ಕಾರ್ಮಿಕರು ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

'ವೃತ್ತ ಪತ್ರಿಕೆಗಳ ಮುದ್ರಣಕ್ಕೆ ಬಳಸುವ ಕಾಗದದ ದರವೂ ದುಪ್ಪಟ್ಟಾಗಿದೆ. ಬೆಲೆ ಏರಿಕೆ ಮುಂದುವರಿದರೆ ಪತ್ರಿಕೆಗಳು ಮುದ್ರಣವನ್ನೇ ನಿಲ್ಲಿಸಬೇಕಾದ ಸ್ಥಿತಿ ನಿರ್ಮಾಣವಾಗಲಿದೆ' ಎಂದು ಆತಂಕ ವ್ಯಕ್ತಪಡಿಸಿದರು.


'ಮುಂಗಡವಾಗಿ ಹಣ ಪಾವತಿ ಮಾಡಿದರೂ ಮುದ್ರಣ ಕಾಗದ ದೊರೆಯುತ್ತಿಲ್ಲ. ಮಾರ್ಚ್‌ನಿಂದ ಜೂನ್ ಅವಧಿಯಲ್ಲಿ ಕರ್ನಾಟಕ ಸೇರಿದಂತೆ ಇತರೆ ರಾಜ್ಯಗಳ ಮುದ್ರಕರು ಶಾಲೆಗಳಿಗೆ ಅಗತ್ಯವಿರುವ ಪಠ್ಯಪುಸ್ತಕಗಳನ್ನು ಮುದ್ರಿಸಬೇಕಾಗುತ್ತದೆ. ಇದನ್ನು ಅರಿತಿರುವ ಕಾಗದ ಸರಬರಾಜು ಕಾರ್ಖಾನೆಗಳ ಮಾಲೀಕರು ಕಚ್ಚಾ ಕಾಗದದ ದರವನ್ನು ಉದ್ದೇಶಪೂರ್ವಕವಾಗಿಯೇ ಹೆಚ್ಚಳ ಮಾಡಿದ್ದಾರೆ. ಸ್ಥಳೀಯರಿಗೆ ಕಾಗದ ಪೂರೈಸದೇ ಅವುಗಳನ್ನು ರಫ್ತು ಮಾಡುತ್ತಿದ್ದಾರೆ' ಎಂದು ದೂರಿದರು.


ಕರ್ನಾಟಕ ಪಠ್ಯಪುಸ್ತಕ ಮುದ್ರಕರ ಸಂಘದ ಅಧ್ಯಕ್ಷ ಸತ್ಯಕುಮಾರ್, 'ಮುದ್ರಣ ಕ್ಷೇತ್ರವನ್ನೇ ನಂಬಿ ಹಲವರು ಬದುಕು ಕಟ್ಟಿಕೊಂಡಿದ್ದಾರೆ. ಹಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಸಣ್ಣ ಕೈಗಾರಿಕೆಗಳು ಮುಚ್ಚುವ ಹಂತಕ್ಕೆ ತಲುಪಿವೆ. ಕೇಂದ್ರ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಕಾಗದ ಸರಬರಾಜು ಮಾಡುವ ಕಾರ್ಖಾನೆಗಳ ಮಾಲೀಕರೊಂದಿಗೆ ತುರ್ತು ಸಭೆ ನಡೆಸಬೇಕು. ಮೈಸೂರು ಕಾಗದ ಕಾರ್ಖಾನೆಯು (ಎಂಪಿಎಂ) ಸ್ಥಗಿತಗೊಂಡಿರುವುದರಿಂದ ಸಾಕಷ್ಟು ಸಮಸ್ಯೆಗಳು ತಲೆದೋರಿದೆ. ಈ ಕಾರ್ಖಾನೆಯ ಪುನರಾರಂಭಕ್ಕೆ ಸರ್ಕಾರ ಮುಂದಾಗಬೇಕು' ಎಂದು ತಿಳಿಸಿದರು.


'ಕೋವಿಡ್‌ನಿಂದಾಗಿ ಮುದ್ರಕರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬೆಲೆ ಏರಿಕೆಯು ಅವರ ಬದುಕನ್ನು ದುಸ್ಥಿತಿಗೆ ದೂಡಲಿದೆ. ಸಕಾಲದಲ್ಲಿ ಮುದ್ರಣ ಕಾಗದ ದೊರೆಯದಿರುವುದರಿಂದ ನಿಗದಿತ ಅವಧಿಯಲ್ಲಿ ಪುಸ್ತಕಗಳನ್ನು ಮುದ್ರಿಸಲು ಆಗುತ್ತಿಲ್ಲ. ಈ ಬಗ್ಗೆ ಪತ್ರದ ಮೂಲಕ ಕೇಂದ್ರ ಸರ್ಕಾರದ ಗಮನ ಸೆಳೆದರೂ ಪ್ರಯೋಜನವಾಗಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಇಸ್ಕಾನ್‌ನ ಮಧು ಪಂಡಿತ್ ದಾಸ್ ಸೇರಿ ಮೂವರಿಗೆ ಗೌರವ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ


ಎಸ್‌.ಜಿ. ವಾಸುದೇವ್


ಮಧು ಪಂಡಿತ್ ದಾಸ್


ಎಂ.ಎಸ್ ಮುತ್ತುರಾಜ್

ಬೆಂಗಳೂರು: ಇಸ್ಕಾನ್‌ನ 'ಅಕ್ಷಯ ಪಾತ್ರ' ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಮಧು ಪಂಡಿತ್ ದಾಸ್, ಸಾಮಾಜಿಕ ಅಸಮಾನತೆ ತೊಡೆದು ಹಾಕಲು ವಿಶಿಷ್ಟ ವಿಧಾನಗಳನ್ನು ಬಳಸಿ ಯಶಸ್ವಿಯಾದ ಸಮಾಜ ಸೇವಕ ಎಂ.ಎಸ್. ಮುತ್ತುರಾಜ್, ದೃಶ್ಯಕಲೆ ಕ್ಷೇತ್ರಕ್ಕೆ ಪ್ರಮುಖ ಕೊಡುಗೆ ನೀಡಿದ ಕಲಾವಿದ ಎಸ್.ಜಿ.ವಾಸುದೇವ್ ಅವರನ್ನು ಬೆಂಗಳೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿಗೆ ಆಯ್ಕೆ ಮಾಡಲಾಗಿದೆ.

'ಇದೇ 29ರಂದು ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆಯಲ್ಲಿ ನಡೆಯಲಿರುವ 56ನೇ ಘಟಿಕೋತ್ಸವದಲ್ಲಿ ಈ ಮೂವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು' ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ. ಆರ್. ವೇಣುಗೋಪಾಲ್ ತಿಳಿಸಿದ್ದಾರೆ.

ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ತಿನ ನಿರ್ದೇಶಕ ಡಾ.ಎಸ್.ಸಿ. ಶರ್ಮ ಘಟಿಕೋತ್ಸವದ ಭಾಷಣ ಮಾಡಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ್ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

'ಘಟಿಕೋತ್ಸವದಲ್ಲಿ ಒಟ್ಟು 321 ಚಿನ್ನದ ಪದಕ ಹಾಗೂ 132 ನಗದು ಬಹುಮಾನ ವಿತರಿಸಲಾಗುವುದು. 127 ಅಭ್ಯರ್ಥಿಗಳಿಗೆ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುವುದು. ಪದವಿ, ಸ್ನಾತಕೋತ್ತರ ಪದವಿ ಮತ್ತು ಪಿಎಚ್.ಡಿ ಸೇರಿ ಒಟ್ಟು 68,211 ಮಂದಿ ಪದವಿ ಪ್ರಮಾಣಪತ್ರ ಪಡೆಯಲು ಅರ್ಹರಾಗಿದ್ದಾರೆ. ಘಟಿಕೋತ್ಸವದಲ್ಲಿ ಭಾಗವಹಿಸದೇ ಇರುವವರು ನ್ಯಾಡ್ (ನ್ಯಾಷನಲ್ ಅಕಾಡೆಮಿಕ್ ಡೈರೆಕ್ಟರಿ) ಪೋರ್ಟಲ್‌ನಲ್ಲಿ ಡಿಜಿ ಲಾಕರ್‌ನಿಂದ ಆ ದಿನದಂದೇ ಪದವಿ ಪ್ರಮಾಣಪತ್ರ ಡೌನ್‌ಲೋಡ್ ಮಾಡಿಕೊಳ್ಳಬಹುದು' ಎಂದೂ ಅವರು ಹೇಳಿದ್ದಾರೆ.

ಮುದ್ರಣ ಕಾಗದ: ನೀತಿ ರೂಪಿಸಬೇಕು: ಪಿ.ಎಂಗೆ ಸಿದ್ದರಾಮಯ್ಯ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ರಿಕಾಲಯಗಳಿಗೆ ಮುದ್ರಣ ಕಾಗದ ಸುಲಭವಾಗಿ ಲಭ್ಯವಾಗುವಂತೆ ನೀತಿ ರೂಪಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

'ಕೇಂದ್ರದ ಸರ್ಕಾರದ ಕೆಲವು ಕ್ರಮಗಳಿಂದಾಗಿ ಮುದ್ರಣ ಮಾಧ್ಯಮ ನಿರಾತಂಕವಾಗಿ ಮುಂದುವರೆಯಲು ಸಾಧ್ಯವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ದೇಶೀಯ ಮುದ್ರಣ ಕಾಗದದ ಗುಣಮಟ್ಟ ಹೆಚ್ಚಿಸಲು ಉತ್ತೇಜನ ಕೊಡಬೇಕು. ಜಿಎಸ್‌ಟಿ ಇಳಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಪತ್ರಿಕಾಲಯಗಳು ಕಾಗದದ ಮೇಲೆ ನೀಡಬೇಕಿದ್ದ ತೆರಿಗೆ ಪ್ರಮಾಣ ಶೇ 68 ರಷ್ಟು ಹೆಚ್ಚಳವಾಗಿದೆ. ಜಿಎಸ್‌ಟಿ ಜಾರಿಗೆ ಮೊದಲು ಮುದ್ರಣ ಕಾಗದದ ಮೇಲೆ ಶೇ 3 ರಷ್ಟು ತೆರಿಗೆ ಬೀಳುತ್ತಿತ್ತು. ಜಿಎಸ್‌ಟಿ ಬಳಿಕ ಶೇ 5 ರಷ್ಟು ತೆರಿಗೆ ಹೇರಲಾಗಿದೆ. ಆರ್‌ಎನ್‌ಐ ನೋಂದಾಯಿತ ಪತ್ರಿಕಾ ಸಂಸ್ಥೆಗಳಿಗೆ ಶೇ 5 ರಷ್ಟು ಜಿಎಸ್‌ಟಿ ನಿಗದಿ ಮಾಡಲಾಗಿದ್ದರೆ, ನೋಂದಾಯಿತವಲ್ಲದ ಸಂಸ್ಥೆಗಳು ಮತ್ತು ಪುಸ್ತಕ ಪ್ರಕಾಶನ ಸಂಸ್ಥೆಗಳಿಗೆ ಶೇ 12 ರಷ್ಟು ನಿಗದಿಪಡಿಸಲಾಗುತ್ತಿದೆ' ಎಂದು ಪತ್ರದಲ್ಲಿ ಹೇಳಿದ್ದಾರೆ.

'ಸದ್ಯದ ಪರಿಸ್ಥಿತಿಯಿಂದ ಪತ್ರಿಕೆಗಳ ದರ ಹೆಚ್ಚಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಜಿಎಸ್‌ಟಿ ಜತೆಗೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ, ಮುದ್ರಣ ಕಾಗದಕ್ಕೆ ಬೇಕಾದ ಕಚ್ಚಾ ಪದಾರ್ಥಗಳ ಕೊರತೆ, ಶಿಪ್ಪಿಂಗ್ ಕಂಟೇನರ್‌ಗಳ ಕೊರತೆ, ಕಾರ್ಮಿಕರ ಕೊರತೆ, ಕೋವಿಡ್ ಸೃಷ್ಟಿಸಿದ ಪರಿಣಾಮ ಎಲ್ಲವೂ ಸೇರಿ ಒಂದು ಟನ್ ಮುದ್ರಣ ಕಾಗದ ಆಮದು ಮಾಡಿಕೊಳ್ಳುವ ದರ ಮೊದಲಿದ್ದ ₹ 23 ಸಾವಿರದಿಂದ ₹ 55 ಸಾವಿರದಿಂದ 60 ಸಾವಿರಕ್ಕೆ ಏರಿಕೆಯಾಗಿದೆ ಎಂದು ಹೇಳಿದ್ದಾರೆ.

ಶೇ 56 ರಷ್ಟು ಮುದ್ರಣ ಕಾಗದ ಆಮದಾಗುತ್ತಿದೆ. ಶೇ 44 ರಷ್ಟು ಮಾತ್ರ ದೇಶದ ಒಳಗೆ ಉತ್ಪಾದನೆ ಆಗುತ್ತಿದೆ. ಎರಡು ವರ್ಷಗಳಲ್ಲಿ ಪತ್ರಿಕೆಗಳ ಮುದ್ರಣ ವೆಚ್ಚ ದುಪ್ಪಟ್ಟಾಗಿದೆ. ಜಾಹೀರಾತು ಪ್ರಮಾಣ ಕುಸಿದಿದೆ. ಕೋವಿಡ್ ಸಾಂಕ್ರಾಮಿಕ- ಲಾಕ್‌ಡೌನ್ ಪರಿಣಾಮ ಪ್ರಸರಣ ವ್ಯವಸ್ಥೆಯೂ ಹದಗೆಟ್ಟು ಪತ್ರಿಕೆಗಳನ್ನು ನಡೆಸುವುದೇ ದುಸ್ತರವಾಗಿದೆ' ಎಂದಿದ್ದಾರೆ.

'ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ'

ಬೆಂಗಳೂರು: ಸಂಜಯನಗರದಲ್ಲಿ ವಿದ್ಯುತ್ ಪ್ರವಹಿಸಿ 2 ವರ್ಷ ವಯಸ್ಸಿನ ಯುವಕ ಮೃತಪಟ್ಟ ಪ್ರಕರಣದಲ್ಲಿ ಅಧಿಕಾರಿಗಳು ತಪ್ಪೆಸಗಿರುವುದು ಕಂಡುಬಂದರೆ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ಈ ರೀತಿಯ ದುರ್ಘಟನೆಗಳನ್ನು ಸಹಿಸಲಾಗದು. ಪ್ರಕರಣದ ಕುರಿತು ವಿಸ್ತೃತವಾಗಿ ತನಿಖೆ ನಡೆಸುವಂತೆ ಪೊಲೀಸರಿಗೆ ಸೂಚನೆ ನೀಡಿದ್ದೇನೆ. ಬೆಸ್ಕಾಂ ಅಥವಾ ಬಿಬಿಎಂಪಿ ಅಧಿಕಾರಿಗಳು ತಪ್ಪೆಸಗಿರುವುದು ಕಂಡುಬಂದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದರು.

ಇಂತಹ ಪ್ರಕರಣಗಳಲ್ಲಿ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ನೀಡುವುದಕ್ಕೆ ಮಾರ್ಗಸೂಚಿಗಳಿವೆ. ಅವುಗಳ ಪ್ರಕಾರ ಪರಿಹಾರ ನೀಡಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ನವ ಪ್ರಪಂಚದ ಪಿತಾಮಹ'ನ ಪಿಐಎಲ್ ವಜಾ..!

ಬೆಂಗಳೂರು: 'ನಾನು ನವ ಪ್ರಪಂಚದ ಪಿತಾಮಹ. 66 ವರ್ಷದ ಹಿರಿಯ ನಾಗರಿಕ. ಬೆಂಗಳೂರಿನ ಲ್ಯಾವೆಲ್ಲೆ ರಸ್ತೆಯ ನಿವಾಸಿ...! ನನ್ನ ಮನವಿ ಏನೆಂದರೆ; ರಾಜ್ಯದಲ್ಲಿ 2023ರ ರಾಜ್ಯ ವಿಧಾನಸಭಾ ಚುನಾವಣೆ ನಡೆಸಬಾರದು!! ಬದಲಿಗೆ ಎಲ್ಲಾ ರಾಜಕೀಯ ಪಕ್ಷಗಳಿಂದ ಜನಪ್ರತಿನಿಧಿಗಳನ್ನು ನೇರವಾಗಿ ಆಯ್ಕೆ ಮಾಡಿಕೊಳ್ಳುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು' ಎಂದು ಕೋರಲಾಗಿದ್ದ ಅರ್ಜಿಯೊಂದನ್ನು ಹೈಕೋರ್ಟ್ ವಜಾಗೊಳಿಸಿದೆ.

ನಗರದ ಮುರಳಿ ಕೃಷ್ಣ ಬ್ರಹ್ಮಾನಂದಂ ಎಂಬುವರು ಸಲ್ಲಿಸಿದ್ದ ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಮತ್ತು ಎಸ್. ಸುಜಾತ ಅವರಿದ್ದ ವಿಭಾಗೀಯ ನ್ಯಾಯಪೀಠ, 'ಇವರ ಮನವಿ ತಪ್ಪು ಕಲ್ಪನೆಯಿಂದ ಕೂಡಿದ್ದು ಜನತಾ ಪ್ರತಿನಿಧಿ ಕಾಯ್ದೆ- 1951ರ ಕಾಯ್ದೆಯ ನಿಯಮಗಳನ್ನು ಪ್ರಶ್ನಿಸಿದ ಅಡಿಯಲ್ಲಿ ವಿಚಾರಣೆ ನಡೆಸಲು ಅವಕಾಶವಿಲ್ಲ' ಎಂದು ತಿಳಿಸಿದೆ.

ಅರ್ಜಿಯಲ್ಲಿ ರಾಜ್ಯ ಮುಖ್ಯ ಚುನಾವಣಾಧಿಕಾರಿ, ಮುಖ್ಯ ಚುನಾವಣಾ ಆಯುಕ್ತರು ಮತ್ತು ರಾಜಭವನದ ಕಾರ್ಯದರ್ಶಿಗಳನ್ನು ಪ್ರತಿವಾದಿಗಳನ್ನಾಗಿ ಹೆಸರಿಸಲಾಗಿತ್ತು. 'ಕರ್ನಾಟಕದ ಆಡಳಿತವನ್ನು ಸೂಕ್ತವಾಗಿ ಪುನರ್ ರಚಿಸಲು ಮಧ್ಯಂತರ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಲು ಪ್ರತಿವಾದಿಗಳು ನನ್ನನ್ನು ಕೇಳಬೇಕು. ಇದಕ್ಕೆ ಕೋರ್ಟ್ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ನಗರದಲ್ಲಿ ಇಂದು

ಅಂಬೇಡ್ಕರ್ ಜಯಂತಿ ಮತ್ತು ಬಂಜಾರ ಸಾಂಸ್ಕೃತಿಕ ಕಾರ್ಯಕ್ರಮ: ಸಾನ್ನಿಧ್ಯ–ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಬಳಿರಾಮ ಮಹಾರಾಜ ಸ್ವಾಮೀಜಿ, ದೇನಾ ಭಗತ್ ಸ್ವಾಮೀಜಿ, ಉದ್ಘಾಟನೆ–ಆರ್.ಅಶೋಕ, ಅಧ್ಯಕ್ಷತೆ–ಸಿ.ಎನ್.ಅಶ್ವತ್ಥನಾರಾಯಣ, ಭಾಷಣ–ಎನ್.ಅನಂತ ನಾಯ್ಕ್, ನುಡಿನಮನ–ಎ.ಆರ್. ಗೋವಿಂದಸ್ವಾಮಿ, ಆಯೋಜನೆ–ಬಂಜಾರ ಜನಸೇವಾ ಸಂಘ, ಸ್ಥಳ–ಕನ್ನಡ ಭವನ, ಬೆಳಿಗ್ಗೆ 9.30

'ಸೂಕ್ಷ್ಮಜೀವಿಯ ಜೈವಿಕ ತಂತ್ರಜ್ಞಾನದಲ್ಲಿನ ಪ್ರಗತಿಗಳು: ಪ್ರಸ್ತುತ ಪ್ರವೃತ್ತಿಗಳು ಮತ್ತು ಭವಿಷ್ಯದ ನಿರೀಕ್ಷೆಗಳು' ವಿಚಾರ ಸಂಕಿರಣ: ಅತಿಥಿಗಳು–ಎಸ್. ಆರ್.ನಿರಂಜನ್, ಎ.ಎಂ.ದೇಶಮುಖ್, ಅಪ್ಪಾರಾವ್, ಕೆ.ಆರ್.ವೇಣುಗೋಪಾಲ್, ಆಯೋಜನೆ–ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ–ವೆಂಕಟಗಿರಿಗೌಡ ಸಭಾಂಗಣ, ವಿ.ವಿ ಆವರಣ, ಜ್ಞಾನಭಾರತಿ, ಬೆಳಿಗ್ಗೆ 10

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಕರ್ನಾಟಕ ಸಂಗೀತ ಕಾರ್ಯಕ್ರಮ–ಶ್ರೀವಲ್ಸನ್ ಜೆ.ಮೆನನ್, ಎಡಪಲ್ಲಿ ಅಜಿತ್, ಎಚ್.ಎಸ್.ಸುಧೀಂದ್ರ, ಸುಕನ್ಯಾ ರಾಂಗೋಪಾಲ್, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5ರಿಂದ


ಶ್ರೀವಲ್ಸನ್ ಜೆ.ಮೆನನ್

ತ್ರಿ-ದಶಮಾನೋತ್ಸವ, ವಿಚಾರ ಸಂಕಿರಣ ಮತ್ತು ವಿವಿಧ ಪ್ರಶಸ್ತಿಗಳ ಪ್ರಧಾನ: ಸಾನ್ನಿಧ್ಯ–ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ರಮಾನಂದ ಗುರೂಜಿ, 'ಪ್ರಜಾಮುಖಿ ಕವಿತೆಗಳು' ಪುಸ್ತಕ ಬಿಡುಗಡೆ–'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ವಿಚಾರ ಸಂಕಿರಣ ಉದ್ಘಾಟನೆ–ಸತೀಶ್ ಕುಮಾರ್ ಎಸ್.ಹೊಸಮನಿ, ಅಧ್ಯಕ್ಷತೆ–ಪ್ರಭುಸ್ವಾಮಿ ಸರಗಣಾಚಾರಿ, ಆಯೋಜನೆ–ಸರ್ ಎಂ.ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 5.30

'ನಾವು ಸಂತೋಷವಾಗಿರುವುದು ಹೇಗೆ?' ಉಪನ್ಯಾಸ: ಶಿವಕುಮಾರ್, ಅತಿಥಿಗಳು–ಕೆ.ಎನ್.ಚನ್ನೇಗೌಡ, ಎಂ.ಸಿ.ನರೇಂದ್ರ, ಅಧ್ಯಕ್ಷತೆ–ಜಗದೀಶ ರೆಡ್ಡಿ, ಮಹಾಂತೇಶ ದೇಗಾವಿ, ಆಯೋಜನೆ–ಕನ್ನಡ ಯುವಜನ ಸಂಘ, ಸ್ಥಳ–ಸಂಘದ ಸಭಾಂಗಣ, ಹೊಂಬೇಗೌಡ ನಗರ, ಸಂಜೆ 6.30

ವಿಶ್ವ ನೃತ್ಯ ದಿನಾಚರಣೆ: ಭಾಗವಹಿಸುವರು–ಆಶಿಷ್ ಮೋಹನ್ ಖೋಕರ್, ಉದ್ಘಾಟನೆ–ಚಿರಂಜೀವಿ ಸಿಂಗ್, ಅಧ್ಯಕ್ಷತೆ–ಉತ್ತಮ್‌ಚಂದ್ ಖಿಂಚಾ, ಭಾಷಣ–ಎಚ್.ಎನ್.ಸುರೇಶ್, ಯಕ್ಷಗಾನ–ವರ್ಷಿಣಿ ಹೆಬ್ಬಾರ್, ಭರತನಾಟ್ಯ–ಮಾಳವಿಕ ಹೆಬ್ಬಾರ್, ಒಡಿಸ್ಸಿ–ಮಧುಲಿತ ಮೋಹಪಾತ್ರ ತಂಡ, ಮೋಹಿನಿಯಾಟ್ಟಂ–ವೀಣಾ, ಧನ್ಯಾ ನಾಯರ್, ಆಯೋಜನೆ, ಸ್ಥಳ–ಭಾರತೀಯ ವಿದ್ಯಾಭವನ, ಖಿಂಚಾ ಸಭಾಂಗಣ, ರೇಸ್‌ಕೋರ್ಸ್ ರಸ್ತೆ,ಸಂಜೆ 6

ಹರಿನಾಮ ಸಂಕೀರ್ತನೆ: ಸುಶ್ರಾವ್ಯ ಆಚಾರ್ಯ, ಆಯೋಜನೆ–ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ–ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠ, ಜಯನಗರ ಐದನೇ ಬಡಾವಣೆ, ಸಂಜೆ 7.30

ಸಂಕ್ಷಿಪ್ತ ಸುದ್ದಿ

‘ಪತ್ನಿ ಜತೆ ಸಿನಿಮಾ ನೋಡಲು ರಜೆ ಕೊಡಿ’

ಬೆಂಗಳೂರು: ‘ಪತ್ನಿಯನ್ನು ಚಿತ್ರಮಂದಿರಕ್ಕೆ ಕರೆದುಕೊಂಡು ಹೋಗಿ ಸಿನಿಮಾ ತೋರಿಸಬೇಕಿದೆ. ಆಕೆಯೊಂದಿಗೆ ವಾಯುವಿಹಾರಕ್ಕೆ ಹೋಗಬೇಕಿದೆ. ಹೀಗಾಗಿ ವಾರದ ರಜೆ ಮಂಜೂರು ಮಾಡಿ’ ಎಂದು ಪೊಲೀಸ್ ಸಿಬ್ಬಂದಿಯೊಬ್ಬರು ಇನ್‌ಸ್ಪೆಕ್ಟರ್‌ಗೆ ಪತ್ರ ಬರೆದಿದ್ದಾರೆ.

ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ಘಟಕದಲ್ಲಿ ವಾಹನ ಚಾಲಕರಾಗಿ ಕೆಲಸ ಮಾಡುತ್ತಿರುವ ಸಿ.ಆನಂದ ಅವರು ಬರೆದಿರುವ ಈ ಪತ್ರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

‘ಚಿತ್ರಮಂದಿರಕ್ಕೆ ಕರೆದುಕೊಂಡು ಹೋಗುವಂತೆ ಹೆಂಡತಿ ಅಪೇಕ್ಷೆ ಪಟ್ಟಿದ್ದಾಳೆ. ಆಕೆಯ ಆಸೆ ಈಡೇರಿಸಲು ರಜೆ ಬೇಕಿದೆ’ ಎಂದು ಕೋರಿದ್ದಾರೆ.

ಕಿಶೋರ್ ಸಾವು: ಇಬ್ಬರ ವಿಚಾರಣೆ

ಬೆಂಗಳೂರು:ಪಾದಚಾರಿ ಮಾರ್ಗದಲ್ಲಿದ್ದ ಮರದಲ್ಲಿ ನೇತಾಡುತ್ತಿದ್ದ ವಿದ್ಯುತ್ ಕೇಬಲ್‌ನ ತಂತಿ ಸ್ಪರ್ಶಿಸಿ ಕಿಶೋರ್ (22) ಎಂಬುವರು ಮೃತಪಟ್ಟಿರುವ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಂಜಯನಗರ ಠಾಣೆ ಪೊಲೀಸರು ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

‘ಏರ್‌ಟೆಲ್ ಕಂಪನಿಯ ಸಂಜಯನಗರದ ಉಸ್ತುವಾರಿಯಾಗಿರುವ ನವೀನ್ ಎಂಬುವರನ್ನು ಈಗಾಗಲೇ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ. ಅವರು ನೀಡಿದ ಮಾಹಿತಿ ಮೇರೆಗೆ ಮತ್ತೊಬ್ಬರನ್ನು ವಶಕ್ಕೆ ಪಡೆದಿದ್ದೇವೆ. ಇನ್ನೂ ಇಬ್ಬರ ವಿಚಾರಣೆ ನಡೆಸಬೇಕಿದೆ. ಸದ್ಯಕ್ಕೆ ಯಾರನ್ನೂ ಬಂಧಿಸಿಲ್ಲ’ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಮಾರಮ್ಮ ದೇವಿ ಜಾತ್ರಾ ಮಹೋತ್ಸವ

ದಾಬಸ್ ಪೇಟೆ: ಇಲ್ಲಿನ ಚನ್ನೋಹಳ್ಳಿ ಗ್ರಾಮದಲ್ಲಿ ಮಾರಮ್ಮ ದೇವಿ ಜಾತ್ರಾ ಮಹೋತ್ಸವ ನಡೆಯಿತು.

ಬೆಳಿಗ್ಗೆ ಮಾರಮ್ಮ ದೇವಿ ಹಾಗೂ ಆಂಜನೇಯ ದೇವರಿಗೆ ಅಭಿಷೇಕ ಪೂಜೆ ನೆರವೇರಿತು. ಸೀತಾ-ರಾಮ-ಲಕ್ಷ್ಮಣ ಸಮೇತ ಆಂಜನೇಯ ಸ್ವಾಮಿಯ ಉತ್ಸವ ಮೂರ್ತಿ, ಮಾರಮ್ಮ ದೇವಿ ಉತ್ಸವ ಮೂರ್ತಿಯನ್ನು ಹೂವುಗಳಿಂದ ಅಲಂಕರಿಸಲಾಗಿತ್ತು.

186 ಅರ್ಜಿದಾರರಲ್ಲಿ ಕಳಂಕಿತ ಸಿಬ್ಬಂದಿಯನ್ನು ಆರಿಸಿದ ಸರ್ಕಾರ

ಮಾಹಿತಿ ಆಯುಕ್ತರ ಹುದ್ದೆ: ಆಯ್ಕೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ಆಯುಕ್ತರ ಮೂರು ಖಾಲಿ ಹುದ್ದೆಗಳಿಗೆ ಹಿರಿಯ ವಕೀಲರು, ಪತ್ರಕರ್ತರು, ಐಎಎಸ್, ಐಪಿಎಸ್ ಹಾಗೂ ಐಎಫ್‌ಎಸ್ ಅಧಿಕಾರಿಗಳು ಸೇರಿದಂತೆ ಒಟ್ಟು 186 ಮಂದಿ ಅರ್ಜಿ ಸಲ್ಲಿಸಿದ್ದರು. ಆದರೆ ಸರ್ಕಾರ, ಆದಾಯಕ್ಕಿಂತಲೂ ಹೆಚ್ಚಿನ ಆಸ್ತಿ ಹೊಂದಿರುವ ಪ್ರಕರಣ ಸಂಬಂಧ ಲೋಕಾಯುಕ್ತ ತನಿಖೆ ಎದುರಿಸುತ್ತಿರುವ ನಿವೃತ್ತ ಸರ್ಕಾರಿ ಉದ್ಯೋಗಿ ಎಚ್.ಸಿ.ಸತ್ಯನ್ ಹಾಗೂ ಇನ್ನಿಬ್ಬರನ್ನು ಈ ಹುದ್ದೆಗಳಿಗೆ ಆಯ್ಕೆ ಮಾಡಿರುವುದಕ್ಕೆ ವಿರೋಧ ವ್ಯಕ್ತವಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿಕಟವರ್ತಿಗಳಾಗಿ ಕಾರ್ಯನಿರ್ವಹಿಸಿರುವ ನಿವೃತ್ತ ಐಎಎಸ್ ಅಧಿಕಾರಿ ಎಸ್.ಬಿ.ಬೊಮ್ಮನಹಳ್ಳಿ ಮತ್ತು ರಾಜಕೀಯ ಮುಖಂಡರ ನಿಕಟವರ್ತಿ ಎನ್ನಲಾದ ಉದ್ಯಮಿ ರವೀಂದ್ರ ಗುರುನಾಥ ಢಾಕಪ್ಪ ಈ ಹುದ್ದೆಗೆ ನೇಮಕಗೊಂಡಿರುವ ಇನ್ನಿಬ್ಬರು.

ಮಾಹಿತಿ ಆಯುಕ್ತರ ಮೂರು ಹುದ್ದೆಗಳನ್ನು ಭರ್ತಿ ಮಾಡಿ ಸರ್ಕಾರ ಏಪ್ರಿಲ್ 20ರಂದು ಅಧಿಸೂಚನೆ ಹೊರಡಿಸಿದೆ. ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯಡಿ ಮಾಹಿತಿ ಪಡೆಯಲು ಸಾಧ್ಯವಾಗದೇ ಮೇಲ್ಮನವಿ ಸಲ್ಲಿಸುವ ಪ್ರಕರಣಗಳಲ್ಲಿ ಎರಡನೇ ಮೇಲ್ಮನವಿ ಪ್ರಾಧಿಕಾರವಾಗಿ ಮಾಹಿತಿ ಆಯುಕ್ತರು ಕಾರ್ಯ ನಿರ್ವಹಿಸುತ್ತಾರೆ. ಕಾಯ್ದೆಯ ಸೆಕ್ಷನ್ 15ರ ಅನ್ವಯ ಇವರನ್ನು ನೇಮಿಸಲಾಗುತ್ತದೆ. ‘ಮಾಹಿತಿ ಆಯುಕ್ತರು ಕಾನೂನು, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ಸೇವೆ, ಆಡಳಿತ, ಪತ್ರಿಕೋದ್ಯಮ, ಸಮೂಹ ಮಾಧ್ಯಮ ಅಥವಾ ಆಡಳಿತಕ್ಕೆ ಸಂಬಂಧಿಸಿದ ಜ್ಞಾನ ಮತ್ತು ಅನುಭವ ಹೊಂದಿರುವ ಸಾರ್ವಜನಿಕ ಜೀವನದಲ್ಲಿ ಗಣ್ಯರಾಗಿರುವ ವ್ಯಕ್ತಿಯಾಗಿರಬೇಕು’ ಎಂದು ಈ ಸೆಕ್ಷನ್‌ನಲ್ಲಿ ಹೇಳಲಾಗಿದೆ.

ಸಾರಿಗೆ ಇಲಾಖೆಯ ನಿವೃತ್ತ ಉದ್ಯೋಗಿ ಎಚ್.ಸಿ.ಸತ್ಯನ್, ಅವರು ಆದಾಯಕ್ಕಿಂತಲೂ ಹೆಚ್ಚಿನ ಆಸ್ತಿ ಹೊಂದಿರುವ ಪ್ರಕರಣ ಸಂಬಂಧ ಲೋಕಾಯುಕ್ತ ತನಿಖೆ ಎದುರಿಸುತ್ತಿದ್ದಾರೆ. ಮೈಸೂರಿನ ಮೂರನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರು ಸತ್ಯನ್ ವಿರುದ್ಧದ ಪ್ರಕರಣದ ವಿಚಾರಣೆ ನಡೆಸುತ್ತಿದ್ದಾರೆ. ಈ ಪ್ರಕರಣದ ಮುಂದಿನ ವಿಚಾರಣೆ ಜೂನ್ 7ಕ್ಕೆ ನಿಗದಿಯಾಗಿದೆ. ಸತ್ಯನ್ ಅವರು ಆದಾಯಕ್ಕಿಂತ ಶೇ 55.15ರಷ್ಟು ಹೆಚ್ಚು ಆಸ್ತಿ ಹೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅವರನ್ನು ಈ ಹುದ್ದೆಗೆ ಆಯ್ಕೆ ಮಾಡಿರುವುದಕ್ಕೆ ಮಾಹಿತಿ ಹಕ್ಕು ಕಾರ್ಯಕರ್ತರು ವಿರೋಧ ವ್ಯಕ್ತಪಡಿಸಿದ್ದಾರೆ. ರಾಜ್ಯಪಾಲರಿಗೆ ಪತ್ರ ಬರೆದು ಈ ನೇಮಕಾತಿಯನ್ನು ರದ್ದುಪಡಿಸುವಂತೆ ಒತ್ತಾಯಿಸಿದ್ದಾರೆ.

ಮಾಹಿತಿ ಹಕ್ಕಿನಡಿ ಪಡೆದ ಮಾಹಿತಿ ಪ್ರಕಾರ, ಮಾಹಿತಿ ಆಯುಕ್ತರ ಹುದ್ದೆಗೆ ಅರ್ಜಿ ಸಲ್ಲಿಸಿದವರ ಪಟ್ಟಿಯಲ್ಲಿ ನಿವೃತ್ತ ಐಎಎಸ್ ಅಧಿಕಾರಿ ವಿ.ಶಂಕರ್, ಎ.ಬಿ.ಇಬ್ರಾಹಿಂ, ನಿವೃತ್ತ ಐಎಫ್‌ಎಸ್ ಅಧಿಕಾರಿಗಳಾದ ಒ.ಪಾಲಯ್ಯ, ಬಿ.ನಿಜಲಿಂಗಪ್ಪ, ಎಂ.ವಿ.ಅಮರನಾಥ, ವಿಜಯಕುಮಾರ್, ಕೆ.ಎಚ್. ನಾಗರಾಜ, ಅಂಬಾಡಿ ಮಾಧವ, ಬಿ.ವೆಂಕಟೇಶ ಹಾಗೂ ನಿವೃತ್ತ ಐಪಿಎಸ್ ಅಧಿಕಾರಿಗಳಾದ ಟಿ.ಸುನೀಲ್ ಕುಮಾರ್, ಟಿ.ಆರ್.ಸುರೇಶ್, ಟಿ.ಡಿ.ಪವಾರ್, ಅಶಿತ್‌ಮೋಹನ್ ಪ್ರಸಾದ್ ಹಾಗೂ ಎಚ್.ಎಸ್.ರೇವಣ್ಣ ಅವರ ಹೆಸರುಗಳೂ ಇವೆ.

‘ಸತ್ಯನ್ ಅವರನ್ನು ಈ ಹುದ್ದೆಗೆ ಆಯ್ಕೆ ಮಾಡುವ ಮೂಲಕ ಸರ್ಕಾರ ನಿಯಮವನ್ನು ಉಲ್ಲಂಘಿಸಿದೆ’ ಎಂದು ಈ ಹುದ್ದೆಗೆ ಅರ್ಜಿ ಸಲ್ಲಿಸಿದ್ದ ಹಿರಿಯ ವಕೀಲ ಎಸ್.ಯು.ಕೆ.ಪಾಟೀಲ ಆರೋಪಿಸಿದರು.

‘ನಾನು ಕಾನೂನು ವಿಷಯದಲ್ಲಿ ಪಿಎಚ್.ಡಿ ಅಧ್ಯಯನ ಮಾಡಿದ್ದೇನೆ. ಆರ್‌ಟಿಐ ಕಾಯ್ದೆಯನ್ನು ಆಳವಾಗಿ ಅಧ್ಯಯನ ಮಾಡಿದ್ದೇನೆ. ಕಾನೂನು ಸಂಬಂಧಿಸಿದ ವಿಚಾರದಲ್ಲಿ 27 ವರ್ಷಗಳ ಅನುಭವ ಹೊಂದಿದ್ದೇನೆ. ಹಾಗಿರುವಾಗ ಸರ್ಕಾರ ಸತ್ಯನ್ ಅವರ ಆಯ್ಕೆಯನ್ನು ಹೇಗೆ ಸಮರ್ಥಿಸಿಕೊಳ್ಳುತ್ತದೆ’ ಎಂದು ಅವರು ಪ್ರಶ್ನಿಸಿದರು.

ಈ ಹುದ್ದೆಗೆ ಅರ್ಜಿ ಸಲ್ಲಿಸಿದ್ದ ಇನ್ನೊಬ್ಬರು, ‘ಆಡಳಿತದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕಾದರೆ, ಈ ಹುದ್ದೆಗೆ ನಿವೃತ್ತ ಅಧಿಕಾರಿಗಳು ಅಷ್ಟು ಉತ್ತಮ ಆಯ್ಕೆ ಅಲ್ಲ. ಅವರನ್ನೇ ಆಯ್ಕೆ ಮಾಡುವುದಾಗಿದ್ದರೂ ಕನಿಷ್ಠ ಪಕ್ಷ ಕಳಂಕಿತರಲ್ಲದವರನ್ನು ನೇಮಿಸಬಹುದಾಗಿತ್ತು’ ಎಂದು ಅಭಿಪ್ರಾಯಪಟ್ಟರು.

ಕಳಂಕಿತ ಸರ್ಕಾರಿ ಸಿಬ್ಬಂದಿಗೆ ಉನ್ನತ ಹುದ್ದೆ?

‘ಯಾವುದೇ ವ್ಯಕ್ತಿ ಆರೋಪ ಮುಕ್ತವಾದರೂ, ಸರ್ಕಾರ ಅವರನ್ನು ಇಂತಹ ಉನ್ನತ ಹುದ್ದೆಗೆ ಆಯ್ಕೆ ಮಾಡುವ ಮುನ್ನ ಎಚ್ಚರಿಕೆ ವಹಿಸಬೇಕಿತ್ತು. ಆದಾಯಕ್ಕಿಂತಲೂ ಹೆಚ್ಚಿನ ಆಸ್ತಿ ಹೊಂದಿರುವ ಪ್ರಕರಣದಲ್ಲಿ ವಿಚಾರಣೆ ಎದುರಿಸುತ್ತಿರುವ ವ್ಯಕ್ತಿಯನ್ನು ಇಂತಹ ಹುದ್ದೆಗೆ ನೇಮಿಸಿರುವುದು ಸರ್ಕಾರಕ್ಕೆ ಶೋಭೆ ತರುವುದಿಲ್ಲ. ಅದಕ್ಕಿಂತಲೂ ಹೆಚ್ಚಾಗಿ ಇದರಿಂದ ಮಾಹಿತಿ ಹಕ್ಕು ಕಾಯ್ದೆಯ ಮೂಲ ಆಶಯಕ್ಕೇ ಧಕ್ಕೆ ಉಂಟಾಗುತ್ತದೆ’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.



ಮುತ್ಯಾಲಮ್ಮ ದೇವಿ ಜಾತ್ರೆ ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಬೆಟ್ಟಹಲಸೂರು ಗ್ರಾಮದಲ್ಲಿ ಮುತ್ಯಾಲಮ್ಮ ದೇವಿ ಹಾಗೂ ಗ್ರಾಮದೇವರ ಜಾತ್ರಾ ಮಹೋತ್ಸವ ಬುಧವಾರ ವಿಜೃಂಭಣೆಯಿಂದ ನಡೆಯಿತು.

‘ಬ್ರಿಟನ್: ಸುನಕ್ ತಪ್ಪೆಸಗಿಲ್ಲ’

ಲಂಡನ್ (ಪಿಟಿಐ): ಪತ್ನಿ ಅಕ್ಷತಾ ಮೂರ್ತಿಯವರಿಗೆ ಸಂಬಂಧಿಸಿದ ತೆರಿಗೆ ಪಾವತಿ ಹಾಗೂ ತಾವು ಹೊಂದಿರುವ ಅಮೆರಿಕದ ಗ್ರೀನ್ ಕಾರ್ಡ್ ವಿಷಯದಲ್ಲಿ ಹಣಕಾಸು ಸಚಿವ ರಿಷಿ ಸುನಕ್ ಅವರು ಯಾವುದೇ ತಪ್ಪು ಮಾಡಿಲ್ಲ ಎಂದು ಸಚಿವರ ನೀತಿ ಸಂಹಿತೆಗೆ ಸಂಬಂಧಿಸಿ ಬ್ರಿಟನ್ ಸರ್ಕಾರದ ಸ್ವತಂತ್ರ ಸಲಹೆಗಾರ ಬುಧವಾರ ಹೇಳಿದ್ದಾರೆ.

ಸಲಹೆಗಾರರಾದ ಲಾರ್ಡ್ ಕ್ರಿಸ್ಟೋಫರ್ ಗೀಟ್ ಅವರು ರಿಷಿ ಸುನಕ್ ಕುಟುಂಬ ವಿರುದ್ಧದ ಆರೋಪಗಳ ಕುರಿತು ತನಿಖೆ ನಡೆಸಿದ್ದಾರೆ. ‘ಸಚಿವರು ಪಾಲಿಸಬೇಕಾಗಿರುವ ನೀತಿ ಸಂಹಿತೆಯನ್ನು ಸುನಕ್ ಅನುಸರಿಸುತ್ತಿದ್ದಾರೆ’ ಎಂದು ಪ್ರಧಾನಿಗೆ ಸಲ್ಲಿಸಿರುವ ವರದಿಯಲ್ಲಿ ಗೀಟ್ ತಿಳಿಸಿದ್ದಾರೆ.

ಕುಟುಂಬದ ಆಸ್ತಿ ಮತ್ತು ಹಣಕಾಸಿಗೆ ಸಂಬಂಧಿಸಿದಂತೆ ಟೀಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ರಿಷಿ ಸುನಕ್ ಅವರು ಪರಿಶೀಲನೆಗೆ ಪ್ರಧಾನಿ ಜಾನ್ಸನ್ ಅವರಿಗೆ ಮನವಿ ಮಾಡಿದ್ದರು.

ಸುದ್ದಿ 2 ನಿಮಿಷ

ದೇವಸ್ಥಾನದ ಬಳಿ ನಿಲ್ಲಿಸಿದ್ದ ಬೈಕ್ ಕಳವು: ಆರೋಪಿ ಬಂಧನ

ಬೆಂಗಳೂರು: ದೇವಸ್ಥಾನ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸಿದ್ದ ಬೈಕ್‌ಗಳನ್ನು ಕಳವು ಮಾಡಿ ಪರಾರಿಯಾಗುತ್ತಿದ್ದ ಆರೋಪಿಯನ್ನು ಚಂದ್ರಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಶ್ರೀರಂಗಪಟ್ಟಣದ ಶಿವಕುಮಾರ್ (27) ಬಂಧಿತ. ಈತನಿಂದ ₹11.35 ಲಕ್ಷ ಮೌಲ್ಯದ ಒಟ್ಟು 14 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಆರೋಪಿಯು ಜೆಸಿಬಿ ಚಾಲಕನಾಗಿದ್ದ. ಮೋಜಿನ ಜೀವನ ನಡೆಸುವುದಕ್ಕಾಗಿ ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ. ಅವುಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದ’ ಎಂದು ಹೇಳಿದ್ದಾರೆ.

‘ವ್ಯಕ್ತಿಯೊಬ್ಬರು ಮಾರ್ಚ್ 31ರಂದು ಬೆಳಿಗ್ಗೆ 6.15ರ ಸುಮಾರಿಗೆ ಠಾಣೆ ವ್ಯಾಪ್ತಿಯ ಕೈಲಾಸೇಶ್ವರ ದೇವಸ್ಥಾನದ ಬಳಿ ಸ್ಕೂಟರ್ ನಿಲುಗಡೆ ಮಾಡಿ ಮನೆಗೆ ಹೋಗಿದ್ದರು. 7.45ರ ಸುಮಾರಿಗೆ ಸ್ಥಳಕ್ಕೆ ಬಂದು ನೋಡಿದಾಗ ಸ್ಕೂಟರ್ ಕಾಣೆಯಾಗಿತ್ತು. ಅವರ ದೂರಿನ ಅನ್ವಯ ತನಿಖೆ ನಡೆಸಿ ಇದೇ 13ರಂದು ಆರೋಪಿಯನ್ನು ಬಂಧಿಸಲಾಗಿದೆ. ಈತ ರಾಜಗೋಪಾಲನಗರ, ವಿಜಯನಗರ, ಜಯನಗರ, ಕುಣಿಗಲ್ ಹಾಗೂ ಮಾಗಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳನ್ನು ಕಳವು ಮಾಡಿದ್ದ’ ಎಂದಿದ್ದಾರೆ.

ರೇವಾ ಡಯಗ್ನೋಸ್ಟಿಕ್ ಸೆಂಟರ್ ಉದ್ಘಾಟನೆ



ಯಲಹಂಕ: ರೇವಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರಿಗೆ ಆರೋಗ್ಯ ಸೇವೆ ಒದಗಿಸುವ ಉದ್ದೇಶದಿಂದ ನೂತನವಾಗಿ ಆರಂಭಿಸಿರುವ ‘ರೇವಾ ಡಯಗ್ನೋಸ್ಟಿಕ್ ಸೆಂಟರ್’ ಅನ್ನು ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಬುಧವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ‘6 ವರ್ಷಗಳ ಹಿಂದೆ ರೇವಾ ಹೆಲ್ತ್ ಸೆಂಟರ್ ಆರಂಭಿಸಲಾಗಿದ್ದು, ಇದರಲ್ಲಿ ತುರ್ತು ನಿಗಾ ಘಟಕ ಹೊರತುಪಡಿಸಿ ಎಲ್ಲ ಸೌಲಭ್ಯಗಳು ಲಭ್ಯವಿವೆ. ವಸತಿ ನಿಲಯದಲ್ಲಿ ಉಳಿದುಕೊಂಡಿರುವ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಈ ಕೇಂದ್ರವನ್ನು ಆರಂಭಿಸಿ, ಆಂಬುಲೆನ್ಸ್, ವೈದ್ಯರು ಮತ್ತು ಶುಶ್ರೂಶಕಿಯರನ್ನು ನಿಯೋಜಿಸಲಾಗಿದೆ’ ಎಂದು ತಿಳಿಸಿದರು.

ಮುಂದುವರಿದ ಭಾಗವಾಗಿ ಕ್ಯಾನ್ ಬ್ಯಾಂಕ್ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್‌ನ ಸಹಯೋಗದಲ್ಲಿ ರೇವಾ ಡಯಗ್ನೋಸ್ಟಿಕ್ ಸೆಂಟರ್ ಆರಂಭಿಸಲಾಗಿದೆ. ಕಡಿಮೆ ವೆಚ್ಚದಲ್ಲಿ ಸಾರ್ವಜನಿಕರೂ ಈ ಸೇವೆ ಬಳಸಿಕೊಳ್ಳಬಹುದು’ ಎಂದು ತಿಳಿಸಿದರು. ರೇವಾ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಧನಂಜಯ, ಕುಲಸಚಿವ ಡಾ.ಎನ್.ರಮೇಶ್ ಉಪಸ್ಥಿತರಿದ್ದರು.

ಬೆಂಗಳೂರು ವಿಶ್ವವಿದ್ಯಾಲಯ ಘಟಿಕೋತ್ಸವ ನಾಳೆ • ಪದವಿ ಪ್ರಮಾಣಪತ್ರ ವಿತರಣೆ

ಸುಷ್ಮಾಗೆ 7, ಐಶ್ವರ್ಯಾ, ಶ್ರೀನಿವಾಸ್‌ಗೆ ತಲಾ 6 ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿ ವಿಭಾಗದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ರಸಾಯನ ವಿಜ್ಞಾನ ವಿಭಾಗದ ಎಚ್. ಸುಷ್ಮಾ ಅತಿ ಹೆಚ್ಚು ಏಳು ಚಿನ್ನದ ಪದಕ ಗಳಿಸಿದ್ದಾರೆ. ಸಂಸ್ಕೃತ ವಿಭಾಗದ ಪಿ.ಸಿ. ಐಶ್ವರ್ಯಾ ಮತ್ತು ಕನ್ನಡ ಅಧ್ಯಯನ ಕೇಂದ್ರದ ವಿದ್ಯಾರ್ಥಿ ಎಸ್. ಶ್ರೀನಿವಾಸ ತಲಾ ಆರು, ಗಣಿತ ವಿಭಾಗದ ಎನ್. ಸುರಭಿ, ಸಸ್ಯವಿಜ್ಞಾನ ವಿಭಾಗದ ಎನ್. ಸುರೇಶ್ ಬಾಬು, ಪ್ರಾಣಿವಿಜ್ಞಾನ ವಿಭಾಗದ ಆರ್. ಚಂದನ ತಲಾ ಐದು ಚಿನ್ನದ ಪದಕ ಪಡೆದಿದ್ದಾರೆ.

ಇದೇ 29ರಂದು ನಡೆಯಲಿರುವ ಘಟಿಕೋತ್ಸವದಲ್ಲಿ ಪದವಿ ಪ್ರಮಾಣಪತ್ರಗಳನ್ನು ವಿತರಿಸಲಾಗುವುದು ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಎಸ್‌ಸಿ ಪದವಿ ವಿಭಾಗದಲ್ಲಿ ಯಲಹಂಕ ಪ್ರಥಮ ದರ್ಜೆ ಕಾಲೇಜಿನ ವಿ. ನಂದಿನಿ ಆರು ಚಿನ್ನದ ಪದಕಗಳನ್ನು ಗಳಿಸಿದ್ದು, ಬಿಬಿಎ ಪದವಿಯಲ್ಲಿ ಬೆಂಗಳೂರಿನ ಸೇಂಟ್ ಆ್ಯನ್ಸ್ ಪದವಿ ಕಾಲೇಜಿನ ಮುಸ್ಕಾನ್ ಖಾನಂ ಹಾಗೂ ಬಿಇ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಬಿ.ವಿ. ರಕ್ಷಿತಾ ತಲಾ ಐದು ಚಿನ್ನದ ಪದಕ ಗಳಿಸಿದ್ದಾರೆ. 54ನೇ ಘಟಿಕೋತ್ಸವದವರೆಗೂ ವಿದ್ಯಾರ್ಥಿಗಳಿಗೆ ಚಿನ್ನ ಲೇಪಿತ ಪದಕಗಳನ್ನು ನೀಡಲಾಗುತ್ತಿತ್ತು. 55ನೇ ಘಟಿಕೋತ್ಸವದಿಂದ ಬೆಳ್ಳಿಯ ಮೇಲೆ 1.3 ಗ್ರಾಂ. ಚಿನ್ನದಿಂದ ಕೆತ್ತಲಾದ ಪದಕಗಳನ್ನು ನೀಡಲಾಗುತ್ತಿದ್ದು, ಈ ಬಾರಿಯೂ ಅಂಥ ಪದಕಗಳನ್ನು ನೀಡಲಾಗುತ್ತಿದೆ.

ಪರೀಕ್ಷಾಂಗ ವ್ಯವಸ್ಥೆ ಡಿಜಿಟಲೀಕರಣ: ‘ವಿಶ್ವವಿದ್ಯಾಲಯದ ಪರೀಕ್ಷಾಂಗ ವ್ಯವಸ್ಥೆಯನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸಲಾಗಿದೆ. ಪರೀಕ್ಷಾ ವೇಳಾಪಟ್ಟಿ, ಪರೀಕ್ಷಾ ಕೇಂದ್ರಗಳ ಹಂಚಿಕೆ, ಮೌಲ್ಯಮಾಪನ, ಟ್ಯಾಬುಲೇಶನ್, ಪರೀಕ್ಷಾಫಲಿತಾಂಶ ಡಿಜಿಟಲೀಕರಣಗೊಂಡಿದ್ದು, ಫಲಿತಾಂಶವನ್ನು ನ್ಯಾಡ್‌ಗೆ (ನ್ಯಾಷನಲ್ ಅಕಾಡೆಮಿಕ್ ಡೈರೆಕ್ಟರಿ) ಅಪ್‌ಲೋಡ್ ಮಾಡಲಾಗುತ್ತದೆ. ವಿದ್ಯಾರ್ಥಿಗಳು ಡಿಜಿಟಲ್ ವ್ಯವಸ್ಥೆಯ ಮೂಲಕ ಫಲಿತಾಂಶ ತಿಳಿದುಕೊಂಡು ಡಿಜಿಲಾಕರ್‌ನಿಂದ ಅಂಕಪಟ್ಟಿ ಡೌನ್‌ಲೋಡ್ ಮಾಡಿಕೊಳ್ಳಬಹುದು’ ಎಂದು ವೇಣುಗೋಪಾಲ್ ತಿಳಿಸಿದ್ದಾರೆ.

‘ಇದಕ್ಕೂ ಮೊದಲು ಒಂದು ಅಂಕಪಟ್ಟಿಗೆ ₹ 30ರಿಂದ ₹40 ವೆಚ್ಚ ತಗುಲುತ್ತಿತ್ತು. ಡಿಜಿಟಲೀಕರಣದಿಂದಾಗಿ ಅಂಕ ಪಟ್ಟಿ ದರ ಕಡಿಮೆಯಾಗಿದೆ. ಇವು ಸಾಮಾನ್ಯ ಅಂಕಪಟ್ಟಿಗಳಾಗಿದ್ದು, ನ್ಯಾಡ್‌ನ ಡಿಜಿಲಾಕರ್ ಮೂಲಕ ದೃಢೀಕರಣ ಮಾಡಿಕೊಳ್ಳಬಹುದು. ಎಲ್ಲವೂ ಡಿಜಿಟಲ್ ಕಡತದಲ್ಲಿ ದಾಖಲಾಗುತ್ತಿರುವುದರಿಂದ ಎಲ್ಲಿ ತಪ್ಪುಗಳಾಗುತ್ತಿವೆ ಎಂದು ಕಂಡುಹಿಡಿಯಲು ಸಾಧ್ಯವಾಗಿದೆ. ಪರೀಕ್ಷಾಂಗ ವಿಭಾಗವನ್ನು ವಿಸ್ತರಿಸಿ ನಾಲ್ಕು ಹಂತದ ಹೊಸ ಕಟ್ಟಡ ನಿರ್ಮಿಸಲಾಗಿದೆ. ಅಲ್ಲಿ ವಿದ್ಯಾರ್ಥಿಗಳ ಕುಂದುಕೊರತೆ ವಿಭಾಗ ತೆರೆಯಲಾಗಿದೆ. ಪರೀಕ್ಷಾಂಗ ವ್ಯವಸ್ಥೆಯು ಸುಸಜ್ಜಿತಗೊಂಡಿದ್ದು, ಏಕಗವಾಕ್ಷಿ ವ್ಯವಸ್ಥೆಯ ಮೂಲಕ ತಾತ್ಕಾಲಿಕ ಪದವಿ ಪ್ರಮಾಣಪತ್ರ, ವಲಸೆ ಪ್ರಮಾಣಪತ್ರ, ಟ್ರಾನ್ಸ್‌ಸ್ಕ್ರಿಪ್ಟ್‌ಗಳನ್ನು ಮಧ್ಯವರ್ತಿಗಳ ಸಹಾಯ ಇಲ್ಲದೆ ಪಡೆದುಕೊಳ್ಳಲು ವ್ಯವಸ್ಥೆ ಕಲ್ಪಿಸಲಾಗಿದೆ’ ಎಂದೂ ವಿವರಿಸಿದ್ದಾರೆ.

‘₹ 10 ಲಕ್ಷ ವೆಚ್ಚದಲ್ಲಿ ಹೊಸ ಸರ್ವರ್ ವ್ಯವಸ್ಥೆ ಮಾಡಲಾಗಿದೆ. ವಿಶ್ವವಿದ್ಯಾಲಯದ ಎಲ್ಲ ದತ್ತಾಂಶಗಳನ್ನು ಅದರಲ್ಲಿ ಉಳಿಸಿಕೊಳ್ಳಲಾಗಿದೆ. ಇನ್ನು 10–15 ವರ್ಷಗಳವರೆಗೆ ನಿಶ್ಚಿಂತೆಯಾಗಿ ಎಲ್ಲ ಮಾಹಿತಿಯನ್ನು ಅದರಲ್ಲಿ ಉಳಿಸಿಕೊಳ್ಳಬಹುದು’ ಎಂದೂ ಹೇಳಿದ್ದಾರೆ.

ಪರದಾಡಿದ ಮೆಟ್ರೊ ಪ್ರಯಾಣಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಸ್ವಯಂಚಾಲಿತ ಟಿಕೆಟ್ ದರ ಸಂಗ್ರಹ ವ್ಯವಸ್ಥೆಯ ಕಾರ್ಯಾಚರಣೆ ವಿಫಲವಾಗಿದ್ದರಿಂದ ಪ್ರಯಾಣಿಕರು ಬುಧವಾರ ರಾತ್ರಿ ತೀವ್ರ ಸಮಸ್ಯೆ ಎದುರಿಸಿದರು.



ಪ್ರಯಾಣಿಕರು ನಿಲ್ದಾಣದ ಗೇಟ್ ಮೂಲಕ ಪ್ಲಾಟ್‌ಫಾರಂ ಪ್ರವೇಶಿಸಲು ಸಾಧ್ಯವಾಗಲಿಲ್ಲ. ನಿಲ್ದಾಣಗಳಿಂದ ಹೊರ ಬರುವುದಕ್ಕೂ ಸಾಧ್ಯವಾಗಲಿಲ್ಲ. ಬಳಿಕ ನಿಲ್ದಾಣದ ಸಿಬ್ಬಂದಿ ಪ್ರಯಾಣಿಕರ ಟಿಕೆಟ್ ಅಥವಾ ಮೆಟ್ರೊ ಪ್ರಯಾಣ ಕಾರ್ಡ್ ವಿವರ ಪಡೆದು ಅವರು ಹೊರಹೋಗಲು ಅನುವು ಮಾಡಿಕೊಟ್ಟರು.

10.45ರ ನಂತರ ಸಂಚರಿಸುವ ಕೆಲ ರೈಲುಗಳು 15 ನಿಮಿಷ ತಡವಾಗಿ ಸಂಚರಿಸಿದವು. ಇದರಿಂದಾಗಿ ಮೆಟ್ರೊ ರೈಲಿನಲ್ಲಿ ಹೋಗಿ ಬೇರೆ ಬಸ್ ಮತ್ತು ರೈಲುಗಳನ್ನು ಹಿಡಿದು ಪರ ಊರುಗಳಿಗೆ ಪ್ರಯಾಣಿಸುವವರು ಸಮಸ್ಯೆ ಎದುರಿಸಿದರು.

ತಡ ರಾತ್ರಿ ಈ ಸಮಸ್ಯೆ ದಿಢೀರ್ ಕಾಣಿಸಿಕೊಂಡಿದ್ದರಿಂದ ಪ್ರಯಾಣಿಕರ ಟಿಕೆಟ್ ಹಾಗೂ ಕಾರ್ಡ್ ವಿವರ ಪಡೆಯುವುದಕ್ಕೂ ನಿಲ್ದಾಣಗಳಲ್ಲಿ ಸಿಬ್ಬಂದಿ ಕೊರತೆ ಇತ್ತು. ‘ಮೆಟ್ರೊ ರೈಲು ನಂಬಿಕೊಂಡು ಬಸ್ ತಪ್ಪಿಸಿಕೊಳ್ಳಬೇಕಾಯಿತು. ನಮಗೆ ಬಸ್ ಟಿಕೆಟ್ ದರವನ್ನು ಹಿಂಪಾವತಿ ಮಾಡುವವರು ಯಾರು. ನಾನು ಮಂಗಳೂರಿಗೆ ಹೋಗಬೇಕಿದೆ. ಬಸ್ ಸಿಗುತ್ತದೆಯೊ ಇಲ್ಲವೋ ಗೊತ್ತಿಲ್ಲ’ ಎಂದು ಪ್ರಯಾಣಿಕ ನಾಗರಾಜ್ ‘ಪ್ರಜಾವಾಣಿ’ ಜೊತೆ ಅಳಲು ತೋಡಿಕೊಂಡರು.

4 ಬೋಯಿಂಗ್ ವಿಮಾನಗಳ ನೋಂದಣಿ ರದ್ದು

ನವ ದೆಹಲಿ (ಪಿಟಿಐ): 2020ರ ಫೆಬ್ರುವರಿಯಿಂದ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದ, ಏರ್ ಇಂಡಿಯಾದ ನಾಲ್ಕು ಬೋಯಿಂಗ್ 747 ಜೆಟ್ ವಿಮಾನಗಳ ನೋಂದಣಿಯನ್ನು ರದ್ದುಗೊಳಿಸಲಾಗಿದೆ ಎಂದು ನಾಗರಿಕ ವಿಮಾನಯಾನ ಮಹಾ ನಿರ್ದೇಶಕರು (ಡಿಜಿಸಿಎ) ತಿಳಿಸಿದ್ದಾರೆ.

ಬಹಳ ಹಳೆಯದಾಗಿದ್ದ ಈ ವಿಮಾನಗಳಿಗೆ ಭಾರಿ ಪ್ರಮಾಣದ ಇಂಧನದ ಅಗತ್ಯವಿತ್ತು ಹಾಗೂ ಇವುಗಳ ನಿರ್ವಹಣೆಯೂ ವೆಚ್ಚದಾಯಕವಾಗಿತ್ತು ಎಂದು ಡಿಜಿಸಿಎ ಪ್ರಕಟಣೆ ತಿಳಿಸಿದೆ.

ಈ ನಾಲ್ಕು ವಿಮಾನಗಳನ್ನು ಏನು ಮಾಡಲಾಗುತ್ತದೆ ಎಂಬ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ.

‘ತಾಂತ್ರಿಕತೆಯಿಂದ ವ್ಯವಸಾಯ ಲಾಭದ ಉದ್ದಿಮೆಯಾಗಲಿದೆ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ‘ತಾಂತ್ರಿಕತೆಯಿಂದ ವ್ಯವಸಾಯವನ್ನು ಲಾಭದ ಉದ್ದಿಮೆಯನ್ನಾಗಿ ಪರಿವರ್ತಿಸಬಹುದು’ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ರಾಜೇಂದ್ರ ಪ್ರಸಾದ್ ಹೇಳಿದರು.

ಎಸ್‌ಜೆಬಿ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಮತ್ತು ಪ್ಲಾನಿಂಗ್ ಹಾಗೂ ಎಸ್‌ಜೆಬಿ ತಾಂತ್ರಿಕ ಕಾಲೇಜಿನಲ್ಲಿ ಆಯೋಜಿಸಿದ್ದ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆಹಾರ ಸಂಸ್ಕರಣೆ, ಕೀಟನಾಶಕ ಸಿಂಪಡಿಕೆ, ಸೂಕ್ತ ಬೆಳೆ ಬಿತ್ತನೆ, ನೀರು ಹಾಯಿಸುವಿಕೆಯಂತ ಕೃಷಿ ಚಟುವಟಿಕೆಯಲ್ಲಿ ನೀರು, ಮಣ್ಣಿನಂತ ನೈಸರ್ಗಿಕ ಸಂಪನ್ಮೂಲಗಳು ಹೇರಳವಾಗಿ ನಷ್ಟವಾಗುತ್ತಿದೆ. ನಿರ್ದಿಷ್ಟ ಮಣ್ಣಿಗೆ ನಿರ್ದಿಷ್ಟ ಬಿತ್ತನೆಯನ್ನು ಖಾತ್ರಿಪಡಿಸುವಂತಹ ತಾಂತ್ರಿಕತೆಯಿದ್ದು, ಎಲ್ಲ ರೈತರಿಗೂ ಈ ಸೌಲಭ್ಯ ಮುಟ್ಟುವಂತಾಗಬೇಕಾಗಿದೆ ಎಂದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ‘ಸಾಧನೆ ಎಂಬುದು ಏಕ ವ್ಯಕ್ತಿ ಪ್ರದರ್ಶನವಲ್ಲ. ಪ್ರತಿಯೊಬ್ಬರ ಏಳಿಗೆಯಲ್ಲೂ ಸಮಾಜದ ಪಾತ್ರ ಇದ್ದೇ ಇರುತ್ತದೆ. ಈ ನಿಜವನ್ನು ಅರಿಯುವ ಮೂಲಕ ಸಮಾಜದ ಬೆಳವಣಿಗೆಗೆ ಕೊಡುಗೆ ನೀಡಬೇಕು’ ಎಂದರು.

ಎಸ್‌ಜೆಬಿ ಐ ಟಿ ಕಾಲೇಜಿನ 900 ಹಾಗೂ ಎಸ್‌ಜೆಬಿ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಸಂಸ್ಥೆಯ 150 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ವಿಟಿಯು ಪರೀಕ್ಷೆಯಲ್ಲಿ ರ್‍ಯಾಂಕ್ ಗಳಿಸಿದ ವಿದ್ಯಾರ್ಥಿಗಳಿಗೆ ₹30 ಸಾವಿರ ನಗದು ಬಹುಮಾನ ನೀಡಿ ಗೌರವಿಸಲಾಯಿತು.

ಬಿಜಿಎಸ್ ಎಸ್‌ಜೆಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ, ನ್ಯಾಷನಲ್ ಲಾ ಕಾಲೇಜ್ ಆಫ್ ಇಂಡಿಯಾ ವಿಶ್ವವಿದ್ಯಾಲಯದ ಕುಲಪತಿ ಡಾ.ವಿ.ವಿಜಯ್ ಕುಮಾರ್, ನ್ಯಾಕ್ ಕಮಿಟಿ ಸಲಹೆಗಾರ ಡಾ.ಎಂ.ಎಸ್.ಶ್ಯಾಮ್ ಸುಂದರ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಟೀರಿಯರ್ ಡಿಸೈನ್ ಕಾಲೇಜು ಗೌರವ ಕಾರ್ಯದರ್ಶಿ ವಿ.ವಿಶ್ವನಾಥ್ ಇದ್ದರು.

ಮೇ 1ಕ್ಕೆ ಹವ್ಯಕ ವಿಶೇಷ ಪ್ರಶಸ್ತಿಗಳ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಹವ್ಯಕ ಮಹಾಸಭೆಯು ಹವ್ಯಕ ಸಂಸ್ಥಾಪನೋತ್ಸವ ಹಾಗೂ ವಿವಿಧ ಸಾಧಕರಿಗೆ ‘ಹವ್ಯಕ ವಿಶೇಷ ಪ್ರಶಸ್ತಿ’ಗಳ ಪ್ರದಾನ ಕಾರ್ಯಕ್ರಮವನ್ನು ಮೇ 1ರಂದು ಸಂಜೆ 4 ಗಂಟೆಗೆ ಮಲ್ಲೇಶ್ವರದ ಹವ್ಯಕ ಭವನದಲ್ಲಿ ಹಮ್ಮಿಕೊಂಡಿದೆ.

ಅತಿಥಿಗಳಾಗಿ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಮೂರ್ತಿ, ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಜಿ.ಎಲ್.ಹೆಗಡೆ ಭಾಗವಹಿಸಲಿದ್ದಾರೆ. ಅಖಿಲ ಹವ್ಯಕ ಮಹಾಸಭಾದ ಅಧ್ಯಕ್ಷ ಗಿರಿಧರ ಕಜೆ ಅಧ್ಯಕ್ಷತೆ ವಹಿಸಲಿದ್ದಾರೆ.

ಇದೇ ಕಾರ್ಯಕ್ರಮದಲ್ಲಿ ಯುವ ಸಾಧಕರಿಗೆ ‘ಪಲ್ಲವ ಪುರಸ್ಕಾರ’ ಪ್ರದಾನವೂ ನಡೆಯಲಿದೆ. ಪ್ರಕಾಶ್ ಹೆಗಡೆ ಕಲ್ಲಾರೆಮನೆ ಮತ್ತು ಬಳಗದಿಂದ ‘ವೇಣು ನಿನಾದ’ ಸಾಂಸ್ಕೃತಿಕ ಕಾರ್ಯಕ್ರಮ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಹವ್ಯಕ ವಿಶೇಷ ಪ್ರಶಸ್ತಿ ಪುರಸ್ಕೃತರು



ತ್ರಿಯಂಬಕ ಗಣೇಶ ಹೆಗಡೆ (ಹವ್ಯಕ ಸೇವಾಶ್ರೀ)
ಗಜಾನನ ಶರ್ಮ (ಹವ್ಯಕ ವಿಭೂಷಣ)
ಬಳ್ಕೂರು ಕೃಷ್ಣ ಯಾಜಿ
ಉದಯಕುಮಾರ್ ನೂಜಿ
ಅಶ್ವಿನಿ ಭಟ್
ಅಶ್ವಿನಿಕುಮಾರ್ ಭಟ್ (ಹವ್ಯಕ ಶ್ರೀ)
ನಾರಾಯಣ ದಾಸ (ಹವ್ಯಕ ಭೂಷಣ)
ರಾಜಾರಾಮ ಸಿ.ಜಿ.

ಕಸ ವಿಲೇವಾರಿ ವಿಕೇಂದ್ರೀಕರಣಕ್ಕೆ ಕ್ರಮ: ಬಿಬಿಎಂಪಿ ಮುಖ್ಯ ಆಯುಕ್ತ

ಹಸಿ ಕಸದಿಂದ ಗೊಬ್ಬರ ತಯಾರಿಸುವ ಯಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೋರಮಂಗಲ ವಾರ್ಡಿನ ಕಸ-ರಸ ಘಟಕದ ಆವರಣದಲ್ಲಿ ರೀಜನರೇಟ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯಡಿ ವಿನೂತನ ಮಾದರಿಯ ಹಸಿ ಕಸ ಸಂಸ್ಕರಣಾ ಯಂತ್ರವನ್ನು (ಕಾಂಪೋಸ್ಟ್ ಟೆಕ್) ಅಳವಡಿಸಿದೆ. ಹಸಿ ಕಸವನ್ನು ಗೊಬ್ಬರವನ್ನಾಗಿ ಪರಿವರ್ತಿಸುವ ಈ ಯಂತ್ರವನ್ನು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಬುಧವಾರ ಪರಿಶೀಲನೆ ನಡೆಸಿದರು.

‘ನಗರದಲ್ಲಿ ಉತ್ಪತ್ತಿ ಆಗುವ ಕಸವನ್ನು ಮೂಲದಲ್ಲಿಯೇ ಸಂಸ್ಕರಿಸುವ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು. ಕಸವನ್ನು ಉತ್ಪಾದನೆಯಾಗುವ ಪ್ರದೇಶದಲ್ಲೇ ಸಂಸ್ಕರಣೆ ಮಾಡುವುದಕ್ಕೆ ವಿಕೇಂದ್ರಿಕೃತ ವ್ಯವಸ್ಥೆ ಹೊಂದುವುದು ಸೂಕ್ತ. ಮೂಲದಲ್ಲಿಯೇ ಕಸವನ್ನು ಸಂಸ್ಕರಿಸಿದಾಗ ನಗರದಲ್ಲಿ ಕಸ ನಿರ್ವಹಣೆಯ ಸಮಸ್ಯೆಯನ್ನು ನಿವಾರಿಸುವುದು ಸುಲಭವಾಗುತ್ತದೆ’ ಎಂದು ಅವರು ಅಭಿಪ್ರಾಯಪಟ್ಟರು.



ಹಸಿ ಕಸವನ್ನು ಗೊಬ್ಬರವನ್ನಾಗಿ ಪರಿವರ್ತಿಸುವ ಯಂತ್ರವನ್ನು ಗೌರವ್ ಗುಪ್ತ ಅವರು ಬುಧವಾರ ಪರಿಶೀಲಿಸಿದರು

‘ಈ ಯಂತ್ರವನ್ನು ಬಳಸಿ ಕಸ ವಿಲೇವಾರಿಯ ವಿಕೇಂದ್ರೀಕರಣಗೊಳಿಸುವುಕ್ಕೆ ಈಗಲೇ ಯೋಜನೆ ರೂಪಿಸಿಕೊಳ್ಳಬೇಕು. ಯಂತ್ರದ ಕಾರ್ಯಾಚರಣೆ ಮತ್ತು ನಿರ್ವಹಣೆ ಸಂಬಂಧ ಏನು ಕ್ರಮ ಕೈಗೊಳ್ಳಬಹುದು ಎಂದು ರೂಪರೇಷೆ ಸಿದ್ಧಪಡಿಸಬೇಕು’ ಎಂದು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

‘ಈ ಯಂತ್ರದ ಬಳಕೆಯು ಸುಲಭವಾಗಿದೆ. ಹಸಿ ಕಸವನ್ನು ಪುಡಿ ಮಾಡಿ ಅದರಿಂದ ಬರುವ ರಸವನ್ನು ಸ್ಥಳದಲ್ಲಿರುವ ಬಯೋಗ್ಯಾಸ್ ಘಟಕಕ್ಕೆ ಬಳಸಿಕೊಳ್ಳಲಾಗುತ್ತದೆ. ಈ ಯಂತ್ರದ ಬಳಕೆ ಯಶಸ್ವಿಯಾದರೆ ಮುಂದಿನ ದಿನಗಳಲ್ಲಿ ದೊಡ್ಡ ಅಪಾರ್ಟ್‌ಮೆಂಟ್ ಸಮುಚ್ಚಯಗಳು, ಸಗಟು ಕಸ ಉತ್ಪಾದನೆ ಮಾಡುವ ಕಟ್ಟಡಗಳಲ್ಲಿಯೂ ಇದನ್ನು ಬಳಸಬಹುದು. ಈ ಹಸಿ ಕಸ ಸಂಸ್ಕರಣಾ ಯಂತ್ರವನ್ನು ಸದ್ಯಕ್ಕೆ ಪ್ರಾಯೋಗಿಕವಾಗಿ ಬಳಸಲಿದ್ದೇವೆ. ಇದು ಯಶಸ್ವಿಯಾದರೆ ಮುಂದಿನ ದಿನಗಳಲ್ಲಿ ಇನ್ನಷ್ಟು ವಾರ್ಡ್‌ಗಳಲ್ಲೂ ಈ ಯಂತ್ರವನ್ನು ಬಳಸಲು ಕ್ರಮ ಕೈಗೊಳ್ಳಲಿದ್ದೇವೆ’ ಎಂದು ತಿಳಿಸಿದರು.

‘ಈ ಯಂತ್ರವನ್ನು ಸಂಪೂರ್ಣ ಜೈವಿಕ ಆಧಾರಿತವಾಗಿ ವಿನ್ಯಾಸಗೊಳಿಸಲಾಗಿದೆ. ಅತ್ಯಾಧುನಿಕ ತಂತ್ರಜ್ಞಾನದಿಂದ ತಯಾರಿಸಿದ ಈ ಯಂತ್ರವು ಸ್ವಯಂಚಾಲಿತವಾಗಿ ಕಾರ್ಯನಿರ್ವಹಿಸಲಿದೆ. ಇದು ನಿತ್ಯ 500 ಕೆ.ಜಿ. ಕಸವನ್ನು ಸಂಸ್ಕರಣೆ ಮಾಡುವ ಸಾಮರ್ಥ್ಯವನ್ನು ಹೊಂದಿದೆ. ಕಸವನ್ನು ಬಳಸಿ 15 ರಿಂದ 18 ದಿನದೊಳಗೆ ಗೊಬ್ಬರವನ್ನು ಸಿದ್ಧಪಡಿಸಲಿದೆ. 30 x 35 x 15 ಅಡಿ ಸ್ಥಳದಲ್ಲಿ ಯಂತ್ರವನ್ನು ಇಡಬಹುದಾಗಿದೆ’ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದರು.

ಕಸ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತ ಹರೀಶ್ ಕುಮಾರ್, ದಕ್ಷಿಣ ವಲಯ ಜಂಟಿ ಆಯುಕ್ತ ಜಗದೀಶ್ ನಾಯ್ಕ್, ಮುಖ್ಯ ಎಂಜಿನಿಯರ್ ನರಸರಾಮರಾವ್, ಕಸ ವಿಲೇವಾರಿ ವಿಭಾಗದ –ಪ್ರಭಾರ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ಉಪಸ್ಥಿತರಿದ್ದರು.

ಅಂಕಿ-ಅಂಶಗಳು

1,000 ಕೆ.ಜಿ.
ಹಸಿ ಕಸ ಸಂಸ್ಕರಣಾ ಯಂತ್ರದ ತೂಕ

₹15 ಲಕ್ಷ
ಹಸಿ ಕಸ ಸಂಸ್ಕರಣಾ ಯಂತ್ರದ ಅಂದಾಜು ಮೊತ್ತ

ಸಾಲ ನೀಡಿ ಸುಲಿಗೆ: ₹ 6.17 ಕೋಟಿ ಆಸ್ತಿ ವಶ

ಬೆಂಗಳೂರು: ಚೀನಾದಿಂದ ಹೂಡಿಕೆಯಾಗುತ್ತಿದ್ದ ಹಣವನ್ನು ಬಳಸಿಕೊಂಡು ಭಾರತೀಯ ನಾಗರಿಕರ ಹೆಸರಿನಲ್ಲಿ ಕಂಪನಿ ತೆರೆದು ಆ್ಯಪ್‌ಗಳ ಮೂಲಕ ದುಬಾರಿ ಬಡ್ಡಿ ದರದಲ್ಲಿ ಸಾಲ ನೀಡಿ ಗ್ರಾಹಕರನ್ನು ಸುಲಿಗೆ ಮಾಡುತ್ತಿದ್ದ ಆರೋಪ ಎದುರಿಸುತ್ತಿರುವ ಸಂಸ್ಥೆಗಳಿಗೆ ಸೇರಿರುವ ₹ 6.17 ಕೋಟಿ ಮೌಲ್ಯದ ಆಸ್ತಿಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ವಶಕ್ಕೆ ಪಡೆದಿದೆ.

ಕ್ಯಾಶ್ ಮಾಸ್ಟರ್, ಕ್ರೇಝಿ ರುಪೀ, ಕ್ಯಾಶ್‌ಇನ್, ರುಪೀ ಮೆನು ಸೇರಿದಂತೆ ವಿವಿಧ ಆ್ಯಪ್‌ಗಳ ಮೂಲಕ ಗ್ರಾಹಕರಿಗೆ ಸಾಲ ನೀಡುತ್ತಿದ್ದ ಹಣಕಾಸು ಕಂಪನಿಗಳು, ದುಬಾರಿ ದರದ ಬಡ್ಡಿ ಹಾಗೂ ಶುಲ್ಕ ವಿಧಿಸಿ ಸುಲಿಗೆ ಮಾಡುತ್ತಿರುವ ಆರೋಪದ ಮೇಲೆ ಮಾರತ್ತಹಳ್ಳಿ ಹಾಗೂ ಮಹಾಲಕ್ಷ್ಮಿ ಬಡಾವಣೆ ಪೊಲೀಸ್ ಠಾಣೆಗಳಲ್ಲಿ 2021ರ ನವೆಂಬರ್‌ನಲ್ಲಿ ಎಫ್‌ಐಆರ್‌ಗಳನ್ನು ದಾಖಲಿಸಲಾಗಿತ್ತು. ಈ ಸಂಬಂಧ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಿರುವ ಇ.ಡಿ ಆರೋಪಿಗಳ ಆಸ್ತಿ ವಶಕ್ಕೆ ಪಡೆದಿದೆ.

‘ಭಾರತೀಯ ನಾಗರಿಕರ ಗುರುತಿನ ದಾಖಲೆಗಳನ್ನು ಬಳಸಿಕೊಂಡು ಕಂಪನಿಗಳನ್ನು ತೆರೆಯಲಾಗುತ್ತಿತ್ತು. ಅವುಗಳಿಗೆ ಚೀನಾದಿಂದ ಹೂಡಿಕೆ ಮಾಡಿ, ಆ ಮೊತ್ತವನ್ನು ಆ್ಯಪ್ ಮೂಲಕ ಸಾಲವಾಗಿ ನೀಡಲಾಗುತ್ತಿತ್ತು. ತ್ವರಿತ ಸಾಲ ನೀಡುವ ಆಮಿಷವೊಡ್ಡಿ ಹಣ ನೀಡಿ, ಬಳಿಕ ದುಬಾರಿ ಬಡ್ಡಿ ಹಾಗೂ ಶುಲ್ಕ ವಿಧಿಸಿ ಸುಲಿಗೆ ಮಾಡಲಾಗುತ್ತಿತ್ತು’ ಎಂದು ಇ.ಡಿ ತಿಳಿಸಿದೆ.

ವಂಚಕ ಕಂಪನಿಗಳು ಹಾಗೂ ಅವುಗಳ ಪಾಲುದಾರರ ಬ್ಯಾಂಕ್ ಖಾತೆಗಳು, ವಹಿವಾಟು ಖಾತೆಗಳು, ವಿವಿಧ ಹಣಕಾಸು ವಹಿವಾಟು ನಿರ್ವಹಣಾ ಕಂಪನಿಗಳ ಪೇಮೆಂಟ್ ಗೇಟ್‌ವೇನಲ್ಲಿ ಬಾಕಿ ಇದ್ದ ಮೊತ್ತ ಸೇರಿದಂತೆ ₹ 6.17 ಕೋಟಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ತನಿಖಾ ಸಂಸ್ಥೆ ಹೇಳಿದೆ.

ನಾಪತ್ತೆಯಾಗಿದ್ದ ಬಾಲಕಿಯರು ಪತ್ತೆ

ಅಪರಾಧ ಸುದ್ದಿ

ಬೆಂಗಳೂರು:ಬಳ್ಳಾರಿಯಿಂದ ನಾಪತ್ತೆಯಾಗಿದ್ದ ನಾಲ್ವರು ಬಾಲಕಿಯರು ಬೆಂಗಳೂರಿನಲ್ಲಿ ಪತ್ತೆಯಾಗಿದ್ದು, ಉಪ್ಪಾರಪೇಟೆ ಪೊಲೀಸರು ಅವರನ್ನು ಪೋಷಕರಿಗೆ ಒಪ್ಪಿಸಿದ್ದಾರೆ.

‘ಬಳ್ಳಾರಿಯ ಸಾಯಿ ಆಸ್ಪತ್ರೆ ಬಳಿ ವಾಸವಿದ್ದ ವೀರೇಶ್ ಅವರ ಮಕ್ಕಳಾದ ಮೋನಿಕಾ (7), ದೀಪಿಕಾ (10), ಪಾರ್ವತಿನಗರದ ಚಂದ್ರಶೇಖರ ಗೌಡ ಅವರ ಪುತ್ರಿಯರಾದ ಯಶಸ್ವಿನಿ (9) ಹಾಗೂ ಪಲ್ಲವಿ (14) ಅವರು ಮಂಗಳವಾರ ರಾತ್ರಿ ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದರು. ಕೆಎಸ್‌ಆರ್‌ಟಿಸಿ ಬಸ್ ಚಾಲಕ ರವಿಕುಮಾರ್ ಹಾಗೂ ನಿರ್ವಾಹಕ ಬಂದೆ ನವಾಜ್ ಎಂಬುವರು ಬಾಲಕಿಯರನ್ನು ಕರೆದು ವಿಚಾರಿಸಿದಾಗ, ಮನೆಬಿಟ್ಟು ಬಂದಿರುವ ವಿಷಯ ತಿಳಿಸಿದ್ದರು. ಅವರು ಬಾಲಕಿಯರನ್ನು ಠಾಣೆಗೆ ಕರೆ ತಂದಿದ್ದರು’ ಎಂದು ಪೊಲೀಸ್ ಅಧಿಕಾರಿ ಹೇಳಿದ್ದಾರೆ. ‘ರಿಯಾಲಿಟಿ ಶೋ ವೀಕ್ಷಿಸಿ ಅದರಲ್ಲಿ ಪಾಲ್ಗೊಂಡಿರುವ ಮಕ್ಕಳ ಹಾಗೆ ನಾವೂ ಸಾಧನೆ ಮಾಡಿ ಬರುತ್ತೇವೆ. ನಮ್ಮ ಬಗ್ಗೆ ಯಾರೂ ಚಿಂತಿಸಬೇಡಿ’ ಎಂದು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಟ್ಟು ಇವರು ಮನೆಯಿಂದ ಬಂದಿದ್ದಾಗಿ ವಿಚಾರಣೆ ವೇಳೆ ತಿಳಿಸಿದ್ದರು. ಅವರ ಪೋಷಕರ ಮಾಹಿತಿ ಪಡೆದು ಸಂಪರ್ಕಿಸಲಾಯಿತು. ಅವರು ಠಾಣೆಗೆ ಬಂದು ಬಾಲಕಿಯರನ್ನು ಕರೆದುಕೊಂಡು ಹೋಗಿದ್ದಾರೆ’ ಎಂದು ವಿವರಿಸಿದ್ದಾರೆ.

ಆಸ್ತಿ ತೆರಿಗೆ ಪಾವತಿ– ರಿಯಾಯಿತಿ ಪಡೆಯಲು ಇನ್ನು ಮೂರೇ ದಿನಗಳ ಅವಕಾಶ

ಬಿಬಿಎಂಪಿ: ₹749 ಕೋಟಿ ತೆರಿಗೆ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯು 2022–23ನೇ ಸಾಲಿನ ಆಸ್ತಿ ತೆರಿಗೆ ಸಂಗ್ರಹದಲ್ಲಿ ಹಿಂದಿನ ವರ್ಷಕ್ಕಿಂತ ಉತ್ತಮ ಸಾಧನೆ ಮಾಡಿದ್ದು, ಏಪ್ರಿಲ್ 25ರವರೆಗೆ ಒಟ್ಟು ₹ 748.63 ಕೋಟಿ ತೆರಿಗೆ ಸಂಗ್ರಹಿಸಿದೆ. ಇದು ಕಳೆದ ಸಾಲಿನಲ್ಲಿ ಇದೇ ದಿನಾಂಕಕ್ಕೆ ಹೋಲಿಸಿದರೆ ₹ 45 ಕೋಟಿಗಳಷ್ಟು ಹೆಚ್ಚು ತೆರಿಗೆ ಸಂಗ್ರಹವಾದಂತಾಗಿದೆ.

'2021ರ ಏ.25ರವರೆಗೆ ₹ 703.31 ಕೋಟಿ ತೆರಿಗೆ ಸಂಗ್ರಹವಾಗಿತ್ತು. ಅದಕ್ಕೆ ಹೋಲಿಸಿದರೆ ಈ ಬಾರಿ ತುಸು ಹೆಚ್ಚು ಆಸ್ತಿ ತೆರಿಗೆ ಸಂಗ್ರಹವಾಗಿದೆ. ಇದೊಂದು ಉತ್ತಮ ಆರಂಭ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಕಂದಾಯ) ಡಾ.ದೀಪಕ್ ಆರ್.ಎಲ್. 'ಪ್ರಜಾವಾಣಿ'ಗೆ ತಿಳಿಸಿದರು.

'ಆಸ್ತಿ ತೆರಿಗೆ ಸಂಗ್ರಹದಲ್ಲಿ ಕಳೆದ ಆರ್ಥಿಕ ವರ್ಷದಲ್ಲೂ ಗಮನಾರ್ಹ ಸಾಧನೆ ಮಾಡಿದ್ದೇವೆ. ಈ ಆರ್ಥಿಕ ವರ್ಷದಲ್ಲಿ ಹಳೆ ಬಾಕಿಯೂ ಸೇರಿ ₹ 4,100 ಕೋಟಿ ತೆರಿಗೆ ಸಂಗ್ರಹಿಸುವ ಗುರಿ ನಿಗದಿಪಡಿಸಲಾಗಿದೆ. ಈ ಗುರಿಯನ್ನು ತಲುಪುವ ನಿಟ್ಟಿನಲ್ಲಿ ಕಂದಾಯ ವಿಭಾಗದ ಅಧಿಕಾರಿಗಳು ವಿಶೇಷ ಪರಿಶ್ರಮ ಹಾಕಿ ಕಾರ್ಯನಿರ್ವಹಿಸಬೇಕು' ಎಂದರು.

'ಅಧಿಕಾರಿಗಳು ತೆರಿಗೆ ಸಂಗ್ರಹಿಸಿದರಷ್ಟೇ ಸಾಲದು, ಪ್ರತಿಯೊಬ್ಬ ಆಸ್ತಿ ಮಾಲೀಕರಿಂದಲೂ ಸರಿಯಾದ ಮೊತ್ತದ ತೆರಿಗೆ ವಸೂಲಿ ಮಾಡಬೇಕಾದ ಅಗತ್ಯ ಇದೆ. ತೆರಿಗೆ ಸೋರಿಕೆ ತಡೆಯುವ ನಿಟ್ಟಿನಲ್ಲೂ ವಿಶೇಷ ಪ್ರಯತ್ನಗಳು ಆಗಬೇಕಿವೆ. ಸೋರಿಕೆ ತಡೆಯಲು ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವ ನಿಟ್ಟಿನಲ್ಲೂ ಪ್ರಯತ್ನ ನಡೆಸಿದ್ದೇವೆ' ಎಂದರು.

ರಿಯಾಯಿತಿ ಇನ್ನು ಮೂರೇ ದಿನ: 'ಏಪ್ರಿಲ್ ತಿಂಗಳಲ್ಲಿ ತೆರಿಗೆ ಪಾವತಿಸುವವರಿಗೆ ಶೇ 5ರಷ್ಟು ರಿಯಾಯಿತಿ ಸಿಗಲಿದೆ. ಈ ಸೌಲಭ್ಯ ಇನ್ನು ಮೂರು ದಿನಗಳವರೆಗೆ ಮಾತ್ರ ಲಭ್ಯ ಇದ್ದು, ಆಸ್ತಿ ಮಾಲೀಕರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು' ಎಂದು ದೀಪಕ್ ಹೇಳಿದರು.

'ಸದ್ಯಕ್ಕಂತೂ ರಿಯಾಯಿತಿ ಸೌಲಭ್ಯದ ಅವಧಿಯನ್ನು ವಿಸ್ತರಿಸುವ ಪ್ರಸ್ತಾವ ಬಿಬಿಎಂಪಿ ಮುಂದೆ ಇಲ್ಲ. ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರ್ಧಾರ ತೆಗೆದುಕೊಳ್ಳಬೇಕು' ಎಂದು ಅವರು ಸ್ಪಷ್ಟಪಡಿಸಿದರು.

ಇಷ್ಟು ವರ್ಷ ರಿಯಾಯಿತಿ ಅನ್ವಯವಾಗುವ ಅವಧಿ ಮುಗಿದ ನಂತರ ತೆರಿಗೆ ಪಾವತಿಸುವವರಿಗೆ ತಿಂಗಳಿಗೆ ಶೇ 2ರಂತೆ ಬಡ್ಡಿ ವಿಧಿಸಲಾಗುತ್ತಿತ್ತು. ಈ ಆರ್ಥಿಕ ವರ್ಷದಿಂದ ಬಡ್ಡಿ ದರವನ್ನು ಪರಿಷ್ಕರಿಸಲಾಗಿದೆ.

'ಮೇ ತಿಂಗಳಿನಲ್ಲಿ ತೆರಿಗೆ ಪಾವತಿಸುವವರಿಗೆ ಯಾವುದೇ ಬಡ್ಡಿ ವಿಧಿಸುವುದಿಲ್ಲ. ಜೂನ್ 1ರ ನಂತರ ತೆರಿಗೆ ಪಾವತಿಸುವವರು ವಾರ್ಷಿಕ ಶೇ 9ರಷ್ಟು ಬಡ್ಡಿ ಸಮೇತ ತೆರಿಗೆ ಪಾವತಿಸಬೇಕಾಗುತ್ತದೆ' ಎಂದು ದೀಪಕ್ ವಿವರಿಸಿದರು.

2021-22ರ ತೆರಿಗೆ ಸಂಗ್ರಹ ವಲಯವಾರು ವಿವರ

ವಲಯ	ತೆರಿಗೆ ಸಂಗ್ರಹ (₹ ಕೋಟಿ)
ಯಲಹಂಕ	295.38
ಮಹದೇವಪುರ	796.11
ದಾಸರಹಳ್ಳಿ	53.82
ಆರ್.ಆರ್.ನಗರ	203.05
ಬೊಮ್ಮನಹಳ್ಳಿ	329.00
ದಕ್ಷಿಣ	450.27
ಪಶ್ಚಿಮ	335.59
ಪೂರ್ವ	587.77
ಆರ್‌ಟಿಜಿಎಸ್ ಪಾವತಿ	7.79

ಬಿಬಿಎಂಪಿ: ಆಸ್ತಿ ತೆರಿಗೆ ಸಂಗ್ರಹ ವಿವರ (ಏ 25ರವರೆಗೆ) (₹ ಕೋಟಿಗಳಲ್ಲಿ)

ವರ್ಷ	ಆನ್‌ಲೈನ್	ಚಲನ್	ಒಟ್ಟು
2020-21	174.61	33.03	207.64
2021-22	303.44	399.87	703.31
2022-23	449.39	299.24	748.63

2021–22ರಲ್ಲಿ ₹3089 ಕೋಟಿ ತೆರಿಗೆ ಸಂಗ್ರಹ

ಬಿಬಿಎಂಪಿಯು 2021–22ನೇ ಸಾಲಿನಲ್ಲಿ ಒಟ್ಟು ₹ 3,088.78 ಕೋಟಿ (ಹಳೆ ಬಾಕಿ ಸಂಗ್ರಹವೂ ಸೇರಿ) ಆಸ್ತಿ ತೆರಿಗೆ ಸಂಗ್ರಹ ಮಾಡಿದೆ. 2020–21ನೇ ಸಾಲಿಗೆ ಹೋಲಿಸಿದರೆ ಒಟ್ಟು ಹೆಚ್ಚು ತೆರಿಗೆ ಸಂಗ್ರಹ ಮಾಡಿದಂತಾಗಿದೆ. ಪಾಲಿಕೆಯು 2020–21ನೇ ಸಾಲಿನಲ್ಲಿ 2,946.63 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸಿತ್ತು. ಶೇ 82ರಷ್ಟು ಗುರಿಸಾಧನೆ ಮಾಡಿರುವ ಯಲಹಂಕ ವಲಯವು ತೆರಿಗೆ ಸಂಗ್ರಹದ ಗುರಿ ಸಾಧನೆಯಲ್ಲಿ ಮುಂಚೂಣಿಯಲ್ಲಿತ್ತು.

ತಂಜಾವೂರು: ರಥಕ್ಕೆ ವಿದ್ಯುತ್ ಸ್ಪರ್ಶ– 11 ಭಕ್ತರ ಸಾವು

ತಂಜಾವೂರು (ಪಿಟಿಐ): ತಂಜಾವೂರು ಜಿಲ್ಲೆಯ ಕಳಿಮೇಡುವಿನ ಅಪ್ಪಾರ್ ದೇವಸ್ಥಾನದ ರಥಕ್ಕೆ ಬುಧವಾರ ಬೆಳಿಗ್ಗೆ ಮೆರವಣಿಗೆ ಸಂದರ್ಭದಲ್ಲಿ ಹೈ ಟೆನ್ಷನ್ ವಿದ್ಯುತ್ ತಂತಿ ತಗುಲಿ ಮೂವರು ಹದಿಹರೆಯದ ಬಾಲಕರು ಸೇರಿದಂತೆ ಒಟ್ಟು 11 ಮಂದಿ ಭಕ್ತರು ಮೃತಪಟ್ಟಿದ್ದಾರೆ. ಈ ದುರಂತದಲ್ಲಿ ಮಕ್ಕಳೂ ಸೇರಿ 17 ಮಂದಿ ಗಾಯಗೊಂಡಿದ್ದು, ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪ್ಪಾರ್ ದೇವಸ್ಥಾನದ ರಥವು ಬುಧವಾರ ಮುಂಜಾನೆ ತಂಜಾವೂರು–ಬೂದಲೂರು ರಸ್ತೆಯಲ್ಲಿ ಸಾಗುತ್ತಿದ್ದಾಗ ಈ ದುರಂತ ಸಂಭವಿಸಿದೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ರಥ ತಿರುವು ಪಡೆಯುವಾಗ ಕೆಲ ಅಡಚಣೆ ಎದುರಿಸಿತು. ಆಗ ಭಕ್ತರು ರಥವನ್ನು ತಿರುಗಿಸಲು ಪ್ರಯತ್ನಿಸಿದಾಗ ಅದರ ಮೇಲ್ಭಾಗ ವಿದ್ಯುತ್ ತಂತಿಯ ಸಂಪರ್ಕಕ್ಕೆ ಬಂದಿತು. ರಥದ ಬಳಿ ಇದ್ದ ಭಕ್ತರು ವಿದ್ಯುತ್ ಆಘಾತದಿಂದ ಪಕ್ಕಕ್ಕೆ ಎಸೆಯಲ್ಪಟ್ಟರು, ರಥ ಸಂಪೂರ್ಣ ಉರಿದು ಭಸ್ಮವಾಯಿತು ಎಂದು ಪೊಲೀಸ್ ಮತ್ತು ಜಿಲ್ಲಾ ಕಂದಾಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಪರಿಹಾರ: ಪ್ರಧಾನಿ ನರೇಂದ್ರ ಮೋದಿ ಅವರು ಮೃತಪಟ್ಟವರ ಕುಟುಂಬಸ್ಥರಿಗೆ ತಲಾ ₹2 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ₹50 ಸಾವಿರ ಪರಿಹಾರವನ್ನು ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ನೀಡಲಾಗುವುದು ಎಂದು ಘೋಷಿಸಿದ್ದಾರೆ. ಮುಖ್ಯಮಂತ್ರಿ ಸ್ಟಾಲಿನ್ ಅವರು ಮೃತರ ಕುಟುಂಬಸ್ಥರಿಗೆ ತಲಾ ₹5 ಲಕ್ಷ ಪರಿಹಾರ ನೀಡುವುದಾಗಿ ಪ್ರಕಟಿಸಿದ್ದಾರೆ.

ತನಿಖೆ: 'ಘಟನೆ ಕುರಿತು ತನಿಖೆ ನಡೆಸಲು ಹಾಗೂ ಭವಿಷ್ಯದಲ್ಲಿ ಇಂಥ ಘಟನೆಗಳು ಮರುಕಳಿಸದ ರೀತಿಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಶಿಫಾರಸು ಮಾಡಲು ಮುಖ್ಯಮಂತ್ರಿ ಸ್ಟಾಲಿನ್ ಅವರು ಏಕ ಸದಸ್ಯ ಆಯೋಗ ರಚಿಸುವುದಾಗಿ ಘೋಷಿಸಿದ್ದಾರೆ' ಎಂದು ಇಂಧನ ಸಚಿವ ವಿ.ಸೆಂಥಿಲ್ ಬಾಲಾಜಿ ವಿಧಾನಸಭೆಗೆ ಮಾಹಿತಿ ನೀಡಿದ್ದಾರೆ.



ತಂಜಾವೂರು ಜಿಲ್ಲೆಯ ಕಳಿಮೇಡುವಿನ ಅಪ್ಪಾರ್ ದೇವಸ್ಥಾನದ ರಥಕ್ಕೆ ವಿದ್ಯುತ್ ತಂತಿ ತಗುಲಿದ್ದರಿಂದ ಇಡೀ ರಥ ಬೆಂಕಿಗೆ ಆಹುತಿಯಾಯಿತು –ಪಿಟಿಐ ಚಿತ್ರ

ಉತ್ತರ ಪ್ರದೇಶ– ₹ 3,000 ಕೋಟಿ ವಂಚನೆ: ಬಂಧನ

ನೋಯ್ಡಾ (ಉತ್ತರ ಪ್ರದೇಶ) (ಪಿಟಿಐ): ಚೀನಾದೊಂದಿಗೆ ಸಂಪರ್ಕ ಹೊಂದಿದ, ಆನ್‌ಲೈನ್ ಮೂಲಕ ₹ 3,000 ಕೋಟಿ ವಂಚನೆ ಜಾಲವನ್ನು ಭೇದಿಸಿದ್ದಾಗಿ ಉತ್ತರ ಪ್ರದೇಶದ ಸೈಬರ್ ಪೊಲೀಸರು ಬುಧವಾರ ಹೇಳಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿ, ಪಶ್ಚಿಮ ಬಂಗಾಳದ ಮಂಡಲ್ ಇಸ್ಲಾಂ ಎಂಬಾತನನ್ನು ನೋಯ್ಡಾದಲ್ಲಿ ಬಂಧಿಸಲಾಗಿದೆ ಎಂದು ಬರೇಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಸೈಬರ್ ಘಟಕ) ತ್ರಿವೇಣಿ ಸಿಂಗ್ ತಿಳಿಸಿದ್ದಾರೆ.

'ಉದ್ಯೋಗ ಕೊಡಿಸುವುದಾಗಿ, ಹೂಡಿಕೆ ಮಾಡಿದ ಹಣವನ್ನು ದ್ವಿಗುಣಗೊಳಿಸುವುದಾಗಿ ಹೇಳಿ ಜನರನ್ನು ವಂಚಿಸುತ್ತಿತ್ತು. ಜನರಿಂದ ಪಡೆದ ಹಣವನ್ನು ಯುಪಿಐ ಐಡಿ ಮುಖಾಂತರ ಕ್ರಿಪ್ಟೊ ವ್ಯಾಲೆಟ್‌ಗಳಿಗೆ ವರ್ಗಾಯಿಸಲಾಗುತ್ತಿತ್ತು.' ಎಂದು ಅವರು ತಿಳಿಸಿದ್ದಾರೆ.

'ಪ್ರವಾಸೋದ್ಯಮ ಇಲಾಖೆಯಲ್ಲೂ ಶೇ40 ಕಮಿಷನ್?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶೇ 40 ಕಮಿಷನ್ ಪಿಡುಗು ಪ್ರವಾಸೋದ್ಯಮ ಇಲಾಖೆಗೂ ಹಬ್ಬಿದೆ. ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ (ಜೆಎಲ್‌ಆರ್) ಸಂಸ್ಥೆಯು ಕಾಳಿ ನದಿಯಲ್ಲಿ ಜಲಕ್ರೀಡೆ (ವೈಟ್ ವಾಟರ್ ರ‍್ಯಾಫ್ಟಿಂಗ್) ನಡೆಸಲು ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ 3 ತಿಂಗಳು ಕಳೆದಿದೆ. ಆಯ್ಕೆಯಾದ ಸಂಸ್ಥೆ ಜೊತೆ ಕರಾರು ಒಪ್ಪಂದ ಮಾಡಿಕೊಳ್ಳಲು ಪ್ರವಾಸೋದ್ಯಮ ಸಚಿವ ಆನಂದ ಸಿಂಗ್ ಅವರ ಆಪ್ತರು ಶೇ 40ರಷ್ಟು ಕಮಿಷನ್ ಕೇಳುತ್ತಿದ್ದಾರೆ' ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷವು ಆರೋಪಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ದೀಪಕ್ ಸಿ.ಎನ್. ಬುಧವಾರ ದೂರು ನೀಡಿದ್ದು, 'ಸಂಸ್ಥೆಯ ಜೊತೆ ಗುತ್ತಿಗೆ ಕರಾರು ಮಾಡಿಕೊಳ್ಳದೇ ಸರ್ಕಾರಕ್ಕೆ ನಷ್ಟವಾಗುವಂತೆ ಮಾಡಿರುವ ಬಗ್ಗೆ ಸಮಗ್ರ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದ್ದಾರೆ.

ಜಲಕ್ರೀಡೆ ನಡೆಸುವುದಕ್ಕೆ ಅರ್ಹ ಸಂಸ್ಥೆಯ ಆಯ್ಕೆಗೆ 2022ರ ಜ.25ರಂದು ಜೆಎಲ್‌ಆರ್ ಟೆಂಡರ್ ಆಹ್ವಾನಿಸಿತ್ತು. ಬಿಡ್ ಸಲ್ಲಿಸಲು ಫೆ.15 ಕೊನೆ ದಿನವಾಗಿತ್ತು. ಟೆಂಡರ್ ಪ್ರಕ್ರಿಯೆಯಲ್ಲಿ ಎರಡು ಸಂಸ್ಥೆಗಳು ಭಾಗವಹಿಸಿದ್ದವು. ಉತ್ತರಾಖಂಡದ ಆಲ್ಟೊಟ್ರಿಪ್ ಹಾಸ್ಪಿಟಾಲಿಟಿ ಪ್ರೈವೆಟ್ ಲಿಮಿಟೆಡ್ ಟೆಂಡರ್‌ನಲ್ಲಿ ಅರ್ಹತೆ ಪಡೆದಿತ್ತು. ಈ ವಿಚಾರವನ್ನು ಜೆಎಲ್‌ಆರ್‌ನ ವ್ಯವಸ್ಥಾಪಕ ನಿರ್ದೇಶಕರು ಆ ಸಂಸ್ಥೆಗೆ ಮಾರ್ಚ್ 25ರಂದು ಅಧಿಕೃತವಾಗಿ ತಿಳಿಸಿದ್ದರು. ವಿವರವಾದ ಷರತ್ತುಗಳು ಮತ್ತು ನಿಯಮಾವಳಿಗಳನ್ನು ಒಳಗೊಂಡ ಒಪ್ಪಂದದ ಕರಡನ್ನು ಪತ್ರದೊಂದಿಗೆ ಲಗತ್ತಿಸಿ, ₹ 200ರ ಛಾಪಾ ಕಾಗದದಲ್ಲಿ ಒಪ್ಪಂದ ಮಾಡಿಕೊಳ್ಳಬೇಕು ಎಂದೂ ಸೂಚಿಸಿದ್ದರು.

'ಒಪ್ಪಂದಕ್ಕೆ ಆಲ್ಟೊಟ್ರಿಪ್ ಹಾಸ್ಪಿಟಾಲಿಟಿ ಸಂಸ್ಥೆ ಸಹಿ ಮಾಡಿ ನೀಡಿದೆ. ಸಚಿವ ಆನಂದ್ ಸಿಂಗ್ ತಡೆಹಿಡಿಯಲು ಸೂಚಿಸಿದ ಕಾರಣಕ್ಕೆ ಜೆಎಲ್‌ಆರ್ ಇದುವರೆಗೂ ಸಹಿ ಮಾಡಿಲ್ಲ. ಒಪ್ಪಂದವನ್ನು ಯಾವ ಕಾರಣಕ್ಕಾಗಿ ಇಲ್ಲಿಯವರೆಗೆ ತಡೆಹಿಡಿಯಲಾಗಿದೆ ಎಂದು ಸ್ಪಷ್ಟವಾಗಿ ತಿಳಿಸಬೇಕಾಗಿತ್ತು. ಕಾರಣ ನೀಡದೆಯೇ ತಿಂಗಳಿಗೂ ಹೆಚ್ಚು ಕಾಲ ತಡೆಹಿಡಿದಿರುವುದು ಭ್ರಷ್ಟಾಚಾರದಲ್ಲದೆ ಮತ್ತೇನೂ ಕಾರಣವಿರುವುದಿಲ್ಲ' ಎಂದು ದೂರಿನಲ್ಲಿ ತಿಳಿಸಿದೆ.

'ಆಲ್ಟೊಟ್ರಿಪ್ ಸಂಸ್ಥೆಯು ಟಿಕೆಟ್ ದರದ ಶೇ 64 ಮೊತ್ತವನ್ನು ಜೆಎಲ್‌ಆರ್‌ಗೆ ನೀಡಲು ಒಪ್ಪಿದೆ. ಇನ್ನೊಂದು ಸಂಸ್ಥೆ ಶೇ 50ಕ್ಕಿಂತ ಕಡಿಮೆ ಮೊತ್ತ ನೀಡುವುದಾಗಿ ನಮೂದಿಸಿತ್ತು. ಆದರೂ ಟೆಂಡರ್‌ನಲ್ಲಿ ಆಯ್ಕೆಯಾದ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿಲ್ಲ' ಎಂದು ಪಕ್ಷ ದೂರಿದೆ.

'ಟೆಂಡರ್ ಪ್ರಕ್ರಿಯೆ ಸ್ಥಗಿತಕ್ಕೆ ನಾನೇ ಸೂಚಿಸಿದ್ದೆ'

ಆರೋಪದ ಕುರಿತು ಪ್ರತಿಕ್ರಿಯಿಸಿದ ಸಚಿವ ಆನಂದ ಸಿಂಗ್, 'ಟೆಂಡರ್ ಪ್ರಕ್ರಿಯೆಯನ್ನು ತಡೆಹಿಡಿಯುವಂತೆ ನಾನೇ ಸೂಚಿಸಿದ್ದೆ. ಇದರ ಹಿಂದೆ ಸಾಕಷ್ಟು ರಾಜಕೀಯ ಇದೆ. ರ‍್ಯಾಫ್ಟಿಂಗ್‌ನಿಂದ ಇಷ್ಟೊಂದು ಆದಾಯ ಬರುತ್ತದೆ ಎಂದು ನನಗೆ ತಿಳಿದಿರಲಿಲ್ಲ. ಜೆಎಲ್‌ಆರ್ ವತಿಯಿಂದಲೇ 9 ತಿಂಗಳ ಕಾಲ ರ‍್ಯಾಫ್ಟಿಂಗ್ ನಡೆಸಿದಾಗ ದುಪ್ಪಟ್ಟು ಲಾಭ ಗಳಿಸಿದ್ದೇವೆ. ಅದನ್ನು ಹೊರಗುತ್ತಿಗೆ ನೀಡಿದರೆ ಬರುವ ಆದಾಯ ಕಡಿಮೆಯಾಗುತ್ತದೆ. ನಾವೇ ಅದನ್ನು ನಡೆಸಿದರೆ ಆಗ ಬರುವುದಕ್ಕಿಂತ ಹೆಚ್ಚು ಆದಾಯ ಗಳಿಸಬಹುದು. ಸ್ಥಳೀಯರಿಂದಲೂ ಇದರ ಬಗ್ಗೆ ದೂರುಗಳು ಬಂದಿವೆ' ಎಂದರು.



ಕಲಬುರಗಿ ಘಟಿಕೋತ್ಸವ

ಗುಲಬರ್ಗಾ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಬೀದರ್‌ನ ಗುರಮ್ಮ ಸಿದ್ದಾರೆಡ್ಡಿ, ಕಲಬುರಗಿಯ ವೇಣುಗೋಪಾಲ ಹೆರೂರ, ಬೀದರ್‌ನ ಡಾ. ಬಸವರಾಜ ಪಾಟೀಲ ಅಷ್ಟೂರ, ಬೆಲ್ದಾಳ ಸಿದ್ದರಾಮ ಶರಣರು, ಮಂಗಳೂರಿನ ಯೇನಪೋಯೆ ಅಬ್ದುಲ್ಲಾ ಕುನ್ಹಿ, ಬೆಂಗಳೂರಿನ ಡಾ. ಗೌತಮ ರಾಧಾಕೃಷ್ಣ ದೇಸಿರಾಜು ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. ಕುಲಸಚಿವ ಶರಣಬಸಪ್ಪ ಕೋಟೆಪ್ಪಗೋಳ, ಕುಲಸಚಿವೆ (ಮೌಲ್ಯಮಾಪನ) ಪ್ರೊ. ಮೇಧಾವಿನಿ ಕಟ್ಟಿ, ನ್ಯಾಕ್ ನಿರ್ದೇಶಕ ಪ್ರೊ.ಎಸ್.ಸಿ. ಶರ್ಮಾ, ಕುಲಪತಿ ಪ್ರೊ. ದಯಾನಂದ ಅಗಸರ ಇದ್ದರು

'ನಿಗದಿಯಂತೆ ಶಾಲೆ ಪ್ರಾರಂಭ'

ಮಂಗಳೂರು: ಕೋವಿಡ್ ನಿಯಂತ್ರಿಸಬಹುದಾದ ಕಾಯಿಲೆಯಾಗಿದ್ದು, ನಾಲ್ಕನೇ ಅಲೆ ಬಂದರೂ ನಿಗದಿಯಂತೆ ಶೈಕ್ಷಣಿಕ ವರ್ಷ ಆರಂಭವಾಗಿ, ತರಗತಿಗಳು ಪ್ರಾರಂಭವಾಗುತ್ತವೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮೂರನೇ ಅಲೆ ಇರುವಾಗಲೇ ಶಾಲೆಗಳನ್ನು ನಡೆಸಿದ್ದೇವೆ. ಕೋವಿಡ್‌ನಿಂದಾಗಿ ಒಂದೂವರೆ ವರ್ಷದಲ್ಲಿ ಮಕ್ಕಳ ಶೈಕ್ಷಣಿಕ ಗುಣಮಟ್ಟ ಕಡಿಮೆಯಾಗಿರುವ ಕಾರಣ, 15 ದಿನ ಮುಂಚಿತವಾಗಿ ಶಾಲೆ ಪ್ರಾರಂಭಿಸಿ, 'ಕಲಿಕಾ ಚೇತರಿಕೆ' ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ. ತಜ್ಞರ ಪ್ರಕಾರ ಜುಲೈ ವೇಳೆಗೆ ನಾಲ್ಕನೇ ಅಲೆ ಬರುವ ಸಾಧ್ಯತೆ ಇದ್ದು, ಆ ಸಂದರ್ಭದಲ್ಲಿ ಪರಿಸ್ಥಿತಿ ಅವಲೋಕಿಸಿ, ಶಿಕ್ಷಣ ಇಲಾಖೆ ನಿರ್ಣಯ ಕೈಗೊಳ್ಳುತ್ತದೆ' ಎಂದರು.

'ಬೆಂಗಳೂರಿನ ಶಾಲೆಯೊಂದರಲ್ಲಿ ಬೈಬಲ್ ಓದು ಕಡ್ಡಾಯಗೊಳಿಸಿರುವ ದೂರು ಬಂದ ಹಿನ್ನೆಲೆಯಲ್ಲಿ ಅಲ್ಲಿನ ಬಿಇಒಗೆ ಇದನ್ನು ಪರಿಶೀಲಿಸಲು ಸೂಚಿಸಲಾಗಿದೆಯೇ ವಿನಾ ಶಾಲೆಯ ಆಡಳಿತಾತ್ಮಕ ವಿಷಯದಲ್ಲಿ ಶಿಕ್ಷಣ ಇಲಾಖೆ ಹಸ್ತಕ್ಷೇಪ ಮಾಡುವುದಿಲ್ಲ' ಎಂದು ತಿಳಿಸಿದರು.

'ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೂ ತಮಗೆ ಬೇಕಾದಂತೆ ಧರ್ಮ ಶಿಕ್ಷಣ ಬೋಧಿಸುವಂತಿಲ್ಲ. ಬೇರೆ ಶಾಲೆಗಳಲ್ಲೂ ಬೈಬಲ್ ಬೋಧಿಸುತ್ತಿರುವ ಬಗ್ಗೆ ದೂರು ಬಂದಿದೆ. ಅಂತಹ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಲಾಗಿದೆ. ಕರ್ನಾಟಕ ಶಿಕ್ಷಣ ಕಾಯ್ದೆ ಅನ್ವಯ ಯಾವುದೇ ಧಾರ್ಮಿಕ ಪುಸ್ತಕ ಅಥವಾ ಧಾರ್ಮಿಕ ಆಚರಣೆಯನ್ನು ಶಿಕ್ಷಣ ವ್ಯವಸ್ಥೆಯಲ್ಲಿ ತರಲು ಅವಕಾಶವಿಲ್ಲ. ಬೈಬಲ್ ಮತ್ತು ಕುರಾನ್‌ಗಳು ಧಾರ್ಮಿಕ ಪುಸ್ತಕಗಳು. ಭಗವದ್ಗೀತೆ ಧಾರ್ಮಿಕ ಪುಸ್ತಕ ಅಲ್ಲ. ಅದು ಜೀವನಕ್ಕೆ ಬೇಕಾದ ಮೌಲ್ಯಗಳನ್ನು ತಿಳಿಸುತ್ತದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ರಸಗೊಬ್ಬರ ಸಬ್ಸಿಡಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಗಾರು ಬೆಳೆಗಳಿಗೆ ಬಳಸಲಾಗುವ ಪೋಷಕಾಂಶಯುಕ್ತ ರಂಜಕ ಹಾಗೂ ಪೊಟ್ಯಾಷ್ ರಸಗೊಬ್ಬರಗಳ ಮೇಲಿನ ಸಬ್ಸಿಡಿ ಹೆಚ್ಚಿಸಲು ಕೇಂದ್ರ ಸರ್ಕಾರ ಬುಧವಾರ ಅನುಮೋದನೆ ನೀಡಿದೆ.

ಹೊಸ ಸಬ್ಸಿಡಿ ದರಗಳು ಏಪ್ರಿಲ್ 1ರಿಂದಲೇ ಅನ್ವಯವಾಗಲಿದ್ದು, ಸೆಪ್ಟೆಂಬರ್ ವರೆಗೆ ಜಾರಿಯಲ್ಲಿ ಇರಲಿವೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆ ಸಬ್ಸಿಡಿ ದರ ಹೆಚ್ಚಳಕ್ಕೆ ಅನುಮೋದನೆ ನೀಡಿತು ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಸಭೆ ಬಳಿಕ ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಸಬ್ಸಿಡಿಯನ್ನು ಪ್ರತಿ ಚೀಲಕ್ಕೆ ₹ 1,650ರಿಂದ ₹ 2,500ಕ್ಕೆ ಹೆಚ್ಚಳ ಮಾಡುವುದಕ್ಕೆ ಅನುಮೋದನೆ ನೀಡಲಾಯಿತು. ಇದರಿಂದ ಕೇಂದ್ರದ ಬೊಕ್ಕಸಕ್ಕೆ ₹ 60,939 ಕೋಟಿ ಹೊರೆ ಬೀಳಲಿದೆ' ಎಂದರು. ರಸಗೊಬ್ಬರಗಳ ತಯಾರಿಕೆಗೆ ಅಗತ್ಯ ವಿರುವ ಕಚ್ಚಾವಸ್ತುಗಳ ಬೆಲೆ ಜಾಗತಿಕ ಮಾರುಕಟ್ಟೆಯಲ್ಲಿ ಹೆಚ್ಚಾಗಿದೆ. ಹಾಗಾಗಿ, ರೈತರ ಮೇಲಿನ ಹೊರೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಉಕ್ರೇನ್–ರಷ್ಯಾ ಯುದ್ಧದ ಪರಿಣಾಮ ರಸಗೊಬ್ಬರ ಹಾಗೂ ಕಚ್ಚಾವಸ್ತುಗಳ ಸಾಗಣೆಯಲ್ಲಿ ವ್ಯತ್ಯಯವಾಗಿದೆ. ಹೀಗಾಗಿ ಪ್ರಸಕ್ತ ಹಣಕಾಸು ವರ್ಷದಲ್ಲಿ ರಸಗೊಬ್ಬರಗಳ ಮೇಲಿನ ಸಬ್ಸಿಡಿ ₹ 2.30 ಲಕ್ಷ ಕೋಟಿಗೆ ಏರಿಕೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.



ಆಕ್ಸ್‌ಫರ್ಡ್ ವೈದ್ಯಕೀಯ ಮಹಾವಿದ್ಯಾಲಯದ ಘಟಿಕೋತ್ಸವದಲ್ಲಿ ಪದಕಗಳನ್ನು ಪಡೆದ ವಿದ್ಯಾರ್ಥಿನಿಯರ ಸಂಭ್ರಮ

'ವೈದ್ಯರಿಗೆ ಕಾಳಜಿ ಮುಖ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಷ್ಟೇ ದೊಡ್ಡ ತಂತ್ರಜ್ಞಾನ ಬಂದರೂ ವೈದ್ಯರ ಅವಶ್ಯಕತೆ ಇದ್ದೇ ಇರುತ್ತದೆ. ಈ ಸತ್ಯವನ್ನು ಅರಿತು ವೈದ್ಯರು ಕಾಳಜಿ ಇಟ್ಟುಕೊಳ್ಳಬೇಕು' ಎಂದು ನಾರಾಯಣ ಹೃದಯಾಲಯದ ಮುಖ್ಯಸ್ಥ ಡಾ.ದೇವಿಪ್ರಸಾದ್ ಶೆಟ್ಟಿ ಕರೆ ನೀಡಿದರು.

ಅತ್ತಿಬೆಲೆಯಲ್ಲಿರುವ ಆಕ್ಸ್‌ಫರ್ಡ್ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಆಯೋಜಿಸಿದ್ದ ಎಂಬಿಎ ಕೋರ್ಸ್‌ನ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ವೈದ್ಯಕೀಯ ಕ್ಷೇತ್ರದಲ್ಲಿ ತಂತ್ರಜ್ಞಾನ ಬೆಳವಣಿಗೆ ಸಾಧಿಸಿದೆ. ಇದರಿಂದ ಜನರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸಬಹುದಾಗಿದೆ. ಆದರೆ, ಈ ತಂತ್ರಜ್ಞಾನದ ಜತೆಗೆ ವೈದ್ಯರ ಕಾಳಜಿ ಕೂಡ ಅಷ್ಟೇ ಮುಖ್ಯ. ರೋಗಿಗಳು ವೈದ್ಯರಲ್ಲಿ ದೇವರನ್ನು ಕಾಣುತ್ತಾರೆ. ಈ ಅಂಶವನ್ನು ವೈದ್ಯರು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ಆ ಮೂಲಕ ಗುಣಮಟ್ಟ ಚಿಕಿತ್ಸೆ ನೀಡಬೇಕು' ಎಂದರು.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಅಧ್ಯಕ್ಷ ಎಸ್.ಎನ್.ವಿ.ಎಲ್. ನರಸಿಂಹರಾಜು ಮಾತನಾಡಿ, 'ಗ್ರಾಮೀಣ ಜನರಿಗಾಗಿ ಆಸ್ಪತ್ರೆ ತೆರೆದು ಉತ್ತಮ ವೈದ್ಯಕೀಯ ಚಿಕಿತ್ಸೆ ನೀಡುತ್ತಿದ್ದೇವೆ. ಈ ಬಾರಿ 150 ವಿದ್ಯಾರ್ಥಿಗಳು ಪದವಿ ಪಡೆಯುತ್ತಿದ್ದಾರೆ. ಅಲಂಕ್ರಿತ ಅವರು 5 ಹಾಗೂ ಆಶ್ಮಿತಾ ಮೆನನ್ ಅವರು 3 ಚಿನ್ನದ ಪದಕಗಳನ್ನು ಪಡೆದಿದ್ದಾರೆ' ಎಂದು ವಿವರಿಸಿದರು.

ಕನಿಕಗೆ 13, ಕಿರಣ್‌ಗೆ 9 ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೀದರ್: ತಾಲ್ಲೂಕಿನ ಕಮಠಾಣ ಸಮೀಪದ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಘಟಿಕೋತ್ಸವ ಗುರುವಾರ (ಏ.28) ನಡೆಯಲಿದ್ದು, ಶಿವಮೊಗ್ಗ ಪಶು ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿನಿ ಕನಿಕ ಯಾದವ್ 13 ಹಾಗೂ ಬೆಂಗಳೂರು ಪಶು ಮಹಾವಿದ್ಯಾಲಯದ ವಿದ್ಯಾರ್ಥಿ ಕಿರಣ್ ದರೂರ್ ಒಂಬತ್ತು ಚಿನ್ನದ ಪದಕಗಳಿಗೆ ಕೊರಳೊಡ್ಡಲಿದ್ದಾರೆ.



ಕನಿಕ ಯಾದವ್



ಕಿರಣ್ ದರೂರ್

2019-20ನೇ ಸಾಲಿನ ಬಿ.ವಿ.ಎಸ್ಸಿ ಮತ್ತು ಎ.ಎಚ್‌ನಲ್ಲಿ ಕನಿಕ 13, ಹಾಸನ ಪಶು ವೈದ್ಯಕೀಯ ಮಹಾವಿದ್ಯಾಲಯದ ನಿತಿನ್.ಬಿ ಆರು, 2020-21ನೇ ಸಾಲಿನ ಬಿ.ವಿ.ಎಸ್ಸಿ ಮತ್ತು ಎ.ಎಚ್‌ನಲ್ಲಿ ಕಿರಣ್ ದರೂರ್ ಒಂಬತ್ತು ಮತ್ತು ಶಿವಮೊಗ್ಗ ಪಶು ವೈದ್ಯಕೀಯ ಮಹಾವಿದ್ಯಾಲಯದ ರಜತ್ ಎಂ.ಎಸ್. ಆರು ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಳ್ಳಲಿದ್ದಾರೆ.

2019-20ನೇ ಸಾಲಿನ ಎಂ.ವಿ.ಎಸ್ಸಿಯಲ್ಲಿ ಬೆಂಗಳೂರು ಪಶು ವೈದ್ಯಕೀಯ ಮಹಾವಿದ್ಯಾಲಯದ ನಟರಾಜ ಡಿ. ಅವರು ನಾಲ್ಕು, 2020-21ನೇ ಸಾಲಿನ ಎಂ.ವಿ.ಎಸ್ಸಿಯಲ್ಲಿ ಶಿವಮೊಗ್ಗ ಪಶು ವೈದ್ಯಕೀಯ ಮಹಾವಿದ್ಯಾಲಯದ ಪವಿತ್ರ ಬಿ.ಎಸ್ ಹಾಗೂ ಎಂ.ಎಫ್.ಎಸ್ಸಿಯಲ್ಲಿ ಮಂಗಳೂರಿನ ಮೀನುಗಾರಿಕೆ ಮಹಾವಿದ್ಯಾಲಯದ ಧೀರಜ್ ಎಸ್.ಬಿ ತಲಾ ಮೂರು ಚಿನ್ನದ ಪದಕಗಳಿಗೆ ಭಾಜನರಾಗಲಿದ್ದಾರೆ.

ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಘಟಿಕೋತ್ಸವದಲ್ಲಿ 2018- 19, 2019- 20 ಹಾಗೂ 2020- 21ನೇ ಸಾಲಿನ ಒಟ್ಟು 1,012 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಿದ್ದಾರೆ. 154 ವಿದ್ಯಾರ್ಥಿಗಳು ಚಿನ್ನದ ಪದಕಗಳನ್ನು ಪಡೆಯಲಿದ್ದಾರೆ ಎಂದು ಕುಲಪತಿ ಡಾ. ಕೆ.ಸಿ. ವೀರಣ್ಣ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಗ್ನೇಶ್ ಬಿಡುಗಡೆಗೆ ಆಗ್ರಹ

ಬೆಂಗಳೂರು: 'ಗುಜರಾತ್ ಶಾಸಕ ಜಿಗ್ನೇಶ್ ಮೇವಾನಿ ಅವರನ್ನು ಬಂಧಿಸಿರುವುದು ಖಂಡನೀಯ. ಅವರನ್ನು ಕೂಡಲೇ ಬಿಡುಗಡೆ ಮಾಡಬೇಕು' ಎಂದು ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಆರ್.ಧರ್ಮಸೇನ ಆಗ್ರಹಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರಧಾನಿ ಮೋದಿ ವಿರುದ್ಧ ಟ್ವೀಟ್ ಮಾಡಿದ್ದಕ್ಕಾಗಿ ಜಿಗ್ನೇಶ್ ಮೇವಾನಿ ಅವರನ್ನು ಬಂಧಿಸಲಾಯಿತು. ಜಿಗ್ನೇಶ್ ಅವರು ಟ್ವೀಟ್ ಮೂಲಕ ಮಾಡಿರುವ ಟೀಕೆ ಸರಿಯಾಗಿದ್ದು, ಅವರನ್ನು ಪೊಲೀಸರು ಮತ್ತೆ ಬಂಧಿಸಿರುವುದು ಖಂಡನೀಯ' ಎಂದರು.

'ಇದು ಬಿಜೆಪಿಯ ಜಾತಿವಾದಿ ಮನಸ್ಥಿತಿಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ. ಇದು ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಪ್ರಚಾರಕ್ಕಾಗಿ ಬಿಜೆಪಿ ಮಾಡುತ್ತಿರುವ ತಂತ್ರ. ಬಿಜೆಪಿಯ ಇಂತಹ ಕೃತ್ಯಗಳನ್ನು ಯಾರೂ ಟೀಕಿಸಬಾರದೇ' ಎಂದು ಪ್ರಶ್ನಿಸಿದರು.

ದಲಿತ ನಾಯಕರೇ ಗುರಿ: 'ಪಿಎಸ್‌ಐ ಅಕ್ರಮ ನೇಮಕಾತಿಯ ಹಗರಣದ ಬಗ್ಗೆ ತನಿಖೆ ನಡೆಸುವಂತೆ ಸರ್ಕಾರಕ್ಕೆ ಆಗ್ರಹಿಸಿದ ಶಾಸಕ ಪ್ರಿಯಾಂಕ್ ಖರ್ಗೆಗೆ ಸಿಐಡಿ ನೋಟಿಸ್ ನೀಡಿರುವುದು ಖಂಡನೀಯ. ಪ್ರಿಯಾಂಕ್ ಖರ್ಗೆ ಅವರ ಬೆಂಬಲಕ್ಕೆ ದಲಿತ ಸಂಘಟನೆಗಳು ನಿಲ್ಲಲಿವೆ.' ಎಂದು ಹೇಳಿದರು.

ಏಕೈಕ ವಿದ್ಯಾರ್ಥಿನಿಗೆ 18 ಸಿಬ್ಬಂದಿ

ಬಾಳೆಹೊನ್ನೂರು: ಇಲ್ಲಿನ ಜಗದ್ಗುರು ರೇಣುಕಾಚಾರ್ಯ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಬುಧವಾರ ನಡೆದ ದ್ವಿತೀಯ ಪಿಯುಸಿ ಸಂಸ್ಕೃತ ಪರೀಕ್ಷೆಗೆ ಒಬ್ಬಳು ವಿದ್ಯಾರ್ಥಿನಿ ಹಾಜರಾಗಿದ್ದು, 18 ಸಿಬ್ಬಂದಿ ಕಾರ್ಯನಿರ್ವಹಿಸಿದರು.

ಪಟ್ಟಣದ ಬಿಜಿಎಸ್ ಕಾಲೇಜಿನ ಧೃತಿ ಭಟ್ ಐಚ್ಛಿಕ ಭಾಷೆಯಾಗಿ ಸಂಸ್ಕೃತವನ್ನು ತೆಗೆದುಕೊಂಡಿದ್ದರು. ತಾಲ್ಲೂಕಿಗೆ ಅವರೊಬ್ಬರೇ ಸಂಸ್ಕೃತ ವಿಷಯದ ವಿದ್ಯಾರ್ಥಿ ಆಗಿದ್ದರು. ಪರೀಕ್ಷಾ ಮೇಲ್ವಿಚಾರಕರು, ಅಧೀಕ್ಷಕರು, ಮಹಾ ಅಧೀಕ್ಷಕರು, ಆಶಾ ಕಾರ್ಯಕರ್ತರು, ಪೊಲೀಸರು ಸೇರಿದಂತೆ 18 ಜನ ಸಿಬ್ಬಂದಿ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಕಾರ್ಯನಿರ್ವಹಿಸಿದರು.

ಚಿತ್ರಾವಳಿ



ನೆಲಮಂಗಲ ಸಮೀಪದ ಪಿಳ್ಳಹಳ್ಳಿ ರೇಣುಕಾ ಎಲ್ಲಮ್ಮ, ಕಾಲಭೈರವೇಶ್ವರಸ್ವಾಮಿ ಹಾಗೂ ದುರ್ಗಾದೇವಿ ಜಾತ್ರಾ ಮಹೋತ್ಸವದ ಪ್ರಯುಕ್ತ ಭಕ್ತರ ಸಮ್ಮುಖದಲ್ಲಿ ದೇವಿಯ ಮೆರವಣಿಗೆ ನಡೆಯಿತು. ಮಠಪತಿ ಸಿದ್ದರಾಜು ದೇವಿಯನ್ನು ಹೊತ್ತಿದ್ದರು.



ನವನಗರೋತ್ಥಾನ ಯೋಜನೆಯ ₹11 ಕೋಟಿ ಅನುದಾನದಡಿ ಹೆಬ್ಬಾಳದ ಭೂಪಸಂದ್ರ ಹೊಸ ಬಡಾವಣೆ, ಎಂ.ಆರ್.ಗಾರ್ಡನ್, ಕೆಇಬಿ ಬಡಾವಣೆಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಬೈರತಿ ಸುರೇಶ್ ಬುಧವಾರ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಆನಂದ್, ಬಾಲಾಜಿ ಇತರರು ಇದ್ದಾರೆ.



ಬಾಗಲಗುಂಟೆ ವಾರ್ಡ್‌ನ ಮಂಜುನಾಥ್ ನಗರದಿಂದ ವಿವಿಧ ಬಡಾವಣೆಗಳನ್ನು ತಲುಪಲು ಅನುಕೂಲವಾಗುವಂತೆ ರಾಜಕಾಲುವೆಗೆ ಸೇತುವೆ ನಿರ್ಮಿಸುವ ಕಾಮಗಾರಿಗೆ ಶಾಸಕ ಆರ್.ಮಂಜುನಾಥ್ ಭೂಮಿಪೂಜೆ ನೆರವೇರಿಸಿದರು. ಮುಖಂಡರಾದ ಹನುಮಂತರಾಜು, ಮುನೇಗೌಡ, ಸದಾಶಿವ, ರೇಣುಕಪ್ಪ, ಉಮೇಶ್, ಮುದ್ದಹನುಮೇಗೌಡ, ಕುಮಾರಸ್ವಾಮಿ ಹಾಗೂ ಇತರರು ಇದ್ದಾರೆ.

ವಿಶ್ವಮಾನವ ಎಕ್ಸ್‌ಪ್ರೆಸ್ ರದ್ದು: ಪ್ರಯಾಣಿಕರಿಗೆ ತೊಂದರೆ

ಬೆಂಗಳೂರು: ಬೆಳಗಾವಿ ರೈಲು ನಿಲ್ದಾಣದಲ್ಲಿ ಸಿಗ್ನಲ್ ಕಾಮಗಾರಿ ನಿರ್ವಹಿಸಲು ಮೈಸೂರಿನಿಂದ ಬೆಂಗಳೂರು ಮಾರ್ಗದಲ್ಲಿ ಬೆಳಗಾವಿಗೆ ಹೋಗುವ 'ವಿಶ್ವಮಾನವ ಎಕ್ಸ್‌ಪ್ರೆಸ್' ರೈಲು ಸಂಚಾರವನ್ನು ನೈರುತ್ಯ ರೈಲ್ವೆ ಮೇ 5ರ ತನಕ ರದ್ದುಪಡಿಸಿದೆ. ಇದು ಮೈಸೂರು–ಬೆಂಗಳೂರು–ಹುಬ್ಬಳ್ಳಿ ನಡುವಿನ ರೈಲು ಪ್ರಯಾಣಿಕರಿಗೂ ತೊಂದರೆ ಉಂಟು ಮಾಡಿದೆ.

ಬೆಳಿಗ್ಗೆ 5.50ಕ್ಕೆ ಮೈಸೂರಿನಿಂದ ಹೊರಡುತ್ತಿದ್ದ ರೈಲು, 8.40 ಬೆಂಗಳೂರಿಗೆ ಬಂದು ರಾತ್ರಿ 9.45ರ ಸುಮಾರಿಗೆ ಬೆಳಗಾವಿ ತಲುಪುತ್ತಿತ್ತು. ಮರುದಿನ ಬೆಳಿಗ್ಗೆ 5.30ಕ್ಕೆ ಬೆಳಗಾವಿಯಿಂದ ಹೊರಟು ಸಂಜೆ 5.40ಕ್ಕೆ ಬೆಂಗಳೂರಿಗೆ ಬರುತ್ತಿತ್ತು. ರಾತ್ರಿ 8.40ರ ಸುಮಾರಿಗೆ ಮೈಸೂರು ತಲುಪುತ್ತಿತ್ತು.

'ಮೈಸೂರಿನಿಂದ ಬೆಂಗಳೂರಿಗೆ ಬರುವ ಮತ್ತು ಹೋಗುವ ಪ್ರಯಾಣಿಕರಿಗೆ, ಬೆಂಗಳೂರಿನಿಂದ ಅರಸೀಕೆರೆ ಮತ್ತು ಹುಬ್ಬಳ್ಳಿಗೆ ಹೋಗುವ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲ ಇತ್ತು. ಚಾಮುಂಡಿ ಎಕ್ಸ್‌ಪ್ರೆಸ್ ಮೇಲಿನ ಪ್ರಯಾಣಿಕರ ಒತ್ತಡವನ್ನೂ ಇದು ಕಡಿಮೆ ಮಾಡುತ್ತಿತ್ತು. ಬೆಳಗಾವಿಯಲ್ಲಿ ಕಾಮಗಾರಿ ನಿರ್ವಹಿಸಲು ಇಡೀ 749 ಕಿಲೋ ಮೀಟರ್ ಸಂಚಾರವನ್ನೇ ರದ್ದುಪಡಿಸಿರುವುದು ಎಷ್ಟು ಸರಿ' ಎಂಬುದು ರೈಲು ಪ್ರಯಾಣಿಕರ ಪ್ರಶ್ನೆ.

'ಬೆಳಗಾವಿಯಲ್ಲಿ ಕಾಮಗಾರಿ ನಿರ್ವಹಿಸಲು ಇಡೀ ಮಾರ್ಗದ ಸಂಚಾರ ರದ್ದುಪಡಿಸಿದರೆ ತೊಂದರೆಯಾಗಲಿದೆ.' ಎಂದು ರೈಲ್ವೆ ಹೋರಾಟಗಾರ ಕೃಷ್ಣಪ್ರಸಾದ್ ಹೇಳಿದರು.

'ಬೆಂಗಳೂರಿನಿಂದ ಅರಸೀಕೆರೆ ಅಥವಾ ಹುಬ್ಬಳ್ಳಿ ಕಡೆಗೆ ಬೆಳಿಗ್ಗೆ 6.30ರ ನಂತರ ಯಾವುದೇ ರೈಲುಗಳಿಲ್ಲ. ವಿಶ್ವಮಾನವ ರೈಲು ಸಂಚಾರವನ್ನು ಕೂಡಲೇ ಮುಂದುವರಿಸಬೇಕು' ಎಂದು ಮನವಿ ಮಾಡಿದರು.

'ಹುಬ್ಬಳ್ಳಿ ಅಥವಾ ಅರಸೀಕೆರೆ ತನಕ ಸಂಚಾರ ಮುಂದುವರಿಸುವ ಸಾಧ್ಯತೆ ಬಗ್ಗೆ ಸಾಕಷ್ಟು ಪ್ರಯತ್ನ ನಡೆಸಲಾಯಿತು. ಕೋಚ್ ನಿರ್ವಹಣೆ, ಸುರಕ್ಷತೆ ಪರಿಶೀಲನೆಗೆ ಬೇರೆಡೆ ಅವಕಾಶ ಇಲ್ಲದಿದ್ದರಿಂದ ತಾತ್ಕಾಲಿಕವಾಗಿ ರದ್ದುಪಡಿಸಲಾಗಿದೆ. ಪ್ರಯಾಣಿಕರಿಗೆ ಆಗಿರುವ ಅನಾನುಕೂಲಕ್ಕೆ ಕ್ಷಮೆ ಕೋರುತ್ತೇವೆ' ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಅನೀಶ್ ಹೆಗ್ಡೆ ಸ್ಪಷ್ಟಪಡಿಸಿದರು.

ಬಹುಜನ ಸಮಾಜ ಪಕ್ಷದ ಕಾರ್ಯಕರ್ತರ ಪ್ರತಿಭಟನೆ

ಕೊಳೆಗೇರಿ ನಿವಾಸಿಗಳಿಗೆ ಹಕ್ಕುಪತ್ರಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉತ್ತರಹಳ್ಳಿಯ ಭುವನೇಶ್ವರಿನಗರದಲ್ಲಿ ಕೊಳೆಗೇರಿ ಅಭಿವೃದ್ಧಿ ಮಂಡಳಿ ನಿರ್ಮಿಸಿರುವ ಮನೆಗಳಲ್ಲಿ ವಾಸವಿದ್ದ 430 ಬಡ ಕುಟುಂಬಗಳಿಗೆ ಹಕ್ಕುಪತ್ರ ನೀಡಬೇಕು. ಅವರನ್ನು ಒಕ್ಕಲೆಬ್ಬಿಸಲು ಮುಂದಾಗಿರುವ ಶಾಸಕ ಎಂ.ಕೃಷ್ಣಪ್ಪ ಹಾಗೂ ಸಂಸದ ಡಿ.ಕೆ. ಸುರೇಶ್ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಬೆಂಗಳೂರು ಘಟಕದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

'ಬಡವರ ವಸತಿ ಲಪಟಾಯಿಸುತ್ತಿರುವ ವಿ.ಸೋಮಣ್ಣ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಬೇಕು. ವಸತಿ ಯೋಜನೆಗಳಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾಗಿರುವ ಅನುದಾನದ ದುರ್ಬಳಕೆಯಾಗಿದೆ. ವಸತಿ ನಿರ್ಮಾಣದಲ್ಲಿ ಭ್ರಷ್ಟಾಚಾರ ನಡೆದಿದೆ. ಈ ಸಂಬಂಧ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಸಮಿತಿ ರಚಿಸಿ ತನಿಖೆ ಕೈಗೊಳ್ಳಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.



ಬಿಎಸ್‌ಪಿ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

'ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಪಿ) ಮತ್ತು ಪರಿಶಿಷ್ಟ ಪಂಗಡ ಉಪಯೋಜನೆ (ಟಿಎಸ್‌ಪಿ) ಅಡಿ ಮೀಸಲಿಟ್ಟ ಅನುದಾನಲ್ಲಿ 1,110 ಮನೆಗಳನ್ನು ನಿರ್ಮಿಸಿ ಅವುಗಳನ್ನು ಪರಿಶಿಷ್ಟ ಜಾತಿಯ ಪೌರಕಾರ್ಮಿಕರಿಗೆ ಬಿಬಿಎಂಪಿ ವತಿಯಿಂದ ಹಂಚಿಕೆ ಮಾಡಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ವಸತಿ ಸಚಿವ ವಿ.ಸೋಮಣ್ಣ ಹಾಗೂ ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ತಮ್ಮ ಪ್ರಭಾವ ಬಳಸಿ ಈ ಯೋಜನೆ ರದ್ದುಗೊಳಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ಆರೋಪಿಸಿದರು.

'ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು. ಇಟ್ಟಮಡುವಿನಲ್ಲಿ ಮೀಸಲಿಟ್ಟಿರುವ ಜಾಗದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಬೇಕು. ಗಂಗೊಂಡನಹಳ್ಳಿಯ ಕೊಳೆಗೇರಿಗಳಲ್ಲಿ ವಾಸಿಸುತ್ತಿರುವ ಜನರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

'ಪದ್ಮನಾಭನಗರ ಕ್ಷೇತ್ರದ ಮಾರುತಿನಗರ, ಭವಾನಿನಗರ, ಎಸ್.ಕೆ.ಗಾರ್ಡನ್, ಸಿ.ವಿ.ರಾಮನ್‌ನಗರ ವಿಧಾನಸಭಾ ಕ್ಷೇತ್ರ, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ಸೇರಿದಂತೆ ವಿವಿಧೆಡೆ ನೆಲೆಸಿರುವ ಬಡವರಿಗೆ ಹಕ್ಕುಪತ್ರ ವಿತರಿಸಬೇಕು. ನಿರ್ಗತಿಕರಿಗೆ ಸ್ವಂತ ಸೂರು ಕಲ್ಪಿಸಬೇಕು. ಜೈ ಭುವನೇಶ್ವರಿ ನಗರದಲ್ಲಿ ನಿರ್ಮಿಸಿರುವ ಮೇಲ್ಸೇತುವೆಗೆ 'ಡಾ.ಭೀಮರಾವ್ ಅಂಬೇಡ್ಕರ್ ಸೇತುವೆ' ಎಂದು ನಾಮಕರಣ ಮಾಡಬೇಕು. ಕೂಲಿ ನಗರ ಸೇತುವೆ ಬಳಿ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಜಾಗ ಕಲ್ಪಿಸಬೇಕು' ಎಂದೂ ಪ್ರತಿಭಟನಕಾರರು ಆಗ್ರಹಿಸಿದರು.

ರಾಗಿ ನೋಂದಣಿ ಸ್ಥಗಿತ: ರೈತರಿಗೆ ಲಾಠಿ ಏಟು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿಗೆ ಹೆಸರು ನೋಂದಾಯಿಸಲು ಹೊಸದುರ್ಗ ಎಪಿಎಂಸಿಯಲ್ಲಿ ಸರತಿ ಸಾಲಿನಲ್ಲಿ ನಿಂತಿದ್ದ ರೈತರ ಮೇಲೆ ಪೊಲೀಸರು ಲಾಠಿ ಬೀಸಿದ್ದಾರೆ. ನೋಂದಣಿ ಸ್ಥಗಿತ-ಗೊಳಿಸಿದ ಕ್ರಮಕ್ಕೆ ರಾಗಿ ಬೆಳೆಗಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಗಿ ಖರೀದಿಗೆ ಹೊಸದುರ್ಗ, ಚಿತ್ರದುರ್ಗ, ಚಿಕ್ಕಜಾಜೂರಿನಲ್ಲಿ ರೈತರ ಹೆಸರು ನೋಂದಣಿ ಪ್ರಕ್ರಿಯೆ ಮಂಗಳವಾರ ಮಧ್ಯಾಹ್ನ ಆರಂಭವಾಗಿತ್ತು. ಬುಧವಾರ ಸಂಜೆ 4ರ ಹೊತ್ತಿಗೆ ನೋಂದಣಿ ಸ್ಥಗಿತಗೊಳಿಸಿರುವುದಾಗಿ ಸಿಬ್ಬಂದಿ ಘೋಷಣೆ ಮಾಡುತ್ತಿದ್ದಂತೆ ರೈತರು ಸಿಟ್ಟಿಗೆದ್ದರು. ಹೊಸದುರ್ಗ ತಾಲ್ಲೂಕಿನಲ್ಲಿ ರಾಗಿ ಬೆಳೆಗಾರರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ವಾಗ್ವಾದ ನಡೆಯಿತು.

ಸ್ಥಳಕ್ಕೆ ಧಾವಿಸಿದ ಪೊಲೀಸರು ಲಾಠಿ ಬೀಸಿ ರೈತರ ಗುಂಪನ್ನು ಚದುರಿಸಿದರು. ಗಾಯಗೊಂಡ ರೈತರು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ಸ್ಥಳದಲ್ಲಿ ಕೆಲ ಹೊತ್ತು ಬಿಗುವಿನ ವಾತಾವರಣ ನಿರ್ಮಾ-ಣವಾಗಿತ್ತು. ರಾತ್ರಿಯಿಂದ ಸರತಿ ಸಾಲಿನಲ್ಲಿ ಕಾಯುತ್ತಿದ್ದ ರೈತರು, ರೈತ ಮಹಿಳೆಯರು ಹೆಸರು ನೋಂದಣಿ ಆಗದೇ ನಿರಾಸೆಯಿಂದ ಮನೆಗೆ ಮರಳಿದರು.

ಪಿಎಸ್‌ಐ ನೇಮಕಾತಿ ಹಗರಣದ ತನಿಖೆ ಮತ್ತಷ್ಟು ಚುರುಕು

ದಿವ್ಯಾ ಪತ್ತೆಗೆ ಕಾಶ್ಮೀರಕ್ಕೆ ತೆರಳಿದ ತಂಡ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಪ್ರಮುಖ ಆರೋಪಿ ದಿವ್ಯಾ ಹಾಗರಗಿ ಪತ್ತೆಗಾಗಿ ಸಿಐಡಿ ಅಧಿಕಾರಿಗಳ ತಂಡವೊಂದು ಬುಧವಾರ ಕಾಶ್ಮೀರಕ್ಕೆ ತೆರಳಿದೆ ಎಂದು ಗೊತ್ತಾಗಿದೆ.

ಬೆಳಿಗ್ಗೆ ಬೆಂಗಳೂರಿನಿಂದ ತೆರಳಿದ ತಂಡವು ದೆಹಲಿ ಮೂಲಕ ಕಾಶ್ಮೀರ ತಲುಪಿದೆ. ಮತ್ತೊಂದು ತಂಡ ಕಲಬುರಗಿ ಜಿಲ್ಲೆಯಲ್ಲೇ ಉಳಿದಿದ್ದು, ಪತ್ತೆ ಕಾರ್ಯವನ್ನು ಮುಂದುವರೆಸಿದೆ.

ಪ್ರಕರಣದ ಪ್ರಮುಖ ಆರೋಪಿ ದಿವ್ಯಾ ಹಾಗರಗಿ, ಶಾಲೆಯ ಮುಖ್ಯ ಶಿಕ್ಷಕ ಕಾಶಿನಾಥ, ಅಕ್ರಮಕ್ಕೆ ಸಹಕರಿಸಿದ್ದಾರೆ-ನ್ನಲಾದ ಮಂಜುನಾಥ ಮೇಳಕುಂದಿ, ರವೀಂದ್ರ ಮೇಳಕುಂದಿ, ಶಿಕ್ಷಕಿಯರಾದ ಅರ್ಚನಾ ಹಾಗೂ ಶಾಂತಿಬಾಯಿ ವಿರುದ್ಧ ನಗರದ ಮೂರನೇ ಜೆಎಂಎಫ್ ನ್ಯಾಯಾಲಯವು ಮಂಗಳವಾರ ಬಂಧನ ವಾರೆಂಟ್ ಜಾರಿಗೊಳಿಸಿದ್ದು, ಒಂದು ವಾರದಲ್ಲಿ ಹಾಜರಾಗದಿದ್ದಲ್ಲಿ ಆಸ್ತಿಯನ್ನು ಜಪ್ತಿ ಮಾಡುವ ಎಚ್ಚರಿಕೆ-ಯನ್ನೂ ನೀಡಿರುವುದು ಅಪರೂಪದಲ್ಲಿ ಅಪರೂಪದ ಆದೇಶ ಎಂದು ವಕೀಲರು ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿದ ಸಿಐಡಿ ಪರ ವಾದ ಮಂಡಿಸುತ್ತಿರುವ ಸಹಾಯಕ ಸರ್ಕಾರಿ ವಕೀಲ ಶಿವಶರಣಪ್ಪ ಹೋತಪೇಟ, 'ಅಪರಾಧ ಪ್ರಕ್ರಿಯಾ ಸಂಹಿತೆ 72ನೇ ಕಲಂ ಅನ್ವಯ ನ್ಯಾಯಾಲಯವು ಆರೋಪಿಗಳನ್ನು ಬಂಧಿಸಲು ವಾರೆಂಟ್ ಜಾರಿ ಮಾಡಿದೆ. ಶರಣಾಗಲು ಒಂದು ವಾರದ ಅವಧಿ ನೀಡಲಾಗಿದ್ದು, ನಂತರ ಆಸ್ತಿ ಜಪ್ತಿಗೆ ಅವಕಾಶವಿದೆ. ಗುರುತರ ಅಪರಾಧ ಎಸಗಿರುವ ಆರೋಪ ಇರುವುದರಿಂದ ಆರೋಪಿಗಳನ್ನು ಬಂಧಿಸುವ ನಿಟ್ಟಿನಲ್ಲಿ ವಾರೆಂಟ್ ಹೊರಡಿಸಲು ಮನವಿ ಮಾಡಿದ್ದೆವು. ನ್ಯಾಯಾಲಯವು ನಮ್ಮ ಮನವಿ ಪುರಸ್ಕರಿಸಿದೆ' ಎಂದರು.

ಆರೋಪಿ ಎಂಟು ದಿನ ಸಿಐಡಿ ವಶಕ್ಕೆ: ಬಂಧಿತ ಅಭ್ಯರ್ಥಿ ಜೇವರ್ಗಿ ತಾಲ್ಲೂಕು ನರಿಬೋಳ ಗ್ರಾಮದ ಎನ್.ವಿ. ಸುನೀಲಕುಮಾರ ಅವರನ್ನು 3ನೇ ಜೆಎಂಎಫ್‌ಸಿ ನ್ಯಾಯಾಲಯವು ಎಂಟು ದಿನಗಳವರೆಗೆ ಸಿಐಡಿ ವಶಕ್ಕೆ ನೀಡಿ ಬುಧವಾರ ಆದೇಶ ಹೊರಡಿಸಿದೆ.

ನಗದು ರೂಪದಲ್ಲಿ ಮಾತ್ರ ವ್ಯವಹಾರ: 'ಬಂಧಿತ ರುದ್ರಗೌಡ ಪಾಟೀಲ ಸಹೋದರರು ಅಭ್ಯರ್ಥಿಗಳಿಂದ ನಗದು ರೂಪದಲ್ಲಿ ಮಾತ್ರ ಹಣ ಪಡೆದಿದ್ದಾರೆ. ಎಲ್ಲಿಯೂ ಬ್ಯಾಂಕ್ ಮೂಲಕ ವ್ಯವಹಾರ ನಡೆಸಿಲ್ಲ. ಸಾಕ್ಷ್ಯಾಧಾರ ಲಭ್ಯವಾಗಬಾರದು ಎಂಬ ಕಾರಣಕ್ಕೆ ಮುಂಚಿನಿಂದಲೂ ಹೀಗೆ ಮಾಡಿದ್ದಾರೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಬಂಧಿತರಿಂದ ಬ್ಲೂಟೂತ್ ಉಪಕರಣ ವಶಪಡಿಸಿಕೊಳ್ಳಲಾಗಿ-ದೆ ಎಂದು ಹೇಳಲಾಗುತ್ತಿದೆ. ಆದರೆ, ಇದನ್ನು ಅಧಿಕಾರಿಗಳು ಖಚಿತ ಪಡಿಸಿಲ್ಲ.

ಆರ್‌ಟಿಐ ಕಾರ್ಯಕರ್ತನ ವಿಚಾರಣೆ: ದಿವ್ಯಾ ಹಾಗರಗಿ ಅವರೊಂದಿಗೆ ಒಡನಾಟ ಹೊಂದಿರುವ ಕಲಬುರಗಿಯ ಮಾಹಿತಿ ಹಕ್ಕು ಕಾರ್ಯಕರ್ತ ಸಿದ್ದರಾಮಯ್ಯ ಹಿರೇಮಠ ಅವರನ್ನು ಸಿಐಡಿ ಅಧಿಕಾರಿಗಳು ಬುಧವಾರ ವಿಚಾರಣೆಗೊಳಪಡಿಸಿದರು.

ಪಿಎಸ್‌ಐ ನೇಮಕಾತಿ ಅಕ್ರಮದ ಬಗ್ಗೆ ಅಧಿಕಾರಿಗಳು ಮಾಹಿತಿ ಕೇಳಿದರು. ಆ ವಿಚಾರದಲ್ಲಿ ಭಾಗಿಯಾಗಿಲ್ಲ ಎಂದು ಹೇಳಿದ್ದಾಗಿ ಸಿದ್ದರಾಮಯ್ಯ ತಿಳಿಸಿದರು.

ಇಂದು ಮಧ್ಯಂತರ ವರದಿ ಸಾಧ್ಯತೆ

ಪಿಎಸ್‌ಐ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ತನಿಖೆ ನಡೆಸುತ್ತಿರುವ ಸಿಐಡಿ ಇದೇ 28ರಂದು ತನ್ನ ಮಧ್ಯಂತರ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದೆ.

ಇಲ್ಲಿಯವರೆಗೆ ದಾಖಲಾದ ಎಫ್‌ಐಆರ್‌ಗಳು, ಆರೋಪಿಗಳ ಬಂಧನ, ಇನ್ನೂ ಬಂಧಿಸಬೇಕಾದವರ ಪಟ್ಟಿ ಹಾಗೂ ಈವರೆಗಿನ ತನಿಖೆಯಲ್ಲಿ ಬೆಳಕಿಗೆ ಬಂದ ಅಂಶಗಳು ವರದಿಯಲ್ಲಿ ಇರಲಿದೆ. ಮುಖ್ಯಮಂತ್ರಿ ಅವರ ಸೂಚನೆ ಮೇರೆಗೆ ಮಧ್ಯಂತರ ತನಿಖಾ ವರದಿಯನ್ನು ಸಲ್ಲಿಸಲಾಗುತ್ತಿದೆ ಎಂದು ಸಿಐಡಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ದಿವ್ಯಾಗೆ ಸರ್ಕಾರದಿಂದ ರಕ್ಷಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ಪ್ರಮುಖ ಆರೋಪಿ ದಿವ್ಯಾ ಹಾಗರಗಿ ತಲೆಮರೆಸಿಕೊಂಡು 15 ದಿನವಾಗಿದೆ. ಅವರಿಗೆ ಪೊಲೀಸ್ ಹಾಗೂ ಸರ್ಕಾರವೇ ರಕ್ಷಣೆ ನೀಡುತ್ತಿದೆ. ಹೀಗಾಗಿ ಬಂಧಿಸಿಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಆರೋಪಿಗೆ ಜಾಮೀನು ಸಿಗಲಿ ಎಂದು ಕಾಯುತ್ತಿದ್ದಾರೆ. ಹೀಗೆ ಭ್ರಷ್ಟರನ್ನು ಸರ್ಕಾರ ರಕ್ಷಿಸುತ್ತಿದೆ. ಕೋಮು ಸಾಮರಸ್ಯ ಹಾಳು ಮಾಡಿದವರನ್ನು ರಕ್ಷಿಸುತ್ತಿದೆ' ಎಂದು ದೂರಿದರು.

ಪಾಲುದಾರಿಕೆ ಒಪ್ಪಿಕೊಳ್ಳುತ್ತಿರುವಂತಿದೆ: 'ಪೊಲೀಸ್ ನೇಮಕಾತಿ ಮಂಡಳಿಯ ಎಡಿಜಿಪಿ ಅಮೃತ್ ಪಾಲ್ ಅವರನ್ನು ವರ್ಗಾವಣೆ ಮಾಡುವ ಮೂಲಕ, ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಅಧಿಕಾರಿಗಳು ಭಾಗಿಯಾಗಿದ್ದಾರೆ ಮತ್ತು ಸರ್ಕಾರದ ಪಾಲುದಾರಿಕೆ ಒಪ್ಪಿಕೊಳ್ಳುತ್ತಿರುವಂತಿದೆ' ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಹೇಳಿದರು.

'ಪಿಎಸ್‌ಐ ನೇಮಕಾತಿಯಲ್ಲಿ ಭಾಗಿಯಾಗಿರುವ ಅಧಿಕಾರಿಗಳನ್ನು ಅದೇ ಹುದ್ದೆಯಲ್ಲಿ ಮುಂದುವರಿಸಿದರೆ ನಿಷ್ಪಕ್ಷಪಾತ ತನಿಖೆ ಹೇಗೆ ಸಾಧ್ಯ? ವರ್ಗಾವಣೆ ಮಾಡಲು ಸರ್ಕಾರಕ್ಕೆ 15 ದಿನ ಬೇಕಾಯಿತೇ' ಎಂದೂ ಪ್ರಶ್ನಿಸಿದರು.

'ಪ್ರಮುಖ ಆರೋಪಿ ದಿವ್ಯಾ ಹಾಗರಗಿ ಯಾರ ಜತೆ ಪ್ರಕರಣದ ಫೋಟೋ ತೆಗೆಸಿಕೊಂಡಿದ್ದಾರೆ ಎಂಬುದು ಮುಖ್ಯವಲ್ಲ. ಆಕೆ ಆರೋಪಿ. ಪರೀಕ್ಷೆ ಬರೆದ 56 ಸಾವಿರ ಅಭ್ಯರ್ಥಿಗಳು ಕಂಗಾಲಾಗಿದ್ದು, ಆರೋಪಿಯನ್ನು ಮೊದಲು ಬಂಧಿಸಬೇಕು. ಸರ್ಕಾರ ಈ ವಿಚಾರದಲ್ಲಿ ಜವಾಬ್ದಾರಿಯುತವಾಗಿ ನಡೆದುಕೊಳ್ಳ-ಬೇಕು' ಎಂದರು.

ಸುದ್ದಿ 2 ನಿಮಿಷ

'ಪಿಎಸ್‌ಐ ಆಯ್ಕೆ ಪಟ್ಟಿ ರದ್ದು ಮಾಡಿ'

ತುಮಕೂರು: ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ನಡೆದಿರುವುದರಿಂದ ಆಯ್ಕೆ ಪಟ್ಟಿ ರದ್ದುಪಡಿಸಿ ಹೊಸದಾಗಿ ಪರೀಕ್ಷೆ ನಡೆಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ನಗರದಲ್ಲಿ ಬುಧವಾರ ನಡೆದ ಜನತಾ ಜಲಧಾರೆ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ತಪ್ಪು ಮಾಡಿದ ಅಧಿಕಾರಿಗಳನ್ನು ವರ್ಗಾವಣೆ, ಅಮಾನತು ಮಾಡಿದರೆ ಸಾಲದು. ವಜಾ ಮಾಡಬೇಕು. ತಪ್ಪು ಮಾಡಿದವರಿಗೆ ಶಿಕ್ಷೆಯಾಗಬೇಕು' ಎಂದರು.



ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜತೆಗೆ ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ನಡೆಸಿದ ಆರೋಪಿ ದಿವ್ಯಾ ಹಾಗರಗಿ ಇರುವ ಚಿತ್ರ ಬಳಸಿ ಟ್ವೀಟ್ ಮಾಡುವ ಮೂಲಕ ಬಿಜೆಪಿಯವರು ಕೀಳು ಮಟ್ಟದ ಪ್ರಚಾರ ನಡೆಸಿದ್ದಾರೆ ಎಂದು ಟೀಕಿಸಿದರು.

ಭಾವನಾತ್ಮಕ ವಿಚಾರ ಮುಂದಿಟ್ಟುಕೊಂಡು ಬಿಜೆಪಿಯವರು ಸಮಾಜದ ಸಾಮರಸ್ಯ ಹಾಳು-ಮಾಡುತ್ತಿದ್ದಾರೆ. ಕರ್ನಾಟಕ ಬಿಜೆಪಿಯ ದಕ್ಷಿಣದ ಹೆಬ್ಬಾಗಿಲು ಎಂದು ಬೀಗುತ್ತಾರೆ. ಇದೇ ರೀತಿ ಆದರೆ ಜನರು ಹೆಬ್ಬಾಗಿಲನ್ನು ಶಾಶ್ವತವಾಗಿ ಮುಚ್ಚಿ ವಾಪಸ್ ಕಳುಹಿಸುತ್ತಾರೆ ಎಂದು ಎಚ್ಚರಿಸಿದರು.

ಹುಬ್ಬಳ್ಳಿ ಗಲಭೆ: ಮತ್ತೆ ಎಂಟು ಮಂದಿ ಬಂಧನ

ಹುಬ್ಬಳ್ಳಿ: ಹಳೇಹುಬ್ಬಳ್ಳಿಯಲ್ಲಿ ಇತ್ತೀಚೆಗೆ ನಡೆದ ಗಲಭೆ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಆರೋಪಿಗಳ ಹುಡುಕಾಟ ಮುಂದುವರಿಸಿದ್ದು, ಬುಧವಾರ ಮತ್ತೆ ಎಂಟು ಮಂದಿ ಬಂಧಿಸಿದ್ದಾರೆ. ಬಂಧಿತರ ಸಂಖ್ಯೆ 154ಕ್ಕೆ ಏರಿದೆ.

'ತಲೆಮರೆಸಿಕೊಂಡಿರುವ ಆರೋಪಿಗಳನ್ನು ಬಂಧನಕ್ಕೆ ಒಳಗಾಗಿರುವ ಆರೋಪಿಗಳು ನೀಡುವ ಸುಳಿವಿನ ಮೇರೆಗೆ ಬಂಧಿಸಲಾಗುತ್ತಿದೆ. ಹಾವೇರಿ, ಗದಗ, ದಾಂಡೇಲಿಯಲ್ಲಿ ತಲೆಮರೆಸಿಕೊಂಡಿದ್ದ ಕೆಲವರನ್ನು ಬುಧವಾರ ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನ್ಯಾಯಾಂಗ ಬಂಧನಕ್ಕೆ ವಸೀಂ: ಗಲಭೆ ಪ್ರಕರಣದ ಪ್ರಮುಖ ಆರೋಪಿ ಎನ್ನಲಾದ ವಸೀಂ ಪಠಾಣ್‌ನನ್ನು ಪೊಲೀಸರು ಬುಧವಾರ ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ. ಐದು ದಿನಗಳ ಕಾಲ ವಸೀಂನನ್ನು ಗೋಪ್ಯ ಸ್ಥಳಕ್ಕೆ ಕರೆದೊಯ್ದು ತೀವ್ರ ವಿಚಾರಣೆ ನಡೆಸಿದ್ದಾರೆ. ಏ.30ರವರೆಗೆ ನ್ಯಾಯಾಂಗ ಬಂಧನವಿದ್ದು, ಧಾರವಾಡ ಕಾರಾಗೃಹದಲ್ಲಿ ಇರಿಸಲಾಗಿದೆ. ಆರೋಪಿಗಳಾದ ನಾಸೀರ್ ಅಹ್ಮದ್ ಹೊನ್ಯಾಳ ಹಾಗೂ ಆರಿಫ್ ನಾಗರಾಳ ಅವರನ್ನು ವಿಚಾರಣೆಗೆ ಪೊಲೀಸ್ ಕಸ್ಟಡಿಗೆ ಪಡೆದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಹುಣಸೇಘಟ್ಟ ಪೂಜೆ ವಿವಾದಕ್ಕೆ ತೆರೆ

ತಿಪಟೂರು (ತುಮಕೂರು): ಪರಿಶಿಷ್ಟರ ಕಾಲೊನಿಗೆ ಉತ್ಸವ ಮೂರ್ತಿ ತೆಗೆದುಕೊಂಡು ಹೋಗುವ ವಿಚಾರಕ್ಕೆ ಪರಿಶಿಷ್ಟರು ಹಾಗೂ ದೇವಾಲಯದ ಆಡಳಿತ ಮಂಡಳಿ ನಡುವೆ ತಲೆದೋರಿದ್ದ ವಿವಾದಕ್ಕೆ ಬುಧವಾರ ತಾಲ್ಲೂಕು ಆಡಳಿತ ತೆರೆ ಎಳೆದಿದೆ.

ದೇವಾಲಯದ ಬಳಿ ನಡೆದ ಶಾಂತಿ ಸಭೆಯಲ್ಲಿ ಎರಡು ಕಡೆಯ ವಾದ ಆಲಿಸಿದ ತಾಲ್ಲೂಕು ಆಡಳಿತ, ಮುಂದಿನ ವರ್ಷ ಜಾತ್ರೆಗೆ ವೀಕ್ಷಕರನ್ನು ನೇಮಕ ಮಾಡಿ, ಗ್ರಾಮದ ಎಲ್ಲ ಕಡೆಗೂ ಉತ್ಸವ ಮೂರ್ತಿ ತೆರಳುವಂತೆ ರೂಟ್ ಮ್ಯಾಪ್ ಸಿದ್ಧಪಡಿಸಲಾಗುವುದು ಎಂದು ಭರವಸೆ ನೀಡಿದೆ.

ಫ್ರೀಜರ್‌ನಲ್ಲಿ ಉಸಿರುಗಟ್ಟಿ ಬಾಲಕಿಯರ ಸಾವು

ನಂಜನಗೂಡು: ತಾಲ್ಲೂಕಿನ ಮಸಗೆ ಗ್ರಾಮದಲ್ಲಿ ಬುಧವಾರ ಕಣ್ಣಾಮುಚ್ಚಾಲೆ ಆಟವಾಡುತ್ತಿ-ದ್ದ ತರಕಾರಿ ನಾಗರಾಜನಾಯ್ಕ –ಚಿಕ್ಕದೇವಮ್ಮ ದಂಪತಿ ಮಗಳು ಭಾಗ್ಯಾ (11) ಹಾಗೂ ರಾಜುನಾಯ್ಕ- ಗೌರಮ್ಮ ಪುತ್ರಿ ಕಾವ್ಯಾ (7) ಐಸ್‌ಕ್ರೀಂ ಫ್ರೀಜರ್‌ನ ಒಳಗೆ ಉಸಿರುಗಟ್ಟಿ ಸಾವನ್ನಪ್ಪಿದರು.

ಗ್ರಾಮದ ನಿವಾಸಿ, ಐಸ್‌ಕ್ರೀಂ ವ್ಯಾಪಾರಿ ಹನುಮಂತನಾಯ್ಕ ಅವರು ಫ್ರೀಜರ್ ಅನ್ನು ನಾಗರಾಜನಾಯ್ಕ ಮನೆಯ ಸಮೀಪ ನಿಲ್ಲಿಸಿದ್ದ ವೇಳೆ, ಬಾಲಕಿಯರಿಬ್ಬರೂ ಅದರ ಬಾಗಿಲು ತೆರೆದು ಒಳಕ್ಕಿಳಿದು ಬಾಗಿಲು ಮುಚ್ಚಿಕೊಂಡ ಬಳಿಕ ಹೊರಬರಲು ಸಾಧ್ಯವಾಗದೇ ದುರಂತ ನಡೆದಿದೆ.

ಬಾಲಕಿಯರ ಸುಳಿವು ಸಿಗದೇ ಪಾಲಕರು ಎಲ್ಲೆಡೆ ಹುಡುಕಾಟ ನಡೆಸಿ ಫ್ರೀಜರ್ ತೆಗೆದು ನೋಡಿದಾಗ ಪ್ರಕರಣ ಬೆಳಕಿಗೆ ಬಂತು. ಪೋಷಕರು ದೂರು ನೀಡಿಲ್ಲ.

ಗ್ರಾ. ಪಂ. ಸದಸ್ಯನಿಗೆ ಮಂಗನ ಕಾಯಿಲೆ

ಕಾರ್ಗಲ್: ಇಲ್ಲಿನ ಅರಳಗೋಡು ಗ್ರಾಮ ಪಂಚಾಯಿತಿಯ ಸದಸ್ಯ ಕರುಮನೆ ಗ್ರಾಮದ ರಾಮಸ್ವಾಮಿ ತೊರಮೆ ಅವರಲ್ಲಿ ಕೆಎಫ್‌ಡಿ (ಮಂಗನ ಕಾಯಿಲೆ) ಕಾಣಿಸಿಕೊಂಡಿದ್ದು, ಆತಂಕ ಎದುರಾಗಿದೆ.

ರಾಮಸ್ವಾಮಿ ಅವರಿಗೆ ಈಚೆಗೆ ಜ್ವರ, ತಲೆನೋವು ಬಂದಿತ್ತು. ಅನುಮಾನಗೊಂಡ ಆರೋಗ್ಯ ಕಾರ್ಯ-ಕರ್ತೆಯರು ಅವರ ರಕ್ತ ತಪಾಸಣೆ ಮಾಡಿ, ಜಿಲ್ಲಾ ವೈರಾಣು ಸಂಶೋ-ಧನಾಲಯಕ್ಕೆ ಕಳುಹಿಸಿದ್ದರು. ರಕ್ತ ಪರೀಕ್ಷೆಯಲ್ಲಿ ಕೆಎಫ್‌ಡಿ ದೃಢಗೊಂಡಿದೆ. ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ವೀರಭದ್ರಪ್ಪ ತಿಳಿಸಿದ್ದಾರೆ.

ಕಳೆದ ಬಾರಿ ಹೆಚ್ಚಿನ ಮಂಗನಕಾಯಿಲೆ ಪ್ರಕರಣ ಕಂಡುಬಂದಿದ್ದ ಅರಳಗೋಡು ವ್ಯಾಪ್ತಿಯಲ್ಲೇ ಮತ್ತೆ ಸೋಂಕು ಪತ್ತೆ-ಯಾಗಿರುವುದರಿಂದ ಈ ಭಾಗದಲ್ಲಿ ಆತಂಕ ಮನೆ ಮಾಡಿದೆ.

ಪ್ರಭಾವ ಬಳಸಿ ಮಠಾಧೀಶರಿಗೆ ತಡೆ– ದಿಂಗಾಲೇಶ್ವರ ಶ್ರೀ ಆಕ್ರೋಶ

ಶ್ರೀಗಳ ನರಗುಂದ ಪ್ರವೇಶಕ್ಕೆ ಪೊಲೀಸರಿಂದ ತಡೆ

ಪ್ರಜಾವಾಣಿ ವಾರ್ತೆ

ನರಗುಂದ (ಗದಗ ಜಿಲ್ಲೆ): ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಅವರ ಮನೆ ಮುಂದೆ ಧರಣಿ ನಡೆಸಲು ಬರುತ್ತಿದ್ದ ಶಿರಹಟ್ಟಿಯ ಫಕೀರ ದಿಂಗಾಲೇಶ್ವರ ಶ್ರೀಗಳನ್ನು ತಾಲ್ಲೂಕಿನ ಕಲಕೇರಿ ಚೆಕ್‌ಪೋಸ್ಟ್ ಬಳಿ ಪೊಲೀಸರು ಬುಧವಾರ ತಡೆದರು.

ಬುಧವಾರ ಬೆಳಿಗ್ಗೆ 11.30ರ ಸುಮಾರಿಗೆ ಕಲಕೇರಿ ಬಳಿಗೆ ಬಂದ ದಿಂಗಾಲೇಶ್ವರ ಶ್ರೀಗಳನ್ನು ಶಾಂತಿ ಸುವ್ಯವಸ್ಥೆಯ ನೆಪವೊಡ್ಡಿ ಪೊಲೀಸರು ತಡೆದಿದ್ದರಿಂದ, ಶ್ರೀಗಳು ಸಿಡಿಮಿಡಿಗೊಂಡರು.

ನರಗುಂದಕ್ಕೆ ತೆರಳಿ ಧರಣಿ ಮಾಡಲು ಅವಕಾಶ ಕೊಡುವಂತೆ ಶ್ರೀಗಳು ಬಿಗಿಪಟ್ಟು ಹಿಡಿದರು. ಪೊಲೀಸರು ಮತ್ತು ಸ್ವಾಮೀಜಿ ನಡುವೆ ವಾಗ್ವಾದ ನಡೆದು, ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

'ಸಚಿವ ಸಿ.ಸಿ.ಪಾಟೀಲ ನನ್ನ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿ, ತೇಜೋವಧೆ ಮಾಡಿದ್ದಾರೆ. ನ್ಯಾಯಕ್ಕಾಗಿ ಆಗ್ರಹಿಸಿ ಧರಣಿ ಮಾಡಲು ಬಂದರೆ ಪೊಲೀಸರು ನಮ್ಮನ್ನು ರಸ್ತೆಯಲ್ಲೇ ತಡೆದಿದ್ದಾರೆ' ಎಂದು ದಿಂಗಾಲೇಶ್ವರ ಶ್ರೀಗಳು ಆರೋಪಿಸಿದರು.

'ನಾವೆಲ್ಲ ಮಠಾಧಿಪತಿಗಳು. ನ್ಯಾಯ, ಕಾನೂನು ಸುವ್ಯವಸ್ಥೆ ಕಾಪಾಡುವಂತಹವರು. ನಮ್ಮನ್ನು ತಡೆದಿರುವುದು ಸಲ್ಲದು. ಇಂತಹ ಸಚಿವರಿಗೆ ಸಂಘ ಪರಿವಾರದಿಂದ ಸಂಸ್ಕಾರದ ಅಗತ್ಯವಿದೆ. ಸಿಎಂ ಬುದ್ಧಿಹೇಳಬೇಕು' ಎಂದರು.

'ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ನಾನು ಮಾತನಾಡಿದ್ದೇನೆ. ಅವುಗಳಿಗೆ ಸ್ಪಂದಿಸದೇ ನನ್ನ ತೇಜೋವಧೆಗೆ ಮುಂದಾಗಿರುವುದು ಸರಿಯೆ? ಪೊಲೀಸರು ತಡೆಯೊಡ್ಡಿದ್ದ-ರಿಂದ ಧರಣಿ ಕೈಬಿಟ್ಟು ಹೋಗುತ್ತೇನೆ. ಇನ್ನು ಮುಂದಾದರೂ ಸಚಿವರು ಮಠಾಧಿಶರ ವಿರುದ್ಧ ಮಾತನಾಡುವು-ದನ್ನು ನಿಲ್ಲಿಸಬೇಕು' ಎಂದು ಹೇಳಿದರು.

'ರಾಜ್ಯದ ವಿವಿಧೆಡೆಯಿಂದ ನರಗುಂದಕ್ಕೆ ಬರುತ್ತಿದ್ದ 25 ಮಠಾಧೀಶರನ್ನು ಪೊಲೀಸರು ತಡೆದಿದ್ದಾರೆ. ಇದು ಸರಿಯಾದ ಕ್ರಮವಲ್ಲ. ಇಂದಿನಿಂದ ನಮ್ಮ ಹೋರಾಟ ಬೇರೆ ರೀತಿಯಲ್ಲಿ ಮುಂದು-ವರಿಯುತ್ತದೆ' ಎಂದು ಎಚ್ಚರಿಸಿದರು.



ನರಗುಂದದ ಕಲಕೇರಿ ಬಳಿಯ ಜಮೀನಿನಲ್ಲಿ ಶಿರಹಟ್ಟಿ ಫಕೀರ ದಿಂಗಾಲೇಶ್ವರ ಶ್ರೀಗಳು ಮಾತನಾಡಿದರು

'ಪ್ರಭಾವ ಬಳಸಿ ಹೋರಾಟ ತಡೆದಿಲ್ಲ'

'ಶಾಂತಿ ಸುವ್ಯವಸ್ಥೆ ಕಾಪಾಡಲು ಪೊಲೀಸರು ಸ್ವತಂತ್ರರಾಗಿದ್ದಾರೆ. ಆದ್ದರಿಂದ ದಿಂಗಾಲೇಶ್ವರ ಶ್ರೀಗಳನ್ನು ನರಗುಂದ ಪೊಲೀಸರು ಮುಂಜಾಗ್ರತಾ ಕ್ರಮವಾಗಿ ತಡೆದಿರಬಹುದು. ಆದರೆ ನಾನು ಯಾವುದೇ ಪ್ರಭಾವ ಬಳಸಿ ಪೊಲೀಸರಿಂದ ದಿಂಗಾಲೇಶ್ವರ ಶ್ರೀಗಳ ಹೋರಾಟವನ್ನು ತಡೆದಿಲ್ಲ' ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ಪ್ರತಿಕ್ರಿಯಿಸಿದ್ದಾರೆ.

ಹರ್ಷ ಹತ್ಯೆ ಪ್ರಕರಣ: ಜೈಲಿನಲ್ಲಿ ಆರೋಪಿಗಳ ಹೈಡ್ರಾಮಾ

ಎನ್‌ಐಎ ವಶಕ್ಕೆ ಹೋಗಲು ನಿರಾಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಂಜಾನ್ ಉಪವಾಸ ಮುಗಿಸುವತನಕ ನಾವು ಎನ್‌ಐಎ (ರಾಷ್ಟ್ರೀಯ ತನಿಖಾ ದಳ) ವಶಕ್ಕೆ ಹೋಗುವುದಿಲ್ಲ' ಎಂದು ಬಜರಂಗ ದಳ ಕಾರ್ಯಕರ್ತ ಹರ್ಷ ಹತ್ಯೆ ಪ್ರಕರಣದ ಐವರು ಆರೋಪಿಗಳು ಜೈಲಿನಲ್ಲಿ ಗೋಡೆ, ಕಿಟಕಿಗಳಿಗೆ ತಲೆ ಜಜ್ಜಿಕೊಂಡು, ಪೆಟ್ಟು ಮಾಡಿಕೊಂಡು ಹೈಡ್ರಾಮಾ ಸೃಷ್ಟಿಸಿದ ಪ್ರಸಂಗ ಬುಧವಾರ ನಡೆದಿದೆ.

ಆರೋಪಿಗಳಾದ ರಿಹಾನ್ ಶರೀಫ್, ಮೊಹಮದ್ ಖ್ವಾಸಿಫ್, ಅಸೀಫ್ ಉಲ್ಲಾ ಖಾನ್, ಸೈಯ್ಯದ್ ಫಾರೂಕ್ ಮತ್ತು ರೋಷಲ್ ಅವರನ್ನು ಎನ್‌ಐಎ ಪೊಲೀಸರ ವಶಕ್ಕೆ ನೀಡಿ ನಗರದ ಎನ್‌ಐಎ ವಿಶೇಷ ನ್ಯಾಯಾಲಯ ಮಂಗಳವಾರ (ಏ.26) ಆದೇಶಿಸಿತ್ತು. ಇದರನ್ವಯ ಎನ್‌ಐಎ ಅಧಿಕಾರಿಗಳು, ಆರೋಪಿಗಳನ್ನು ವಶಕ್ಕೆ ಪಡೆಯಲು ಪರಪ್ಪನ ಅಗ್ರಹಾರ ಜೈಲಿಗೆ ಹೋಗಿದ್ದಾಗ ಆರೋಪಿಗಳು ಸುತಾರಾಂ ನಿರಾಕರಿಸಿದ್ದಾಗಿ ಮೂಲಗಳು ತಿಳಿಸಿವೆ.

'ನಾವು ಉಪವಾಸ ಇದ್ದೇವೆ, ಬರುವುದಿಲ್ಲ ಎಂದು ಏಕಾಏಕಿ ಜೈಲಿನ ಗೋಡೆ, ಕಿಟಕಿಗಳಿಗೆ ತಲೆ ಗುದ್ದಿಕೊಂ-ಡಿದ್ದಾರೆ. ಕಿಟಕಿಯ ಒಡೆದ ಗಾಜಿನ ಚೂರುಗಳಿಂದ ಮೈ-ಕೈಗಳಿಗೆ ಗೀರಿ ಗಾಯ ಮಾಡಿಕೊಂಡು, ನಾವು ಎನ್‌ಐಎ ವಶಕ್ಕೆ ಹೋಗುವುದಿಲ್ಲ ಎಂದು ಹಟ ಹಿಡಿದರು. ನಂತರ ಕಾರಾಗೃಹದ ಮುಖ್ಯಅಧೀಕ್ಷಕರ ಮೂಲಕ ನ್ಯಾಯಾಧೀಶರಿಗೆ, 'ಎನ್‌ಐಎ ಕಸ್ಟಡಿಗೆ ಹೋಗುವುದಿಲ್ಲ' ಎಂದು ಲಿಖಿತ ಮನವಿ ಸಲ್ಲಿಸಿದರು ಎಂದು 'ಪ್ರಜಾವಾಣಿ'ಗೆ ವಿವರಿಸಿವೆ.

ಒಂದು ಹಂತದಲ್ಲಿ ಜೈಲಿನ ಅಧೀಕ್ಷಕರು ಆರೋಪಿಗಳ ಹಟವನ್ನೇ ಪುರಸ್ಕರಿಸಲು ಮುಂದಾದಾಗ, ಎನ್‌ಐಎ ಅಧಿಕಾರಿಗಳು, 'ಇದು ನ್ಯಾಯಾಲಯದ ಆದೇಶದ ಉಲ್ಲಂಘನೆ ಆಗಲಿದೆ, ನೀವೇ ಜವಾಬ್ದಾ-ರರಾಗುತ್ತೀರಿ' ಎಂದು ಮೌಖಿಕವಾಗಿ ಎಚ್ಚರಿಸಿದರು. ಆಗ ಆರೋಪಿಗಳನ್ನು ಅಧಿಕಾರಿಗಳು ಎನ್‌ಐಎ ವಶಕ್ಕೆ ಒಪ್ಪಿಸಿದರು ಎಂದು ಗೊತ್ತಾಗಿದೆ.

ಏಕೆ ಎನ್‌ಐಎ ಭಯ?: 'ರಾಜ್ಯದಲ್ಲಿ 2016 ರಿಂದ ಎನ್‌ಐಎ ತನಿಖೆ ನಡೆಸುತ್ತಿರುವ ಪ್ರಕರಣಗಳಲ್ಲಿ ಅಂದಾಜು 100ಕ್ಕೂ ಹೆಚ್ಚು ವಿಚಾರಣಾಧೀನ ಕೈದಿಗಳು ಜೈಲಿನಲ್ಲಿದ್ದಾರೆ. ಇವರಲ್ಲಿ ಬೆರಳೆಣಿಕೆಯಷ್ಟು ಆರೋಪಿಗಳಿಗೆ ಮಾತ್ರವೇ ಜಾಮೀನು ಸಿಕ್ಕಿದೆ. ಅನೇಕರು ಸುಪ್ರೀಂ ಕೋರ್ಟ್‌ವರೆಗೂ ಜಾಮೀನಿಗಾಗಿ ಹೋರಾಟ ನಡೆಸಿದ್ದರೂ ಯಶಸ್ವಿಯಾಗಿಲ್ಲ. ಕಾನೂನು ಬಾಹಿರ ಚಟುವಟಿಕೆಗಳ ನಿರ್ಬಂಧ ಕಾಯ್ದೆ–1967 ಅತ್ಯಂತ ಕಠಿಣವಾಗಿದ್ದು ಆರೋಪಿಗಳಿಗೆ ಜಾಮೀನು ಸಿಗುವುದು ಸುಲಭವಲ್ಲ' ಎಂಬುದು ಕಾನೂನು ತಜ್ಞರ ಅಭಿಪ್ರಾಯ. ಶಿವಮೊಗ್ಗದಲ್ಲಿ 2022ರ ಫೆಬ್ರುವರಿ 20ರಂದು ಹತ್ಯೆಯಾದ ಹರ್ಷ ಕೊಲೆ ಪ್ರಕರಣದ ಆರೋಪಿಗಳಿಗೆ ವಿಶೇಷ ನ್ಯಾಯಾಲಯ ಮೇ 2ರವರೆಗೆ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿದೆ.

'ಸಭೆಗೆ ನುಗ್ಗಿ ಶಾಸಕರು, ಅಧಿಕಾರಿಗಳಿಗೆ ಬೆದರಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಡ ಜಂಗಮರ ಹೆಸರಿನಲ್ಲಿ ಅನ್ಯ ಜಾತಿಯವರು ಪರಿಶಿಷ್ಟ ಜಾತಿ ಪ್ರಮಾಣಪತ್ರಗಳ-ನ್ನು ಪಡೆದು ವಂಚಿಸುತ್ತಿರುವ ಕುರಿತು ಪರಿಶೀಲಿಸಲು ವಿಧಾನಮಂಡಲದ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಟಿ) ಕಲ್ಯಾಣ ಸಮಿತಿ ಬುಧವಾರ ನಡೆಸುತ್ತಿದ್ದ ಸಭೆಗೆ ನುಗ್ಗಿದ ಧಾರವಾಡದ ವಕೀಲ ಬಿ.ಡಿ. ಹಿರೇಮಠ, ಶಾಸಕರು ಮತ್ತು ಅಧಿಕಾರಿಗಳಿಗೆ ಧಮಕಿ ಹಾಕಿದ್ದಾರೆ.

ಶಾಸಕರ ಭವನದ ಸಮ್ಮೇಳನ ಸಭಾಂಗಣದಲ್ಲಿ ಸಮಿತಿ ಅಧ್ಯಕ್ಷ ಎಂ.ಪಿ. ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ಸಭೆ ನಡೆಯುತ್ತಿತ್ತು. ಎಚ್.ಕೆ.ಕುಮಾರಸ್ವಾಮಿ, ಎನ್.ಮಹೇಶ್, ಎಂ.ಚಂದ್ರಪ್ಪ, ಪ್ರಿಯಾಂಕ್ ಖರ್ಗೆ, ಪಿ.ಟಿ. ಪರಮೇಶ್ವರ ನಾಯ್ಕ್, ಅಶ್ವಿನಿ ಕುಮಾರ್ ಸೇರಿ ಹಲವು ಶಾಸಕರು, ಅಧಿಕಾರಿಗಳು ಸಭೆ-ಯಲ್ಲಿದ್ದರು.

ಬಿಜೆಪಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ಮಗಳು ಬೇಡ ಜಂಗಮ ಜಾತಿ ಪ್ರಮಾಣಪತ್ರ ಪಡೆದಿರುವುದೂ ಸೇರಿ ಹಲವು ವಿಷಯಗಳ ಕುರಿತು ಚರ್ಚೆ ನಡೆಯಬೇಕಿತ್ತು. ಸಭಾಂಗಣಕ್ಕೆ ನುಗ್ಗಿದ ಹಿರೇಮಠ, ಶಾಸಕರು ಮತ್ತು ಅಧಿಕಾರಿಗಳ ವಿರುದ್ಧ ಕೂಗಾಡಿದರು. ಪೊಲೀಸರನ್ನು ಕರೆಸಿದ ಸಮಿತಿ ಅಧ್ಯಕ್ಷರು, ಹಿರೇಮಠ ಅವರನ್ನು ಹೊರಕ್ಕೆ ಕಳುಹಿಸಿದರು. ಶಾಸಕರ ಭವನದ ಮೊಗಸಾಲೆಯಲ್ಲೇ ಕುಳಿತು ಸಭೆ ಮುಗಿಯುವವರೆಗೂ ಕೂಗಾಡುತ್ತಲೇ ಇದ್ದರು.

'ದಿಢೀರನೆ ಸಭೆಗೆ ನುಗ್ಗಿದ ಹಿರೇಮಠ, 'ಮನೆ ಹಾಳು ಮಾಡುತ್ತಿದ್ದೀರಾ? ಬಿಡುವುದಿಲ್ಲ, ನೋಡಿಕೊಳ್ಳುತ್ತೇನೆ' ಎಂದು ಬೆದರಿಕೆ ಹಾಕಿದರು. ಅಧಿಕಾರಿಗಳಿಗೂ ಧಮಕಿ ಹಾಕಿದರು' ಎಂದು ಸಮಿತಿ ಅಧ್ಯಕ್ಷರು 'ಪ್ರಜಾವಾಣಿ'ಗೆ ತಿಳಿಸಿದರು.

'ಹಿಂದೆಯೂ ಎರಡು ಸಭೆಗಳ ಸಂದರ್ಭದಲ್ಲಿ ಬಂದಿದ್ದ ಆ ವಕೀಲರು ಒಳಕ್ಕೆ ಬಂದು ಮಾತನಾಡಲು ಯತ್ನಿಸಿದ್ದರು. ನಿಯಮಗಳ ಪ್ರಕಾರ, ಹೊರಗಿನ ವ್ಯಕ್ತಿಗಳು ಸಭೆಯಲ್ಲಿ ಮಾತ-ನಾಡುವಂತಿಲ್ಲ. ಅವರು ದಿಢೀರ್ ಸಭೆಗೆ ನುಗ್ಗಿ ಬೆದರಿಕೆ ಹಾಕಿದ್ದಾರೆ' ಎಂದರು.




ಶಾಸಕರ ಭವನದ ಮೊಗಸಾಲೆಯಲ್ಲಿ ಕುಳಿತ ವಕೀಲ ಬಿ.ಡಿ. ಹಿರೇಮಠ

‘ಹಿಂದಿ ರಾಷ್ಟ್ರ ಭಾಷೆ’ ಸುದೀಪ್ ಹೇಳಿಕೆಗೆ ಟಾಂಗ್: ನಂತರ ತಪ್ಪು ತಿಳಿವಳಿಕೆ ಎಂದು ಸ್ಪಷ್ಟನೆ

ದೇವಗನ್ ಟ್ವೀಟ್‌ಗೆ ವ್ಯಾಪಕ ಆಕ್ರೋಶ

ಪ್ರಜಾವಾಣಿ ವಾರ್ತೆ



ಅಜಯ್ ದೇವಗನ್



ಸುದೀಪ್

ಬೆಂಗಳೂರು: ಹಿಂದಿ ಭಾಷೆ ಕುರಿತಂತೆ ನಟ ಸುದೀಪ್ ಅವರು ಇತ್ತೀಚೆಗೆ ನೀಡಿದ್ದ ಹೇಳಿಕೆಯೊಂದನ್ನು ಮೊದಲಿಗೆ ಟ್ವೀಟ್ ಮೂಲಕ ತೀವ್ರವಾಗಿ ಖಂಡಿಸಿದ್ದ ಬಾಲಿವುಡ್ ನಟ ಅಜಯ್ ದೇವಗನ್, ನಂತರದಲ್ಲಿ ಅನುವಾದದ ಸಂದರ್ಭದಲ್ಲಿ ತಪ್ಪಾಗಿರಬಹುದು ಎನ್ನುವ ಮೂಲಕ ವಿವಾದಕ್ಕೆ ತಾವೇ ತೆರೆ ಎಳೆದಿದ್ದಾರೆ.

ಸುದೀಪ್ ಅವರನ್ನು ಟ್ಯಾಗ್ ಮಾಡಿ ಬುಧವಾರ ಸಂಜೆ ಹಿಂದಿಯಲ್ಲಿ ಟ್ವೀಟ್ ಮಾಡಿದ್ದ ಅಜಯ್ ದೇವ್‌ಗನ್, ‘ನಿಮ್ಮ ಪ್ರಕಾರ, ಹಿಂದಿ ನಮ್ಮ ರಾಷ್ಟ್ರೀಯ ಭಾಷೆ ಅಲ್ಲವಾಗಿದ್ದರೆ, ನೀವೇಕೆ ನಿಮ್ಮ ಮಾತೃಭಾಷೆಯ ಸಿನಿಮಾಗಳನ್ನು ಹಿಂದಿಯಲ್ಲಿ ಡಬ್ ಮಾಡಿ ಬಿಡುಗಡೆ ಮಾಡುತ್ತಿದ್ದೀರಿ? ಹಿಂದಿ ನಮ್ಮ ಮಾತೃಭಾಷೆ, ರಾಷ್ಟ್ರಭಾಷೆ ಆಗಿತ್ತು, ಮುಂದೆಯೂ ಆಗಿರಲಿದೆ’ ಎಂದು ಉಲ್ಲೇಖಿಸಿದ್ದರು.

ಇದಕ್ಕೆ ಟ್ವೀಟ್‌ನಲ್ಲೇ ಪ್ರತಿಕ್ರಿಯೆ ನೀಡಿರುವ ಸುದೀಪ್, ‘ನನ್ನ ಹೇಳಿಕೆಯ ಹಿನ್ನೆಲೆಗೂ ಅದು ನಿಮಗೆ ತಲುಪಿರುವುದಕ್ಕೂ ಸಂಪೂರ್ಣ ವ್ಯತ್ಯಾಸವಿದೆ. ಯಾರಿಗೂ ನೋವುಂಟು ಮಾಡಲು, ಪ್ರಚೋದಿಸಲು ನಾನು ಆ ಹೇಳಿಕೆ ನೀಡಿಲ್ಲ. ನೀವು ಹಿಂದಿ ಭಾಷೆಯಲ್ಲಿ ಮಾಡಿದ ಟ್ವೀಟ್ ಅನ್ನು ನಾನು ಅರ್ಥೈಸಿಕೊಂಡೆ. ಏಕೆಂದರೆ ನಾವು ಹಿಂದಿಯನ್ನು ಕಲಿತಿದ್ದೇವೆ. ಒಂದು ವೇಳೆ ನಿಮ್ಮ ಹಿಂದಿ ಟ್ವೀಟ್‌ಗೆ ನಾನು ಕನ್ನಡದಲ್ಲೇ ಪ್ರತಿಕ್ರಿಯೆ ನೀಡಿದ್ದರೆ ಪರಿಸ್ಥಿತಿ ಏನಾಗುತ್ತಿತ್ತೋ ಎಂದು ಊಹೆ ಮಾಡುತ್ತಿದ್ದೇನೆ’ ಎಂದಿದ್ದಾರೆ.

ಸುದೀಪ್ ಹೇಳಿದ್ದೇನು?: ಕೆಲ ದಿನಗಳ ಹಿಂದೆ ನಟ ಉಪೇಂದ್ರ ಅವರ ನೂತನ ಪ್ಯಾನ್ ಇಂಡಿಯಾ ಚಿತ್ರ ‘ಐ ಆ್ಯಮ್ ಆರ್’ ಶೀರ್ಷಿಕೆ ಅನಾವರಣ ಸಂದರ್ಭದಲ್ಲಿ ಸುದೀಪ್ ಮಾತನಾಡಿ, ‘ಪ್ರಸ್ತುತ ಹಿಂದಿ ಎನ್ನುವುದು ರಾಷ್ಟ್ರೀಯ ಭಾಷೆಯಾಗಿಲ್ಲ’ ಎಂದರು.

‘ಬಾಲಿವುಡ್‌ನವರು ಪ್ಯಾನ್ ಇಂಡಿಯಾ ಸಿನಿಮಾಗಳನ್ನು ಮಾಡುತ್ತಿದ್ದು, ಅಲ್ಲಿಂದ ಇತರೆ ಭಾಷೆಗೆ ಡಬ್ ಮಾಡಿ, ಒದ್ದಾಡುತ್ತಿದ್ದಾರೆ. ದಕ್ಷಿಣದ ಸಿನಿಮಾಗಳು ಡಬ್ ಆಗಿ ಅಲ್ಲಿ ಓಡುತ್ತಿವೆ. ನಾವು ಎಲ್ಲೆಡೆಯೂ ತಲುಪುವ ಸಾಮರ್ಥ್ಯವಿರುವ ಸಿನಿಮಾ ಮಾಡುತ್ತಿದ್ದೇವೆ’ ಎಂದಿದ್ದರು. ಇತ್ತೀಚೆಗೆ ಸಂದರ್ಶನವೊಂದರಲ್ಲೂ ಇದನ್ನು ಮರು ಉಲ್ಲೇಖಿಸಿದ್ದರು.

ಸುದೀಪ್ ಅವರ ಪ್ರತಿಕ್ರಿಯೆಗೆ ಮತ್ತೊಂದು ಟ್ವೀಟ್ ಮಾಡಿದ್ದ ದೇವ್‌ಗನ್, ‘ಆದ ತಪ್ಪು ತಿಳಿವಳಿಕೆಯನ್ನು ಸ್ಪಷ್ಟಪಡಿಸಿರುವುದಕ್ಕೆ ಧನ್ಯವಾದ. ನಾವು ಎಲ್ಲ ಭಾಷೆಯನ್ನು ಗೌರವಿಸುತ್ತೇವೆ ಹಾಗೂ ಇತರರೂ ನಮ್ಮ ಭಾಷೆಯನ್ನು ಗೌರವಿಸಬೇಕು ಎಂದು ಆಶಿಸುತ್ತೇವೆ. ನಿಮ್ಮ ಮಾತುಗಳು ನನಗೆ ಅನುವಾದ ಆದ ಸಂದರ್ಭದಲ್ಲಿ ತಪ್ಪಾಗಿರಬಹುದು’ ಎಂದಿದ್ದಾರೆ. ಈ ಟ್ವೀಟ್‌ಗೂ ಪ್ರತಿಕ್ರಿಯೆ ನೀಡಿರುವ ಸುದೀಪ್, ‘ಸಂಪೂರ್ಣ ವಿಷಯವನ್ನು ತಿಳಿಯದೇ, ಪ್ರತಿಕ್ರಿಯೆ ನೀಡದೆ ಇರುವುದೂ ಮುಖ್ಯವಾಗುತ್ತದೆ. ನಿಮ್ಮನ್ನು ದೂಷಿಸುವುದಿಲ್ಲ’ ಎಂದಿದ್ದಾರೆ.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಕನ್ನಡಿಗರಿಗೆ ಕನ್ನಡವೇ ರಾಷ್ಟ್ರಭಾಷೆ: ಅಜಯ್ ದೇವಗನ್‌ಗೆ ಕನ್ನಡಿಗರ ಗುದ್ದು

ನಟರಿಬ್ಬರ ನಡುವಿನ ಚರ್ಚೆಯು 'ಹಿಂದಿ ರಾಷ್ಟ್ರಭಾಷೆ' ವಿಚಾರವನ್ನು ಮತ್ತೆ ಮುನ್ನೆಲೆಗೆ ತಂದಿದೆ. ಕನ್ನಡಿಗರು ಸಾಮಾಜಿಕ ಮಾಧ್ಯಮಗಳ ಮೂಲಕ ಅಜಯ್ ದೇವಗನ್ ಹೇಳಿಕೆಗೆ ಕಿಡಿಕಾರಿದ್ದು, 'ಕನ್ನಡಿಗರಿಗೆ ಕನ್ನಡವೇ ರಾಷ್ಟ್ರಭಾಷೆ' ಎಂದು ಹಂಚಿಕೊಂಡಿದ್ದಾರೆ.



'ಹಿಂದಿ ಹಿಂದೆಯೂ ನಮ್ಮ ರಾಷ್ಟ್ರ ಭಾಷೆ ಆಗಿರಲಿಲ್ಲ, ಮುಂದೆಯೂ ನಮ್ಮ ರಾಷ್ಟ್ರ ಭಾಷೆ ಆಗುವುದಿಲ್ಲ. ನಮ್ಮ ರಾಷ್ಟ್ರದ ಭಾಷಾ ವೈವಿಧ್ಯತೆಯನ್ನು ಗೌರವಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ. ಪ್ರತಿಯೊಂದು ಭಾಷೆಗೂ ತನ್ನದೇ ಆದ ಭವ್ಯ ಇತಿಹಾಸವಿದ್ದು, ಆ ಭಾಷೆಯ ಜನರಿಗೆ ಹೆಮ್ಮೆ ತರುವಂತಿದೆ. ನಾನು ಕನ್ನಡಿಗನಾಗಿರುವುದಕ್ಕೆ ಹೆಮ್ಮೆ ಪಡುತ್ತೇನೆ'

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ



'ಹತ್ತಾರು ವರ್ಷಗಳಿಂದ ನಿಮ್ಮ ಹಿಂದಿ ಸಿನಿಮಾಗಳು ಕನ್ನಡ ನೆಲದಲ್ಲಿ ಹಣ ಮಾಡಿವೆ, ಈಗಷ್ಟೆ ನಮ್ಮ ಕನ್ನಡ ಸಿನಿಮಾಗಳು ಅಲ್ಲಿಗೆ ಕಾಲಿಟ್ಟಿವೆ, ನಮ್ಮಂತೆಯೇ ನೀವು ನಮ್ಮನ್ನು ಮತ್ತು ನಮ್ಮ ಭಾಷೆಯನ್ನು ಗೌರವಿಸಿ. ಹಿಂದಿ ಎಂದಿಗೂ ನಮ್ಮ ರಾಷ್ಟ್ರ ಭಾಷೆಯಲ್ಲ'

ನೀನಾಸಂ ಸತೀಶ್, ನಟ



'ಇಲ್ಲ, ಹಿಂದಿ ನಮ್ಮ ರಾಷ್ಟ್ರ ಭಾಷೆಯಲ್ಲ. ಅಜಯ್ ದೇವಗನ್ ಅವರೇ, ನಿಮ್ಮ ಅಜ್ಞಾನವು ತಬ್ಬಿಬ್ಬುಗೊಳಿಸಿದೆ. ಕೆಜಿಎಫ್, ಪುಷ್ಪ ಮತ್ತು ಆರ್‌ಆರ್‌ಆರ್‌ನಂತಹ ಸಿನಿಮಾಗಳು ಹಿಂದಿ ಭಾಷಿಕ ನೆಲದಲ್ಲಿ ಉತ್ತಮವಾಗಿ ಪ್ರದರ್ಶನ ಕಾಣುತ್ತಿರುವುದು ಒಳ್ಳೆಯ ವಿಷಯ. ಕಲೆಗೆ ಯಾವುದೇ ಭಾಷೆಯ ತಡೆ ಇಲ್ಲ. ದಯವಿಟ್ಟು ನಿಮ್ಮ ಸಿನಿಮಾಗಳನ್ನು ನಾವು ಆನಂದಿಸುವಷ್ಟೇ ನಮ್ಮ ಸಿನಿಮಾಗಳನ್ನೂ ನೋಡಿ ಆನಂದಿಸಿ'

ರಮ್ಯಾ, ನಟಿ, ರಾಜಕಾರಣಿ

ಕನಿಕಗೆ 13, ಕಿರಣ್‌ಗೆ 9 ಚಿನ್ನದ ಪದಕ

ಪ್ರಜಾವಾಣಿ ವಾರ್ತೆ



ಕನಿಕ ಯಾದವ್



ಕಿರಣ್ ದರೂರ್

ಬೀದರ್: ತಾಲ್ಲೂಕಿನ ಕಮಠಾಣ ಸಮೀಪದ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಘಟಿಕೋತ್ಸವ ಗುರುವಾರ (ಏ.28) ನಡೆಯಲಿದ್ದು, ಶಿವಮೊಗ್ಗ ಪಶು ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿನಿ ಕನಿಕ ಯಾದವ್ 13 ಹಾಗೂ ಬೆಂಗಳೂರು ಪಶು ಮಹಾವಿದ್ಯಾಲಯದ ವಿದ್ಯಾರ್ಥಿ ಕಿರಣ್ ದರೂರ್ ಒಂಬತ್ತು ಚಿನ್ನದ ಪದಕಗಳಿಗೆ ಕೊರಳೊಡ್ಡಲಿದ್ದಾರೆ.

2019-20ನೇ ಸಾಲಿನ ಬಿ.ವಿ.ಎಸ್ಸಿ ಮತ್ತು ಎ.ಎಚ್‌ನಲ್ಲಿ ಕನಿಕ 13, ಹಾಸನ ಪಶು ವೈದ್ಯಕೀಯ ಮಹಾವಿದ್ಯಾಲಯದ ನಿತಿನ್.ಬಿ ಆರು, 2020-21ನೇ ಸಾಲಿನ ಬಿ.ವಿ.ಎಸ್ಸಿ ಮತ್ತು ಎ.ಎಚ್‌ನಲ್ಲಿ ಕಿರಣ್ ದರೂರ್ ಒಂಬತ್ತು ಮತ್ತು ಶಿವಮೊಗ್ಗ ಪಶು ವೈದ್ಯಕೀಯ ಮಹಾವಿದ್ಯಾಲಯದ ರಜತ್ ಎಂ.ಎಸ್. ಆರು ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಳ್ಳಲಿದ್ದಾರೆ.

2019-20ನೇ ಸಾಲಿನ ಎಂ.ವಿ.ಎಸ್ಸಿಯಲ್ಲಿ ಬೆಂಗಳೂರು ಪಶು ವೈದ್ಯಕೀಯ ಮಹಾವಿದ್ಯಾಲಯದ ನಟರಾಜ ಡಿ. ಅವರು ನಾಲ್ಕು, 2020-21ನೇ ಸಾಲಿನ ಎಂ.ವಿ.ಎಸ್ಸಿಯಲ್ಲಿ ಶಿವಮೊಗ್ಗ ಪಶು ವೈದ್ಯಕೀಯ ಮಹಾವಿದ್ಯಾಲಯದ ಪವಿತ್ರ ಬಿ.ಎಸ್ ಹಾಗೂ ಎಂ.ಎಫ್.ಎಸ್ಸಿಯಲ್ಲಿ ಮಂಗಳೂರಿನ ಮೀನುಗಾರಿಕೆ ಮಹಾವಿದ್ಯಾಲಯದ ಧೀರಜ್ ಎಸ್.ಬಿ ತಲಾ ಮೂರು ಚಿನ್ನದ ಪದಕಗಳಿಗೆ ಭಾಜನರಾಗಲಿದ್ದಾರೆ.

ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಘಟಿಕೋತ್ಸವದಲ್ಲಿ 2018- 19, 2019- 20 ಹಾಗೂ 2020- 21ನೇ ಸಾಲಿನ ಒಟ್ಟು 1,012 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಿದ್ದಾರೆ. 154 ವಿದ್ಯಾರ್ಥಿಗಳು ಚಿನ್ನದ ಪದಕಗಳನ್ನು ಪಡೆಯಲಿದ್ದಾರೆ ಎಂದು ಕುಲಪತಿ ಡಾ. ಕೆ.ಸಿ. ವೀರಣ್ಣ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಎಸ್‌.ಟಿ ಮೀಸಲು ಹೋರಾಟಕ್ಕೆ ಬೆಂಬಲ’

ಸಿರವಾರ (ರಾಯಚೂರು ಜಿಲ್ಲೆ): ‘ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 7.5ರಷ್ಟು ಹೆಚ್ಚಿಸುವಂತೆ ಸ್ವಾಮೀಜಿಗಳು ನಡೆಸುತ್ತಿರುವ ಹೋರಾಟಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ.’ ಎಂದು ನಟ ಸುದೀಪ್ ಹೇಳಿದರು.

ಮಹರ್ಷಿ ವಾಲ್ಮೀಕಿ ಮತ್ತು ವೀರ ಮದಕರಿ ನಾಯಕ ಅವರ ಪ್ರತಿಮೆಗಳ ಉದ್ಘಾಟನೆಗೆ ಮಂಗಳವಾರ ಕುರಕುಂದಾಕ್ಕೆ ನಿಗದಿತ ಸಮಯಕ್ಕಿಂತ ಒಂದು ಗಂಟೆ ಮುಂಚಿತವಾಗಿಯೇ ಬಂದಿದ್ದ ಸುದೀಪ್ ಅವರು, ಪ್ರತಿಮೆಗಳಿರುವ ಸ್ಥಳಕ್ಕೆ ಹೋಗದೇ, ಹೆಲಿಪ್ಯಾಡ್‌ನಲ್ಲೇ ಅವರ ಭಾವಚಿತ್ರಗಳಿಗೆ ಮಾಲಾರ್ಪಣೆ ಮಾಡಿ ಮಾತನಾಡಿದರು.

‘ರಾಜ್ಯಗಳಿಂದ ಜನರಿಗೆ ಅನ್ಯಾಯ’

ಒಂದನೇ ಪುಟದಿಂದ...

‘ಬಾಹ್ಯ ಕಾರಣಗಳ ಪರಿಣಾಮವು ದೇಶದಲ್ಲಿ ಆಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಹಕಾರೀ ಒಕ್ಕೂಟ ವ್ಯವಸ್ಥೆಯ ತತ್ವಗಳ ಅಡಿಯಲ್ಲಿ, ಅಂತಹ ಸಂದರ್ಭಗಳನ್ನು ಒಟ್ಟಾಗಿ ಎದುರಿಸಿದ್ದವು. ಮುಂದೆಯೂ ಅದೇ ರೀತಿ ಎದುರಿಸಲೇಬೇಕಾಗುತ್ತದೆ. ಆದರೆ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ಕಡಿತ ವಿಚಾರದಲ್ಲಿ ಹೀಗಾಗಲಿಲ್ಲ. ನಾವು ಎಕ್ಸೈಸ್ ಸುಂಕ ಕಡಿತ ಮಾಡಿದೆವು. ನಮ್ಮ ಭಾವನೆಯನ್ನು ಅರ್ಥ ಮಾಡಿಕೊಂಡು ಕರ್ನಾಟಕ, ಗುಜರಾತ್‌ನಂತಹ ರಾಜ್ಯಗಳು ತಮ್ಮ ತೆರಿಗೆಯನ್ನು ಕಡಿತ ಮಾಡಿದವು. ಈ ರಾಜ್ಯಗಳ ಪಕ್ಕದ ರಾಜ್ಯಗಳು ತೆರಿಗೆ ಕಡಿತವನ್ನು ಮಾಡಲಿಲ್ಲ. ಆ ಮೂಲಕ ಇದರ ಲಾಭವನ್ನು ಜನರಿಗೆ ನೀಡಲಿಲ್ಲ. ಇದರಿಂದ ಈ ರಾಜ್ಯಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಈಗಲೂ ಹೆಚ್ಚೇ ಇದೆ’ ಎಂದು ಅವರು ಆರೋಪಿಸಿದ್ದಾರೆ.

‘ತೆರಿಗೆ ಕಡಿತ ಮಾಡಿದ ರಾಜ್ಯಗಳ ಖಜಾನೆಗೆ ನಷ್ಟವಾಯಿತು. ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮತ್ತು ಜಾರ್ಖಂಡ್‌ನ ಸರ್ಕಾರಗಳು ತೆರಿಗೆ ಕಡಿತ ಮಾಡಲಿಲ್ಲ. ಈ ರಾಜ್ಯಗಳ ಆದಾಯ ಅತಿಯಾಗಿ ಹೆಚ್ಚಾಯಿತು. ಈ ರಾಜ್ಯಗಳು ತಮ್ಮ ಜನರಿಗೂ ಅನ್ಯಾಯ ಮಾಡಿದವು. ಜತೆಗೆ ಬೇರೆ ರಾಜ್ಯಗಳು ನಷ್ಟ ಅನುಭವಿಸುವಂತೆ ಮಾಡಿದವು’ ಎಂದು ಮೋದಿ ಆರೋಪಿಸಿದ್ದಾರೆ.

‘ನವೆಂಬರ್‌ನಿಂದ ಇಲ್ಲಿಗೆ ಆರು ತಿಂಗಳಾಗಿದೆ. ಈ ಅವಧಿಯಲ್ಲಿ ತೆರಿಗೆ ಕಡಿತ ಮಾಡದೇ ಇರುವ ಮೂಲಕ ಈ ರಾಜ್ಯಗಳು ಗಳಿಸಿರುವ ಹೆಚ್ಚು ಆದಾಯವು, ಅವುಗಳ ಬಳಿಯೇ ಇರಲಿ. ಅದು ಆ ರಾಜ್ಯಗಳಿಗೇ ಉಪಯೋಗಕ್ಕೆ ಬರುತ್ತದೆ. ಆದರೆ, ಈಗಲಾದರೂ ತೆರಿಗೆ ಕಡಿತ ಮಾಡುವ ಮೂಲಕ, ಅದರ ಲಾಭವನ್ನು ಜನರಿಗೆ ತಲುಪಿಸಲಿ’ ಎಂದು ಮೋದಿ ಕರೆ ನೀಡಿದ್ದಾರೆ.

ಆರ್ಥಿಕ ಪರಿಸ್ಥಿತಿ ಆಧರಿಸಿ ನಿರ್ಧಾರ

ಒಂದನೇ ಪುಟದಿಂದ...

ಕೇಂದ್ರ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಯನ್ನು 2021ರ ನವೆಂಬರ್ ನಲ್ಲಿ ಅಲ್ಪ ಪ್ರಮಾಣದಲ್ಲಿ ಇಳಿಸಿತ್ತು. ಆಗ, ರಾಜ್ಯ ಸರ್ಕಾರವೂ ತೆರಿಗೆ ಕಡಿತ ಮಾಡಿತ್ತು. ಬುಧವಾರ ನಡೆದ ವಿಡಿಯೊ ಕಾನ್ಫರೆನ್ಸಿಂಗ್ ನಲ್ಲಿ ಈ ವಿಚಾರ ಪ್ರಸ್ತಾಪಿಸಿದ ಪ್ರಧಾನಿ ನರೇಂದ್ರ ಮೋದಿ, ‘ಕರ್ನಾಟಕದ ನಡೆಯನ್ನು ಇತರ ರಾಜ್ಯಗಳೂ ಅನುಸರಿಸಬೇಕು’ ಎಂದು ಸಲಹೆ ನೀಡಿದ್ದರು.

ಆಲಿಕಲ್ಲು ಸಹಿತ ಭಾರಿ ಮಳೆ

ಪ್ರಜಾವಾಣಿ ವಾರ್ತೆ



ಸೋಮವಾರಪೇಟೆ: ಪಟ್ಟಣವೂ ಸೇರಿದಂತೆ ಗ್ರಾಮೀಣ ಭಾಗದಲ್ಲಿ ಮಂಗಳವಾರ ತಡ ರಾತ್ರಿ ಗುಡುಗು, ಬಿರುಗಾಳಿ, ಆಲಿಕಲ್ಲು ಸಹಿತ ಧಾರಾಕಾರ ಮಳೆಯಾಗಿದ್ದು, ಕೆಲವೆಡೆ ಹಾನಿಯಾಗಿದೆ. ಮಳೆ ಸುರಿದಿದ್ದು ಕಾಫಿ ತೋಟಕ್ಕೆ ಉಪಯೋಗವಾದರೆ, ಹಸಿಮೆಣಸಿನ ಕಾಯಿ ಬೆಳೆಗಾರರು ನಷ್ಟ ಅನುಭವಿಸುವಂತಾಗಿದೆ.

ಕೆಲ ಗ್ರಾಮಗಳಲ್ಲಿ ಬೃಹತ್ ಗಾತ್ರದ ಆಲಿಕಲ್ಲು ಸುರಿದು, ಹಸಿಮೆಣಸಿನ ಕಾಯಿ ಬೆಳೆಗೆ ಹಾನಿಯಾಗಿದೆ.

ಕುಂದಳ್ಳಿಯಲ್ಲಿ 25 ಕೆ.ಜಿ ತೂಕದ ಆಲಿಕಲ್ಲು ಬಿದ್ದಿದ್ದು, ಬೆಳಿಗ್ಗೆಯಾದರೂ ಕರಗಿರಲಿಲ್ಲ. ಗ್ರಾಮದ ಮಂಜುಳಾ, ದೃತನ್ ಬುಧವಾರ ಬೆಳಿಗ್ಗೆ ಕೃಷಿ ಭೂಮಿಗೆ ತೆರಳುವಾಗ ಮರದ ಸಮೀಪ ಅದು ಕಾಣಿಸಿತ್ತು.

ಸಿಡಿಲು ಬಡಿದು ಮಹಿಳೆ ಸಾವು (ಚಿಂಚೋಳಿ ವರದಿ): ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕುಂಚಾವರಂ ಬಳಿ ಬುಧವಾರ ಸಂಜೆ ಸಿಡಿಲು ಬಡಿದು ನಾಗಮಣಿ ರಾಜು (31) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಇವರು ಹೊಲದಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಸಿಡಿಲು ಬಡಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕುಂಚಾವರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಧರ್ಮಸ್ಥಳ: 50ನೇ ವರ್ಷದ ಸಾಮೂಹಿಕ ವಿವಾಹ

ಪ್ರಜಾವಾಣಿ ವಾರ್ತೆ

ಉಜಿರೆ: ಧರ್ಮಸ್ಥಳದ ಅಮೃತವರ್ಷಿಣಿ ಸಭಾ ಭವನದಲ್ಲಿ ಬುಧವಾರ ಸಂಜೆ 6.30ರ ಗೋಧೂಳಿ ಲಗ್ನದಲ್ಲಿ 50ನೇ ವರ್ಷದ ಉಚಿತ ಸಾಮೂಹಿಕ ವಿವಾಹಗಳು ನಡೆದವು.

ಗಣ್ಯರು ಮತ್ತು ಹಿರಿಯರ ಸಮ್ಮುಖದಲ್ಲಿ 183 ಜತೆ ನವ ವಧು- ವರರು ದಾಂಪತ್ಯ ಜೀವನಕ್ಕೆ ಅಡಿ ಇಟ್ಟರು. ಬೆಳಿಗ್ಗೆ ಹೆಗ್ಗಡೆ ಅವರ ನಿವಾಸದಲ್ಲಿ ವಧುವಿಗೆ ಸೀರೆ ಮತ್ತು ರವಕೆ ಹಾಗೂ ವರನಿಗೆ ಧೋತಿ, ಶಾಲು ವಿತರಿಸಲಾಯಿತು. ಸಂಜೆ 5 ಗಂಟೆಗೆ ಭವ್ಯ ಮೆರವಣಿಗೆಯಲ್ಲಿ ವಧು-ವರರು ದೇವಸ್ಥಾನಕ್ಕೆ ಪ್ರದಕ್ಷಿಣೆ ಬಂದು, ಅಮೃತವರ್ಷಿಣಿ ಸಭಾಭವನದಲ್ಲಿ ಮದುವೆ ಮಂಟಪಕ್ಕೆ ಪ್ರವೇಶಿಸಿದರು.

ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ, ಕಂದಾಯ ಸಚಿವ ಆರ್. ಅಶೋಕ, ಚಿತ್ರ ನಟ ಗಣೇಶ್ ಮತ್ತು ಗಣ್ಯರು ಮಂಗಳಸೂತ್ರ ನೀಡಿ, ನೂತನ ವಧು– ವರರಿಗೆ ಶುಭ ಹಾರೈಸಿದರು.

ಜಾತಿ- ಮತ, ಅಂತಸ್ತಿನ ಭೇದ ಮರೆತು 60 ಜೋಡಿ ಅಂತರ್ ಜಾತೀಯ ವಿವಾಹ ನಡೆದಿರುವ ಬಗ್ಗೆ ಹೆಗ್ಗಡೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ‘ಧರ್ಮಸ್ಥಳ ಕ್ಷೇತ್ರದಲ್ಲಿ ಮದುವೆಯಾದವರು ಪರಸ್ಪರ ಅರಿತುಕೊಂಡು ಶಾಂತಿ- ಸಹನೆ ಮತ್ತು ಪ್ರೀತಿ- ವಿಶ್ವಾಸದಿಂದ ನೆಮ್ಮದಿಯ ಜೀವನ ನಡೆಸಬೇಕು. ಮದುವೆಯ ಪಾವಿತ್ರ್ಯವನ್ನು ಅರ್ಥ ಮಾಡಿಕೊಂಡು ಸಾರ್ಥಕ ಜೀವನ ನಡೆಸಿ’ ಎಂದು ಹಾರೈಸಿದರು.



ಧರ್ಮಸ್ಥಳದಲ್ಲಿ ಬುಧವಾರ ಅಮೃತವರ್ಷಿಣಿ ಸಭಾಭವನದಲ್ಲಿ ನಡೆದ 50ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಸಮಾರಂಭದಲ್ಲಿ 183 ಜೋಡಿ ವಧು ವರರು ದಾಂಪತ್ಯ ಜೀವನಕ್ಕೆ ಅಡಿ ಇಟ್ಟರು. ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ, ಕಂದಾಯ ಸಚಿವ ಆರ್. ಅಶೋಕ್, ಚಿತ್ರ ನಟ ಗಣೇಶ್ ಮತ್ತು ಗಣ್ಯರು ಮಂಗಳಸೂತ್ರ ನೀಡಿ ನೂತನ ವಧು–ವರರಿಗೆ ಶುಭ ಹಾರೈಸಿದರು.

ನಟಿ ತಾರಾಗೆ ಮಾತೃವಿಯೋಗ

ಮೈಸೂರು: ನಟಿ ತಾರಾ ಅನುರಾಧಾ ಅವರ ತಾಯಿ ಪುಷ್ಪಾ (73) ಹೃದಯಾಘಾತದಿಂದ ಇಲ್ಲಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು. ಅವರಿಗೆ ತಾರಾ ಸೇರಿದಂತೆ ಇಬ್ಬರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ.

‘ಚಿತ್ರೀಕರಣಕ್ಕೆಂದು ನನ್ನೊಂದಿಗೆ ಬೆಳಿಗ್ಗೆಯಷ್ಟೇ ಬಂದಿದ್ದರು. ಮಧ್ಯಾಹ್ನದ ಹೊತ್ತಿಗೆ ವಿಶ್ರಾಂತಿಗೆಂದು ಹೋಟೆಲ್‌ಗೆ ತೆರಳುವಾಗ ಅಸ್ವಸ್ಥರಾದರು. ಆಸ್ಪತ್ರೆಗೆ ದಾಖಲಿಸಿದರೂ ಸ್ಪಂದಿಸದೇ ಮೃತಪಟ್ಟರು’ ಎಂದು ತಾರಾ ‘ಪ್ರಜಾವಾಣಿ’ಗೆ ತಿಳಿಸಿದರು.

6 ಸಾವಿರ ಧಾರ್ಮಿಕ ಸ್ಥಳಗಳ ಧ್ವನಿ ವರ್ಧಕಗಳ ತೆರವು

ಲಖನೌ (ಪಿಟಿಐ): ಉತ್ತರ ಪ್ರದೇಶದಲ್ಲಿ ಸುಮಾರು ಆರು ಸಾವಿರ ಧಾರ್ಮಿಕ ಸ್ಥಳಗಳಿಂದ ಧ್ವನಿವರ್ಧಕಗಳನ್ನು ತೆರವುಗೊಳಿಸಲಾಗಿದೆ. ಇತರ 30 ಸಾವಿರ ಧ್ವನಿವರ್ಧಕಗಳ ಶಬ್ದಗಳನ್ನು ಮಿತಿಗೊಳಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಬುಧವಾರ ಹೇಳಿದ್ದಾರೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಆದೇಶ ಮೇರೆಗೆ ರಾಜ್ಯಾದ್ಯಂತ ಧಾರ್ಮಿಕ ಸ್ಥಳಗಳಿಂದ ಧ್ವನಿವರ್ಧಕಗಳನ್ನು ತೆರವುಗೊಳಿಸುವ ಮತ್ತು ಶಬ್ದಗಳಲ್ಲಿ ಮಿತಿಗೊಳಿಸುವ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಕಾನೂನು ಮತ್ತು ಸುವ್ಯವಸ್ಥೆ) ಪ್ರಶಾಂತ್ ಕುಮಾರ್ ಹೇಳಿದರು.

ಆಕಾರ್ ಪಟೇಲ್ ವಿರುದ್ಧ ದೆಹಲಿ ಹೈಕೋರ್ಟ್‌ಗೆ ಅರ್ಜಿ

ನವದೆಹಲಿ (ಪಿಟಿಐ): ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಇಂಡಿಯಾದ ಮಾಜಿ ಅಧ್ಯಕ್ಷ ಆಕಾರ್ ಪಟೇಲ್ ವಿರುದ್ಧ ಹೊರಡಿಸಿದ್ದ ಲುಕ್‌ಔಟ್ ನೋಟಿಸ್ (ಎಲ್‌ಒಸಿ) ಹಿಂಪಡೆಯುವಂತೆ ವಿಚಾರಣಾ ನ್ಯಾಯಾಲಯ ನಿರ್ದೇಶನ ನೀಡಿರುವುದನ್ನು ಪ್ರಶ್ನಿಸಿ ದೆಹಲಿ ಹೈಕೋರ್ಟ್‌ನಲ್ಲಿ ಸಿಬಿಐ ಬುಧವಾರ ಅರ್ಜಿ ಸಲ್ಲಿಸಿದೆ.

ಪಟೇಲ್ ಅವರು ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ಉಲ್ಲಂಘನೆ ಆರೋಪ ಎದುರಿಸುತ್ತಿದ್ದಾರೆ.

'ವಿಚಾರಣಾ ನ್ಯಾಯಾಲಯ ಪಟೇಲ್ ಅವರಿಗೆ ಪರಿಹಾರ ನೀಡಿರುವುದನ್ನು ವಿರೋಧಿಸುತ್ತಿಲ್ಲ. ಆದರೆ, ಈ ವಿಷಯದಲ್ಲಿ ನ್ಯಾಯಾಲಯ ಅನುಸರಿಸಿದ ತರ್ಕದ ಬಗ್ಗೆ ತಕರಾರಿದೆ' ಎಂದು ಸಿಬಿಐ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು ನ್ಯಾಯಮೂರ್ತಿ ತಲ್ವಂತ್ ಸಿಂಗ್ ಅವರಿಗೆ ತಿಳಿಸಿದರು.

'ಇತರ ಪ್ರಕರಣಗಳಲ್ಲಿ ಸಿಬಿಐ ವಿರುದ್ಧ ಇದೇ ತರ್ಕವನ್ನು ಬಳಸುವ ಬಗ್ಗೆ ಆತಂಕ ಇದೆ' ಎಂದೂ ಹೇಳಿದರು.

ಈ ವೇಳೆ, ಅರ್ಜಿಯ ವಿಚಾರಣೆಯಿಂದ ಹಿಂದೆ ಸರಿಯುವುದಾಗಿ ನ್ಯಾಯಮೂರ್ತಿ ಸಿಂಗ್ ತಿಳಿಸಿದರು. ಬೇರೆ ಪೀಠ ಈ ಅರ್ಜಿಯ ವಿಚಾರಣೆ ನಡೆಸಲಿ ಎಂದ ಅವರು, ಮೇ ನಲ್ಲಿ ವಿಚಾರಣೆ ಪಟ್ಟಿಗೆ ಅರ್ಜಿಯನ್ನು ಸೇರಿಸುವಂತೆ ಅವರು ನಿರ್ದೇಶನ ನೀಡಿದರು.

ಅರ್ಜಿ ವಿಚಾರಣೆಯನ್ನು ಮೇ 13ಕ್ಕೆ ನಿಗದಿಪಡಿಸಲಾಗಿದೆ.

ಆಶಿಶ್ ಜಾಮೀನು ಅರ್ಜಿ: ಹಿಂದೆ ಸರಿದ ನ್ಯಾಯಮೂರ್ತಿ

ಲಖನೌ (ಪಿಟಿಐ): ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣದಲ್ಲಿ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಅವರ ಜಾಮೀನು ಅರ್ಜಿಯ ವಿಚಾರಣೆಯಿಂದ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠದ ನ್ಯಾಯಮೂರ್ತಿ ರಾಜೀವ್ ಸಿಂಗ್ ಬುಧವಾರ ಹಿಂದೆ ಸರಿದಿದ್ದಾರೆ.

ಆಶಿಶ್ ಮಿಶ್ರಾ ಅವರಿಗೆ ಈ ಹಿಂದೆ ನ್ಯಾಯಮೂರ್ತಿ ರಾಜೀವ್ ಸಿಂಗ್ ಜಾಮೀನು ನೀಡಿದ್ದರು. ಆದರೆ, ಏಪ್ರಿಲ್ 18 ರಂದು ಸುಪ್ರೀಂ ಕೋರ್ಟ್ ಜಾಮೀನು ಆದೇಶವನ್ನು ರದ್ದುಗೊಳಿಸಿತ್ತು. ನ್ಯಾಯಮೂರ್ತಿ ರಾಜೀವ್ ಸಿಂಗ್ ಅವರ ನ್ಯಾಯಪೀಠದ ಎದುರು ಜಾಮೀನು ಅರ್ಜಿ ಬಂದ ನಂತರ ಅವರು ವಿಚಾರಣೆಯಿಂದ ಹಿಂದೆ ಸರಿದಿದ್ದಾರೆ.

ಪರೀಕ್ಷೆ ಗುರಿ ಮುಟ್ಟಲು ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಮಾದರಿಗಳ ಪರೀಕ್ಷೆಯ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ. ಆದರೆ, ಸೋಂಕಿನ ಲಕ್ಷಣ ಉಳ್ಳವರು ಲಭ್ಯವಾಗದೇ ನಿಗದಿತ ಗುರಿ ಮುಟ್ಟಲು ಆರೋಗ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಪರದಾಡುತ್ತಿದ್ದಾರೆ.



ಮಾರ್ಚ್ 14ರ ಸುತ್ತೋಲೆ ಪ್ರಕಾರ, ಬಿಬಿಎಂಪಿ ವ್ಯಾಪ್ತಿಯಲ್ಲಿ 15,000, ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 5,000 ಮತ್ತು ಇತರ ಎಲ್ಲ ಜಿಲ್ಲೆಗಳಲ್ಲಿ ಒಟ್ಟು 10,000 ಮಾದರಿಗಳ ಪರೀಕ್ಷೆ ಗುರಿ ನಿಗದಿಪಡಿಸಲಾಗಿತ್ತು. ಆದರೆ, ಯಾವುದೇ ಭಾಗದಲ್ಲೂ ಹೆಚ್ಚಿನ ಸಂಖ್ಯೆಯ ಮಾದರಿಗಳು ಸಂಗ್ರಹವಾಗುತ್ತಿಲ್ಲ ಎನ್ನುತ್ತಾರೆ ಅಧಿಕಾರಿಗಳು.

'ವಿಷಮಶೀತ ಜ್ವರ (ಐಎಲ್‌ಐ) ಮತ್ತು ತೀವ್ರ ಉಸಿರಾಟದ ತೊಂದರೆಯಿರುವ (ಎಸ್‌ಎಆರ್‌ಐ) ಎಲ್ಲರ ಮೂಗು ಮತ್ತು ಗಂಟಲಿನ ದ್ರವದ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷಿಸಲಾಗುತ್ತಿದೆ. ಬೆಂಗಳೂರಿನಲ್ಲಿ ಇನ್ನಷ್ಟು ಸಂಖ್ಯೆಯ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆ ನಡೆಸಲು ಸಾಧ್ಯವಿದೆ' ಎನ್ನುತ್ತಾರೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್.

ಏಪ್ರಿಲ್ 5 ರಿಂದ 25ರ ವರೆಗಿನ ಅವಧಿಯಲ್ಲಿ ದಿನವೊಂದಕ್ಕೆ 1,753 ರಿಂದ 4,512 ಮಾದರಿಗಳನ್ನು ಮಾತ್ರ ಸಂಗ್ರಹಿಸಿ, ಪರೀಕ್ಷಿಸಲಾಗಿದೆ ಎಂಬ ಮಾಹಿತಿ ಬಿಬಿಎಂಪಿಯ ಏ.26ರ ವರದಿಯಲ್ಲಿದೆ. ಧಾರವಾಡ ಜಿಲ್ಲೆಯಲ್ಲಿ ಒಂದು ವಾರದ ಅವಧಿಯಲ್ಲಿ ಕೇವಲ ಒಂದು ಕೋವಿಡ್ ಪ್ರಕರಣ ದೃಢಪಟ್ಟಿದೆ.

'ಧಾರವಾಡ ಜಿಲ್ಲೆಯಲ್ಲಿ ಮೂರು ತಾಲ್ಲೂಕು ಆಸ್ಪತ್ರೆಗಳಿವೆ. ಇಲ್ಲಿ ಕೋವಿಡ್ ದೃಢಪ್ರಮಾಣ ದರ ಶೂನ್ಯಕ್ಕೆ ಇಳಿದಿದೆ. ನಿತ್ಯ 300 ರಿಂದ 350 ರೋಗಗಳ ತಪಾಸಣೆ ನಡೆಸುತ್ತಿದ್ದು, ಯಾವುದೇ ಐಎಲ್‌ಐ ಅಥವಾ ಎಸ್‌ಎಆರ್‌ಐ ಪ್ರಕರಣಗಳು ಪತ್ತೆಯಾಗುತ್ತಿಲ್ಲ' ಎನ್ನುತ್ತಾರೆ ಧಾರವಾಡ ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿ ಅಧಿಕಾರಿಗಳು.

ಕೊಡಗು ಜಿಲ್ಲೆಯಲ್ಲೂ ಕೋವಿಡ್ ದೃಢಪ್ರಮಾಣ ದರ ಶೂನ್ಯಕ್ಕೆ ಇಳಿದಿದೆ. ಜಿಲ್ಲೆಯಲ್ಲಿ ಮೂರು ತಾಲ್ಲೂಕು ಆಸ್ಪತ್ರೆಗಳಿವೆ. ಎಲ್ಲಿಯೂ ಕೋವಿಡ್ ಪರೀಕ್ಷಾ ಮಾದರಿ ಸಂಗ್ರಹಿಸುತ್ತಿಲ್ಲ. ಜಿಲ್ಲೆಯಲ್ಲಿ ದಿನಕ್ಕೆ 50 ರಿಂದ 60 ಮಾದರಿಗಳನ್ನಷ್ಟೇ ಪರೀಕ್ಷಿಸಲಾಗುತ್ತಿದೆ ಎನ್ನುತ್ತಾರೆ ಅಲ್ಲಿನ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಆನಂದ್ ಎನ್.

ಕೋಲಾರ ಜಿಲ್ಲೆಯಲ್ಲಿ ಒಂದು ವಾರದ ಅವಧಿಯಲ್ಲಿ ನಾಲ್ಕು ಕೋವಿಡ್ ಪ್ರಕರಣಗಳು ದೃಢಪಟ್ಟಿವೆ ಎಂಬ ಮಾಹಿತಿ ರಾಜ್ಯಮಟ್ಟದ ಬುಲೆಟಿನ್‌ನಲ್ಲಿದೆ. ಆದರೆ, ಈ ವರದಿಯನ್ನು ಅಲ್ಲಿನ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಚಾರಿಣಿ ಎಂ.ಎ. ಅಲ್ಲಗಳೆದಿದ್ದು, 'ಏಪ್ರಿಲ್ 7 ರ ನಂತರ ಯಾವುದೇ ಪ್ರಕರಣ ದೃಢಪಟ್ಟಿಲ್ಲ' ಎಂದರು.

ಕೋವಿಡ್: 2,927 ಹೊಸ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಬುಧವಾರ ಹೊಸದಾಗಿ 2,927ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. 32 ಮಂದಿ ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 16,279ಕ್ಕೆ ಏರಿಕೆಯಾಗಿದ್ದು, ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 4,30,65,496 ಕ್ಕೆ ತಲುಪಿದೆ ಒಟ್ಟು ಮೃತರ ಸಂಖ್ಯೆ 5,23,654ಕ್ಕೆ ಏರಿಕೆಯಾಗಿದೆ.

ಕೇರಳ: ಮತ್ತೆ ಮಾಸ್ಕ್ ಕಡ್ಡಾಯ

ತಿರುವನಂತಪುರ (ಪಿಟಿಐ): ದೇಶದ ಹಲವು ಕಡೆ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕೇರಳ ಸರ್ಕಾರ ಮಾಸ್ಕ್ ಕಡ್ಡಾಯ ನಿಯಮವನ್ನು ಬುಧವಾರ ಮತ್ತೆ ಜಾರಿಗೊಳಿಸಿದೆ. ನಿಯಮವನ್ನು ಉಲ್ಲಂಘಿಸಿದವರಿಗೆ ವಿಪತ್ತು ನಿರ್ವಹಣೆ ಕಾಯ್ದೆಯಡಿ ಶಿಕ್ಷೆ ವಿಧಿಸಲಾಗುವುದು ಎಂದು ಪ್ರಕಟಿಸಿದೆ. ದೇಶದಲ್ಲಿನ ಸದ್ಯದ ಕೋವಿಡ್ ಪರಿಸ್ಥಿತಿ ಅವಲೋಕಿಸಿ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಿದೆ.

ಮುಂಬೈ ವರದಿ: ಮಹಾರಾಷ್ಟ್ರದಲ್ಲಿ ಹೆಚ್ಚು ಜನ ಸೇರುವ ಕಡೆ ಮಾಸ್ಕ್ ಕಡ್ಡಾಯ ನಿಯಮವನ್ನು ಮತ್ತೆ ಜಾರಿಗೊಳಿಸುವ ಸಾಧ್ಯತೆ ಇದೆ ಎಂದು ಮಹಾರಾಷ್ಟ್ರ ಆರೋಗ್ಯ ಸಚಿವ ರಾಜೇಶ್ ಟೋಪೆ ಬುಧವಾರ ಹೇಳಿದರು.

'ಮರು ಸಂಯೋಜನೆಗೊಂಡ ತಳಿಗಳು ಪತ್ತೆ'

ನವದೆಹಲಿ (ಪಿಟಿಐ): 'ಅನುವಂಶೀಕವಾಗಿ ಮರುಸಂಯೋಜನೆ ಹೊಂದಿರುವ ಕೊರೊನಾ ವೈರಸ್‌ನ ಕೆಲವೇ ತಳಿಗಳು ದೇಶದಲ್ಲಿ ಪತ್ತೆಯಾಗಿವೆ' ಎಂದು ವೈರಾಣು ಸಂರಚನೆ ವಿಶ್ಲೇಷಣೆ ಸಂಸ್ಥೆ ಇನ್ಸಾಕಾಗ್ ಬುಧವಾರ ಹೇಳಿದೆ.

'ವೈರಸ್‌ನ ಈ ತಳಿಗಳಲ್ಲಿ ವೇಗವಾಗಿ ಪ್ರಸರಣವಾಗುವ ಸಾಮರ್ಥ್ಯ ಕಂಡುಬಂದಿಲ್ಲ. ಈ ತಳಿಗಳ ಸೋಂಕಿನಿಂದಾಗಿ ತೀವ್ರವಾದ ಕಾಯಿಲೆ ಅಥವಾ ಆಸ್ಪತ್ರೆಗೆ ದಾಖಲಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿರುವ ವರದಿಗಳು ಇಲ್ಲ' ಎಂದು ಸಂಸ್ಥೆ ತಿಳಿಸಿದೆ.

ದೇಶದ್ರೋಹ ಕಾಯ್ದೆ: ಪ್ರತಿಕ್ರಿಯೆ ಸಲ್ಲಿಸಲು 'ಸುಪ್ರೀಂ' ಸೂಚನೆ

ನವದೆಹಲಿ: ದೇಶದ್ರೋಹ ಕಾಯ್ದೆಯನ್ನು ರದ್ದುಗೊಳಿಸಲು ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಗಳಿಗೆ ಸಂಬಂಧಿಸಿ ವಾರಾಂತ್ಯದೊಳಗೆ ಪ್ರತಿಕ್ರಿಯೆ ಸಲ್ಲಿಸಲು ಕೇಂದ್ರ ಸರ್ಕಾರಕ್ಕೆ ಅವಕಾಶ ನೀಡಿ ಸುಪ್ರೀಂಕೋರ್ಟ್ ಬುಧವಾರ ಆದೇಶಿಸಿತು.

ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ನ್ಯಾಯಪೀಠವು ಅರ್ಜಿಗಳ ವಿಚಾರಣೆ ನಡೆಸಿತು.

'ಈ ವಿಷಯವಾಗಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ಒಂದು ವರ್ಷಕ್ಕೂ ಹೆಚ್ಚು ಅವಧಿಯಿಂದ ಬಾಕಿ ಉಳಿದಿದೆ. ಹೀಗಾಗಿ, ವಿಚಾರಣೆಯನ್ನು ಮತ್ತೆ ಮುಂದೂಡಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು.

ಇದಕ್ಕೆ ಪ್ರತಿಕ್ರಿಯಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಕೇಂದ್ರದ ಉತ್ತರ ಬಹುತೇಕ ಸಿದ್ಧವಿದೆ. ಅದನ್ನು ಅಂತಿಮಗೊಳಿಸಲು ಇನ್ನೆರಡು ದಿನ ಅವಕಾಶ ನೀಡಬೇಕು' ಎಂದು ಮನವಿ ಮಾಡಿದರು.

ಸಂಕ್ಷಿಪ್ತ ಸುದ್ದಿ

ಮೇ 2ರಿಂದ 4ರವರೆಗೆ ಮೋದಿ ವಿದೇಶ ಪ್ರವಾಸ

ನವದೆಹಲಿ (ಪಿಟಿಐ): ವಿವಿಧ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಬಾಂಧವ್ಯವನ್ನು ಮತ್ತಷ್ಟು ವೃದ್ಧಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಮೇ 2ರಿಂದ 4ರವರೆಗೆ ಜರ್ಮನಿ, ಡೆನ್ಮಾರ್ಕ್ ಮತ್ತು ಫ್ರಾನ್ಸ್ ದೇಶಗಳಿಗೆ ಮೂರು ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ.

ಇದು, ಈ ವರ್ಷದ ಅವರ ಮೊದಲ ವಿದೇಶ ಭೇಟಿಯಾಗಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಬುಧವಾರ ಪ್ರಕಟಿಸಿದೆ.

ಮೋದಿ ಅವರು ಮೊದಲು ಜರ್ಮನಿಗೆ ತೆರಳಿ ನಂತರ ಡೆನ್ಮಾರ್ಕ್‌ಗೆ ಭೇಟಿ ನೀಡಲಿದ್ದಾರೆ. ಮೇ 4ರಂದು ಹಿಂದಿರುಗುವಾಗ ಅವರು ಪ್ಯಾರಿಸ್‌ನಲ್ಲಿ ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರನ್ನು ಭೇಟಿಯಾಗಲಿದ್ದಾರೆ. ಮ್ಯಾಕ್ರನ್ ಅವರು ಈ ಹುದ್ದೆಗೆ ಇತ್ತೀಚೆಗಷ್ಟೇ ಪುನರಾಯ್ಕೆಯಾಗಿದ್ದಾರೆ.

ಪ್ರಧಾನಿಯವರು ಬರ್ಲಿನ್‌ನಲ್ಲಿ ಜರ್ಮನಿಯ ಫೆಡರಲ್ ಚಾನ್ಸಲರ್ ಓಲಾಫ್ ಸ್ಕೋಲ್ಜ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ ಎಂದು ಸಚಿವಾಲಯ ತಿಳಿಸಿದೆ.

ಕಾನ್ ಚಿತ್ರೋತ್ಸವ: ತೀರ್ಪುಗಾರರಾಗಿ ದೀಪಿಕಾ

ಮುಂಬೈ (ಪಿಟಿಐ): ಬಾಲಿವುಡ್ ನಟಿ ದೀಪಿಕಾ ಪಡುಕೋಣೆ ಅವರು ಈ ಬಾರಿಯ ಕಾನ್ ಚಲನಚಿತ್ರೋತ್ಸವದಲ್ಲಿ ತೀರ್ಪುಗಾರರಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಸಂಘಟಕರು ತಿಳಿಸಿದ್ದಾರೆ.

ಮೇ 17ರಿಂದ 28ರವರೆಗೆ 75ನೇ ಕಾನ್ ಚಲನಚಿತ್ರೋತ್ಸವ ನಡೆಯಲಿದೆ ಎಂದು ಟ್ವಿಟರ್ ಮೂಲಕ ಪ್ರಕಟಿಸಲಾಗಿದ್ದು, ಫ್ರೆಂಚ್ ನಟ ವಿನ್ಸೆಂಟ್ ಲಿಂಡನ್ ಅವರು ಮುಖ್ಯ ತೀರ್ಪುಗಾರರಾಗಿರುತ್ತಾರೆ.

21 ಸಿನಿಮಾಗಳು ಪ್ರಶಸ್ತಿ ಸುತ್ತಿನಲ್ಲಿದ್ದು, ದೀಪಿಕಾ ಅವರು ಎಂಟು ಮಂದಿ ತೀರ್ಪುಗಾರರ ತಂಡದಲ್ಲಿರುತ್ತಾರೆ. ಮೇ 28ರಂದು ಸಮಾರೋಪ ಸಮಾರಂಭ ಮತ್ತು ಪ್ರಶಸ್ತಿ ಘೋಷಣೆ ಕಾರ್ಯಕ್ರಮ ಇರಲಿದೆ.

ಎನ್‌ಸಿಎಸ್‌ಸಿ ಅಧ್ಯಕ್ಷರಾಗಿ ವಿಜಯ್ ಸಂಪ್ಲಾ

ನವದೆಹಲಿ (ಪಿಟಿಐ): ಬಿಜೆಪಿ ನಾಯಕ ಮತ್ತು ಮಾಜಿ ಕೇಂದ್ರ ಸಚಿವ ವಿಜಯ್ ಸಂಪ್ಲಾ ಅವರು ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗದ (ಎನ್‌ಸಿಎಸ್‌ಸಿ) ಅಧ್ಯಕ್ಷರಾಗಿ ಎರಡನೇ ಬಾರಿ ಆಯ್ಕೆಯಾಗಿದ್ದಾರೆ.

ಈ ಸಂಬಂಧ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಬುಧವಾರ ಅಧಿಕೃತ ಆದೇಶ ಹೊರಡಿಸಿದ್ದಾರೆ.

ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕಾಗಿ ಸಂಪ್ಲಾ ಅವರು ಎನ್‌ಸಿಎಸ್‌ಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಕರ್ನಾಟಕ ಸರ್ಕಾರ

ಉಪನಿರ್ದೇಶಕರ ಕಾರ್ಯಾಲಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಚಿತ್ರದುರ್ಗ.

ಸಂಖ್ಯೆ:ಗಭೂಇ/ಉನಿಚಿ/ಕಗಗು.ಶಾ/31ಎಫ್/ಟೆಂ.ಪ್ರ/2022-23/08
ದಿನಾಂಕ: 22.04.2022

ತಿದ್ದುಪಡಿ ಪ್ರಕಟಣೆ

ದಿನಾಂಕ: 23.04.2022 ರಂದು ಪ್ರಜಾವಾಣಿ ಪತ್ರಿಕೆ ಹಾಗೂ ಇತರೆ ಪತ್ರಿಕೆಗಳಲ್ಲಿ ಇ-ಟೆಂಡರ್ ಕಂ ಹರಾಜು ಆಹ್ವಾನಿಸುವ ಪ್ರಕಟಣೆಯು ಪ್ರಕಟಿಸಲಾಗಿದ್ದು, ಸದರಿ ಪ್ರಕಟಣೆಯಲ್ಲಿ ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಚಿತ್ರದುರ್ಗ ಇವರ ಬದಲಾಗಿ " ಉಪ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಎಂದು ಓದಿಕೊಳ್ಳತಕ್ಕದ್ದು.

ಸಹಿ/- ಉಪ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ

DIPR/CTA/MCA/78/2022-23

ಪುರಸಭೆ ಕಾರ್ಯಾಲಯ ನರಗುಂದ

ಜಿ:ಗದಗ, ಕರ್ನಾಟಕ -582207, ದೂ/ಫ್ಯಾಕ್ಸ್:08377-244227/244226
Email: itstaff_ulb_naragund@yahoo.co.in

ಕ್ರಸಂ:ಪುಸನ/ಟೆಂಡರ/ಬೆ.ಉಪಹಾರ/2022-23. ದಿನಾಂಕ: 27-04-2022

ಟೆಂಡರ ಪ್ರಕಟಣೆ

ನರಗುಂದ ಪುರಸಭೆ ಸನ್ 2022-23 ನೇ ಸಾಲಿಗೆ ಪುರಸಭೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಬೆಳಗಿನ ಉಪಹಾರ ಪೂರೈಸಲು ಟೆಂಡರ್ ಕರೆಯಲಾಗಿದ್ದು, ನಿಗದಿತ ದಸ್ತಾವೇಜ್‌ಗಳಲ್ಲಿ ಇಚ್ಛೆಯುಳ್ಳ ಹೊಟೆಲ್ ಮಾಲೀಕರು/ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರ ಮೂಲಕ ಈ ಕೆಳಕಾಣಿಸಿದ ನಿರ್ದಿಷ್ಟತೆಯನ್ವಯ ಟೆಂಡರ್‌ನ್ನು ಅಹ್ವಾನಿಸಲಾಗಿದೆ

ಕ್ರ.ಸಂ	ವಿವರ	ಅಂದಾಜು ಮೊತ್ತ	ಇಎಂಡಿ ಮೊತ್ತ	ಟೆಂಡರ್ ಫಾರ್ಮ ಬೆಲೆ
1	ಪೌರಕಾರ್ಮಿಕರಿಗೆ ಬೆಳಗಿನ ಉಪಹಾರ ಪೂರೈಸುವುದು	4.85	12250/-	1000/-

ಷರಾ:- ಇಎಂಡಿ ಮೊತ್ತವನ್ನು ಮುಖ್ಯಾಧಿಕಾರಿಗಳು ಪುರಸಭೆ ನರಗುಂದ ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಡಿ.ಡಿ ಪಡೆದು ಸಲ್ಲಿಸುವುದು. ಹಾಗೂ ಟೆಂಡರ್ ಫಾರ್ಮ ಫೀ ಮೊತ್ತವನ್ನು ಪುರಸಭೆಯಲ್ಲಿ ಇ-ಸ್ವೀಕೃತಿ ಚಲನ್ ಪಡೆದು ಸಲ್ಲಿಸುವುದು.

1. ಟೆಂಡರ್ ಫಾರ್ಮ ವಿತರಿಸುವ ದಿನಾಂಕ: 28-04-2022 ರಿಂದ 12-05-2022 4:00 ಒಳಗಾಗಿ
2. ಟೆಂಡರ್ ತೆರೆಯುವ ದಿನಾಂಕ: 13-05-2022 ಬೆಳಿಗ್ಗೆ 11:00 ಗಂಟೆಗೆ

ಸಹಿ/- ಮುಖ್ಯಾಧಿಕಾರಿ ಪುರಸಭೆ ನರಗುಂದ | ಸಹಿ/- ಅಧ್ಯಕ್ಷರು ಪುರಸಭೆ ನರಗುಂದ

ವಾ.ಸಾ.ಇ/ಗದಗ/48/2022-23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ನಂ. 5/6, 5ನೇ ಮಹಡಿ, ಜಲಭವನ, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು - 560 029, ದೂ: 080-26539004/41106504
ಇ-ಮೇಲ್: cekwbbng@gmail.com ವೆಬ್‌ಸೈಟ್: https://eproc.karnataka.gov.in

ಸಂಖ್ಯೆ: ಕಜಮಂ/ಮು.ಅ(ಬೆ)ತಾಂತ್ರಿಕ/2ND Stg HSD-UGD Bal Works/132/2022-23 ದಿನಾಂಕ : 27-04-2022

ತಿದ್ದುಪಡಿ

ಕಾಮಾಗಾರಿಯ ಹೆಸರು ಮತ್ತು ವಿವರ : ಹೊಸದುರ್ಗ ಪಟ್ಟಣದ 2ನೇ ಹಂತದ ಒಳಚರಂಡಿ ಯೋಜನೆಯ ಉಳಿತಾಯದ ಮೊತ್ತದಡಿ ಒಳಚರಂಡಿ ಗೃಹ ಸಂಪರ್ಕ ನೀಡುವ, ಹಾಲಿ ಇರುವ ಒಳಚರಂಡಿ ಮಾರ್ಗಗಳ ಪುನಶ್ಚೇತನಗೊಳಿಸುವ ಹಾಗೂ ಅವಶ್ಯಕವಿರುವ ಕಡೆ ಹೊಸ ಕೊಳವೆ, ಆಳಗುಂಡಿ ನಿರ್ಮಿಸಿ ಹಾಗೂ ಚಾಲನೆಗೊಳಿಸುವುದು (ಇಡುಗಂಟು).

ಟೆಂಡರ್ ಸಂಖ್ಯೆ:. No.KWB/TEC/CE(B)/2nd Stg UGD Bal Works/2498/2021-22 Dt: 25-03-2022 ಮತ್ತು ಕೆಲಸದ ಇಂಡೆಂಟ್ ಸಂಖ್ಯೆ : KUWSDB/2021-22/WS/WORK_INDENT3127

ಪರಿಷ್ಕೃತ ವೇಳಾ ಪಟ್ಟಿ: -

1) ಇ-ಪ್ರೋಕ್ಯುರ್ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : 07-05-2022 ರಂದು 17.30 ಗಂಟೆಯವರೆಗೆ. 2) ಇ-ಪ್ರೋಕ್ಯುರ್ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : 11-05-2022 ರಂದು 11.00 ಗಂಟೆಯ ನಂತರ.

ಹೊರಡಿಸಲಾದ ಅಧಿಸೂಚನೆಯ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಸಹಿ/- ಮುಖ್ಯ ಅಭಿಯಂತರರು, ಕನನಿಸ ಮತ್ತು ಒಚ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/297/ಆಕಾರ್/22-23

ಕೋವಿಡ್-19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ಸ.ನೀ. ಮತ್ತು ಅಂ.ಅ ವಿಭಾಗ, ಮಂಡ್ಯ

ಟೆಂಡರ್ ಅಧಿಸೂಚನೆ ಸಂಖ್ಯೆ : 01/2022-23, ದಿ:22.04.2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ-571401 ಇವರು ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು-4, ರ ಪ್ರಕಾರ "ಇ"-ಪ್ರಕ್ಯೂರ್‌ಮೆಂಟ್‌ನಲ್ಲಿ ಐಟಂವಾರು ಟೆಂಡರ್ ಅನ್ನು ಅಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ 4702-ಕೆರೆಗಳ ಅಭಿವೃದ್ಧಿ ಪ್ರಧಾನ ಕಾಮಗಾರಿಗಳ ಅಡಿಯಲ್ಲಿ 06 ಕಾಮಗಾರಿಗಳು, 4702- ಅಣೆಕಟ್ಟು ಮತ್ತು ಪಿಕಪ್‌ಗಳ ಅಡಿಯಲ್ಲಿ 02 ಕಾಮಗಾರಿಗಳು ಹಾಗೂ 4702- ಏತ ನೀರಾವರಿ ಯೋಜನೆ ಅಡಿಯಲ್ಲಿ **03 ಕಾಮಗಾರಿಗಳಿದ್ದು ಟೆಂಡರಿಗಿಟ್ಟ ಮೊತ್ತ ಕನಿಷ್ಠ ರೂ. 350.00 ಲಕ್ಷಗಳಿಂದ ಗರಿಷ್ಠ ರೂ. 1000.00 ಲಕ್ಷಗಳಾಗಿರುತ್ತದೆ.** ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಈ ಕಛೇರಿ ವೇಳೆಯಲ್ಲಿ ದಿನಾಂಕ : **02.05.2022** ರವರಗೆ ಪಡೆಯಬಹುದಾಗಿದೆ. **ದಿನಾಂಕ:04.05.2022ರ 17-00 ಗಂಟೆವರೆಗೆ** ಟೆಂಡರ್‌ನ ನಿಗದಿತ ನಮೂನೆಗಳನ್ನು "www.eproc.karnataka.gov.in" ನಲ್ಲಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ.ಯೊಂದಿಗೆ ಕೆಳಕಂಡ ಕಾಲಂಗಳನ್ವಯ ಬಿಡ್ಡ್‌ನ್ನು ಅಪ್ ಲೋಡ್ ಮಾಡಬಹುದಾಗಿದೆ. ಈ ಟೆಂಡರ್‌ನ ತಾಂತ್ರಿಕ ಬಿಡ್ಡ್‌ನ್ನು **ದಿನಾಂಕ : 06.05.2022 ರಂದು ಬೆಳಿಗ್ಗೆ : 11.00 ಗಂಟೆಗೆ** ತೆರೆಯಲಾಗುವುದು. ಈ ಟೆಂಡರ್‌ನ ಆರ್ಥಿಕ ಬಿಡ್ಡ್‌ನ್ನು ದಿನಾಂಕ : **09.05.2022 ರಂದು ಬೆಳಿಗ್ಗೆ : 11.00 ಗಂಟೆಗೆ** ತೆರೆಯಲಾಗುವುದು. ಟೆಂಡರ್ ದಾಖಲಾತಿಗಳನ್ನು ವೆಬ್ ಸೈಟ್ "www.eproc.karnataka. gov.in" ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ : ಸದರಿ ಟೆಂಡರ್‌ನ ಕಾಮಗಾರಿಯನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ ಇವರಿಗೆ ಕಾಯ್ದಿರಿಸಲಾಗಿದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು "ಇ" - ಪ್ರಕಟಣೆಯಲ್ಲಿಯೇ ಪ್ರಕಟಿಸಲಾಗುವುದು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಸ.ನೀ.ಮತ್ತು ಅಂ.ಅ.ವಿಭಾಗ, ಮಂಡ್ಯ

ವಾಸಾಸಂಇ/ಸನಿ-ಮಂಡ್ಯ/ಎಂಸಿ&ಎ/35/2022-23

ಪ್ರಧಾನ ಇಂಜಿನಿಯರ್ ರವರ ಕಛೇರಿ, ಪಿ.ಆರ್.ಎ.ಎಂ.ಸಿ.,
4ನೇ ಮಹಡಿ, ಪಿ.ಡಬ್ಲ್ಯೂ.ಡಿ., ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು-560001

ಸಂಖ್ಯೆ. ಲೋಇ/03/ಪಿಆರ್‌ಎಎಂಸಿ/2022-23 ದಿನಾಂಕ : 27.04.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಉತ್ತರ ಕನ್ನಡ ಜಿಲ್ಲೆಯ 02 ಮತ್ತು ಹಾಸನ ಜಿಲ್ಲೆಯ 01 ರಸ್ತೆ ಸುರಕ್ಷತಾ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ., ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್‌ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ-ಪ್ರೊಕ್‌ನಿಂದ (www.eproc.karnataka.gov.in) ದಿನಾಂಕ : 27.04.2022 ಸಂಜೆ 04:30 ರಿಂದ ಪಡೆಯಬಹುದಾಗಿರುತ್ತದೆ.

ವಾಸಾಸಂಇ/ವಾ.ಪ್ರ/295/ಶ್ರೇಷ್ಠ/2022-23 ಸಹಿ/- ಕಾರ್ಯಪಾಲಕ ಇಂಜಿನಿಯರ್, ಪಿಆರ್‌ಎಎಂಸಿ

ಕೋವಿಡ್-19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.

Tender Notification

The Karnataka State Cricket Association, M.Chinnaswamy Stadium, Cubbon Road, Bangalore, invites sealed tenders from GST Compliant custom made furniture manufacturers for the supply of designer furniture for Alur cricket ground.

The details of issue/submission of tender document are as follows :-

1. Name of work :- Supply of designer furniture for Alur Cricket ground
2. Estimated Cost :- Rs.1.13 Crores
3. Earnest Money Deposit :- Rs.1,13,000/- should be enclosed along with the tender document
4. Cost of tender form :- Rs.15,000/- plus GST (Non Refundable)
5. Date of issue of tender form :- 28/4/2022 to 12/5/2022
6. Pre bid meeting :- 14/5/2022
7. Last date of submission of filled tender form :- 19/5/2022 before 4.30 p.m
8. Opening of tender :- On the same day between 5.00 p.m to 5.30 p.m In case there is a delay, the date and time Would be informed to the bidders
9. Completion of work by :- 2(Two) months from the date of work order

Tender documents may be obtained from the Office of the KSCA, by submitting a requisition in the company's letter head between 11.00 a.m to 5.00 p.m on any working days. For any clarification please contact Mr. H.A.Venkateshprasad, AGM Civil Engineering Dept, Mobile No. 9945604515/8150900022

Hon. Secretary KSCA

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂ: ಕಾಸವಮಂ/ತಾ.ಶಾ./ಸ.ಇ/ಟೆಂಡರ್-07/2022/2512 ದಿ: 22.04.2022

ಉಲ್ಲೇಖಿತ ಪತ್ರದನ್ವಯ ಆಹ್ವಾನಿಸಲಾದಂತೆ ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲೂಕು ಬಿ.ಮೂಡ ಗ್ರಾಮದ ಜಕ್ರಿಬೆಟ್ಟು ಎಂಬಲ್ಲಿ ನೇತ್ರಾವತಿ ನದಿಗೆ ಅಡ್ಡಲಾಗಿ ಸೇತುವೆ ಸಹಿತ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂ - 4ನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಅರ್ಹ ಗುತ್ತಿಗೆದಾರರಿಂದ ಟರ್ನ್ ಕೀ ಆಧಾರದ ಮೇಲೆ ಕೈಗೊಳ್ಳಲು (ಕಾಮಗಾರಿ ಸ್ಥಳವನ್ನು ಸರ್ವೆ ಮಾಡುವುದು, ಸೇತುವೆ ಸಹಿತ ಕಿಂಡಿಅಣೆಕಟ್ಟು ನಿರ್ಮಾಣ, ಗೇಟ್‌ಗಳನ್ನು ಅಳವಡಿಸುವುದು, ರಸ್ತೆ ನಿರ್ಮಾಣ ಮಾಡುವುದು, ಸಂರಕ್ಷಣಾ ಕಾಮಗಾರಿ, ಕಂಟ್ರೋಲ್ ರೂಮ್ ಹಾಗೂ ಸೆಕ್ಯೂರಿಟಿ ಕೊಠಡಿಗಳ ನಿರ್ಮಾಣ, ಸಣ್ಣ ನೀರಾವರಿ ಇಲಾಖೆಯ ವಿಭಾಗ ಮತ್ತು ಉಪವಿಭಾಗ ಕಛೇರಿ ಕಟ್ಟಡ ನಿರ್ಮಾಣ ಮಾಡುವುದು ಹಾಗೂ ಇತರೆ ಕಾಮಗಾರಿಗಳನ್ನು ಸೇರಿದಂತೆ ಸಂಬಂಧಪಟ್ಟ ಇಲಾಖೆಗಳಿಂದ ಶಾಸನಬದ್ಧ ನಿರಾಪೇಕ್ಷಣಾ (ಎನ್.ಒ.ಸಿ.) ಪತ್ರಗಳನ್ನು ಪಡೆಯುವುದು) ಇತ್ಯಾದಿ ಇ-ಪೋರ್ಟಲ್‌ನಲ್ಲಿ ವಿವರಿಸಿರುವಂತೆ ಅಂತರ್ಜಾಲದ ವೆಬ್‌ಸೈಟ್ https://eproc.karnataka.gov.in ನಲ್ಲಿ ಅರ್ಹ ಗುತ್ತಿಗೆದಾರರಿಂದ ದಿ: 07.05.2022 ರ ಸಂಜೆ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್‌ಮೆಂಟ್‌ನ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು. (ದೂರವಾಣಿ ಸಂ: 0824-2440720)

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

DIPR / MNG / 97 / MPL / 22-23

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
#03, 4ನೇ ಮಹಡಿ, ಎಂಬಸಿ ಐಕಾನ್ ಕಟ್ಟಡ, ಇಂಫ್ಯಾಂಟ್ರಿರಸ್ತೆ, ಬೆಂಗಳೂರು-560001
ದೂರವಾಣಿ : 080-22352828, ಫ್ಯಾಕ್ಸ್ : 080-22352626

ಸಂಖ್ಯೆ: ಕೆಟಿಐಎಲ್/ಟೆಂ-04/01/2020-21 ದಿನಾಂಕ: 25.04.2022

ಟೆಂಡರ್ ಆಹ್ವಾನ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ, ಇಂಜಿನಿಯರಿಂಗ್ ಘಟಕ ಬೆಂಗಳೂರುರವರಿಂದ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕಾಮಗಾರಿಗಳ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರ ಅನ್ವಯ ಈ ಕೆಳಸಹಿದಾರರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವವರು **ದಿನಾಂಕ: 17.05.2022ರ ಸಂಜೆ 4.00 ಘಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ.

1) **ಕಾಮಗಾರಿಯ ಹೆಸರು:** ಮೈಸೂರು ತಾಲ್ಲೂಕು ಮಂಡಂನಹಳ್ಳಿ ಗ್ರಾಮ ಮಹದೇಶ್ವರ ದೇವಸ್ಥಾನದ ಬಳಿ ಸಿಸಿ ರಸ್ತೆ ನಿರ್ಮಾಣ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ. **ಅಂದಾಜು ಮೊತ್ತ: ರೂ.100.00 ಲಕ್ಷಗಳು.** ಟೆಂಡರ್ ಅಧಿಸೂಚನೆ ಸಂಖ್ಯೆ: **KTIL/MD/EE/AE-1/BID/TENDER/11/ 2_INDENT12. ವೇಳಾಪಟ್ಟಿ:** 1) ಬಿಡ್ ಅನ್ನು ಸಲ್ಲಿಸಲು ಕೊನೆಯ ದಿನಾಂಕ: **19.05.2022, 16.00 ಗಂಟೆಯವರೆಗೆ.** 2) ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ: **20.05.2022, 17.00 ಗಂಟೆಗೆ.** 3) ಆರ್ಥಿಕ ಬಿಡ್ ಅನ್ನು ತೆರೆಯುವ ದಿನಾಂಕ: **23.05.2022, 11.00 ಗಂಟೆಗೆ.**

2) **ಕಾಮಗಾರಿಯ ಹೆಸರು:** ಮೈಸೂರು ತಾಲ್ಲೂಕು, ಕೆ.ಆರ್.ಎಸ್ ಹಿನ್ನೀರಿನಲ್ಲಿರುವ ಮೀನಾಕ್ಷಿ ಪ್ರವಾಸಿ ತಾಣದ ಅಭಿವೃದ್ಧಿ ಕಾಮಗಾರಿ. **ಅಂದಾಜು ಮೊತ್ತ: ರೂ.50.00 ಲಕ್ಷಗಳು.** ಟೆಂಡರ್ ಅಧಿಸೂಚನೆ ಸಂಖ್ಯೆ: **KTIL/MD/EE/AE-1/BID/ TENDER/12/2022-23. ವೇಳಾಪಟ್ಟಿ:** 1) ಬಿಡ್ ಅನ್ನು ಸಲ್ಲಿಸಲು ಕೊನೆಯ ದಿನಾಂಕ: **21.05.2022, 17.00 ಗಂಟೆಯವರೆಗೆ.** 2) ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ: **23.05.2022, 12.00 ಗಂಟೆಗೆ.** 3) ಆರ್ಥಿಕ ಬಿಡ್ ಅನ್ನು ತೆರೆಯುವ ದಿನಾಂಕ: **26.05.2022, 11.00 ಗಂಟೆಗೆ.**

3) **ಕಾಮಗಾರಿಯ ಹೆಸರು:** ಮೈಸೂರು ತಾಲ್ಲೂಕು ಬೋಗಾದಿ ಗ್ರಾಮ ಬಸವೇಶ್ವರ ದೇವಸ್ಥಾನದ ಬಳಿ ಮೂಲಭೂತ ಸೌಕರ್ಯ. **ಅಂದಾಜು ಮೊತ್ತ: ರೂ.50.00 ಲಕ್ಷಗಳು.** ಟೆಂಡರ್ ಅಧಿಸೂಚನೆ ಸಂಖ್ಯೆ: **KTIL/MD/EE/AE-1/BID/TENDER/13/2022-23. ವೇಳಾಪಟ್ಟಿ:** 1) ಬಿಡ್ ಅನ್ನು ಸಲ್ಲಿಸಲು ಕೊನೆಯ ದಿನಾಂಕ: **21.05.2022, 17.00 ಗಂಟೆಯವರೆಗೆ.** 2) ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ: **23.05.2022, 12.00 ಗಂಟೆಗೆ.** 3) ಆರ್ಥಿಕ ಬಿಡ್ ಅನ್ನು ತೆರೆಯುವ ದಿನಾಂಕ: **26.05.2022, 11.00 ಗಂಟೆಗೆ.**

ಹೆಚ್ಚಿನ ಮಾಹಿತಿಗಾಗಿ https://www.eproc.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು, ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು https://www.eproc.karnataka.gov.in ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ನೊಂದಾಯಿಸುವ ಅಗತ್ಯವಿದೆ.

ಟಿಪ್ಪಣಿ: 1) ಈ ಕೆಳಗೆ ಸಹಿಮಾಡಿದವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವಿಕೆ/ಸಂಪೂರ್ಣ ರದ್ದುಗೊಳಿಸುವ/ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಟೆಂಡರ್‌ಆಹ್ವಾನ ಪ್ರಾಧಿಕಾರಿ ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ.

DIPR/CP/318/Yakshi/2022-23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(5ಇ):2022-23:ಜೆಇ-3 ದಿನಾಂಕ: 27.04.2022

ಅಲ್ಪಾವಧಿ ಟೆಂಡರ್ ಪ್ರಕಟಣೆ / 2ನೇ ಕರೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸಾರ್ವಜನಿಕ ಇ-ಪ್ರೊಕ್ಯುರ್‌ಮೆಂಟ್ ಮೂಲಕ ಇಂಡೆಂಟ್ ನಂ. 118521 ಲೆಕ್ಕಶೀರ್ಷಿಕೆ:- 5054 ಜಿಲ್ಲಾ ಮತ್ತು ಇತರ ರಸ್ತೆಗಳು - ಸುಧಾರಣೆ (ಅಂದಾಜು ಮೊತ್ತ ರೂ.51.00 ಲಕ್ಷ) ಈ ಕಾಮಗಾರಿಗೆ 2ನೇ ಕರೆಯಾಗಿ ಟೆಂಡರ್ ಕರೆಯಲಾಗಿದ್ದು, ಇ-ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 05.05.2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.

ಈ ಪ್ರಕಟಣೆಗೆ ಸಂಬಂಧಿಸಿದಂತೆ ಮುಂದಿನ ವಿಸ್ತರಣೆ / ಕರೆ / ತಿದ್ದುಪಡಿ / ಟೆಂಡರು ಮುಂದೂಡಿಕೆ ಪ್ರಕಟಣೆಯನ್ನು ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ನೋಡಿಕೊಳ್ಳುವುದು. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ https://eproc.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

DIPR / MNG / 93/ MPL / 22-23 ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಜಲಭವನ, ನಂ.5 & 6, ಬಿ.ಟಿ.ಎಂ.ಬಡಾವಣೆ, 1ನೇ ಹಂತ, 1ನೇ ಘಟ್ಟ, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು - 560 029.
ದೂರವಾಣಿ:: 080-41106532 ಇಮೇಲ್: caokwb@gmail.com

No: KWB/CAO/AS-2/AA-3 /34/2022-23 ದಿನಾಂಕ: 26.04.2022

ಟೆಂಡರ್ ಅಧಿಸೂಚನೆ (2ನೇ ಕರೆ)

ಮಂಡಳಿಯು 2021-22ನೇ ಸಾಲಿನ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ರೂ.200.00 ಕೋಟಿಗಳ ಸಾಲವನ್ನು ಐ.ಇ.ಬಿ.ಆರ್.(I.E.B.R) ಪ್ರವರ್ಗದಡಿಯಲ್ಲಿ ಸರ್ಕಾರಿ ಖಾತರಿಯೊಂದಿಗೆ ತೆಗೆದುಕೊಳ್ಳಲು ಉದ್ದೇಶಿಸಿದೆ. ಆಸಕ್ತಿಯುಳ್ಳ Public Sector Bank/ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ / ಹುಡ್ಕೋ / ಹಣಕಾಸು ಸಂಸ್ಥೆಗಳು ತಮ್ಮ ಕಡಿಮೆ ಬಡ್ಡಿ ದರದ ಪ್ರಸ್ತಾವನೆಯನ್ನು ಬಿಡ್ ಡಾಕ್ಯುಮೆಂಟ್‌ನಲ್ಲಿನ ನಿಗಧಿಪಡಿಸಿರುವ ಷರತ್ತು/ ನಿಬಂಧನೆಗಳನ್ನು ಪರಿಗಣಿಸಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://eproc.karnataka.gov.in/) ನಲ್ಲಿ ನಮೂದಿಸಲು ಕೋರಿದೆ. ಟೆಂಡರ್‌ಗೆ ನಿಗಧಿಪಡಿಸಿದ ದಿನಾಂಕ ಮತ್ತು ಘಳಿಗೆ ಈ ಕೆಳಕಂಡಂತಿದೆ:

ಕ್ರ.ಸಂ.	ವಿವರಗಳು	ದಿನಾಂಕ
1.	ಟೆಂಡರ್ ಬಗ್ಗೆ ಪ್ರಶ್ನೆ/ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಮತ್ತು ಘಳಿಗೆ	ದಿನಾಂಕ: 11.05.2022 ರಂದು 11:00 ಗಂಟೆಗೆ
2.	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಘಳಿಗೆ:	ದಿನಾಂಕ: 12.05.2022 ರಂದು 17:30 ಗಂಟೆಗೆ
3.	ಬಿಡ್ ತೆರೆಯುವ ದಿನಾಂಕ ಮತ್ತು ಘಳಿಗೆ:	ದಿನಾಂಕ: 16.05.2022 ರಂದು 11:00 ಗಂಟೆಗೆ

ಹೆಚ್ಚಿನ ವಿವರಗಳನ್ನು ಮೇಲೆ ಸೂಚಿಸಿರುವ ಕಛೇರಿಯಿಂದ ಮತ್ತು ವೆಬ್‌ಸೈಟ್ www.eproc-karnataka.gov.in ನಿಂದ ಪಡೆದುಕೊಳ್ಳತಕ್ಕದ್ದು.

ಸಹಿ/- ಮುಖ್ಯ ಲೆಕ್ಕಾಧಿಕಾರಿ, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು

DIPR/CP/KAVITA/292/2022-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್ ಕಛೇರಿ, ಯೋಜನಾ ವಿಭಾಗ, ದಾವಣಗೆರೆ

ಡೋರ್.ನಂ.:1968/71, 1ನೇ ಮುಖ್ಯ ರಸ್ತೆ, ಎಸ್.ಎಸ್.ಬಡಾವಣೆ, ಬಿ ಬ್ಲಾಕ್, ದಾವಣಗೆರೆ-577004
ದೂರವಾಣಿ ಸಂಖ್ಯೆ: 08192-296576, Email ID: kn-dav-1@pmgsy.nic.in

ಸಂ:ಕಾಇಂ/ಯೋವಿ/ದಾ/ಸ.ಇ-2/ಟೆಂ/2022-23/59 ದಿನಾಂಕ: 26-04-2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ದಾವಣಗೆರೆ ಇವರು ದಾವಣಗೆರೆ ಜಿಲ್ಲೆಯ ವಿವಿಧ ವಿಧಾನ ಸಭಾ ಕ್ಷೇತ್ರದಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಅಭಿವೃದ್ಧಿ ಪಡಿಸಿ 5 ವರ್ಷಗಳ ನಿರ್ವಹಣೆ ಪೂರೈಸಿರುವ ಗ್ರಾಮೀಣ ರಸ್ತೆಯ ಅವರ್ತಕ ನಿರ್ವಹಣೆಗಾಗಿ 2020-2021ನೇ ಸಾಲಿನ ಆರ್ಥಿಕ ಪ್ರೋತ್ಸಾಹಧನ ಅನುದಾನದಡಿ (ಪಿ.ಎಂ.ಜಿ.ಎಸ್.ವೈ. ಮಾನದಂಡಗಳನ್ನು ಅನುಸರಿಸಿ) ಬರುವ ಕಾಮಗಾರಿಗೆ ಐಟಂ ರೇಟ್ ದರಗಳಂತೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಏಕಲಕೋಟೆ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ.

ಕ್ರ. ಸಂ.	ಯೋಜನೆಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	EMD Amount	ಕಾಮಗಾರಿ ಪೂರ್ಣಗೊಳಿಸುವ ಅವಧಿ (ಮಳೆಗಾಲ ಸೇರಿ)
1	2020-21ನೇ ಸಾಲಿನ ಪಿ.ಎಂ.ಜಿ.ಎಸ್.ವೈ. ಆರ್ಥಿಕ ಪ್ರೋತ್ಸಾಹಧನ ಅನುದಾನದಡಿಯ ಕಾಮಗಾರಿಗಳು. ಲೆಕ್ಕ ಶೀರ್ಷಿಕೆ: 5054-03-337-0-71-172 ಇಂಡೆಂಟ್ ಸಂಖ್ಯೆ: 5420	37.78	ಪ್ಯಾಕೇಜ್‌ವಾರು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಮಾಹಿತಿ ಪಡೆಯುವುದು.	6 ತಿಂಗಳು

ಟೆಂಡರ್ ಪ್ರಕ್ರಿಯೆಯ ವಿವರಗಳು ಕೆಳಕಂಡಂತಿವೆ: 1) ಬಿಡ್‌ಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಕೊನೆಯ **ದಿನಾಂಕ:10-05-2022 ಸಂಜೆ 16.30** ಗಂಟೆಯವರೆಗೆ. **2)** ಬಿಡ್‌ಗಳನ್ನು ತೆರೆಯುವ **ದಿನಾಂಕ: 11-05-2022 ಸಂಜೆ 17.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಇಂಜಿನೀಯರ್ ಯೋಜನಾ ವಿಭಾಗ, ದಾವಣಗೆರೆ ಇವರನ್ನು ಸಂಪರ್ಕಿಸಬಹುದು. ದೂ.ಸಂಖ್ಯೆ: 08192-296576.

E-mail ID: kn-dav-1@pmgsy.nic.in, https://www.eproc.karnataka.gov.in

ವಾಸಾಸಂಇ/ಎಸ್‌ಎಸ್‌ಸಿ/64/2022-23 ಸಹಿ/- ಕಾರ್ಯಪಾಲಕ ಇಂಜಿನಿಯರ್ ಯೋಜನಾ ವಿಭಾಗ, ದಾವಣಗೆರೆ

ಸಾರ್ವಜನಿಕ ಶಿಕ್ಷಣ ಇಲಾಖೆಯ, ಉಪನಿರ್ದೇಶಕರ ಕಾರ್ಯಾಲಯ, ಸಮಗ್ರ ಶಿಕ್ಷಣ ಕರ್ನಾಟಕ - ಬೀದರ

ಸಂಖ್ಯೆ :- ಸ.ಶಿ.ಕ/ಬೀ/ಕೆ.ಜಿ.ಬಿ.ವಿ-ಟೈಪ-4/ವ.ನಿ/ಆಹಾರ/ಸ/ಇ-ಟೆಂಡರ್/2021-22 ದಿನಾಂಕ :25/04/2022

ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಬೀದರ ಜಿಲ್ಲೆಯ ಕೆ.ಜಿ.ಬಿ.ವಿ.ಟೈಪ-4 ಹೆಣ್ಣು ಮಕ್ಕಳ ವಸತಿ ನಿಲಯಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಅಹಾರ ಸರಬರಾಜು ಮಾಡುವ ನಿಟ್ಟಿನಲ್ಲಿ ಇ-ಪ್ರೊಕ್ರೂರಮೆಂಟ ಮೂಲಕ ಅಲ್ಪಾವಧಿ ಇ-ಟೆಂಡರ ಆಹ್ವಾನಿಸಲಾಗಿದೆ. ಅಲ್ಪಾವಧಿ ಇ-ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ ಈ ಕೆಳಗಿನಂತಿದೆ.

: ಅನುಬಂಧ :

1) ಅಲ್ಪಾವಧಿ ಟೆಂಡರ್ ಪ್ರಕಟಣೆಯ ಸಂಖ್ಯೆ ಹಾಗೂ ದಿನಾಂಕ: ಸ.ಶಿ.ಕ/ಬೀ/ಕೆ.ಜಿ.ಬಿ.ವಿ ಟೈಪ-4/ವ.ನಿ/ಆಹಾರ/ಸ/ಇ-ಟೆಂಡರ್/2021-22 / ದಿನಾಂಕ :25/04/2022, 2) ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: ದಿ: 04-05-2022 ಸಾಯಂಕಾಲ : 4.30 ಗಂಟೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: ದಿ: 06-05-2022 ಮುಂಜಾನೆ : 11:30 ಗಂಟೆ, 4) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ (ತಾತ್ಕಾಲಿಕ): ತಾಂತ್ರಿಕ ಬಿಡ್ ಅಂತಿಮಗೊಳಿಸಿದ ನಂತರ, 5) ಟೆಂಡರ್ ಮೊತ್ತ: ಮೊತ್ತ 84.00 ಲಕ್ಷ, 6) ಪಾವತಿಸಬೇಕಾದ ಇ.ಎಮ್.ಡಿ ಮೊತ್ತ:ರೂ. 2.10 ಲಕ್ಷಗಳು, 7) ಟೆಂಡರ್ ಅಂಗೀಕರಿಸುವ ಅಧಿಕಾರಿ ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಅಧಿಕಾರವು ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ ಬೀದರ ಇವರು ಹೊಂದಿರುತ್ತಾರೆ. 8) ವ್ಯವಹರಿಸಬೇಕಾದ ಅಧಿಕಾರಿ, ಕಛೇರಿ ವಿಳಾಸ ಮತ್ತು ದೂರವಾಣಿ ಸಂಖ್ಯೆ:ಶ್ರೀ ಬಾಬು ಫತ್ರುಸಾಬ್. ಉಪಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಬೀದರ, ಮೊಬೈಲ್ ಸಂಖ್ಯೆ : 94489-99388, ಸ್ಥಿರ ದೂರವಾಣಿ ಸಂಖ್ಯೆ :- 08482-233136.

ಸಹಿ/- ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಶಿಕ್ಷಣ ಕರ್ನಾಟಕ, ಬೀದರ

ವಾ.ಸಾ.ಸಂ.ಇ/ಬೀದರ/43/ಎಂಸಿ&ಎ/2022-23

ಯುಪಿಎಸ್‌ಸಿ ಮುಖ್ಯ ಪರೀಕ್ಷೆ

ವಿಷಯಕ್ಕೆ ತಕ್ಕ ಕೃತಿ ಓದಿ

ಯುಪಿಎಸ್‌ಸಿಯ ಪೂರ್ವಭಾವಿ ಪರೀಕ್ಷೆಗೆ ಓದಿದ ಕೃತಿಗಳ ಜೊತೆಗೆ ಈ ಲೇಖನದಲ್ಲಿ ಪಟ್ಟಿಮಾಡಿರುವ ಪುಸ್ತಕಗಳನ್ನು ಮುಖ್ಯ ಪರೀಕ್ಷೆ(ಮೇನ್ಸ್)ಗೆ ಓದಲೇಬೇಕು. ಅದರ ಜೊತೆಗೆ ಗಾಂಧೀಜಿ, ವಿವೇಕಾನಂದ, ಮಾರ್ಟಿನ್‌ಲೂಥರ್‌ಕಿಂಗ್, ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆ, ಬರ್ಟ್ರಾಂಡ್ ರಸೆಲ್‌ರ ಪ್ರಬಂಧಗಳು, ವಿನ್‌ಸ್ಟನ್ ಚರ್ಚಿಲ್‌ರ ಭಾಷಣ, ಬರ್ನಾಡ್ ಷಾ ಅವರ ಪುಸ್ತಕಗಳನ್ನು ಓದಿದರೆ ಹೆಚ್ಚು ಅನುಕೂಲ

ಗುರುರಾಜ್ ಎಸ್. ದಾವಣಗೆರೆ

ಯುಪಿಎಸ್‌ಸಿ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಸಾಮಾನ್ಯ ಅಧ್ಯಯನದ ನಾಲ್ಕು, ಐಚ್ಛಿಕ ವಿಷಯಗಳ ಎರಡು, ಪ್ರಬಂಧ, ಭಾರತೀಯ ಭಾಷೆ (ಪೇಪರ್ A - ಕಡ್ಡಾಯ) ಮತ್ತು ಇಂಗ್ಲಿಷ್ (ಪೇಪರ್ B) ಸೇರಿ ಒಟ್ಟು ಒಂಬತ್ತು ಪ್ರಶ್ನೆಪತ್ರಿಕೆಗಳಿಗೆ ಉತ್ತರ ಬರೆಯಬೇಕು. ಪ್ರತಿ ವಿಷಯಕ್ಕೂ ವಿಸ್ತೃತ ಹಾಗೂ ವಿಶೇಷ ತಯಾರಿ ಬೇಕೇಬೇಕು.

ಪೇಪರ್ A ಮತ್ತು B ಹೊರತುಪಡಿಸಿ ಒಟ್ಟು 1750 ಅಂಕಗಳಿಗೆ ಉತ್ತರಿಸಲು, ಹೆಚ್ಚಿನ ಅಂಕಗಳಿಸಲು ಯಾವ ಪುಸ್ತಕ, ನೋಟ್ಸ್, ಮ್ಯಾಗಜಿನ್, ವರದಿ, ಸಮೀಕ್ಷೆ, ಪ್ರಬಂಧ ಓದಬೇಕು ಎಂಬ ಪ್ರಶ್ನೆ ಎಲ್ಲ ಅಭ್ಯರ್ಥಿಗಳಲ್ಲೂ ಸಹಜ. ಒಂದು ವಿಷಯ ನೆನಪಿರಲಿ; ಪ್ರಿಲಿಮ್ಸ್(ಪೂರ್ವಭಾವಿ ಪರೀಕ್ಷೆ) ತಯಾರಿಗೆ ಓದಿದ ಪುಸ್ತಕಗಳು ಮುಖ್ಯ ಪರೀಕ್ಷೆ ತಯಾರಿಗೂ ನೆರವಾಗುತ್ತವೆ.

ಸಾಮಾನ್ಯ ಅಧ್ಯಯನಕ್ಕೆ ಯಾವ ಪುಸ್ತಕ?

ಸಾಮಾನ್ಯ ಅಧ್ಯಯನದ (General Studies –I) ಮೊದಲ ಪತ್ರಿಕೆಯಲ್ಲಿ ಭಾರತೀಯ ಪರಂಪರೆ ಮತ್ತು ಸಂಸ್ಕೃತಿ, ವಿಶ್ವದ ಇತಿಹಾಸ ಮತ್ತು ಭೂಗೋಳ ಹಾಗೂ ಸಾಮಾಜಿಕ ವ್ಯವಸ್ಥೆ ಕುರಿತಾದ ಪ್ರಶ್ನೆಗಳಿರುತ್ತವೆ. ಇವುಗಳ ಅಧ್ಯಯನಕ್ಕೆ ಅರ್ಜುನ್ ದೇವ್ ಹಾಗೂ ಇಂದಿರಾ ಅರ್ಜುನ್ ದೇವ್‌ರ 'ವರ್ಲ್ಡ್ ಹಿಸ್ಟರಿ', ರಾಮ್ ಅಹುಜಾರ 'ಸೋಶಿಯಲ್ ಪ್ರಾಬ್ಲಮ್ಸ್', ಸೌಮೆನ್ ಸಿಕ್‌ದರ್ ಬರೆದ 'ಕಾಂಟೆಂಪರರಿ ಇಶ್ಯೂಸ್ ಇನ್ ಗ್ಲೋಬಲೈಜೇಶನ್', ಜಿ.ಸಿ.ಲಿಯೊಂಗ್ ಬರೆದಿರುವ 'ಸರ್ಟಿಫಿಕೇಟ್ ಆಫ್ ಫಿಸಿಕಲ್ ಅಂಡ್ ಹ್ಯೂಮನ್ ಜಿಯೊಗ್ರಫಿ', ಆಕ್ಸ್‌ಫರ್ಡ್ ಪ್ರೆಸ್‌ನವರ 'ಆಕ್ಸ್‌ಫರ್ಡ್ ಸ್ಕೂಲ್ ಅಟ್ಲಾಸ್' ಮತ್ತು ಓರಿಯಂಟ್ ಬ್ಲಾಕ್ ಸ್ವಾನ್ ಪ್ರಕಾಶನದ 'ವರ್ಲ್ಡ್ ಅಟ್ಲಾಸ್', ರಾಜೀವ್ ಅಹಿರ್ ಅವರ 'ಎ ಬ್ರೀಫ್ ಹಿಸ್ಟರಿ ಆಫ್ ಮಾಡ್ರನ್ ಇಂಡಿಯಾ', ಮಜಿದ್ ಹುಸೇನ್‌ರ ಜಿಯಾಗ್ರಫಿ ಇಂಡಿಯಾ, ವರ್ಲ್ಡ್ ಜಿಯಾಗ್ರಫಿ, ಪುಸ್ತಕಗಳನ್ನು ತಪ್ಪದೇ ಓದಬೇಕು.

ಎರಡನೇ ಪತ್ರಿಕೆಯಲ್ಲಿ (General Studies – II) ಆಡಳಿತ, ಸಂವಿಧಾನ, ರಾಜಕೀಯ, ಸಾಮಾಜಿಕ ನ್ಯಾಯ, ಅಂತರರಾಷ್ಟ್ರೀಯ ಸಂಬಂಧಗಳ ಕುರಿತಾದ ವಿಷಯಗಳಿರುತ್ತವೆ. ಎಂ.ಲಕ್ಷ್ಮೀಕಾಂತ್ ಬರೆದ 'ಇಂಡಿಯನ್ ಪಾಲಿಟಿ' ಕೃತಿಯ ಆರನೇ ಆವೃತ್ತಿ, ಡಿ.ಡಿ.ಬಸು ಬರೆದಿರುವ ಇಂಟ್ರೊಡಕ್ಷನ್ ಟು ಇಂಡಿಯನ್ ಕಾನ್‌ಸ್ಟಿಟ್ಯೂಶನ್, ಪುಷ್ಪೇಶ್ ಪಂತ್ ಅವರ ಇಂಟರ್‌ನ್ಯಾಷನಲ್ ರಿಲೇಶನ್ಸ್, ಪುಸ್ತಕಗಳು ಸಮಗ್ರ ಅಧ್ಯಯನದ ಅವಕಾಶ ಕಲ್ಪಿಸುತ್ತವೆ.

ಸಾಮಾನ್ಯ ಅಧ್ಯಯನದ (General Studies – III) 3ನೆಯ ಪತ್ರಿಕೆಯಲ್ಲಿ ವಿಜ್ಞಾನ ತಂತ್ರಜ್ಞಾನ, ಆರ್ಥಿಕತೆ ಮತ್ತು ಅಭಿವೃದ್ಧಿ, ಜೀವ ವೈವಿಧ್ಯ, ಪರಿಸರ, ಭದ್ರತೆ ಹಾಗೂ ವಿಕೋಪ ನಿರ್ವಹಣೆಗಳ ಕುರಿತ ಪಠ್ಯಕ್ರಮವಿದ್ದು ಅದರ ವಿಸ್ತೃತ ಅಧ್ಯಯನಕ್ಕೆ ನಿತಿನ್ ಸಿಂಘಾನಿಯರ ಇಂಡಿಯನ್ ಎಕಾನಮಿ, ಪರಿಸರ ಮತ್ತು ವಿಕೋಪ ನಿರ್ವಹಣೆಗೆ ಟಾಟಾ ಮೆಗ್ರಾಹಿಲ್ ಪಬ್ಲಿಕೇಶನ್, ಆಂತರಿಕ ಭದ್ರತೆ ವಿಷಯಕ್ಕೆ ಅಶೋಕ್ ಕುಮಾರ್ ಬರೆದ 'ಛಾಲೆಂಜಸ್ ಟು ಇಂಟರ್‌ನಲ್ ಸೆಕ್ಯುರಿಟಿ ಆಫ್ ಇಂಡಿಯ', ಎನ್ವಿರಾನ್ಮೆಂಟ್ ರೀಡರ್ ಫಾರ್ ಇಂಡಿಯನ್ ಯೂನಿವರ್ಸಿಟಿಸ್, ಸೈನ್ಸ್ ರಿಪೋರ್ಟರ್, ಕಾಂಪಿಟಿಶನ್ ವಿಜರ್ಡ್, ಇಸ್ರೊ, ಸಿಎಸ್‌ಐಆರ್, ಐಐಎಚ್‌ಆರ್, ಐಐಎಸ್‌ಸಿ, ಆರ್‌ಆರ್‌ಐ ಮತ್ತು ದೇಶದ ಐಐಟಿ, ಐಐಎಸ್‌ಇಆರ್‌ಗಳ ವೆಬ್‌ಸೈಟ್‌ಗಳನ್ನು ಗಮನಿಸಬೇಕು.


ಸಾಮಾನ್ಯ ಅಧ್ಯಯನದ ನಾಲ್ಕನೆ (General Studies – IV) ಪತ್ರಿಕೆಯ ಪಠ್ಯಕ್ರಮ ಅಭ್ಯರ್ಥಿಯ ಸಾಮಾಜಿಕ ದೃಷ್ಟಿಕೋನ, ಪ್ರಾಮಾಣಿಕ ಮನೋಭಾವ, ಮಾನವೀಯ ಮೌಲ್ಯ-ಮಾನವ ಸಂಬಂಧಗಳ ಕುರಿತಾದ ನಂಬಿಕೆಗಳು, ಸಾಧಕರ ಜೀವನ ಪಾಠಗಳ ಪ್ರಭಾವ, ಸಾಮಾಜಿಕ ಸಂರಚನೆಯಲ್ಲಿ ಕುಟುಂಬಗಳ ಸಹ ಭಾಗಿತ್ವ, ನೀತಿ ನಿರೂಪಣೆ, ನೈತಿಕ ಮೌಲ್ಯಗಳ ಕಡೆಗಿನ ಒಲವು ಮತ್ತು ಆಚರಣೆ, ವರ್ತನೆ, ಮನೋವೃತ್ತಿ, ಸಮಗ್ರತೆಗಳನ್ನು ಉತ್ತರಗಳ ಮೂಲಕ ಒರೆಗೆ ಹಚ್ಚುತ್ತದೆ. ಇದರ ಸೂಕ್ಷ್ಮ ಮತ್ತು ವಿಶ್ಲೇಷಣಾತ್ಮಕ ಅಧ್ಯಯನಕ್ಕೆ ಸುಬ್ಬರಾವ್ ಮತ್ತು ಡಿ.ಎನ್.ರಾಯ್ ಚೌಧರಿ ಬರೆದಿರುವ ಎಥಿಕ್ಸ್, ಇಂಟೆಗ್ರಿಟಿ ಅಂಡ್ ಆಪ್ಟಿಟ್ಯೂಡ್ ಫಾರ್ ಸಿವಿಲ್ ಸರ್ವಿಸಸ್ ಮೇನ್ ಎಕ್ಸಾಮಿನೇಶನ್ ಎಂಬ ಪುಸ್ತಕ ಓದಲೇಬೇಕು.

ಜೊತೆಗೆ ಗಾಂಧೀಜಿ, ವಿವೇಕಾನಂದ, ಮಾರ್ಟಿನ್‌ಲೂಥರ್‌ಕಿಂಗ್, ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆ, ಬರ್ಟ್ರಾಂಡ್ ರಸೆಲ್‌ರ ಪ್ರಬಂಧಗಳು, ವಿನ್‌ಸ್ಟನ್ ಚರ್ಚಿಲ್‌ರ ಭಾಷಣ, ಬರ್ನಾಡ್ ಷಾ ಅವರ ಪುಸ್ತಕಗಳನ್ನು ಓದಿದರೆ ಹೆಚ್ಚು ಅನುಕೂಲ ಎಂಬುದು ಯುಪಿಎಸ್‌ಸಿ ಟಾಪರ್‌ಗಳ ಮುಕ್ತ ಅಭಿಪ್ರಾಯ.

ಎಂ.ಕಾರ್ತಿಕೇಯನ್, ನಂದ ಕಿಶೋರ್‌ರೆಡ್ಡಿ, ಡಿ.ಕೆ ಬಾಲಾಜಿ ಅವರ 'ಎಥಿಕ್ಸ್, ಇಂಟೆಗ್ರಿಟಿ ಅಂಡ್ ಆಪ್ಟಿಟ್ಯೂಡ್, ದಿ ಲೆಕ್ಸಿಕಾನ್‌ರ ಇತ್ತೀಚಿನ ಆವೃತ್ತಿ, ಪಿಯರ್‌ಸನ್ ಪ್ರಕಾಶನದ ಮುಕುಲ್ ಕುಲಕರ್ಣಿ ಮತ್ತು ಅಕ್ಷಯ್ ಪಾಟೀಲ್‌ರ ಪುಸ್ತಕ, ಅಜಿತ ಕುಮಾರ್ ಝೂ ಅವರ '200 ಎಥಿಕ್ಸ್ – ಕೇಸ್ ಸ್ಟಡೀಸ್ ಅಂಡ್ ಡಿಸ್‌ಕಶನ್ಸ್' ಎಂಬ ಪುಸ್ತಕ, ಅನಿಲ್ ಸ್ವರೂಪ್‌ರ 'ಎಥಿಕಲ್ ಡಿಲೆಮ್ಮಾಸ್ ಆಫ್ ಎ ಸಿವಿಲ್ ಸರ್ವೆಂಟ್' ಪುಸ್ತಕಗಳು ಅಭ್ಯರ್ಥಿಯ ತಯಾರಿಗೆ ಭಾರಿ ಸತ್ವ ಒದಗಿಸುತ್ತವೆ. ನೈತಿಕತೆ, ಸಮಗ್ರತೆ ಮತ್ತು ಸಾಮರ್ಥ್ಯ ಎಂಬ ಬಾಲಾಜಿ ಬರೆದಿರುವ ಕನ್ನಡ ಅವತರಣಿಕೆ ತುಂಬಾ ಉಪಯುಕ್ತ ಪುಸ್ತಕ ಎಂಬ ಮಾತಿದೆ.

ಇವೆಲ್ಲ ಉದಾಹರಣೆಯಷ್ಟೇ. ನೀವು ಆಯ್ಕೆ ಮಾಡಿಕೊಳ್ಳುವ ನಿಮ್ಮ ಇಷ್ಟದ ವಿಷಯದ ಅಧ್ಯಯನಕ್ಕೆ ಬೇಕಾದ ಉತ್ಕೃಷ್ಟ ಪುಸ್ತಕಗಳು ಮಾರುಕಟ್ಟೆ, ಲೈಬ್ರರಿಗಳಲ್ಲಿ ಲಭ್ಯವಿರುತ್ತವೆ. NCERTಯ 6 ರಿಂದ 12 ನೇ ತರಗತಿಯ ಎಲ್ಲಾ ಪುಸ್ತಕಗಳು, ಯೋಜನಾ ಪತ್ರಿಕೆ, ವಿವಿಧ ಪಬ್ಲಿಕೇಶನ್‌ಗಳ ಇಯರ್ ಬುಕ್‌ಗಳು, ವಿವಿಧ ವಿಶ್ವಾಸಾರ್ಹ ದಿನಪತ್ರಿಕೆ / ನಿಯತಕಾಲಿಕೆಗಳು, ವಿಮರ್ಶಾ ಗ್ರಂಥಗಳು, ಪ್ರಸಿದ್ಧ ಕೋಚಿಂಗ್ ಸಂಸ್ಥೆಗಳ ನೋಟ್ಸ್‌ಗಳು, ವೆಬ್‌ಸೈಟ್‌ಗಳಲ್ಲಿ ಸಿಗುವ ಫ್ರೀ ಸ್ಟಡೀ ಮೆಟೀರಿಯಲ್‌ಗಳು ಅಧ್ಯಯನಕ್ಕೆ ಕಸುವು ತುಂಬುತ್ತವೆ.

(ಮುಂದಿನ ವಾರ ಪಾಠ– 7 : ಮೇನ್ಸ್ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ಸ್ವರೂಪ ಮತ್ತು ಉತ್ತರಿಸುವ ಬಗೆ)




ಕನ್ನಡ ಸಾಹಿತ್ಯ ಮತ್ತು ಭಾಷೆ

ಆಪ್ಶನಲ್(ಆಯ್ಕೆ) ಪೇಪರ್‌ಗೆ ತಯಾರಿ: ಅಭ್ಯರ್ಥಿಗಳು ತಾವೇ ಆಯ್ಕೆ ಮಾಡಿಕೊಂಡ ಎರಡು ಪತ್ರಿಕೆಗಳಿರುತ್ತವೆ. ಉದಾಹರಣೆಗೆ ಕನ್ನಡ ಸಾಹಿತ್ಯ ಮತ್ತು ಭಾಷೆಯನ್ನು (ಪತ್ರಿಕೆ – 1 ಮತ್ತು 2) ಆಯ್ಕೆ ಮಾಡಿಕೊಳ್ಳುವವರು ಕನ್ನಡ ಭಾಷೆಯ ಇತಿಹಾಸ, ಕನ್ನಡ ಸಾಹಿತ್ಯ ಚರಿತ್ರೆ, ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯಕ ವಿಮರ್ಶೆ, ಕರ್ನಾಟಕದ ಸಾಂಸ್ಕೃತಿಕ ಚರಿತ್ರೆ, ಪ್ರಾಚೀನ, ಮಧ್ಯಕಾಲೀನ, ಆಧುನಿಕ ಕನ್ನಡ ಸಾಹಿತ್ಯ, ಜನಪದ ಸಾಹಿತ್ಯ ವಿಷಯಗಳ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಪುಸ್ತಕಗಳನ್ನು ಓದಲೇಬೇಕು.

ಕನ್ನಡ ಭಾಷೆ ಮತ್ತು ಸಾಹಿತ್ಯದ ವಿಸ್ತೃತ ತಿಳಿವಳಿಕೆಗಾಗಿ, ರಂ.ಶ್ರೀ ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ', ಆರ್. ವೈ. ಧಾರವಾಡಕರ್ ಅವರ 'ಕನ್ನಡ ಭಾಷಾ ಶಾಸ್ತ್ರ', ಎಂ.ಎಚ್. ಕೃಷ್ಣಯ್ಯನವರ 'ಕನ್ನಡ ಭಾಷೆಯ ಶಾಸ್ತ್ರೀಯ ಇತಿಹಾಸದ ಅಧ್ಯಯನ' ತೀರಾ ಅವಶ್ಯಕ. ಎರಡನೆಯ ಪತ್ರಿಕೆಗೆ ಶಿವರಾಮ ಕಾರಂತರ 'ಬೆಟ್ಟದ ಜೀವ', ಅನುಪಮಾ ನಿರಂಜನರ 'ಮಾಧವಿ', ದೇವನೂರು ಮಹದೇವರ 'ಒಡಲಾಳ', ಎ.ಎನ್. ಮೂರ್ತಿರಾವ್ ಅವರ 'ದೇವರು', ಡಾ.ಹಾ.ಮಾ.ನಾಯಕರ 'ಜನಪದ ಸ್ವರೂಪ', ದೇ. ಜವರೇಗೌಡರ ಜನಪ್ರಿಯ ಕನಕ ಸಂಪುಟ, ಜೀ.ಶಂ. ಪರಮಶಿವಯ್ಯನವರ 'ಕನ್ನಡ ಜನಪದ ಕತೆಗಳು', ಜಿ.ಎಚ್.ನಾಯಕರ 'ಕನ್ನಡ ಸಣ್ಣ ಕತೆಗಳು', ಕುಮಾರವ್ಯಾಸನ ಗದುಗಿನಭಾರತ, ಟಿ.ಎನ್.ಶ್ರೀಕಂಠಯ್ಯನವರ ನಂಬಿಯಣ್ಣನ ರಗಳೆ, ಎಲ್.ಬಸವರಾಜುರವರ ಪಂಪನ ಸಮಸ್ತ ಭಾರತ ಕಥಾಮೃತ, ಕುವೆಂಪು ಅವರ 'ಶೂದ್ರ ತಪಸ್ವಿ', ಗಿರೀಶ್ ಕಾರ್ನಾಡರ 'ತುಘಲಕ್', ಕೆ. ಮರುಳುಸಿದ್ದಪ್ಪ ಮತ್ತು ಕಿ.ರಂ. ನಾಗರಾಜ್‌ರ 'ವಚನ ಕಮ್ಮಟ' ಹಾಗೂ ಪಂಪನ 'ವಿಕ್ರಮಾರ್ಜುನ ವಿಜಯ' ಕೃತಿಗಳನ್ನು ಓದಬೇಕು.

ಸಿವಿಲ್ ಸರ್ವೀಸಸ್ ಪರೀಕ್ಷೆ ಪಾಠ-6



ಪ್ರಜಾವಾಣಿ ಉದ್ಯೋಗ ವಾರ್ತೆ

ಬ್ಯಾಂಕ್ ಆಫ್ ಇಂಡಿಯಾದಲ್ಲಿ ಹುದ್ದೆಗಳು

ಬ್ಯಾಂಕ್ ಆಫ್ ಇಂಡಿಯಾದಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಅರ್ಜಿ ಸಲ್ಲಿಸಬಹುದು. ಈ ಹುದ್ದೆಗಳು ಕಾಯಂ ಹಾಗೂ ಗುತ್ತಿಗೆ ಆಧಾರದ ಮೇಲಿರುತ್ತವೆ.

- ಎಕನಾಮಿಸ್ಟ್, ಸ್ಟ್ಯಾಟಿಸಿಷಿಯನ್, ರಿಸ್ಕ್ ಮ್ಯಾನೇಜ್‌ಮೆಂಟ್, ಕ್ರೆಡಿಟ್ ಅನಾಲಿಸ್ಟ್, ಕ್ರೆಡಿಟ್ ಆಫೀಸರ್, ಟೆಕ್ ಅಪ್ರೈಸಲ್, ಐಟಿ ಆಫೀಸರ್ ಇವು ಕಾಯಂ ಹುದ್ದೆಗಳಾಗಿರುತ್ತವೆ.
- ಒಟ್ಟು 696 ಹುದ್ದೆಗಳಿದ್ದು 594 ಕಾಯಂ ಹುದ್ದೆಗಳು ಹಾಗೂ 102 ಗುತ್ತಿಗೆ ಆಧಾರದ ಹುದ್ದೆಗಳಾಗಿವೆ. ಹುದ್ದೆಗಳಿಗೆ ಅನುಗುಣವಾಗಿ ವಿದ್ಯಾರ್ಹತೆ ಹಾಗೂ ವಯೋಮಿತಿಯನ್ನು ನಿಗದಿ ಮಾಡಲಾಗಿದೆ. ಶೇ 60 ರಷ್ಟು ಅಂಕಗಳಿಸಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.
- ವಿನಾಯಿತಿ: ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳು ಶೇ 55 ಅಂಕಗಳಿಸಿರಬೇಕು. ವಯೋಮಿತಿಯಲ್ಲಿ ಎಸ್‌ಟಿ, ಎಸ್‌ಸಿ ವಿದ್ಯಾರ್ಥಿಗಳಿಗೆ 5 ವರ್ಷ, ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ಹಾಗೂ ಮಾಜಿ ಸೈನಿಕರಿಗೆ 5 ವರ್ಷ ಸಡಿಲಿಕೆ ಇದೆ.
- ಏಪ್ರಿಲ್ 26, 2022 ರಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು ಮೇ 10, 2022ಕ್ಕೆ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವಾಗಿದೆ.
- ಈ ಹುದ್ದೆಯ ಕುರಿತ ಇನ್ನಷ್ಟು ವಿವರಗಳಿಗೆ https://bankofindia.co.in/Career ವೆಬ್‌ಸೈಟ್ ನೋಡಿ.

ಭಾರತೀಯ ಸೇನೆಯಲ್ಲಿ ಹುದ್ದೆಗಳು

ಭಾರತೀಯ ಸೇನೆ 'ಗ್ರೂಪ್ ಸಿ' ಯ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದ್ದು, ಆಸಕ್ತರು ಅರ್ಜಿ ಸಲ್ಲಿಸಬಹುದು.

- ಹುದ್ದೆಗಳು: ಸ್ಟೆನೋಗ್ರಾಫರ್, ಮೆಸ್ ವೇಯ್ಟರ್, ಮೆಸೆಂಜರ್, ವಾಚ್‌ಮನ್, ಗಾರ್ಡನರ್ ಹೌಸ್ ಕೀಪರ್
- ಹುದ್ದೆಗಳ ಸಂಖ್ಯೆ: 19
- ಸ್ಥಳ: ಅಲಹಾಬಾದ್, ಗುಜರಾತ್
- ವಿದ್ಯಾರ್ಹತೆ: ಹುದ್ದೆಗಳಿಗೆ ಅನುಗುಣವಾಗಿ ವಿದ್ಯಾರ್ಹತೆಯನ್ನು ನಿಗದಿ ಪಡಿಸಲಾಗಿದೆ.
- ವಯೋಮಿತಿ: ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳಿಗೆ ಕನಿಷ್ಠ 18 ವರ್ಷ ಹಾಗೂ ಗರಿಷ್ಠ 25 ವರ್ಷ ಮೀರಿರಬಾರದು.
- ಆಯ್ಕೆ ಪ್ರಕ್ರಿಯೆ: ಲಿಖಿತ ಪರೀಕ್ಷೆ ಮೂಲಕ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮೇ 7, 2022
- ಅರ್ಜಿ ಸಲ್ಲಿಕೆ ವಿಳಾಸ: ಆರ್ಮಿ ಸೆಲೆಕ್ಷನ್ ಸೆಂಟರ್, ಅಲಹಾಬಾದ್ ಪೂರ್ವ ಕಾರಿಯಪ್ಪ ರಸ್ತೆ, ಕ್ಯಾಂಟನ್, ಸಿವಿಲ್ ಲೈನ್ಸ್ ಪ್ರಯಾಗ್ ರಾಜ್, ಉತ್ತರಪ್ರದೇಶ 211 001
- ಹೆಚ್ಚಿನ ಮಾಹಿತಿಗೆ: https://indianarmy.nic.in/

ಕೊಡಗಿನಲ್ಲಿ ಗ್ರಾಮ ಲೆಕ್ಕಿಗರ ಹುದ್ದೆ

ಕೊಡಗು ಜಿಲ್ಲಾಧಿಕಾರಿಗಳ ಕಾರ್ಯಾಲಯ ವ್ಯಾಪ್ತಿಯಲ್ಲಿ ಖಾಲಿಯಿರುವ ಗ್ರಾಮ ಲೆಕ್ಕಿಗರ ಹುದ್ದೆಯ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- ಹುದ್ದೆಗಳು ಸಂಖ್ಯೆ: 35
- ಸ್ಥಳ: ಕೊಡಗು ಜಿಲ್ಲೆಯಾದ್ಯಂತ
- ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
- ಅರ್ಜಿ ಶುಲ್ಕ: ಎಸ್‌ಸಿ, ಎಸ್‌ಸಿ ಹಾಗೂ ಪ್ರವರ್ಗ- 1 ಅಭ್ಯರ್ಥಿಗಳಿಗೆ ₹ 200, ಸಾಮಾನ್ಯ ವರ್ಗ, 2ಎ, 2ಬಿ, 3ಎ ಹಾಗೂ 3ಬಿ ಅಭ್ಯರ್ಥಿಗಳಿಗೆ ₹ 400.
- ವಯೋಮಿತಿ: ಅರ್ಜಿ ಸಲ್ಲಿಕೆ ಮಾಡಲು ಕನಿಷ್ಠ 18 ವರ್ಷ ಹಾಗೂ ಗರಿಷ್ಠ 35 ವರ್ಷದ ಒಳಗಿರಬೇಕು. ಎಸ್‌ಸಿ, ಎಸ್‌ಟಿ ಹಾಗೂ ಪ್ರವರ್ಗ-1ರ ಅಭ್ಯರ್ಥಿಗಳಿಗೆ 40 ವರ್ಷಗಳವರೆಗೆ ವಯೋಮಿತಿ ಸಡಿಲಿಕೆ ಇದೆ. ಇತರೆ ಹಿಂದುಳಿದ ವರ್ಗಗಳಾದ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ 38 ವರ್ಷಗಳವರೆಗೆ ವಯೋಮಿತಿ ಸಡಿಲಿಕೆ ಇದೆ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮೇ 19, 2022
- ಹೆಚ್ಚಿನ ಮಾಹಿತಿಗೆ: https://kodagu-va.kar.nic.in/

ಶಿವಮೊಗ್ಗ ಡಿಸಿಸಿ ಬ್ಯಾಂಕ್‌ನಲ್ಲಿ ಹುದ್ದೆಗಳು

ಶಿವಮೊಗ್ಗ ಡಿಸಿಸಿ ಬ್ಯಾಂಕ್ ತನ್ನಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- ಹುದ್ದೆಗಳು: ಕ್ಲರ್ಕ್, ಅಟೆಂಡರ್ ಹಾಗೂ ಡ್ರೈವರ್
- ಹುದ್ದೆಗಳ ಸಂಖ್ಯೆ: 98
- ಸ್ಥಳ: ಶಿವಮೊಗ್ಗ
- ವಿದ್ಯಾರ್ಹತೆ: ಹುದ್ದೆಗಳಿಗೆ ಅನುಗುಣವಾಗಿ ವಿದ್ಯಾರ್ಹತೆಯನ್ನು ನಿಗದಿ ಪಡಿಸಲಾಗಿದೆ.
- ವಯೋಮಿತಿ: ಶಿವಮೊಗ್ಗ ಡಿಸಿಸಿ ಬ್ಯಾಂಕ್ ಲಿಮಿಟೆಡ್ ನೇಮಕಾತಿ ಅಧಿಸೂಚನೆಯ ಪ್ರಕಾರ ಮೇ 16, 2022ಕ್ಕೆ ಅನುಗುಣವಾಗುವಂತೆ ಕನಿಷ್ಠ 18 ವರ್ಷ ಹಾಗೂ ಗರಿಷ್ಠ 35 ವರ್ಷ. ಎಸ್‌ಟಿ, ಎಸ್‌ಸಿ ಅಭ್ಯರ್ಥಿಗಳಿಗೆ 5 ವರ್ಷ, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ ಹಾಗೂ ಅಂಗವಿಕಲರಿಗೆ 10 ವರ್ಷಗಳ ವಯೋಮಿತಿ ಸಡಿಲಿಕೆ ಇದೆ.
- ಅರ್ಜಿ ಸಲ್ಲಿಸಲು ವಿಳಾಸ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಸಿಬ್ಬಂದಿ ನಿಯಂತ್ರಣ ಸಮಿತಿ, ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಲಿಮಿಟೆಡ್. ಬಾಲರಾಜ್ ಅರಸ್ ರಸ್ತೆ, ಪಿ.ಬಿ. ಸಂ-62, ಶಿವಮೊಗ್ಗ – 577201
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮೇ 16, 2022





ಮಾದರಿ ಪ್ರಶ್ನೋತ್ತರಗಳು

ಕೆಪಿಎಸ್‌ಸಿ 'ಗ್ರೂಪ್-ಸಿ'ಯ ವಿವಿಧ ಹುದ್ದೆಗಳು, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ಮೀಸಲು ಸಬ್‌ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಐಆರ್‌ಬಿ) ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇರ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಮೂರು ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಸಾಮಾನ್ಯ ಜ್ಞಾನ

1) 'ಕರ್ನಾಟಕ ದತ್ತಾಂಶ ಕೇಂದ್ರ ನೀತಿ- 2022' ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಆ ಹಿನ್ನೆಲೆಯಲ್ಲಿ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

1) 2025ರ ಹೊತ್ತಿಗೆ ಡೇಟಾ ಸೆಂಟರ್ ಉದ್ಯಮದಲ್ಲಿ ₹ 10,000 ಕೋಟಿ ಮೌಲ್ಯದ ಹೂಡಿಕೆಗಳನ್ನು ಆಕರ್ಷಿಸುವುದು.
2) 2025ರ ವೇಳೆಗೆ ನಮ್ಮ ರಾಜ್ಯದಲ್ಲಿ 250 ಮೆಗಾವ್ಯಾಟ್ ಸಾಮರ್ಥ್ಯದ ದತ್ತಾಂಶ ಕೇಂದ್ರಗಳ ಉದ್ಯಮ ಸ್ಥಾಪಿಸುವ ಗುರಿ ಹೊಂದಲಾಗಿದೆ.

ಉತ್ತರ ಸಂಕೇತಗಳು
ಎ) 1ನೇ ಹೇಳಿಕೆ ಮಾತ್ರ ಸರಿಯಾಗಿದೆ
ಬಿ) 2ನೇ ಹೇಳಿಕೆ ಮಾತ್ರ ಸರಿಯಾಗಿದೆ
ಸಿ) ಯಾವ ಹೇಳಿಕೆಯೂ ಸರಿಯಾಗಿಲ್ಲ
ಡಿ) 1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಡಿ.



ಸಾಂದರ್ಭಿಕ ಚಿತ್ರ

2) ಭಾರತ ಆಹಾರ ಸುರಕ್ಷತಾ ಮತ್ತು ಗುಣಮಟ್ಟದ ಪ್ರಾಧಿಕಾರ ನೀಡಿದ ಪ್ರಮಾಣ ಪತ್ರದ ಪ್ರಕಾರ ರಾಷ್ಟ್ರೀಯ ಸುರಕ್ಷಾ ಗುಣಮಟ್ಟವನ್ನು ಕಾಯ್ದುಕೊಂಡು ಅತ್ಯುತ್ತಮ ಆಹಾರವನ್ನು ಪ್ರಸಾದ ರೂಪದಲ್ಲಿ ವಿತರಿಸುತ್ತಿದೆ ಎಂಬ ಹೆಗ್ಗಳಿಕೆಗೆ ಈ ಕೆಳಗಿನ ಯಾವ ದೇವಸ್ಥಾನ ಪಾತ್ರವಾಗಿದೆ?



ಸಾಂದರ್ಭಿಕ ಚಿತ್ರ

ಎ) ಧರ್ಮಸ್ಥಳ ಮಂಜುನಾಥ ಸ್ವಾಮಿ ದೇಗುಲ
ಬಿ) ಕೊಲ್ಲೂರು ಮೂಕಾಂಬಿಕಾ ದೇಗುಲ
ಸಿ) ನಂಜನಗೂಡು ನಂಜುಂಡೇಶ್ವರ ದೇವಾಲಯ
ಡಿ) ಮುರುಡೇಶ್ವರ ದೇವಸ್ಥಾನ

ಉತ್ತರ: ಬಿ.

3) ನಮ್ಮ ದೇಶದ ಮೊದಲ ಇಂಗಾಲ ತಟಸ್ಥ ಪಂಚಾಯ್ತಿ ಎಂದು ಯಾವ ಪಂಚಾಯ್ತಿಯನ್ನು ಪ್ರಧಾನಿಗಳು ಘೋಷಿಸಿದ್ದಾರೆ?

ಎ) ಜಮ್ಮು ಮತ್ತು ಕಾಶ್ಮೀರದ ಪಲ್ಲಿ ಗ್ರಾಮ ಪಂಚಾಯ್ತಿ
ಬಿ) ಬಿಹಾರದ ಫುಲ್‌ಗಾಂವ್ ಗ್ರಾಮ ಪಂಚಾಯ್ತಿ
ಸಿ) ಉತ್ತರ ಪ್ರದೇಶದ ಕುಶಿನಗರ ಗ್ರಾಮ ಪಂಚಾಯ್ತಿ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಎ.

4) ನಮ್ಮ ದೇಶದ ನೀತಿ ಆಯೋಗದ ಉಪಾಧ್ಯಕ್ಷರಾಗಿ ಯಾರು ನೇಮಕಗೊಂಡಿದ್ದಾರೆ?

ಎ) ರಾಜೀವ್ ಕುಮಾರ
ಬಿ) ರಘುನಾಥ ರಘುರಾಮನ್
ಸಿ) ಸುಮನ್ ಕೆ ಬೆರಿ
ಡಿ) ಜಯಕುಮಾರ ಜಯರಾಮ್

ಉತ್ತರ: ಸಿ.

5) ಸೋಲೊಮನ್ ದ್ವೀಪದಲ್ಲಿ ಚೀನಾ ತನ್ನ ರಕ್ಷಣಾ ಮಿಲಿಟರಿ ಚಟುವಟಿಕೆ ಆರಂಭಿಸಲು ಆ ದ್ವೀಪರಾಷ್ಟ್ರ ದೊಡನೆ ಸಹಿ ಹಾಕಿರುವುದಾಗಿ ಘೋಷಿಸಿದೆ. ಹಾಗಾದರೆ ಇದಕ್ಕೆ ಹತ್ತಿರದಲ್ಲಿ ಈ ಕೆಳಗಿನ ಯಾವ ರಾಷ್ಟ್ರವಿದೆ?

ಎ) ಅಮೆರಿಕ
ಬಿ) ಜಪಾನ್
ಸಿ) ಭಾರತ
ಡಿ) ಆಸ್ಟ್ರೇಲಿಯಾ

ಉತ್ತರ: ಡಿ.

6. ಜಗತ್ತಿನಲ್ಲಿ ಭಾರತವು ವಾರ್ಷಿಕವಾಗಿ ಅತಿ ಹೆಚ್ಚು ಹಾಲು ಉತ್ಪಾದಿಸುವ ರಾಷ್ಟ್ರವಾಗಿದೆ. ಹಾಗಾದರೆ ಭಾರತ ಎಷ್ಟು ಮೌಲ್ಯದ ಹಾಲನ್ನು ಉತ್ಪಾದಿಸುತ್ತಿದೆ?

ಎ) ₹ 8.5 ಲಕ್ಷ ಕೋಟಿ
ಬಿ) ₹ 10 ಲಕ್ಷ ಕೋಟಿ
ಸಿ) ₹ 4.5 ಲಕ್ಷ ಕೋಟಿ
ಡಿ) ₹ 6.5 ಲಕ್ಷ ಕೋಟಿ

ಉತ್ತರ: ಎ.



ಸಾಂದರ್ಭಿಕ ಚಿತ್ರ

7) ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

1) ಗೋವಾ ರಾಜ್ಯದಲ್ಲಿ ಸಮಾನ ನಾಗರಿಕ ಕಾನೂನುಗಳು ಜಾರಿಯಲ್ಲಿವೆ. ಉತ್ತರಾಖಂಡ ರಾಜ್ಯವು ಸಮಾನ ನಾಗರಿಕ ಕಾನೂನು ಜಾರಿಗೆ ತರಲು ತಜ್ಞರ ಸಮಿತಿಯನ್ನು ರಚಿಸಿದೆ.
2) ಭಾರತದ ಸಂವಿಧಾನದ 44ನೇ ವಿಧಿಯು ಸಮಾನ ನಾಗರಿಕ ಕಾನೂನು ಜಾರಿಗೆ ತರಲು ಸರ್ಕಾರಗಳಿಗೆ ನಿರ್ದೇಶನ ನೀಡುತ್ತದೆ. ಸರಳಾ ಮುದ್ಗಲ್ ಪ್ರಕರಣದಲ್ಲಿಯೂ(1995ರಲ್ಲಿ) ಸುಪ್ರೀಂ ಕೋರ್ಟ್ ಕೂಡಾ ಸಮಾನ ನಾಗರಿಕ ಕಾನೂನು ತರಲು ಕೇಂದ್ರ ಸರ್ಕಾರಕ್ಕೆ ತಿಳಿಸಿತ್ತು

ಉತ್ತರ ಸಂಕೇತಗಳು
ಎ) 1ನೇ ಹೇಳಿಕೆ ಮಾತ್ರ ಸರಿಯಾಗಿದೆ
ಬಿ) 2ನೇ ಹೇಳಿಕೆ ಮಾತ್ರ ಸರಿಯಾಗಿದೆ
ಸಿ) ಯಾವ ಹೇಳಿಕೆಯೂ ಸರಿಯಾಗಿಲ್ಲ
ಡಿ) 1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿವೆ

ಉತ್ತರ: ಡಿ.

8. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಜಗತ್ತಿನಲ್ಲಿ ಶೇ 17ರಷ್ಟು ಪೊಟ್ಯಾಶ್ ರಸಗೊಬ್ಬರ ವ್ಯಾಪಾರದ ಪಾಲನ್ನು ರಷ್ಯಾ ಹೊಂದಿದೆ
2) ರಷ್ಯಾ-ಉಕ್ರೇನ್ ಯುದ್ಧದ ಪರಿಣಾಮ ಭಾರತ ಕೃಷಿಯ ಮೇಲೆ ಬೀಳುತ್ತದೆ

ಉತ್ತರ ಸಂಕೇತಗಳು
ಎ) 1 ಮತ್ತು 2 ಹೇಳಿಕೆಗಳು ಸರಿಯಾಗಿವೆ
ಬಿ) 2ನೇ ಹೇಳಿಕೆ ಮಾತ್ರ ಸರಿಯಾಗಿವೆ
ಸಿ) 1 ಮತ್ತು 2ನೇ ಹೇಳಿಕೆಗಳು ಪರಸ್ಪರ ಸಂಬಂಧ ಹೊಂದಿಲ್ಲ
ಡಿ) ಎರಡೂ ಹೇಳಿಕೆಗಳು ತಪ್ಪಾಗಿವೆ

ಉತ್ತರ: ಎ.

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ನಿಮಗಿದು ಗೊತ್ತೆ?



ಫೂಲ್ಸ್ ಗೋಲ್ಡ್

ನಿಸರ್ಗದಲ್ಲಿ ದೊರೆಯುವ ಐರನ್ ಡೈ ಸಲ್ಫೈಡ್ (Iron Disulphide) ಎಂಬ ಖನಿಜಕ್ಕೆ ಫೂಲ್ಸ್ ಗೋಲ್ಡ್ (Fool's Gold) ಎಂದು ಹೇಳುತ್ತಾರೆ. ಈ ಖನಿಜಕ್ಕೆ ಐರನ್ ಪೈರೈಟ್ಸ್ (Iron Pyrites) ಎಂಬ ಹೆಸರೂ ಸಹ ಇದೆ. ಈ ಖನಿಜದ ಬಣ್ಣವು ಹಿತ್ತಾಳೆಯನ್ನು ಹೋಲುವ ಹಳದಿಯಾಗಿದೆ. ಇದು ತುಂಬ ಕಾಂತಿಯುತವಾಗಿರುತ್ತದೆ. ಆದ್ದರಿಂದ ಅದನ್ನು ಚಿನ್ನವೆಂದು ಭ್ರಮಿಸುವುದುಂಟು. ಈ ಕಾರಣದಿಂದ ಈ ಖನಿಜಕ್ಕೆ 'ಫೂಲ್ಸ್ ಗೋಲ್ಡ್' ಎಂಬ ಅಡ್ಡ ಹೆಸರಿದೆ. ಇದು ಚಿನ್ನಕ್ಕಿಂತ ಹೆಚ್ಚು ಕಠಿಣವಾಗಿಯೂ, ಗಡುಸಾಗಿಯೂ ಇರುತ್ತದೆ.

ಇದರ ಖನಿಜವನ್ನು ಉಕ್ಕಿನಿಂದ ಹೊಡೆದರೆ ಅದು ಬೆಂಕಿಯ ಕಿಡಿಕಾರುತ್ತದೆ. ಆದ್ದರಿಂದ ಅದಕ್ಕೆ ಪೈರೈಟ್ಸ್ ಎಂಬ ಹೆಸರು ಬಂದಿದೆ. ಇತಿಹಾಸ ಪೂರ್ವ ಕಾಲದ ಹೂಳು ಭೂಮಿಯಲ್ಲಿ ಪೈರೈಟ್ಸ್‌ನ ಗುರುತುಗಳು ಪತ್ತೆಯಾಗಿವೆ. ಆದ್ದರಿಂದ ಪ್ರಾಚೀನ ಮಾನವರು ಇದನ್ನು ಬೆಂಕಿ ಹೊತ್ತಿಸುವುದಕ್ಕಾಗಿ ಬಳಸುತ್ತಿದ್ದರೆಂದು ಕಾಣುತ್ತದೆ.

ಶುದ್ಧ ಪೈರೈಟ್ಸ್ (Pure pyroite) ಶೇ 46.67 ರಷ್ಟು ಕಬ್ಬಿಣ ಮತ್ತು ಶೇ 53.33 ರಷ್ಟು ಗಂಧಕವನ್ನು ಒಳಗೊಂಡಿರುತ್ತದೆ. ಇಟಲಿ, ನಾರ್ವೆ, ಜಪಾನ್, ಕೆನಡಾ, ಪೋರ್ಚುಗಲ್ ಮತ್ತು ಜೆಕೊಸ್ಲೊವಾಕಿಯಾ ಈ ದೇಶಗಳಲ್ಲಿ ಈ ಖನಿಜದ ನಿಕ್ಷೇಪಗಳು ಅಧಿಕ ಪ್ರಮಾಣದಲ್ಲಿ ಲಭ್ಯವಿದೆ.



ಸುಭಾಷಿತ

ನಿರೀಕ್ಷೆಗಳು ನಿಮ್ಮ ದಾರಿಯಲ್ಲಿ ಅಡಗಿರುವ ಬಂಡೆಗಳಂತೆ. ಅವು, ನೀವು ಹಾದಿ ತಪ್ಪುವಂತೆ ಮಾಡುತ್ತವೆ.
–ಚಿತ್ರಾ ಬ್ಯಾನರ್ಜಿ ದಿವಾಕರುಣಿ

ವಿದ್ಯುತ್ ಪರಿವರ್ತಕಗಳ ಸ್ಥಳಾಂತರ ಕಾಲಮಿತಿಯೊಳಗೆ ಪೂರ್ಣಗೊಳ್ಳಲಿ

ಸಾರ್ವಜನಿಕ ಸ್ಥಳಗಳಲ್ಲಿ ಸಂಭವಿಸಿದ ವಿದ್ಯುತ್ ಅವಘಡಗಳಿಂದಾಗಿ ಬೆಂಗಳೂರಿನಲ್ಲಿ ಒಂದು ತಿಂಗಳ ಅವಧಿಯಲ್ಲಿ ನಾಲ್ಕು ಮಂದಿ ಜೀವ ಕಳೆದುಕೊಂಡಿದ್ದಾರೆ. ನಗರದ ಹೊರವಲಯದ ಮಂಗನಹಳ್ಳಿ ಎಂಬಲ್ಲಿ ವಿದ್ಯುತ್ ಪರಿವರ್ತಕ ಸ್ಫೋಟಗೊಂಡು ತಂದೆ ಹಾಗೂ ಮಗಳು ಮೃತಪಟ್ಟಿದ್ದರೆ, ಇನ್ನೆರಡು ಪ್ರತ್ಯೇಕ ಘಟನೆಗಳಲ್ಲಿ ಇಬ್ಬರು ಯುವಕರು ವಿದ್ಯುತ್ ಪ್ರವಹಿಸುತ್ತಿದ್ದ ತಂತಿ ಹಾಗೂ ಕೇಬಲ್ ಸ್ಪರ್ಶದಿಂದ ಅಸುನೀಗಿದ್ದಾರೆ. ವಿದ್ಯುತ್ ಅವಘಡಗಳನ್ನು ತಪ್ಪಿಸುವ ವಿಚಾರದಲ್ಲಿ ಬೆಸ್ಕಾಂ ಎಷ್ಟರಮಟ್ಟಿಗೆ ಅಸಡ್ಡೆ ವಹಿಸಿದೆ ಎಂಬುದನ್ನು ಈ ಸಾವುಗಳು ಬೊಟ್ಟು ಮಾಡಿ ತೋರಿಸುತ್ತಿವೆ. ರಸ್ತೆ ಪಕ್ಕ, ರಾಜಕಾಲುವೆಗಳಲ್ಲಿ, ಪಾದಚಾರಿ ಮಾರ್ಗಗಳಲ್ಲಿ ಎಲ್ಲೆಂದರಲ್ಲಿ ಅಳವಡಿಸಿರುವ ವಿದ್ಯುತ್ ಪರಿವರ್ತಕಗಳು ಪಾದಚಾರಿಗಳ ಜೀವಕ್ಕೆ ಕಂಟಕಪ್ರಾಯವಾಗುತ್ತಿವೆ. ಅನೇಕ ಕಡೆ ಸಾರ್ವಜನಿಕರ ಜೀವಕ್ಕೆ ಸಂಚಕಾರ ತರಬಲ್ಲ ಸ್ಥಿತಿಯಲ್ಲಿ ನೆಲಮಟ್ಟದಲ್ಲೇ ಇವುಗಳನ್ನು ಸ್ಥಾಪಿಸಲಾಗಿದೆ. ಪ್ರಯಾಣಿಕರ ತಂಗುದಾಣಗಳ ಸಮೀಪದಲ್ಲೂ ಇವುಗಳನ್ನು ಅಳವಡಿಸಿರುವುದನ್ನು ಕಾಣಬಹುದು. ಇನ್ನು ಕೆಲವೆಡೆ ಈಗಲೂ ಹಳೆಯ ಕಂಬಗಳಲ್ಲೇ ವಿದ್ಯುತ್ ಪರಿವರ್ತಕಗಳಿದ್ದು, ಅವುಗಳಲ್ಲಿ ಜೋತು ಬಿದ್ದಿರುವ ವಿದ್ಯುತ್ ತಂತಿಗಳು ಅಪಾಯಕ್ಕೆ ಆಹ್ವಾನ ನೀಡುವಂತಿವೆ. ವಾಹನಗಳು ಸಂಚರಿಸುವಾಗ ಇಂತಹ ವಿದ್ಯುತ್ ತಂತಿ ಸ್ಪರ್ಶಿಸುವ ಸಾಧ್ಯತೆಯೂ ಇದೆ. ಜಾಗದ ಕೊರತೆ ಇರುವುದರಿಂದ ಕೆಲವೆಡೆ ಜನರು ಓಡಾಡುವ ಕಡೆಯೇ ವಿದ್ಯುತ್ ಪರಿವರ್ತಕಗಳನ್ನು ಅನಿವಾರ್ಯವಾಗಿ ಅಳವಡಿಸಬೇಕಾಗುತ್ತದೆ ಎನ್ನುವುದು ಬೆಸ್ಕಾಂ ವಾದ. ಇಂತಹ ಅನಿವಾರ್ಯ ಇದ್ದಾಗ ಅವುಗಳನ್ನು ಎತ್ತರಿಸಿದ ಸ್ಥಳದಲ್ಲಿ ಸ್ಥಾಪಿಸುವ ಮೂಲಕ ಅಪಾಯ ತಡೆಗಟ್ಟಬೇಕು. ಕನಿಷ್ಠಪಕ್ಷ ಅವುಗಳನ್ನು ಅಳವಡಿಸಿರುವ ಸ್ಥಳಕ್ಕೆ ಜನರು ತಲುಪದಂತಹ ತಡೆ ಕ್ರಮ ಕೈಗೊಳ್ಳಬೇಕು. ನೆಲದಲ್ಲೇ ವಿದ್ಯುತ್ ಪರಿವರ್ತಕಗಳನ್ನು ಸ್ಥಾಪಿಸಿರುವ ಅನೇಕ ಕಡೆಗಳಲ್ಲಿ, ಸುರಕ್ಷತೆಗಾಗಿ ಬೇಲಿಯನ್ನು ಕೂಡ ನಿರ್ಮಿಸಿಲ್ಲ. ಇದು ಬೆಸ್ಕಾಂ ನಿರ್ಲಕ್ಷ್ಯದ ಪರಮಾವಧಿ.



> ಜನರಿಗೆ ಕಂಟಕವಾಗಿ ಪರಿಣಮಿಸಿರುವ ಟ್ರಾನ್ಸ್‌ಫಾರ್ಮರ್‌ಗಳ ಸ್ಥಳಾಂತರ ಕಾರ್ಯವು ಬಿಬಿಎಂಪಿ ಹಾಗೂ ಬೆಸ್ಕಾಂ ಸಮನ್ವಯದಿಂದ ತ್ವರಿತವಾಗಿ ನಡೆಯಬೇಕು

ಬೆಂಗಳೂರು ನಗರದಾದ್ಯಂತ ಒಟ್ಟು 70,267 ವಿದ್ಯುತ್ ಪರಿವರ್ತಕಗಳಿವೆ. ಇವುಗಳಲ್ಲಿ 8,659 ಟ್ರಾನ್ಸ್‌ಫಾರ್ಮರ್‌ಗಳು ಅಪಾಯಕಾರಿ ಸ್ಥಳಗಳಲ್ಲಿದ್ದು, ಅವುಗಳನ್ನು ಸ್ಥಳಾಂತರಿಸಬೇಕು ಅಥವಾ ಎತ್ತರದ ಸ್ಥಳದಲ್ಲಿ ಅಳವಡಿಸಬೇಕು ಎಂದು ಗುರುತಿಸಲಾಗಿತ್ತು. ಸಾರ್ವಜನಿಕ ಸ್ಥಳಗಳಲ್ಲಿ ಜನರಿಗೆ ಅಪಾಯಕಾರಿಯಾಗುವಂತಿರುವ ವಿದ್ಯುತ್ ಪರಿವರ್ತಕಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವಂತೆ ಹೈಕೋರ್ಟ್ 2021ರ ಏಪ್ರಿಲ್‌ನಲ್ಲಿ ಬೆಸ್ಕಾಂಗೆ ಸೂಚನೆಯನ್ನೂ ನೀಡಿತ್ತು. ಆದರೆ, ಇದುವರೆಗೆ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರ ಮಾಡಲಾದ ಹಾಗೂ ಎತ್ತರ ಹೆಚ್ಚಿಸಲಾದ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ ಕೇವಲ 3,000. ವಿದ್ಯುತ್ ಪರಿವರ್ತಕಗಳ ಸ್ಥಳಾಂತರ ಕಾರ್ಯಕ್ಕೆ ₹ 100 ಕೋಟಿ ವೆಚ್ಚವಾಗುತ್ತದೆ ಎಂದು ಅಂದಾಜಿಸಲಾಗಿದೆ ಎಂದು ಹೈಕೋರ್ಟ್‌ಗೆ ಬೆಸ್ಕಾಂ ಇತ್ತೀಚೆಗೆ ಮಾಹಿತಿ ನೀಡಿತ್ತು. ₹ 100 ಕೋಟಿ ವೆಚ್ಚವಾಗುತ್ತದೆ ಎಂಬ ನೆಪ ಹೇಳಿ ವಿದ್ಯುತ್ ಪರಿವರ್ತಕಗಳ ಸ್ಥಳಾಂತರಕ್ಕೆ ಮೀನಮೇಷ ಎಣಿಸುತ್ತಾ ಕಾಲಹರಣ ಮಾಡುವುದನ್ನು ಸುತರಾಂ ಒಪ್ಪಲು ಸಾಧ್ಯವಿಲ್ಲ. ಜನರ ಜೀವಗಳಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂಬುದನ್ನು ಬೆಸ್ಕಾಂ ಅಧಿಕಾರಿಗಳು ಮನದಟ್ಟು ಮಾಡಿಕೊಳ್ಳಬೇಕು. ಹೈಕೋರ್ಟ್ ಸೂಚನೆಯನ್ನು ತುರ್ತಾಗಿ ಅನುಷ್ಠಾನಗೊಳಿಸಿದ್ದರೆ ವಿದ್ಯುತ್ ಅವಘಡಗಳಿಗೆ ನಗರದಲ್ಲಿ ಮತ್ತೆ ಜನರ ಜೀವಗಳು ಬಲಿಯಾಗುವುದಾದರೂ ತಪ್ಪುತ್ತಿತ್ತು ಎಂಬುದನ್ನು ಅಧಿಕಾರಿಗಳು ಮೊದಲು ತಿಳಿದುಕೊಳ್ಳಬೇಕು.

ಬೆಸ್ಕಾಂನ ಬಹುತೇಕ ಪರಿವರ್ತಕಗಳು ಇರುವುದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಸೇರಿರುವ ಜಾಗದಲ್ಲಿ. ಪಾದಚಾರಿ ಮಾರ್ಗದಂತಹ ಜನರು ಓಡಾಡುವ ಜಾಗದಲ್ಲಿ ಸುರಕ್ಷತಾ ಕ್ರಮಗಳಿಲ್ಲದೇ ಟ್ರಾನ್ಸ್‌ಫಾರ್ಮರ್ ಅಳವಡಿಸಲು ಅವಕಾಶ ಕಲ್ಪಿಸುವುದರಲ್ಲಿ ಬಿಬಿಎಂಪಿಯ ಅಸಡ್ಡೆಯೂ ಇದೆ. ಇವುಗಳಿಂದ ಜನರಿಗೆ ಅಪಾಯ ಉಂಟಾಗುತ್ತದೆ ಎಂಬ ಬಗ್ಗೆ ದೂರುಗಳು ಬಂದ ಬಳಿಕವೂ ಅವುಗಳನ್ನು ಸ್ಥಳಾಂತರಿಸಲು ಬಿಬಿಎಂಪಿ ಮುತುವರ್ಜಿ ವಹಿಸಿಲ್ಲ. ಹೊಸ ಟ್ರಾನ್ಸ್‌ಫಾರ್ಮರ್‌ಗಳ ಅಳವಡಿಕೆ ಹಾಗೂ ಈಗಾಗಲೇ ಪಾದಚಾರಿ ಮಾರ್ಗಗಳ ಮೇಲಿರುವ ಟ್ರಾನ್ಸ್‌ಫಾರ್ಮರ್‌ಗಳ ಸ್ಥಳಾಂತರಕ್ಕೆ ಜಾಗ ಗುರುತಿಸಲು ಬಿಬಿಎಂಪಿ ಹಾಗೂ ಬೆಸ್ಕಾಂ ಅಧಿಕಾರಿಗಳನ್ನೊಳಗೊಂಡ ಸಮನ್ವಯ ಸಮಿತಿ ರಚಿಸಲು ಹೈಕೋರ್ಟ್ 2021ರ ಏಪ್ರಿಲ್‌ನಲ್ಲೇ ಸೂಚಿಸಿತ್ತು. ವಿದ್ಯುತ್ ಪರಿವರ್ತಕಗಳ ಸ್ಥಳಾಂತರದ ವಿಚಾರದಲ್ಲಿ ಈ ಎರಡರ ನಡುವೆ ಸಮನ್ವಯದ ಕೊರತೆ ಢಾಳಾಗಿ ಎದ್ದುಕಾಣಿಸುತ್ತಿದೆ. ಜನರಿಗೆ ಕಂಟಕವಾಗಿ ಪರಿಣಮಿಸಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಮತ್ತಷ್ಟು ಜೀವಗಳು ಬಲಿಯಾಗುವುದಕ್ಕೆ ಮುನ್ನವೇ ಸ್ಥಳಾಂತರಿಸಬೇಕು. ಇದಕ್ಕೆ ಸರ್ಕಾರ ಕಾಲಮಿತಿಯನ್ನು ನಿಗದಿಪಡಿಸಬೇಕು. ಬಿಬಿಎಂಪಿ ಹಾಗೂ ಬೆಸ್ಕಾಂ ಸಮನ್ವಯದಿಂದ ಈ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಹೆಚ್ಚು ಸುರಕ್ಷಿತವಾದ, ಕಡಿಮೆ ಜಾಗದಲ್ಲಿ ಅಳವಡಿಸಬಹುದಾದ ಟ್ರಾನ್ಸ್‌ಫಾರ್ಮರ್‌ಗಳು ಇತ್ತೀಚೆಗೆ ಬಳಕೆಯಾಗುತ್ತಿವೆ. ಬೆಸ್ಕಾಂ ಈಗಾಗಲೇ ಅನೇಕ ಕಡೆ ಇಂತಹ ಆಧುನಿಕ ಹಾಗೂ ಸುಧಾರಿತ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವ ಕಾರ್ಯಕ್ಕೂ ಚಾಲನೆ ನೀಡಿದೆ. ಅನೇಕ ಕಡೆ ಹಳೆ ಮಾದರಿಯ ಟ್ರಾನ್ಸ್‌ಫಾರ್ಮರ್‌ಗಳು ಈಗಲೂ ಇರುವುದನ್ನು ಕಾಣಬಹುದು. ಇಂತಹವುಗಳನ್ನು ಬದಲಿಸಿ ಸುರಕ್ಷಿತ ಸಾಧನಗಳನ್ನು ಅಳವಡಿಸುವ ಕಾರ್ಯವೂ ಸಮರೋಪಾದಿಯಲ್ಲಿ ನಡೆಯಬೇಕು.

ದಿನದ ಟ್ವೀಟ್

ಮೌನ ಸಲ್ಲದು



ಮ್ಯಾನ್ಮಾರ್‌ನ ನೊಬೆಲ್ ಪ್ರಶಸ್ತಿ ಪುರಸ್ಕೃತ ಆಂಗ್ ಸಾನ್ ಸೂ ಕಿ ಅವರನ್ನು ಅಲ್ಲಿನ ಅನಧಿಕೃತ ನ್ಯಾಯಾಲಯವು ಮಾರ್ಷಲ್ ಲಾ ಅಡಿಯಲ್ಲಿ ವಿಚಾರಣೆಗೆ ಒಳಪಡಿಸಿ, ಅವರಿಗೆ ಶಿಕ್ಷೆ ವಿಧಿಸಿರುವುದು ಭಯಾನಕವಾದ ಸಂಗತಿ. ಸೂ ಕಿ ಭಾರತದಲ್ಲಿ ಶಿಕ್ಷಣ ಪಡೆದವರು ಮತ್ತು ಅವರ ತಂದೆ ಸ್ವಾತಂತ್ರ್ಯ ಹೋರಾಟದ ನಾಯಕ. ಆಕೆಗೆ ಮೂಲಭೂತ ಮಾನವ ಹಕ್ಕುಗಳನ್ನು ನಿರಾಕರಿಸಿರುವುದರ ವಿರುದ್ಧ ಭಾರತ ಮೌನವಾಗಿರುವುದನ್ನು ನೋಡಿ ನನಗೆ ಆಘಾತವಾಗಿದೆ.

ಸುಬ್ರಮಣಿಯನ್ ಸ್ವಾಮಿ, ರಾಜ್ಯಸಭಾ ಸದಸ್ಯ, ಬಿಜೆಪಿ ಮುಖಂಡ

ಕಿಡಿನುಡಿ



ಕನ್ನಡದಲ್ಲಿ ಕಂಟೆಂಟ್ ಹೆಚ್ಚಿದಷ್ಟೂ ಹೆಚ್ಚೆಚ್ಚು ಜನರು ಕನ್ನಡದಲ್ಲೇ ಅದನ್ನು ಸವಿಯುತ್ತಾರೆ. ಕನ್ನಡದಲ್ಲಿ ನೋಡುವ ಅಭ್ಯಾಸ ಉಳಿಸಿ ಕೊಂಡರಷ್ಟೇ ಕನ್ನಡ ಬೆಳೆಯುತ್ತೆ ಅಂತ ತಿಳಿದರೂ ತಿಳಿಯದಂತೆ ವರ್ತಿಸಿ, ಕನ್ನಡಕ್ಕೆ ದೊಡ್ಡ ಅನ್ಯಾಯವನ್ನೇ ಮಾಡಿದರು ಈ ಡಬ್ಬಿಂಗ್ ವಿರೋಧಿಗಳು. ಈಗ ಅದು ಸರಿ ಹೋಗುತ್ತಿದೆ ಹಂತ ಹಂತವಾಗಿ ಅನ್ನುವುದೇ ಸಮಾಧಾನ.

ವಸಂತ ಶೆಟ್ಟಿ, ಬರಹಗಾರ

25 ವರ್ಷಗಳ ಹಿಂದೆ — ಸೋಮವಾರ, 28-4-1997

• ಪೇಜಾವರ ಶ್ರೀಗಳ ನಿರಶನ ಸ್ಥಗಿತ

ಮಂಗಳೂರು, ಏ. 27– ಪಾಜಕ ಕ್ಷೇತ್ರದಲ್ಲಿ ಗಣಿಗಾರಿಕೆಯನ್ನು ನಿಲ್ಲಿಸಿ, ಗಣಿಗಾರಿಕೆ ಪ್ರದೇಶದಲ್ಲಿ ಸೆಕ್ಷನ್ 144 ಅನ್ನು ವಿಧಿಸಿರುವ ಹಿನ್ನೆಲೆಯಲ್ಲಿ ಪೇಜಾವರ ಪೀಠಾಧೀಶರಾದ ವಿಶ್ವೇಶತೀರ್ಥ ಸ್ವಾಮೀಜಿ ಅವರು ಮೊದಲೇ ಉದ್ದೇಶಿಸಿದ್ದ ನಿರಶನವನ್ನು ಕೈಬಿಡಲು ನಿರ್ಧರಿಸಿದ್ದಾರೆ.

ಪಾಜಕ ಕ್ಷೇತ್ರದಲ್ಲಿ ಗಣಿಗಾರಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿ, ಇಡೀ ಪ್ರದೇಶವನ್ನು ರಕ್ಷಿತ ಪ್ರದೇಶವೆಂದು ಘೋಷಿಸುವುದಾಗಿ ಮುಖ್ಯಮಂತ್ರಿ ಜೆ.ಎಚ್. ಪಟೇಲರು ಹೇಳಿರುವ ಹಿನ್ನೆಲೆಯಲ್ಲಿ ಈ ತೀರ್ಮಾನವನ್ನು ಕೈಗೊಂಡಿರುವುದಾಗಿ ತಿಳಿಸಿದರು.

• ದೇವನಹಳ್ಳಿ ವಿಮಾನ ನಿಲ್ದಾಣ ಹೊಸ ಟೆಂಡರ್ ಸಂಭವ

ನವದೆಹಲಿ, ಏ. 27 (ಪಿಟಿಐ)– ಬೆಂಗಳೂರು ಬಳಿಯ ದೇವನಹಳ್ಳಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಹೊಸದಾಗಿ ಜಾಗತಿಕ ಟೆಂಡರ್ ಕರೆಯುವ ಉದ್ದೇಶವಿದ್ದು, ದೇಶದ ಪ್ರಪ್ರಥಮ ಖಾಸಗಿ ಒಡೆತನದ ವಿಮಾನ ನಿಲ್ದಾಣ ನಿರ್ಮಾಣ ಕಾರ್ಯ ಮತ್ತಷ್ಟು ವಿಳಂಬವಾಗುವ ಸಾಧ್ಯತೆಯಿದೆ.

ಸುಮಾರು 2,600 ಕೋಟಿ ರೂಪಾಯಿ ಯೋಜನಾ ವೆಚ್ಚದ ಈ ವಿಮಾನ ನಿಲ್ದಾಣದ ಒಡೆತನದ ಬಗ್ಗೆ ವಿವಾದ ಎದ್ದಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

50 ವರ್ಷಗಳ ಹಿಂದೆ — ಶುಕ್ರವಾರ, 28-4-1972

• ಕಡಿಮೆ ಭೂ ಹಿಡುವಳಿ ನಿಗದಿ ಮಾಡಲು ರಾಜ್ಯ ಸರ್ಕಾರಗಳು ಸ್ವತಂತ್ರ

ನವದೆಹಲಿ, ಏ. 27– ಕೇಂದ್ರ ಭೂಸುಧಾರಣಾ ಸಮಿತಿ ಸಲಹೆ ಮಾಡಿರುವ ಪರಮಾವಧಿ ಮಿತಿಗಿಂತ ಕಡಿಮೆಯಿರುವಂತೆ ರಾಜ್ಯ ಸರ್ಕಾರಗಳು ಭೂಹಿಡುವಳಿ ಮಿತಿಯನ್ನು ನಿಗದಿಗೊಳಿಸಲು ಅಡ್ಡಿಯಿಲ್ಲ ಎಂದು ಕೇಂದ್ರ ಕೃಷಿ ಸಚಿವ ಫಕ್ರುದ್ದೀನ್ ಅಲಿ ಅಹ್ಮದ್ ಅವರು ಇಂದು ಲೋಕಸಭೆಗೆ ಆಶ್ವಾಸನೆ ನೀಡಿದರು.

ಭೂಹಿಡುವಳಿ ಮಿತಿ ಕುರಿತ ಸಭೆಯಲ್ಲಿ ಹೇಳಿಕೆ ನೀಡುತ್ತಿದ್ದ ಸಚಿವರು, ರಾಜ್ಯ ಸರ್ಕಾರಗಳು ತಮ್ಮ ರಾಜ್ಯಗಳಲ್ಲಿ ಇರುವ ವಾಸ್ತವ ಸ್ಥಿತಿಗಳನ್ನು ಪರಿಗಣನೆಗೆ ತೆಗೆದುಕೊಂಡು ಮಿತಿ ನಿಗದಿಗೊಳಿಸಲು ಸಹ ಯಾವ ಅಡ್ಡಿಯೂ ಇಲ್ಲ; ಸಮಿತಿ ಸಲಹೆ ಮಾಡಿದ್ದದ್ದು ಪರಮಾವಧಿ ಮಿತಿಯನ್ನಷ್ಟೇ ಎಂದೂ ಸೂಚಿಸಿದರು.

‘ಹಿಂದೂ ಅಖಂಡ ಭಾರತ’ ಕಲ್ಪನೆ ಹಾಗೂ ವಸ್ತುಸ್ಥಿತಿ...

ಭಾಗವತ್ ಭವಿಷ್ಯವಾಣಿ ಸಾಕಾರವಾದೀತೇ?



ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ಮೋಹನ್ ಭಾಗವತ್ ನಮ್ಮ ದೇಶದ ಒಬ್ಬ ಪ್ರಭಾವಶಾಲಿ ವ್ಯಕ್ತಿ. ರಾಷ್ಟ್ರೀಯ ಸ್ವಯಂಸೇವಕ ಸಂಘದಂಥ ಒಂದು ಬಲಾಢ್ಯ ಸಂಸ್ಥೆಯ ಪ್ರಮುಖರಾಗಿರುವುದರಿಂದ ಅವರ ಪ್ರತಿಯೊಂದು ಮಾತನ್ನೂ ಮಾಧ್ಯಮಗಳು ಜೋರಾಗಿ ಬಿತ್ತರಿಸುತ್ತವೆ. ಆದರೆ ಅವರ ವಿಚಾರಗಳ ಬಗೆಗೆ ಕೂಲಂಕಷವಾದ ವಿಶ್ಲೇಷಣೆ ನಡೆಯುವುದು ಮಾತ್ರ ಕಡಿಮೆಯೇ. ಹರಿದ್ವಾರದಲ್ಲಿ ಇತ್ತೀಚೆಗೆ ನಡೆದ ಹಿಂದೂ ಸಂತ ಸಮ್ಮೇಳನದಲ್ಲಿ ಅವರು, ‘ಮುಂದಿನ 10– 15 ವರ್ಷಗಳಲ್ಲಿ ಅಖಂಡ ಭಾರತದ ನಮ್ಮ ಕನಸು ನನಸಾಗಲಿದೆ’ ಎಂಬ ಆಶ್ಚರ್ಯಕರವಾದ ಭವಿಷ್ಯವಾಣಿಯನ್ನು ನುಡಿದರು.

ಈ ಕನಸು ಸಾಕಾರಗೊಳ್ಳುವುದು ಹೇಗೆ? ಇದರ ಬಗ್ಗೆ ಭಾಗವತ್ ಅವರು ಹೇಳಿದ್ದು ಹೀಗೆ: ‘ಎಲ್ಲವನ್ನೂ ಒಮ್ಮೆಲೇ ಸಾಧಿಸಲು ಸಾಧ್ಯವಿಲ್ಲ. ಆ ಶಕ್ತಿ ನನ್ನಲ್ಲಿಲ್ಲ. ಆ ಶಕ್ತಿ ಇರುವುದು ಜನರಲ್ಲಿ. ನಾವು ಜನರನ್ನು ತಯಾರು ಮಾಡುತ್ತಿದ್ದೇವೆ. ನಮ್ಮದು ಅಹಿಂಸೆಯ ಭಾಷೆ. ಆದರೆ ನಾವು ಕೈಯಲ್ಲಿ ಬಡಿಗೆ ಹಿಡಿದು ನಡೆಯುವೆವು. ಅದು ಭಾರಿ ದೊಡ್ಡ ಬಡಿಗೆ. ನಮಗೆ ಯಾರ ಬಗ್ಗೆಯೂ ದುರ್ಭಾವನೆ, ವೈರತ್ವ ಇಲ್ಲ. ಆದರೆ ಜಗತ್ತು ತಲೆಬಾಗುವುದು ಬಲದ ಮುಂದೆ ಮಾತ್ರ. ಆದ್ದರಿಂದ ನಮ್ಮ ಬಳಿ ಬಲ ಇರಬೇಕು. ಆ ಬಲ ಎಲ್ಲರಿಗೂ ಕಾಣುವಂತಿರಬೇಕು. ಅಖಂಡ ಭಾರತದ ಮಾರ್ಗದಲ್ಲಿ ಅಡ್ಡ ಬರುವವರು ದೂರ ಸರಿಯಬೇಕು, ಇಲ್ಲವಾದರೆ ಅವರನ್ನು ತಳ್ಳಿಹಾಕುವೆವು’.


ದರ್ಪ ಹಾಗೂ ವಿರೋಧಾಭಾಸದಿಂದ ಕೂಡಿರುವ ಈ ಹೇಳಿಕೆ ಹಲವು ಪ್ರಶ್ನೆಗಳನ್ನು ಹುಟ್ಟಿಸುತ್ತದೆ. 1947ರಲ್ಲಿ ಭಾರತದ ವಿಭಜನೆಯು ಒಂದು ಮಹಾದುರಂತ ಎಂಬುದು ನಿಸ್ಸಂದೇಹ. ನಂತರ 1971ರಲ್ಲಿ ಪಾಕಿಸ್ತಾನದ ವಿಭಜನೆಯಾಗಿ ಬಾಂಗ್ಲಾದೇಶ ಸ್ಥಾಪನೆಯಾಯಿತು. ಆದರೆ ಇಂದು ಸ್ವತಂತ್ರ ಮತ್ತು ಸಾರ್ವಭೌಮವಾಗಿರುವ ಮೂರು ದೇಶಗಳು ಮತ್ತೆ ಒಂದು ರಾಷ್ಟ್ರವಾಗಿ, ಅಂದರೆ ‘ಅಖಂಡ ಭಾರತ’ವಾಗಿ ಒಂದುಗೂಡಲು ಸಾಧ್ಯವೇ? ಸ್ವಾತಂತ್ರ್ಯೋತ್ತರ ಸೆಕ್ಯುಲರ್ ಭಾರತವನ್ನೇ ಹಿಂದೂ ರಾಷ್ಟ್ರವನ್ನಾಗಿ ಮಾಡಲು ಹೊರಟಿರುವ ಆರ್‌ಎಸ್‌ಎಸ್ ನೇತೃತ್ವದಲ್ಲಿ ನಾಳೆ ಈ ಮೂರು ದೇಶಗಳೂ ಕೂಡಿ ಬೃಹತ್ ‘ಹಿಂದೂ ಅಖಂಡ ಭಾರತ’ ಆಗಲು ಸಾಧ್ಯವೇ? ಇದಕ್ಕೆ ಪಾಕಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿನ ಜನತೆ, ಸರ್ಕಾರ ಹಾಗೂ ಸೇನೆಗಳು ಒಪ್ಪಬಹುದೇ? ‘ಭಾರಿ ದೊಡ್ಡ ಬಡಿಗೆ’ ಹಿಡಿದು ತನ್ನ ಬಲಶಾಲಿತ್ವವನ್ನು ತೋರಿಸುತ್ತ ನಿಂತಿರುವ ಆರ್‌ಎಸ್‌ಎಸ್‌ಗೆ ಹೆದರಿ ಈ ನೆರೆಯ ರಾಷ್ಟ್ರಗಳು ‘ಹಿಂದೂ ಅಖಂಡ ಭಾರತ’ದಲ್ಲಿ ವಿಲೀನಗೊಳ್ಳಲು ತಯಾರಾಗಬಹುದೇ?

ಇದಕ್ಕಿಂತ ಮುಖ್ಯವಾದ ಪ್ರಶ್ನೆಯೊಂದಿದೆ. ಇಂದಿನ ಭಾರತದಲ್ಲಿರುವ 15 ಪ್ರತಿಶತ ಮುಸ್ಲಿಮರೇ (ಹಾಗೂ ಸೆಕ್ಯುಲರ್ ಹಿಂದೂಗಳು ಕೂಡ) ‘ಹಿಂದೂ ರಾಷ್ಟ್ರ’ದ ಕಲ್ಪನೆಯನ್ನು ವಿರೋಧಿಸುತ್ತಿದ್ದಾರೆ. ನಾಳೆಯ ಕಲ್ಪಿತ ‘ಅಖಂಡ ಭಾರತ’ದಲ್ಲಿಯಂತೂ ಪಾಕಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿನ ಪ್ರಜೆಗಳೂ ಸೇರಿ ಮುಸ್ಲಿಮರ ಜನಸಂಖ್ಯೆ 40 ಪ್ರತಿಶತಕ್ಕೂ ಹೆಚ್ಚಾಗುವುದು ಖಚಿತ. ಇದನ್ನು ಆರ್‌ಎಸ್‌ಎಸ್ ಸಮರ್ಥಕರು ಸ್ವಾಗತಿಸಿಯಾರೇ?

1947ರ ಪೂರ್ವದಲ್ಲಿ ವಿಭಜನೆಯನ್ನು ನಿಲ್ಲಿಸಲು ಆರ್‌ಎಸ್‌ಎಸ್ ಯಾವುದೇ ದೊಡ್ಡ ಪ್ರಯತ್ನ ಮಾಡಿರಲಿಲ್ಲ. ಏಕೆಂದರೆ ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಚಳವಳಿಯಲ್ಲಿ ಆರ್‌ಎಸ್‌ಎಸ್ ಸಾಮೂಹಿಕವಾಗಿ ಭಾಗವಹಿಸಿರಲೇ ಇಲ್ಲ. 1951ರಲ್ಲಿ ಆರ್‌ಎಸ್‌ಎಸ್ ಹುಟ್ಟುಹಾಕಿದ ರಾಜಕೀಯ ಪಕ್ಷವಾದ ಭಾರತೀಯ ಜನಸಂಘ ತನ್ನ ಘೋಷಣಾ ಪತ್ರದಲ್ಲಿ ‘ಅಖಂಡ ಭಾರತ’ದ ಬಗ್ಗೆ ತನ್ನ ಬದ್ಧತೆಯನ್ನು ಪ್ರಕಟಿಸಿತ್ತು. ಆದರೆ ಕೆಲವು ವರ್ಷಗಳ ನಂತರ ಭಾರತ-ಪಾಕಿಸ್ತಾನ ಪುನಃ ಒಂದಾಗಬೇಕು ಎಂಬ ವಿಚಾರವನ್ನು ಜನಸಂಘ ಬಿಟ್ಟುಕೊಟ್ಟಿತು. ಜನಸಂಘದ ನಂತರ ಹೊಸ ರೂಪದಲ್ಲಿ ಹುಟ್ಟಿದ ಭಾರತೀಯ ಜನತಾ ಪಕ್ಷವಂತೂ ಇಲ್ಲಿಯವರೆಗೆ ಎಂದಿಗೂ ‘ಅಖಂಡ ಭಾರತ’ದ ಆಶ್ವಾಸನೆಯನ್ನು ನೀಡಿಲ್ಲ. ಆರ್‌ಎಸ್‌ಎಸ್ ಮಾತ್ರ ‘ಅಖಂಡ ಭಾರತ’ದ ಮದ್ದಳೆಯನ್ನು ಬಾರಿಸುತ್ತಲೇ ಇದೆ.

ಭೂತಕಾಲದಲ್ಲಿ ಯಾವುದೇ ಕಾರಣಕ್ಕಾಗಿ ವಿಭಜನೆಗೊಂಡ ರಾಷ್ಟ್ರಗಳು ಮತ್ತೆ ಒಂದುಗೂಡಬೇಕಾದರೆ ಅದು ಸ್ವಇಚ್ಛೆಯಿಂದ ಮಾತ್ರ ಸಾಧ್ಯ. ಯುದ್ಧದಿಂದಾಗಲೀ ಬಲಪ್ರಯೋಗದಿಂದಾಗಲೀ ಸಾಧ್ಯವಿಲ್ಲ. ಇಂದು ಭಾರತ ಮತ್ತು ಪಾಕಿಸ್ತಾನ ಎರಡೂ ಅಣ್ವಸ್ತ್ರಸಜ್ಜಿತವಾಗಿರುವುದರಿಂದ ಬಲಪ್ರಯೋಗಕ್ಕೆ ಆಸ್ಪದವೇ ಇಲ್ಲ. ನಾಲ್ಕು ಯುದ್ಧಗಳ ನಂತರ ಪಾಕಿಸ್ತಾನ ನಿಯಂತ್ರಿತ ಕಾಶ್ಮೀರದ (ಪಿಒಕೆ) ಚಿಕ್ಕ ಪ್ರದೇಶವನ್ನೂ ಮರಳಿ ಪಡೆಯಲು ನಮಗೆ ಸಾಧ್ಯವಾಗಿಲ್ಲದಿರುವಾಗ, ನಾವು ಇಡೀ ಪಾಕಿಸ್ತಾನವನ್ನು ‘ಅಖಂಡ ಭಾರತ’ದ ಅಂಗವನ್ನಾಗಿ ಮಾಡಲು ಸಾಧ್ಯವೇ?

ಇನ್ನು ಸ್ವಇಚ್ಛೆಯಿಂದ ಒಂದಾಗುವ ವಿಷಯವನ್ನು ಚರ್ಚಿಸೋಣ. ಇದಕ್ಕಾಗಿ ಮೊದಲು ದಕ್ಷಿಣ ಏಷ್ಯಾದಲ್ಲಿನ ಅತಿ ದೊಡ್ಡ ರಾಷ್ಟ್ರವಾಗಿರುವುದರಿಂದ ಭಾರತ ನೆರೆಹೊರೆಯವರಿಗೆ ಆದರ್ಶವಾಗಬೇಕು. ಸಾಮಾಜಿಕ ನ್ಯಾಯ, ವಿವಿಧ ಜಾತಿ- ಪಂಥಗಳ ನಡುವೆ ಶಾಂತಿ ಮತ್ತು ಸೌಹಾರ್ದ, ಆರ್ಥಿಕ ಸಮಾನತೆ, ಪರಿಪಕ್ವವಾದ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಸುಶಾಸನ- ಈ ವಿಷಯಗಳಲ್ಲಿ ಭಾರತ ಅನುಕರಣೀಯ ಮಾದರಿಯಾಗಬೇಕು. ಆದರೆ ಇಂದು ನಮ್ಮ ದೇಶದಲ್ಲಿ ನಡೆದಿರುವುದೇನು?



ರಾಮನವಮಿ ಹಾಗೂ ಹನುಮಾನ್ ಜಯಂತಿಯ ಉತ್ಸವಗಳಲ್ಲಿ ಉತ್ತರ ಭಾರತದ ಹಲವಾರು ಸ್ಥಳಗಳಲ್ಲಿ ಕೋಮು ಗಲಭೆಗಳು ನಡೆದವು. ಕೆಲ ಹಿಂದೂ ಧರ್ಮಾಂಧರು ಪ್ರಥಮ ಬಾರಿ ಕೈಯಲ್ಲಿ ಬಡಿಗೆಯಷ್ಟೇ ಅಲ್ಲ ಖಡ್ಗ, ಚಾಕು ಮತ್ತು ಬಂದೂಕು ಹಿಡಿದುಕೊಂಡು ಮೆರವಣಿಗೆ ನಡೆಸಿದರು. ಮುಸ್ಲಿಮರನ್ನು ಬೆದರಿಸಿ ‘ಹಿಂದೂಸ್ತಾನ್ ಮೇ ರೆಹನಾ ಹೈ ತೊ ಜೈ ಶ್ರೀರಾಮ್ ಕೆಹನಾ ಹೋಗಾ’ (ಭಾರತದಲ್ಲಿ ಇರಬೇಕಾದರೆ ಜೈ ಶ್ರೀರಾಮ್ ಅನ್ನಲೇಬೇಕು) ಎಂದು ಕೂಗಿದರು. ದಿಲ್ಲಿಯ ಜಹಾಂಗೀರ್‌ಪುರಿಯಲ್ಲಿ ಬಿಜೆಪಿ ಆಡಳಿತದ ನಗರಪಾಲಿಕೆಯು ಬುಲ್ಡೋಜರ್ ಬಳಸಿ ಪ್ರಮುಖವಾಗಿ ಬಡ ಮುಸ್ಲಿಮರ ಮನೆ- ಅಂಗಡಿಗಳನ್ನು ಧ್ವಂಸಗೊಳಿಸಿತು. ಇದೆಲ್ಲದರ ವಿರುದ್ಧ ಆರ್‌ಎಸ್‌ಎಸ್ ಪ್ರತಿಭಟನೆಯ ದನಿ ಎತ್ತಿಲ್ಲ.

ಇದಕ್ಕಿಂತ ಮೊದಲು, ಕಾವಿ ಬಟ್ಟೆ ಧರಿಸಿದ ಹಲವಾರು ನಕಲಿ ಸ್ವಾಮಿಗಳು ಮುಸ್ಲಿಮರ ನರಸಂಹಾರಕ್ಕೆ ಕರೆ ಕೊಟ್ಟ ಆಘಾತಕಾರಿ ಘಟನೆಗಳೂ ನಡೆದಿವೆ. ಮುಸ್ಲಿಂ ವ್ಯಾಪಾರಿಗಳ ವಿರುದ್ಧ ಆರ್ಥಿಕ ಬಹಿಷ್ಕಾರದಂತಹ ದುಷ್ಕೃತ್ಯಗಳೂ ಹೆಚ್ಚಾಗಿವೆ. ಇಂದಿನ ಇಂಟರ್ನೆಟ್ ಯುಗದಲ್ಲಿ ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಜನರಿಗೆ ಇದೆಲ್ಲ ಗೊತ್ತಾಗುವುದಿಲ್ಲ ಎಂದು ತಿಳಿದವರು ಮೂರ್ಖರು.

ಮುಸ್ಲಿಂ ಸಮಾಜದಲ್ಲಿಯೂ ಧರ್ಮಾಂಧತೆ, ಆಕ್ರೋಶ ಬೆಳೆಯುತ್ತಿವೆ. ಇದೆಲ್ಲದರಿಂದಾಗಿ ಭಾರತದಲ್ಲಿ ಎರಡೂ ಪಂಥೀಯರ ನಡುವೆ ಮಾನಸಿಕ ವಿಭಜನೆಯ ಪಿತೂರಿ ನಡೆದಿದೆ. ಆರ್‌ಎಸ್‌ಎಸ್ ಮನಸ್ಸು ಮಾಡಿದರೆ ಹಿಂದೂ ಉಗ್ರವಾದವನ್ನು ನಿಲ್ಲಿಸಬಹುದು. ಅಷ್ಟು ತಾಕತ್ತು ಸಂಘದ ಬಳಿ ನಿಶ್ಚಿತವಾಗಿಯೂ ಇದೆ. ಆದರೆ ಹೀಗೆ ಮಾಡಿದರೆ ಸಂಘದ ರಾಜಕೀಯ ವಿಭಾಗವಾದ ಬಿಜೆಪಿಗೆ ತನ್ನ ಹಿಂದೂ ವೋಟ್‌ಬ್ಯಾಂಕ್ ಅನ್ನು ಉಳಿಸಿ ಬೆಳೆಸಿ ಅಧಿಕಾರದಲ್ಲಿ ಮುಂದುವರಿಯಲು ಆಗದು.

‘ಅಖಂಡ ಭಾರತ’ ಸದ್ಯಕ್ಕೆ ಸಾಧ್ಯವಿಲ್ಲ. ಕಾಲದ ಗಡಿಯಾರವನ್ನು ಹಿಂದಕ್ಕೆ ತಿರುಗಿಸಲು ಆಗದು. ಆದರೆ ಐರೋಪ್ಯ ಒಕ್ಕೂಟದ ರೀತಿ ತಮ್ಮ ತಮ್ಮ ಪ್ರತ್ಯೇಕ ರಾಷ್ಟ್ರೀಯತೆಯನ್ನು ಕಾಪಾಡಿಕೊಂಡು ಭಾರತ-ಪಾಕ್-ಬಾಂಗ್ಲಾ ಸಮೇತವಾಗಿ ‘ದಕ್ಷಿಣ ಏಷ್ಯಾ ಮಹಾಸಂಘ’ (confederation) ಸ್ಥಾಪಿಸುವುದು ಅವಶ್ಯಕವೂ ಅಪೇಕ್ಷಣೀಯವೂ ಹೌದು. ಇದು ಸಮಾನತೆ, ಪರಸ್ಪರ ಆದರ, ಪರಸ್ಪರ ಸಹಕಾರ, ಸರ್ವರಿಗೂ ಶಾಂತಿ ಮತ್ತು ಸುರಕ್ಷೆ, ಯಾವುದೇ ಭೇದಭಾವವಿಲ್ಲದೆ ಸರ್ವರ ಪ್ರಗತಿ– ಈ ತತ್ವಗಳ ಆಧಾರದ ಮೇಲೆ ಮಾತ್ರ ಸಾಧ್ಯ. ಮುಖ್ಯವಾಗಿ, ಎಲ್ಲ ಧರ್ಮಗಳ ಬಗ್ಗೆ ಸಮಾನ ಆದರ, ಸಾಂಸ್ಕೃತಿಕ ವೈವಿಧ್ಯದ ಸಂರಕ್ಷಣೆ ಮತ್ತು ಅನೇಕ ತೊರೆಗಳಿಂದ ಕೂಡಿದ ನಮ್ಮ ಸಾಮೂಹಿಕ ನಾಗರಿಕತೆಯ ಕುರಿತು ಅಭಿಮಾನ ಇವು ಅವಶ್ಯಕ. ಯಾವುದೇ ಧರ್ಮ ಅಥವಾ ಸಂಸ್ಕೃತಿಯ ಹಿರಿಮೆಯ ವಿಚಾರದಲ್ಲಿ ಹಟ ಹಿಡಿದರೆ ಇದು ಸಾಧ್ಯವೇ ಇಲ್ಲ.

ಮೊದಲು ನಮ್ಮ ಮನೆಯನ್ನು ಸರಿಪಡಿಸೋಣ. ಭಾರತದಲ್ಲಿ ಶಾಂತಿ, ನ್ಯಾಯ, ನೆಮ್ಮದಿಯ ಬೀಡನ್ನು ಕಟ್ಟೋಣ. ಆಗಮಾತ್ರ ಮುಂದಿನ ದಶಕಗಳಲ್ಲಿ ಭಾರತೀಯ ಉಪಖಂಡದಲ್ಲಿ ಏಕತೆ ಬೆಳೆದು ಭವಿಷ್ಯ ಉಜ್ವಲವಾಗಬಹುದು.

ಚುರುಮುರಿ



ವೈರಸ್–ನರ್ವಸ್

• ಮಣ್ಣೆರಾಜು

‘**ಯುಗಾದಿ,** ದೀಪಾವಳಿಯಂತೆ ಕೊರೊನಾ ಪ್ರತಿವರ್ಷ ಬರಲು ಶುರುವಾಗಿದೆ. ಹಬ್ಬಹರಿದಿನಗಳಂತೆ ಕೊರೊನಾ ಬರುವ ದಿನಾಂಕಗಳನ್ನೂ ಕ್ಯಾಲೆಂಡರ್‌ನಲ್ಲಿ ಪ್ರಿಂಟ್ ಮಾಡಿದರೆ ನಾವು ಆ ಟೈಮ್‌ಗೆ ಬಟ್ಟೆ ಬರೆ ಕೊಂಡುಕೊಂಡು ಸಿದ್ಧವಾಗಬಹುದು’ ಅಂದಳು ಸುಮಿ.

‘ಹೊಸ ಬಟ್ಟೆ ತಂದು, ಮನೆ ಬಾಗಿಲಿಗೆ ತೋರಣ ಕಟ್ಟಿ, ರಂಗೋಲಿ ಹಾಕಿ ಆಚರಿಸಲು ಕೊರೊನಾ ಅನ್ನೋದು ಹಬ್ಬವಲ್ಲ’ ಅಂದ ಶಂಕ್ರಿ.

‘ಹಾಗಲ್ಲಾರೀ, ಹೊಸ ವೈರಸ್‌ಗೆ ಹೊಸ ಮಾಸ್ಕ್ ಕೊಳ್ಳಬೇಕಲ್ವಾ?’

‘ಹೊಸ ಮಾಸ್ಕಿಗೆ ಮ್ಯಾಚ್ ಆಗುವ ಹೊಸ ಸೀರೆ ಬೇಕು ಅಂತ ಕೇಳಬೇಡ, ಇರುವ ಸೀರೆಗಳಿಗೆ ಮ್ಯಾಚ್ ಆಗುವ ಮಾಸ್ಕ್ ಖರೀದಿ ಮಾಡು ಸಾಕು. ಹೊಸ ವೈರಸ್ ಪರಿಣಾಮ ಹೇಗಿರುತ್ತೋ ಏನೋ...’ ಶಂಕ್ರಿ ಆತಂಕಗೊಂಡ.

‘ಕಾಯಿಲೆ ಬಂದ ಮೇಲೆ ಪರದಾಡುವುದು ಬೇಡ. ಆರೋಗ್ಯ ಕಾಪಾಡಿಕೊಳ್ಳುವುದಕ್ಕೆ ಈಗಿನಿಂದಲೇ ನಿಗಾ ವಹಿಸೋಣ. ಆಸ್ಪತ್ರೆ ಖರ್ಚಿಗೆಂದು ಈಗಲೇ ದುಡ್ಡು ಹೊಂಚಿ ಇಟ್ಟುಕೊಳ್ಳಿ. ಬ್ಯಾಂಕ್‌ಗಳಲ್ಲಿ ಕೊರೊನಾ ಲೋನ್ ಕೊಡ್ತಾರಾ ಕೇಳಿ’ ಎಂದಳು ಸುಮಿ.

‘ಡಬಲ್ ಡೋಸ್, ಬೂಸ್ಟರ್ ಡೋಸ್ ಲಸಿಕೆ ಹಾಕಿಸಿಕೊಂಡಿದ್ದೀನಿ ಅಂತ ನೆಗ್ಲೆಕ್ಟ್ ಮಾಡಬೇಡ. ಗುಂಪು ಸೇರುವ ಮದುವೆ, ನಾಮಕರಣಗಳಿಗೆ ಹೋಗಬೇಡ, ಸ್ಯಾನಿಟೈಸರ್‌ನಲ್ಲಿ ಕೈ ತೊಳೆಸದೆ ಯಾರನ್ನೂ ಮನೆ ಒಳಗೆ ಬಿಟ್ಟುಕೊಳ್ಳಬೇಡ’.

‘ಗೊತ್ತೂರೀ, ಗೇಟಿನ ಮೇಲೆ ನಮ್ಮ ಲಸಿಕೆ ಪ್ರಮಾಣಪತ್ರದ ಪ್ರತಿ ಅಂಟಿಸಿ, ‘ಬೂಸ್ಟರ್ ಡೋಸ್ ಪಡೆದಿದ್ದೇವೆ, ಎಚ್ಚರಿಕೆ’ ಅಂತ ಬೋರ್ಡ್ ಹಾಕ್ತೀನಿ’.

‘ಬೋರ್ಡ್ ಹಾಕಿದ್ರೆ ಕೊರೊನಾ ಬರೊಲ್ವಾ?’

‘ಹಾಗಲ್ಲ, ಕೊರೊನಾ ಹೆಸರಲ್ಲಿ ಭಯ ಹುಟ್ಟಿಸಿ ಬೀಪಿ, ಶುಗರ್ ಜಾಸ್ತಿ ಮಾಡುವವರ ಕಾಟ ತಡೆಯಲು ಬೋರ್ಡ್ ಹಾಕ್ತೀನಿ...’ ಅಂದಳು ಸುಮಿ.

ಸಂಗತ

ಸಾಧನೆ: ಬೌದ್ಧಿಕವೋ? ಭೌತಿಕವೋ?

ಆತ್ಮಾವಲೋಕನಕ್ಕೆ ಇಳಿಯುವಷ್ಟು ವ್ಯವಧಾನ ಇಂದಿನವರಿಗೆ ಇಲ್ಲದಿರುವುದರಿಂದ, ಬದುಕಿನ ಸಾಧನೆ ಎನ್ನುವುದು ಭೌತಿಕ ವಸ್ತುಗಳ ರೂಪದಲ್ಲಷ್ಟೇ ಗೋಚರಿಸುತ್ತಿದೆ

• ರಾಜಕುಮಾರ ಕುಲಕರ್ಣಿ

ಇತ್ತೀಚೆಗೆ ಮದುವೆ ಸಮಾರಂಭವೊಂದರಲ್ಲಿ ಭೇಟಿಯಾದ ಪರಿಚಿತರೊಬ್ಬರು ತಮ್ಮ ಬದುಕಿನ ಸಾಧನೆಗಳ ಕುರಿತು ಹೇಳಿಕೊಂಡರು. ನಿವೃತ್ತಿಯ ಅಂಚಿನಲ್ಲಿರುವ ಅವರು ಮಾತಿನ ನಡುವೆ ನನಗೆ ಹೇಳಿದ್ದಿಷ್ಟು- ‘80x40 ಅಳತೆಯ ದೊಡ್ಡ ಸೈಟಿನಲ್ಲಿ ಮೂರಂತಸ್ತಿನ ಮನೆ ಕಟ್ಟಿಸಿದ್ದೀನಿ, ಲಂಚ ಕೊಟ್ಟು ಮಗನಿಗೆ ಸರ್ಕಾರಿ ನೌಕರಿ ಕೊಡಿಸಿದ್ದೀನಿ, ಬೀಗರ ನಿರೀಕ್ಷೆಗಿಂತ ಹೆಚ್ಚು ವರದಕ್ಷಿಣೆ ಕೊಟ್ಟು ಮಗಳ ಮದುವೆ ಮಾಡಿದ್ದೀನಿ, ಹೆಂಡತಿ ಹೆಸರಲ್ಲಿ ಮೂರು ಸೈಟುಗಳಿವೆ, ಊರಿನಲ್ಲಿ ಹತ್ತೆಕರೆ ತೋಟ ಮಾಡಿದ್ದೀನಿ. ಮನೆ ಎದುರು ಎರಡು ದುಬಾರಿ ಬೆಲೆಯ ಕಾರುಗಳಿವೆ. ಅಂತೂ ಬದುಕು ಪರಿಪೂರ್ಣವಾಯಿತು ನೋಡಿ’. ಹೀಗೆ ಹೇಳುವಾಗ ಅವರ ಮುಖದಲ್ಲಿ ಧನ್ಯತೆಯ ಭಾವ ಇತ್ತು.

ಅವರ ಸಾಧನೆ ಕೇಳಿ ದಂಗಾಗಿ ಹೋದೆ. ಮಾತಿನುದ್ದಕ್ಕೂ ಭೌತಿಕ ಸಂಗತಿಗಳೇ ಮುನ್ನೆಲೆಗೆ ಬಂದವು. ಪದವಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಶ್ರೀಯುತರು ತಮ್ಮ ಅಕಡೆಮಿಕ್ ಸಾಧನೆಗಳ ಬಗ್ಗೆ ಹೇಳಿಕೊಳ್ಳಬಹುದೆಂದು ಒಂದಿಷ್ಟು ಹೊತ್ತು ಕಾದುಕುಳಿತ ನನಗೆ, ಅವರಿಂದ ಅಂಥ ಯಾವ ಪ್ರತಿಕ್ರಿಯೆಯೂ ಬಾರದಿದ್ದಾಗ ನಿರಾಸೆಯಾಯಿತು. ಬೀಳ್ಕೊಡುವಾಗ, ‘ಸದ್ಯದಲ್ಲೇ ಅಭಿಮಾನಿಗಳು ಮತ್ತು ವಿದ್ಯಾರ್ಥಿಗಳು ನನಗೆ ಅಭಿನಂದನಾ ಗ್ರಂಥವನ್ನು ಸಮರ್ಪಿಸುತ್ತಿದ್ದಾರೆ. ಆ ಕಾರ್ಯಕ್ರಮಕ್ಕೆ ಬರಬೇಕು’ ಎಂದು ನನ್ನನ್ನು ಆಹ್ವಾನಿಸಿದರು.

ಬದುಕಿನಲ್ಲಿ ಸಾಧನೆ ಎನ್ನುವುದು ಮನೆ, ಸೈಟು, ಬ್ಯಾಂಕ್ ಬ್ಯಾಲೆನ್ಸ್, ಚಿನ್ನಾಭರಣಗಳ ರೂಪದಲ್ಲಿ ಢಾಳಾಗಿ ಕಾಣಿಸಬೇಕು ಎಂದು ಮನುಷ್ಯರು ಅಪೇಕ್ಷಿಸುತ್ತಿದ್ದಾರೆ. ಅದಕ್ಕೆಂದೇ ಇಲ್ಲಿ ಆಕಾಶದೆತ್ತರಕ್ಕೆ ಮನೆಗಳು ನಿರ್ಮಾಣಗೊಳ್ಳುತ್ತವೆ, ಸೈಟುಗಳ ಬೆಲೆ ಗಗನಕ್ಕೇರುತ್ತದೆ, ಚಿನ್ನಾಭರಣ ಖರೀದಿ ಬಡವರಿಗೆ ಕನಸಿನ ಮಾತಾಗುತ್ತದೆ. ‘ನಾನು ವಸ್ತುಗಳನ್ನು ಪ್ರೀತಿಸುತ್ತೇನೆ, ಮನುಷ್ಯರನ್ನು ಉಪಯೋಗಿಸುತ್ತೇನೆ’ ಎನ್ನುವುದು ಬದುಕಿನ ಧ್ಯೇಯವಾಕ್ಯವಾಗಿದೆ. ಸಮಾಜ ಕೂಡ ಸಾಧಕರನ್ನು ಗುರುತಿಸಿ ಗೌರವಿಸುವಲ್ಲಿ ಎಡವುತ್ತಿದೆ. ಜಾತಿ, ಧರ್ಮ, ಹಣ ಮತ್ತು ತೋಳ್ಬಲದ ಎದುರು ನಿಜವಾದ ಬೌದ್ಧಿಕ ಸಾಧಕರು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದಾರೆ.

ಬೌದ್ಧಿಕವೆಂದು ಪರಿಗಣಿತವಾಗಿರುವ ಕ್ಷೇತ್ರಗಳಲ್ಲೂ ಭೌತಿಕ ಸಾಧನೆಯ ವ್ಯಾಮೋಹ ಕಾಡುತ್ತಿದೆ. 95 ಪುಸ್ತಕಗಳನ್ನು ಪ್ರಕಟಿಸಿರುವ ಸಾಹಿತಿ ಮಿತ್ರರೊಬ್ಬರಿಗೆ ತಮ್ಮ ಈ ಸಾಹಿತ್ಯದ ಸಾಧನೆ ನೂರನ್ನು ಮುಟ್ಟಲಿ ಎನ್ನುವ ಆಸೆ. ಈ ಸಂಖ್ಯಾತ್ಮಕ ಸಾಧನೆ ಎದುರು ಗುಣಾತ್ಮಕತೆ ಮೂಲೆಗುಂಪಾಗಿದೆ. ದೈಹಿಕ ವಯೋಮಾನವನ್ನೇ ಮಾನದಂಡವಾಗಿ ಇಟ್ಟುಕೊಂಡು ಅಭಿನಂದನೆಗೆ ಒಳಗಾಗಲು ಹಪಹಪಿಸುವವರ ಸಂಖ್ಯೆಯೇನೂ ಕಡಿಮೆ ಇಲ್ಲ. ಅನೇಕ ಪ್ರಕಾಶನ ಸಂಸ್ಥೆಗಳು ಪ್ರತಿವರ್ಷ ಸಾಮೂಹಿಕ ವಿವಾಹದ ರೀತಿ ನೂರು, ಇನ್ನೂರು ಪುಸ್ತಕಗಳನ್ನು ಪ್ರಕಟಿಸುತ್ತಿವೆ. ಈ ಎಷ್ಟೋ ಪುಸ್ತಕಗಳು ಸಾರ್ವಜನಿಕ ಗ್ರಂಥಾಲಯಗಳ ಅಲ್ಮೆರಾಗಳಿಗೆ ಶೋಭೆ ತರುತ್ತಿವೆಯೇ ವಿನಾ ಓದುಗನ ಏಕಾಂತಕ್ಕೆ ಲಗ್ಗೆ ಇಡುತ್ತಿಲ್ಲ. ಹಾಡುಗಾರ ಕಣ್ಮುಚ್ಚಿ ಮೈಮರೆತು ಹಾಡಿದರೆ ಅದು ತಾದಾತ್ಮ್ಯ ಅನಿಸಿಕೊಳ್ಳುತ್ತದೆ. ಪ್ರೇಕ್ಷಕರನ್ನು ಆಕರ್ಷಿಸಲೆಂದು ಕಣ್ಬಿಟ್ಟು ಆಂಗಿಕ ಅಭಿನಯಕ್ಕೆ ಇಳಿದರೆ ಆಗ ಸಂಗೀತ ಎನ್ನುವುದು ಭೌತಿಕ ಪ್ರದರ್ಶನವಾಗಿ ಪರಿಣಮಿಸುತ್ತದೆ.

ಶಿಕ್ಷಣ ಕ್ಷೇತ್ರ ಕೂಡ ಇಂದು ಈ ಭೌತಿಕ ಸಾಧನೆಯ ವ್ಯಾಮೋಹದಿಂದ ಕಲುಷಿತಗೊಂಡಿದೆ. ಓದು, ಬೋಧನೆ, ಸಂಶೋಧನೆಯಂತಹ ಬೌದ್ಧಿಕ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕಾದ ಶಿಕ್ಷಕರು ಹಣಕಾಸಿನ ಲೇವಾದೇವಿಯಂತಹ ವಹಿವಾಟುಗಳಲ್ಲಿ ನಿರತರಾಗಿದ್ದಾರೆ. ಪ್ರಾಧ್ಯಾಪಕರ ಸಂಶೋಧನಾ ಬರವಣಿಗೆ ಕೂಡ ಹುದ್ದೆ ಮತ್ತು ವೇತನ ಬಡ್ತಿಯಂತಹ ಭೌತಿಕ ಪ್ರಗತಿಗೆ ಸಿಮೀತವಾಗುತ್ತಿರುವುದು ದುರದೃಷ್ಟಕರ.

ಬದುಕಿನ ಕ್ಷಣಿಕತೆಯ ಅರಿವಿಲ್ಲದೆ, ಚಿರಂಜೀವಿತ್ವದ ಭಾವನೆಯನ್ನು ಅಂತರ್ಗತಗೊಳಿಸಿಕೊಂಡು, ಬದುಕು ಶಾಶ್ವತ ಎನ್ನುವಂತೆ ಇಂದಿನ ಮನುಷ್ಯ ವರ್ತಿಸುತ್ತಿದ್ದಾನೆ. ಆತ್ಮಾವಲೋಕನಕ್ಕಾಗಲೀ ಆತ್ಮವಿಮರ್ಶೆಗಾಗಲೀ ಇಳಿಯುವಷ್ಟು ವ್ಯವಧಾನ ಇಂದಿನವರಿಗೆ ಇಲ್ಲ. ಪರಿಣಾಮವಾಗಿ, ಬದುಕಿನ ಪ್ರಗತಿ- ಸಾಧನೆ ಎನ್ನುವುದು ನಗ, ನಾಣ್ಯ, ಮನೆ, ತೋಟದಂತಹ ಭೌತಿಕ ವಸ್ತುಗಳ ರೂಪದಲ್ಲೇ ಗೋಚರಿಸುತ್ತಿದೆ.



ಯಶವಂತ ಚಿತ್ತಾಲರು ಅಸ್ತಿತ್ವವಾದಿ ದಾರ್ಶನಿಕ ಮಾರ್ಟಿನ್ ಹೈಡೆಗರ್ ಸಿದ್ಧಾಂತವನ್ನು ವಿವರಿಸುತ್ತ, ‘ಮನುಷ್ಯ ತನ್ನ ಅಸ್ತಿತ್ವದ ಅಸಂಖ್ಯ ಸಾಧ್ಯತೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವಾಗ ತನ್ನ ಸಾವು ಕೂಡ ಈ ಎಲ್ಲ ಸಾಧ್ಯತೆಗಳಲ್ಲಿ ಒಂದು ಮಾತ್ರವಲ್ಲ, ಎಲ್ಲ ಸಾಧ್ಯತೆಗಳಲ್ಲಿ ಇದೊಂದೇ ನಿಶ್ಚಿತವಾದದ್ದು ಎಂಬುದನ್ನು ಮನಗಾಣುತ್ತಾನೆ. ತನ್ನ ಸಾವನ್ನು ತಾನೇ ಕಣ್ಣಲ್ಲಿ ಕಣ್ಣಿಟ್ಟು ನೋಡುವ ಧೈರ್ಯ ಯಾವಾಗ ಬರುತ್ತದೋ ಆಗ ಮಾತ್ರ ಎಲ್ಲವನ್ನೂ ನಿಚ್ಚಳವಾಗಿ, ಸ್ವಚ್ಛವಾಗಿ ನೋಡುವ ದೃಷ್ಟಿಯುಳ್ಳವನಾಗುತ್ತಾನೆ. ಇಂಥ ದೃಷ್ಟಿಯ ಮೂಲಕವೇ ಲಕ್ಷ್ಯಕ್ಕೆ ಬರುವ ತನ್ನ ಬದುಕಿನ ಅಪರಿಪೂರ್ಣತೆ, ಕುಂದುಕೊರತೆಗಳ ಕುರಿತು ತೀವ್ರ ಅಸಮಾಧಾನಕ್ಕೆ, ಪಾಪಪ್ರಜ್ಞೆಗೆ ಒಳಗಾಗುತ್ತಾನೆ. ಮನುಷ್ಯನ ಪ್ರಜ್ಞೆಯ ಬೆಳವಣಿಗೆಯಲ್ಲಿ ಸಾವಿಗೆ ಅತ್ಯಂತ ಮಹತ್ವದ ಸ್ಥಾನವಿದ್ದುದನ್ನು ಹೈಡೆಗರ್‌ನ ದರ್ಶನ ಗುರುತಿಸುತ್ತದೆ’ ಎಂದಿದ್ದಾರೆ.

ಹೈಡೆಗರ್ ಪ್ರಕಾರ, ಬದುಕಿನ ಅಪರಿಪೂರ್ಣತೆ ಎನ್ನುವುದು ಭೌತಿಕವಲ್ಲ. ಆತ ಹೇಳುವುದು ಸಾವಿನ ಪ್ರಜ್ಞೆಯಿರುವ ಮನುಷ್ಯ ತನ್ನ ಬದುಕಿನ ಬೌದ್ಧಿಕ ಅಪರಿಪೂರ್ಣತೆ ಕುರಿತು ಚಿಂತಿಸುತ್ತಾನೆ ಎಂದು. ದುರದೃಷ್ಟವೆಂದರೆ, ಬಹಿರಂಗದ ಬದುಕಿಗೆ ಆದ್ಯತೆ ನೀಡುತ್ತಿರುವ ಮನುಷ್ಯ ತನ್ನ ಅಂತರಂಗದ ಪಿಸುಧ್ವನಿಯನ್ನು ಕೇಳಿಸಿಕೊಳ್ಳದಷ್ಟು ಅಸಂವೇದಿ ಆಗುತ್ತಿದ್ದಾನೆ.

ವಾಚಕರ ವಾಣಿ

ಮರೆಯಲಾಗದ ಹೆಸರಿಗೆ ಆದ್ಯತೆ ಇರಲಿ

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ನಾಮಕರಣ ಮಾಡಲು ಈಗಾಗಲೇ ರಾಜಕಾರಣಿಗಳು, ಇತಿಹಾಸಕಾರರು ಮತ್ತು ವಿವಿಧ ಕ್ಷೇತ್ರಗಳ ತಜ್ಞರ ಹೆಸರುಗಳನ್ನು ಕೆಲವರು ಸೂಚಿಸಿದ್ದಾರೆ. ಆದರೆ ವ್ಯಕ್ತಿಗಳ ಹೆಸರು ಕಾಲಕಳೆದಂತೆ ಮಹತ್ವ ಕಳೆದುಕೊಳ್ಳುವ ಸಾಧ್ಯತೆ ಹೆಚ್ಚಾಗಿರುತ್ತದೆ. ಹೀಗಾಗಿ, ಸರ್ವಕಾಲಕ್ಕೂ ಸೂಕ್ತವಾದ, ಬದಲಾಯಿಸುವ ಅಗತ್ಯ ಬಾರದ, ಜನಮಾನಸದಿಂದ ಮರೆಯಾಗದಂತಹ ಹೆಸರುಗಳಾದ ತುಂಗಭದ್ರಾ, ಸಹ್ಯಾದ್ರಿ, ಕೊಡಚಾದ್ರಿ, ಮಲೆನಾಡು, ಶರಾವತಿ, ಜೋಗ್‌ಫಾಲ್ಸ್‌ನಂತಹ ಹೆಸರುಗಳಲ್ಲಿ ಸೂಕ್ತವಾದ ಒಂದನ್ನು ಆರಿಸಿಕೊಳ್ಳುವುದು ಸರ್ವ ಸಮಂಜಸ ಎನಿಸುತ್ತದೆ.

ಎಚ್.ಎ.ನಂಜಯ್ಯ, ಬೆಂಗಳೂರು

‘ಓಯಸಿಸ್’ನಂಥ ಎರಡು ಸುದ್ದಿಗಳು!

ಬರೀ ಭಯ, ಆತಂಕ, ಹೇವರಿಕೆ ಹುಟ್ಟಿಸುವ ಸುದ್ದಿಗಳ ಮಧ್ಯೆ, ವಿಶೇಷ ಹಾಗೂ ಸಮಾಧಾನಕರವಾದ ಎರಡು ಸುದ್ದಿಗಳು (ಪ್ರ.ವಾ., ಏ. 27) ಪತ್ರಿಕೆಯ 5ನೇ ಪುಟದಲ್ಲಿ ಬದಿಬದಿಯಲ್ಲೇ ಪ್ರಕಟಗೊಂಡಿವೆ. ‘ಡಬಲ್ ಎಂಜಿನ್ ಸರ್ಕಾರ ಇದ್ದರೂ ರೈತರ ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ಸಿಗುತ್ತಿಲ್ಲ...’ ಎಂದು ತಮ್ಮ ಮನದಾಳದ ಬೇಗುದಿಯನ್ನು ಪ್ರಾಮಾಣಿಕವಾಗಿಯೇ ತೋಡಿಕೊಂಡವರು ಒಬ್ಬ ಬಿಜೆಪಿ ಶಾಸಕ ಎಸ್.ಎ.ರವೀಂದ್ರನಾಥ್! ವಿಟ್ಲದ ಬೈರಿಕಟ್ಟೆಯ ನವವಿವಾಹಿತ ಚಂದ್ರಶೇಖರ್ ಎಂಬುವರು, ಇತ್ತೀಚೆಗೆ ನಡೆದ ತಮ್ಮ ಮದುವೆಯಲ್ಲಿ ಮುಸ್ಲಿಂ ಸ್ನೇಹಿತರು ರಂಜಾನ್ ತಿಂಗಳಿನ ಉಪವಾಸದಿಂದಾಗಿ ಊಟ ಮಾಡಲಿಲ್ಲ ಎಂಬ ಕಾರಣಕ್ಕೆ ಊರಿನ ಮಸೀದಿಯಲ್ಲಿ ಅವರಿಗಾಗಿ ಇಫ್ತಾರ್‌ಕೂಟ ಏರ್ಪಡಿಸಿದ್ದು!

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ಇದು ಸಮೂಹ ಸಾರಿಗೆ ಉತ್ತೇಜಿಸುವ ಪರಿಯೇ?

ಸಿನಿಮಾ ಮಂದಿರಗಳಲ್ಲಿ ಸಿನಿಮಾ ಆರಂಭಕ್ಕೂ ಮುನ್ನ, ‘ಅವಶ್ಯಕತೆ ಇದ್ದಲ್ಲಿ ಮಾತ್ರ ಸ್ವಂತ ವಾಹನಗಳನ್ನು ಬಳಸಿ. ಹೆಚ್ಚಾಗಿ ಸಮೂಹ ಸಾರಿಗೆ ಬಳಸುವ ಮೂಲಕ ವಾಯುಮಾಲಿನ್ಯ ತಡೆಗಟ್ಟಲು ಕೈ ಜೋಡಿಸಿ’ ಎಂಬರ್ಥದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕರೆ ನೀಡುವ ಜಾಹೀರಾತು ಪ್ರಸಾರ ಆಗುತ್ತದೆ.

ದೊಡ್ಡಬಳ್ಳಾಪುರದಿಂದ ಬೆಂಗಳೂರು ನಡುವೆ ಬಹಳಷ್ಟು ಬಸ್‌ಗಳ ವ್ಯವಸ್ಥೆ ಇದೆ. ದೊಡ್ಡಬಳ್ಳಾಪುರದಿಂದ ಹನ್ನೆರಡು ಕಿ.ಮೀ ದೂರದಲ್ಲಿ ಟೋಲ್‌ಬೂತ್ ಇದೆ. ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣ ಮಾಡುವವರು, ದಿನದ ಪಾಸ್ ಮತ್ತು ಮಾಸಿಕ ಪಾಸ್ ಪಡೆದವರು ನಾಲ್ಕು ರೂಪಾಯಿಯ ಟೋಲ್ ಟಿಕೆಟ್ ಅನ್ನು ಪಡೆಯಬೇಕು. ಇದು ಸಮೂಹ ಸಾರಿಗೆಯನ್ನು ಉತ್ತೇಜಿಸುವ ಪರಿಯೇ? ಸಾರಿಗೆ ಸಂಸ್ಥೆಯ ಬಸ್‌ಗಳು ಯಾಕೆ ಟೋಲ್ ಶುಲ್ಕ ಪಾವತಿಸಬೇಕು? ಅದರ ಭಾರವನ್ನು ತಗ್ಗಿಸಿ ಟಿಕೆಟ್ ದರ ಕಡಿಮೆ ಮಾಡಬಹುದಲ್ಲವೇ? ಸ್ವಂತ ವಾಹನಗಳ ಪ್ರಯಾಣದ ವೆಚ್ಚಕ್ಕಿಂತ ಸಮೂಹ ಸಾರಿಗೆಯ ವೆಚ್ಚ ಕಡಿಮೆ ಇದ್ದರೆ, ಉಳಿತಾಯ ಮನೋಭಾವದ ಜನಸಾಮಾನ್ಯರು ಸಮೂಹ ಸಾರಿಗೆ ಬಳಸುತ್ತಾರೆ.

ಮಲ್ಲಿಕಾರ್ಜುನ, ಸುರಧೇನುಪುರ

ಪ್ರಿಯಾಂಕ್ ಹೊಣೆಗಾರಿಕೆ ಪ್ರದರ್ಶಿಸಲಿ

ಇತ್ತೀಚೆಗೆ ಸುದ್ದಿಯಾಗಿರುವ ‘ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಭಾಗಿಯಾದ ಆರೋಪಿಗಳನ್ನು ಬಿಟ್ಟು ಅದನ್ನು ಬಯಲಿಗೆಳೆದವರಿಗೆ ಪೊಲೀಸರು ನೋಟಿಸ್ ಕೊಡುವ ಮೂಲಕ ಅನ್ಯಾಯವೆಸಗುತ್ತಿದ್ದಾರೆ’ ಎಂಬ ವಿಚಾರವನ್ನು ಕಾನೂನಿನ ಚೌಕಟ್ಟಿನಲ್ಲಿ ವಿಮರ್ಶಿಸಬೇಕಾದ ತುರ್ತು ಎದುರಾಗಿದೆ. ಈ ವಿಚಾರದಲ್ಲಿ ಶಾಸಕ ಪ್ರಿಯಾಂಕ್ ಖರ್ಗೆ ಅವರ ವರ್ತನೆ ಕುರಿತು ಸರ್ಕಾರ ಮತ್ತು ಪೊಲೀಸ್ ವಲಯಗಳಿಂದ ಟೀಕೆಗಳು ಬಂದರೆ, ಕಾಂಗ್ರೆಸ್ ಪಕ್ಷದ ವಲಯದಿಂದ ಅದನ್ನು ಬೆಂಬಲಿಸುವ ಮಾತಿನ ಪ್ರಹಾರಗಳು ನಡೆಯುತ್ತಿವೆ. ಈ ವಿಚಾರವನ್ನು ಪೊಲೀಸ್ ತನಿಖಾಧಿಕಾರಿಯಿಂದ ಆಗಬೇಕಾಗಿರುವ ತನಿಖೆಗೆ ಸೀಮಿತಗೊಳಿಸಿಕೊಂಡಾಗ, ಸಿಆರ್‌ಪಿಸಿ ಸೆಕ್ಷನ್ 160 ನಿರ್ದೇಶಿಸಿರುವ, ‘ಪ್ರಕರಣಕ್ಕೆ ಸಂಬಂಧಿಸಿದ ಸತ್ಯಾಂಶಗಳು ಅಥವಾ ಸಂದರ್ಭಗಳ ಬಗ್ಗೆ ತಿಳಿವಳಿಕೆಯಿರುವಂತೆ ತೋರುತ್ತಿರುವ ವ್ಯಕ್ತಿಯು ಅಗತ್ಯವಿದ್ದಲ್ಲಿ ವಿಚಾರಣೆಗೆ ಹಾಜರಾಗಬೇಕು’. ಸೆಕ್ಷನ್ 161ರಲ್ಲಿ ನಿರ್ದೇಶಿಸಿರುವಂತೆ, ‘ಪ್ರಕರಣಕ್ಕೆ ಸಂಬಂಧಿಸಿದ ಸತ್ಯಾಂಶಗಳು ಅಥವಾ ಸಂದರ್ಭಗಳ ಬಗ್ಗೆ ತಿಳಿವಳಿಕೆಯಿರುವ ಯಾವುದೇ ವ್ಯಕ್ತಿಯನ್ನು ಅಧಿಕಾರಿಯು ಮೌಖಿಕವಾಗಿ ವಿಚಾರಣೆಗೆ ಒಳಪಡಿಸಬಹುದು’. ತನಿಖೆಯ ಮೇಲೆ ಬೆಳಕು ಚೆಲ್ಲುವ ವಿಚಾರಗಳು, ಯಾವುದೇ ವ್ಯಕ್ತಿಯ ಪರಿಜ್ಞಾನದಲ್ಲಿದ್ದರೆ ಅಂತಹವರು 15 ವರ್ಷಗಳಿಗಿಂತ ಕಡಿಮೆ ವಯಸ್ಸಿನವರಾಗಿದ್ದರೆ ಇಲ್ಲವೇ ಮಹಿಳೆಯಾಗಿದ್ದರೆ ಮಾತ್ರ, ಅವರಿಗೆ ನೋಟಿಸ್ ಕೊಟ್ಟು ಠಾಣೆಗೆ ಕರೆಸಿಕೊಂಡು ಹೇಳಿಕೆ ಪಡೆಯುವಂತಿಲ್ಲ. ಬದಲಾಗಿ ಅವರು ಇರುವ ವಾಸಸ್ಥಳಕ್ಕೆ ತನಿಖಾಧಿಕಾರಿಯೇ ಹೋಗಿ ಹೇಳಿಕೆ ಪಡೆಯತಕ್ಕದ್ದು. ಈ ವಿಷಯದಲ್ಲಿ ಶಾಸಕ ಅಥವಾ ಸಂಸದರು ವಿನಾಯಿತಿ ಹೊಂದಲು ಕಾನೂನಿನಲ್ಲಿ ಶಕ್ಯರಲ್ಲ.

ಉಳಿದಂತೆ, ಮಾಹಿತಿ ಹೊಂದಿರುವ ವ್ಯಕ್ತಿಯ ಸ್ಥಾನಮಾನ ಲೆಕ್ಕಿಸದೆ ನೋಟಿಸ್ ಮುಖಾಂತರ ಠಾಣೆಗೆ ಬರಮಾಡಿಕೊಂಡು ಅವರ ಹೇಳಿಕೆ ಪಡೆದು ಮಾಹಿತಿಯನ್ನು ಸಂಗ್ರಹಿಸಬೇಕು. ಮಾಹಿತಿ ಕೊಡುವ ವ್ಯಕ್ತಿ ತನ್ನ ಹೇಳಿಕೆಗೆ ಸಹಿ ಮಾಡುವಂತಿಲ್ಲ. ‘ಈ ವಿಚಾರದಲ್ಲಿ ಗೃಹ ಸಚಿವರಲ್ಲೂ ಮಾಹಿತಿ ಇದೆ, ಅವರನ್ನೂ ವಿಚಾರಣೆಗೆ ಒಳಪಡಿಸಬೇಕು’ ಎಂಬ ಕಾಂಗ್ರೆಸ್ಸಿಗರ ವಾದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಕಾರಣ, ಗೃಹ ಸಚಿವರ ಮಾಹಿತಿದಾರನು ತನಿಖಾಧಿಕಾರಿಯೇ ಆಗಿರುತ್ತಾನೆ. ತನಿಖಾಧಿಕಾರಿಯು ಒಬ್ಬ ಗಾಳಿಸುದ್ದಿಯ ಸಾಕ್ಷ್ಯವಾಗಿ (hearsay witnsess) ಕಾರ್ಯನಿರ್ವಹಿಸುವುದರಿಂದ, ಅಂತಹವರಿಂದ ಮಾಹಿತಿ ಪಡೆಯುವ ಗೃಹ ಸಚಿವರಿಂದ ಹೇಳಿಕೆ ಪಡೆಯುವ ಸಂದರ್ಭ ಉದ್ಭವವಾಗುವುದಿಲ್ಲ. ಶಾಸಕ ಪ್ರಿಯಾಂಕ್ ಅವರ ನಿಲುವಿಗೆ ಕಾನೂನಿನ ಬೆಂಬಲವಿಲ್ಲ. ಆದಕಾರಣ ಸಮಾಜದ ಹಿತದೃಷ್ಟಿಯಿಂದ ಅವರು ತಮಗೆ ಗೊತ್ತಿರುವ ಎಲ್ಲ ವಿಚಾರಗಳನ್ನು ತನಿಖಾಧಿಕಾರಿಗಳಿಗೆ ತಿಳಿಸಿಯೋ ಇಲ್ಲವೇ ಅವರಲ್ಲಿಗೇ ಹೋಗಿ ತಮಗೆ ತಿಳಿವಳಿಕೆ ಇಲ್ಲವೆಂದೋ ಹೇಳಿಕೆ ಕೊಡುವುದರ ಮೂಲಕ ಒಬ್ಬ ಜವಾಬ್ದಾರಿಯುತ ನಾಗರಿಕನಂತೆ ನಡೆದುಕೊಳ್ಳಬೇಕು.

ಸಿ.ಎಚ್.ಹನುಮಂತರಾಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ಅಡುಗೆ ಎಣ್ಣೆ ಕೊರತೆ ದರ ಏರಿಕೆ ಬರೆ



ಇಂಡೊನೇಷ್ಯಾ ತಾಳೆ ಎಣ್ಣೆ ರಫ್ತನ್ನು ನಿಷೇಧ ಮಾಡಿ ಆದೇಶ ಹೊರಡಿಸಿದೆ. ಏಪ್ರಿಲ್ 28ರಿಂದ ಅನ್ವಯವಾಗಲಿರುವ ಈ ನಿಷೇಧವು ಭಾರತದಲ್ಲಿ ತಾಳೆ ಎಣ್ಣೆ ಬಳಕೆದಾರರನ್ನು ಬಾಧಿಸಲಿದೆ ಎಂದು ಅಂದಾಜಿಸಲಾಗಿದೆ. ಈ ಆದೇಶ ಹೊರಬಿದ್ದ ಎರಡು ದಿನಗಳಲ್ಲೇ ನಿಷೇಧ ಅನ್ವಯವಾಗುವುದು ಸಂಸ್ಕರಿಸಿದ ತಾಳೆ ಎಣ್ಣೆಗೆ ಮಾತ್ರ ಎಂದು ಇಂಡೊನೇಷ್ಯಾದ ಅಧಿಕಾರಿಗಳು ಹೇಳಿದ್ದರು. ಆದರೆ, ನಿಷೇಧ ಜಾರಿಯಾಗುವುದಕ್ಕೆ ಕೆಲವೇ ಗಂಟೆಗಳು ಉಳಿದಿರುವಾಗ, ನಿಷೇಧವು ಎಲ್ಲಾ ಸ್ವರೂಪದ ತಾಳೆ ಎಣ್ಣೆಗೆ ಅನ್ವಯವಾಗಲಿದೆ ಎಂದು ಇಂಡೊನೇಷ್ಯಾ ಹಣಕಾಸು ಸಚಿವಾಲಯ ಘೋಷಿಸಿದೆ. ಇಂಡೊನೇಷ್ಯಾ ಸರ್ಕಾರವು ಹೀಗೆ ಪದೇ ಪದೇ ನಿರ್ಧಾರವನ್ನು ಬದಲಿಸಿದೆ. ಹೀಗಾಗಿ, ಆದೇಶ ಜಾರಿಗೆ ಬಂದ ನಂತರವಷ್ಟೇ ಯಾವುದೆಲ್ಲಾ ನಿಷೇಧ ಎಂಬುದು ಗೊತ್ತಾಗಲಿದೆ. ಕಚ್ಚಾ ತಾಳೆ ಎಣ್ಣೆ ಮತ್ತು ಸಂಸ್ಕರಿಸಿದ ತಾಳೆ ಎಣ್ಣೆ ಎರಡರ ರಫ್ತು ನಿಷೇಧವಾದರೂ ಅಥವಾ ಕೇವಲ ಸಂಸ್ಕರಿಸಿದ ತಾಳೆ ಎಣ್ಣೆಯ ರಫ್ತು ನಿಷೇಧವಾದರೂ ಅದು ಭಾರತೀಯರನ್ನು ಬಾಧಿಸಲಿದೆ.

ಅಡುಗೆ ಎಣ್ಣೆ ಆಮದು

(2021-ರ ನವೆಂಬರ್‌ನಿಂದ 2022ರ ಏಪ್ರಿಲ್ 1ರವರೆಗೆ)



ದೇಶವು ಆಮದು ಮಾಡಿಕೊಳ್ಳುವ ಒಟ್ಟು ತಾಳೆ ಎಣ್ಣೆಯಲ್ಲಿ, ಇಂಡೊನೇಷ್ಯಾದ ಪಾಲು ಶೇ 37ರಷ್ಟು. ಇಂಡೊನೇಷ್ಯಾವು ಎಲ್ಲಾ ಸ್ವರೂಪದ ತಾಳೆ ಎಣ್ಣೆಯ ರಫ್ತನ್ನು ರದ್ದು ಮಾಡಿದರೆ, ಭಾರತದ ಒಟ್ಟು ತಾಳೆ ಎಣ್ಣೆ ಆಮದಿನಲ್ಲಿ ಶೇ 37ರಷ್ಟು ಖೋತಾ ಆಗುತ್ತದೆ. ಇದರಿಂದ ದೇಶದಲ್ಲಿ ಅಡುಗೆ ಎಣ್ಣೆಯ ಕೊರತೆಯಾಗುತ್ತದೆ. ದೇಶದ ಒಟ್ಟು ಅಡುಗೆ ಎಣ್ಣೆ ಆಮದಿನಲ್ಲಿ ಇಂಡೊನೇಷ್ಯಾದಿಂದ ತರಿಸಿಕೊಳ್ಳುವ ಎಲ್ಲಾ ಸ್ವರೂಪದ ತಾಳೆ ಎಣ್ಣೆಯ ಪ್ರಮಾಣವು ಶೇ 17ರಷ್ಟಾಗುತ್ತದೆ. ಇಷ್ಟು ದೊಡ್ಡ ಪ್ರಮಾಣದ ಅಡುಗೆ ಎಣ್ಣೆಯನ್ನು ತಕ್ಷಣಕ್ಕೆ ಬೇರೆ ದೇಶಗಳಿಂದ ತರಿಸಿಕೊಳ್ಳಲು ಸಾಧ್ಯವಿಲ್ಲ. ಇದರಿಂದ ದೇಶೀಯ ಮಾರುಕಟ್ಟೆಯಲ್ಲಿ ತಾಳೆ ಎಣ್ಣೆಯ ಕೊರತೆ ಉಂಟಾಗುತ್ತದೆ. ಅದರ ಪರಿಣಾಮವಾಗಿ ಎಲ್ಲಾ ಅಡುಗೆ ಎಣ್ಣೆಗಳಿಗೆ ಬೇಡಿಕೆ ಹೆಚ್ಚಿ, ಅಂತಿಮವಾಗಿ ಅವುಗಳ ಬೆಲೆ ಏರಿಕೆಯಾಗಲಿದೆ.

ದೇಶವು ಆಮದು ಮಾಡಿಕೊಳ್ಳುವ ಒಟ್ಟು ತಾಳೆ ಎಣ್ಣೆಯಲ್ಲಿ ಸಂಸ್ಕರಿಸಿದ ತಾಳೆ ಎಣ್ಣೆಯ ಪ್ರಮಾಣ ಶೇ 29ರಷ್ಟು ಮಾತ್ರ. ಒಟ್ಟು ತಾಳೆ ಎಣ್ಣೆ ಆಮದಿನಲ್ಲಿ ಇಂಡೊನೇಷ್ಯಾದಿಂದ ತರಿಸಿಕೊಳ್ಳುವ ಸಂಸ್ಕರಿಸಿದ ತಾಳೆ ಎಣ್ಣೆಯ ಪ್ರಮಾಣ ಶೇ 18ರಷ್ಟು. ಈಗ ಇಂಡೊನೇಷ್ಯಾವು ಸಂಸ್ಕರಿಸಿದ ತಾಳೆ ಎಣ್ಣೆಯ ರಫ್ತನ್ನು ಮಾತ್ರ ನಿಷೇಧ ಜಾರಿಗೆ ತಂದರೆ, ಒಟ್ಟು ತಾಳೆ ಎಣ್ಣೆ ಆಮದಿನಲ್ಲಿ ಶೇ 18ರಷ್ಟು ಖೋತಾ ಆಗಲಿದೆ. ದೇಶದ ಒಟ್ಟು ಅಡುಗೆ ಎಣ್ಣೆ ಆಮದಿನಲ್ಲಿ ಶೇ 8.4ರಷ್ಟು ಕೊರತೆಯಾಗಲಿದೆ. ಈ ಕೊರತೆಯನ್ನು ತುಂಬಿಸಿಕೊಳ್ಳಲು ಬೇರೆ ಅಡುಗೆ ಎಣ್ಣೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಬೇಕು. ಆದರೆ, ಜಾಗತಿಕ ಮಾರುಕಟ್ಟೆಯಲ್ಲಿ ಎಲ್ಲಾ ಸ್ವರೂಪದ ಅಡುಗೆ ಎಣ್ಣೆಯ ಕೊರತೆ ಇರುವುದರಿಂದ ತಕ್ಷಣಕ್ಕೆ ತಾಳೆ ಎಣ್ಣೆಯ ಬದಲಿಗೆ, ಬೇರೆ ಎಣ್ಣೆಯನ್ನು ತರಿಸಿಕೊಳ್ಳಲು ಸಾಧ್ಯವಿಲ್ಲ. ಇದರಿಂದ ದೇಶದಲ್ಲಿ ಇತರ ಅಡುಗೆ ಎಣ್ಣೆಗಳಿಗೂ ಬೇಡಿಕೆ ಹೆಚ್ಚುವುದರಿಂದ, ಸಹಜವಾಗಿ ಆ ಎಲ್ಲಾ ಎಣ್ಣೆಗಳ ಬೆಲೆ ಮತ್ತಷ್ಟು ಏರಿಕೆಯಾಗಲಿದೆ ಎಂದು ಅಂದಾಜಿಸಲಾಗಿದೆ.

ಕಚ್ಚಾ ತಾಳೆ ಎಣ್ಣೆ ರಫ್ತನ್ನು ಇಂಡೊನೇಷ್ಯಾ ನಿಷೇಧ ಮಾಡದೇ ಇದ್ದರೆ, ಅದನ್ನು ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಬಹುದಾದ ಸಾಧ್ಯತೆ ಇದೆ. ಇಂಡೊನೇಷ್ಯಾ, ಕಚ್ಚಾ ತಾಳೆ ಎಣ್ಣೆಯ ಮೇಲೆ ಹೆಚ್ಚಿನ ಪ್ರಮಾಣದ ರಫ್ತು ಸುಂಕ ವಿಧಿಸುತ್ತಿದೆ. ತಮ್ಮಲ್ಲಿನ ಸಂಸ್ಕರಣ ಘಟಕಗಳ ವಹಿವಾಟನ್ನು ಉತ್ತೇಜಿಸಲು ಎರಡೂ ದೇಶಗಳು, ಸಂಸ್ಕರಿಸಿದ ತಾಳೆ ಎಣ್ಣೆಯ ಮೇಲೆ ಕಡಿಮೆ ರಫ್ತು ಸುಂಕ ವಿಧಿಸುತ್ತಿವೆ. ಎರಡೂ ದೇಶಗಳಿಂದ ಕಚ್ಚಾ ತಾಳೆ ಎಣ್ಣೆಯನ್ನು ತರಿಸಿಕೊಂಡು ಅದನ್ನು ಸಂಸ್ಕರಿಸಿದರೆ ತಗಲುವ ಒಟ್ಟು ವೆಚ್ಚಕ್ಕಿಂತ, ಸಂಸ್ಕರಿಸಿದ ತಾಳೆ ಎಣ್ಣೆಯನ್ನೇ ಆಮದು ಮಾಡಿಕೊಂಡರೆ ಅದರ ಬೆಲೆಯೇ ಕಡಿಮೆಯಾಗುತ್ತದೆ. ಕಚ್ಚಾ ತಾಳೆ ಎಣ್ಣೆಯ ಅಂತಿಮ ಬೆಲೆಯು, ಆಮದು ಮಾಡಿಕೊಳ್ಳಲಾದ ಸಂಸ್ಕರಿಸಿದ ತಾಳೆ ಎಣ್ಣೆಯ ಬೆಲೆಗಿಂತ ಶೇ 5–10ರಷ್ಟು ದುಬಾರಿಯಾಗುತ್ತದೆ. ಮಲೇಷ್ಯಾವೂ ಕಚ್ಚಾ ತಾಳೆ ಎಣ್ಣೆಗೆ ಹೆಚ್ಚಿನ ರಫ್ತು ಸುಂಕ ವಿಧಿಸುವುದರಿಂದ, ಅಲ್ಲಿಂದ ಹೆಚ್ಚಿನ ಪ್ರಮಾಣದ ಆಮದು ಮಾಡಿಕೊಂಡರೂ ಬೆಲೆಯಲ್ಲಿ ಏರಿಕೆ ಇದ್ದೇ ಇರುತ್ತದೆ. ಹೀಗಾಗಿ ಕಚ್ಚಾ ತಾಳೆ ಎಣ್ಣೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವುದೂ ಕಾರ್ಯಸಾಧುವಲ್ಲ. ಇದರಿಂದ ಬೆಲೆ ಏರಿಕೆಯನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಕಚ್ಚಾ ತಾಳೆ ಎಣ್ಣೆಯನ್ನು ಹೆಚ್ಚಿನ ಪ್ರಮಾಣದಲ್ಲಿ ತರಿಸಿಕೊಂಡರೂ, ದೇಶೀಯ ಚಿಲ್ಲರೆ ಮಾರುಕಟ್ಟೆಯಲ್ಲಿ ಅದರ ಮಾರಾಟ ಬೆಲೆ ಏರಿಕೆಯಾಗಲಿದೆ.

ತಾಳೆ ಎಣ್ಣೆಗೆ ಪರ್ಯಾಯವಾಗಿ ಸೂರ್ಯಕಾಂತಿ ಎಣ್ಣೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಸೂರ್ಯಕಾಂತಿ ಎಣ್ಣೆಯನ್ನು ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡುವ ಉಕ್ರೇನ್ ಮತ್ತು ರಷ್ಯಾ ನಡುವೆ ಯುದ್ಧ ನಡೆಯುತ್ತಿದೆ. ಎರಡೂ ದೇಶಗಳಿಂದ ಸೂರ್ಯಕಾಂತಿ ಎಣ್ಣೆಯ ರಫ್ತು ಬಹುತೇಕ ಸ್ಥಗಿತವಾಗಿದೆ. ಪರಿಣಾಮವಾಗಿ ದೇಶೀಯ ಮಾರುಕಟ್ಟೆಯಲ್ಲಿ ಸೂರ್ಯಕಾಂತಿ ಎಣ್ಣೆಯ ಕೊರತೆಯಿದೆ. ಹೀಗಾಗಿ, ಇಂಡೊನೇಷ್ಯಾದ ರಫ್ತು ನಿಷೇಧದ ಪರಿಣಾಮವನ್ನು ಕಡಿಮೆಗೊಳಿಸಲು ಯಾವುದೇ ದಾರಿಗಳು ಇಲ್ಲ ಎನ್ನುತ್ತದೆ ದಿ ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಎಸ್‌ಇಎಐ).


ನಿಷೇಧ ಎಲ್ಲದಕ್ಕೂ ಅನ್ವಯ: ಇಂಡೊನೇಷ್ಯಾ

ಜಕಾರ್ತ (ರಾಯಿಟರ್ಸ್): ತಾಳೆ ಎಣ್ಣೆ ರಫ್ತು ವ್ಯಾಪ್ತಿಯನ್ನು ಇಂಡೊನೇಷ್ಯಾ ವಿಸ್ತರಿಸಿದೆ. ಸಂಸ್ಕರಿತ ತಾಳೆ ಎಣ್ಣೆಯ ಜತೆಗೆ ಕಚ್ಚಾ ತಾಳೆ ಎಣ್ಣೆಯನ್ನೂ ರಫ್ತು ನಿಷೇಧದ ವ್ಯಾಪ್ತಿಗೆ ತರಲಾಗಿದೆ ಎಂದು ಇಂಡೊನೇಷ್ಯಾ ಹಣಕಾಸು ಸಚಿವಾಲಯ ಬುಧವಾರ ಸಂಜೆ ಘೋಷಿಸಿದೆ. ಈ ವಾರದ ಆರಂಭದಲ್ಲಿ, ಎಲ್ಲ ರೀತಿಯ ತಾಳೆ ಎಣ್ಣೆಯನ್ನು ರಫ್ತು ಮಾಡುವುದಾಗಿ ಇಂಡೊನೇಷ್ಯಾ ಘೋಷಿಸಿತ್ತು. ಅದರೆ ಮಂಗಳವಾರ ಬೆಳಿಗ್ಗೆ ನೀಡಿದ್ದ ಪ್ರಕಟಣೆಯಲ್ಲಿ ಕೇವಲ ಸಂಸ್ಕರಿತ ತಾಳೆ ಎಣ್ಣೆ ರಫ್ತು ನಿಷೇಧ ಮಾಡಲಾಗುವುದು ಎಂದು ತಿಳಿಸಲಾಗಿತ್ತು. ಬುಧವಾರ ತಡರಾತ್ರಿಯಿಂದ ನಿಷೇಧ ಜಾರಿಗೆ ಬರುತ್ತಿದೆ. ಆದೇಶ ಜಾರಿಗೆ ಕೆಲವೇ ಗಂಟೆ ಬಾಕಿಯಿರುವಾಗ, ಕಚ್ಚಾ ತಾಳೆ ಎಣ್ಣೆಯನ್ನೂ ನಿಷೇಧದ ವ್ಯಾಪ್ತಿಗೆ ತರಲಾಗಿದೆ ಎಂದು ಮುಖ್ಯ ಹಣಕಾಸು ಸಚಿವಾಲಯ ಘೋಷಿಸಿದೆ.


ತಾಳೆ ಎಣ್ಣೆ ಆಮದು

(2021-ರ ನವೆಂಬರ್‌ನಿಂದ 2022ರ ಏಪ್ರಿಲ್ 1ರವರೆಗೆ)


ಕಚ್ಚಾ ತಾಳೆ ಎಣ್ಣೆ



ಸಂಸ್ಕರಿಸಿದ ತಾಳೆ ಎಣ್ಣೆ



ದೇಶದಲ್ಲಿರುವ ಆಮದು ತೈಲದ ದಾಸ್ತಾನು ವಿವರ



‘ದಾಸ್ತಾನು ಮಿತಿ ಹೇರಿಕೆಯಿಂದ ಕೊರತೆ’

ಇದೇ ಏಪ್ರಿಲ್ 1ಕ್ಕೆ ಅಂತ್ಯವಾದ ವಹಿವಾಟಿನ ಪ್ರಕಾರ ದೇಶದಲ್ಲಿ ಒಟ್ಟು 20.90 ಲಕ್ಷ ಟನ್‌ಗಳಷ್ಟು ಅಡುಗೆ ಎಣ್ಣೆ ದಾಸ್ತಾನು ಇದೆ. ಇದರಲ್ಲಿ 15 ಲಕ್ಷ ಟನ್‌ಗೂ ಹೆಚ್ಚು ಅಡುಗೆ ಎಣ್ಣೆ ಸಾಗಾಟದ ವಿವಿಧ ಹಂತಗಳಲ್ಲಿ ಇದೆ. ಈ ಹಿಂದಿನ 13 ತಿಂಗಳಲ್ಲಿ ಅಡುಗೆ ಎಣ್ಣೆಯ ಗರಿಷ್ಠ ದಾಸ್ತಾನು ಇದು. ಆದರೆ, ಇಷ್ಟು ದೊಡ್ಡ ಪ್ರಮಾಣದಲ್ಲಿ ದಾಸ್ತಾನು ಇದ್ದರೂ ದೇಶದಲ್ಲಿ ಅಡುಗೆ ಎಣ್ಣೆಯ ಕೊರತೆ ಉಂಟಾಗಿದೆ. ‘ಸರ್ಕಾರವು ಸಗಟು ಮತ್ತು ಚಿಲ್ಲರೆ ಮಾರುಕಟ್ಟೆಯಲ್ಲಿ ದಾಸ್ತಾನು ಮಿತಿ ಹೇರಿರುವುದರಿಂದಲೂ ಕೊರತೆ ತಲೆದೋರಿದೆ’ ಎನ್ನುತ್ತದೆ ಎಸ್‌ಇಎಐ.

ದೇಶದಲ್ಲಿ ಈಗ ಜಾರಿಯಲ್ಲಿರುವ ದಾಸ್ತಾನು ಮಿತಿ ಹೇರಿಕೆಯಿಂದ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಎಸ್‌ಇಎಐ, ಇದೇ ಏಪ್ರಿಲ್ 21ರಂದು ಮಾಧ್ಯಮ ಹೇಳಿಕೆ ನೀಡಿತ್ತು.

‘ಮಾರ್ಚ್ 30ರಿಂದ ಅನ್ವಯವಾಗುವಂತೆ ಕೇಂದ್ರ ಸರ್ಕಾರವು ಸಗಟು ಮತ್ತು ಚಿಲ್ಲರೆ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆಯ ದಾಸ್ತಾನಿಗೆ ಮಿತಿ ಹೇರಿದೆ. ಅಡುಗೆ ಎಣ್ಣೆಯ ಕೃತಕ ಅಭಾವವನ್ನು ತಪ್ಪಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಸರ್ಕಾರ ಹೇಳಿದೆ. ಈ ಮಿತಿಯ ಅನ್ವಯ ಚಿಲ್ಲರೆ ಮಾರಾಟಗಾರರು ಒಟ್ಟು 30 ಕ್ವಿಂಟಲ್‌ಗಿಂತ ಹೆಚ್ಚು ಮತ್ತು ಸಗಟು ಮಾರಾಟಗಾರರು 50 ಕ್ವಿಂಟಲ್‌ಗಿಂತ ಹೆಚ್ಚು ಅಡುಗೆ ಎಣ್ಣೆಯನ್ನು ಸಂಗ್ರಹಿಸುವಂತಿಲ್ಲ. ಸಾಮಾನ್ಯವಾಗಿ ಸಗಟು ವ್ಯಾಪಾರಿಗಳು 30–50 ಟನ್ ಸಾಮರ್ಥ್ಯದ ಟ್ರಕ್‌ಗಳಲ್ಲಿ ಅಡುಗೆ ಎಣ್ಣೆಯನ್ನು ತರಿಸಿಕೊಳ್ಳುತ್ತಾರೆ. ಮಿತಿಯ ಹೇರಿಕೆಯಿಂದ ಈ ಮಟ್ಟದಲ್ಲಿ ಅಡುಗೆ ಎಣ್ಣೆಯನ್ನು ತರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕಡಿಮೆ ಪ್ರಮಾಣದ ಎಣ್ಣೆಯನ್ನು ತರಿಸಿಕೊಳ್ಳುತ್ತಿರುವುದರಿಂದ, ಸಾಗಾಟ ವೆಚ್ಚ ಹೆಚ್ಚಾಗುತ್ತಿದೆ. ಅಂತಿಮವಾಗಿ ಅದು ಚಿಲ್ಲರೆ ಮಾರಾಟ ಬೆಲೆ ಏರಿಕೆಗೂ ಕಾರಣವಾಗುತ್ತಿದೆ’ ಎಂದು ಎಸ್‌ಇಎಐ ವಿವರಿಸಿದೆ.

‘ಬೆಲೆ ಏರಿಕೆಯನ್ನು ನಿಯಂತ್ರಿಸಲು ದಾಸ್ತಾನು ಮಿತಿ ಜಾರಿಗೆ ತರಲಾಗಿದೆ. ಆದರೆ, ಮಿತಿಯ ಕಾರಣದಿಂದಲೇ ಸಗಟು ಮತ್ತು ಚಿಲ್ಲರೆ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆಯ ಕೊರತೆ ಉಂಟಾಗಿದೆ. ಪರಿಣಾಮವಾಗಿ ಮಾರಾಟ ಬೆಲೆ ಏರಿಕೆಯಾಗುತ್ತಿದೆ. ದಾಸ್ತಾನು ಮಿತಿ ಹೇರಿಕೆಯ ಉದ್ದೇಶವೇ ಈಡೇರುತ್ತಿಲ್ಲ. ಈ ನಿರ್ಧಾರವನ್ನು ಸರ್ಕಾರ ಮರುಪರಿಶೀಲಿಸಬೇಕು’ ಎಂದು ಎಸ್‌ಇಎಐ ಒತ್ತಾಯಿಸಿದೆ.

ವರದಿ: ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ. ಆಧಾರ: ದಿ ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ವರದಿಗಳು, ಪಿಟಿಐ, ರಾಯಿಟರ್ಸ್



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 106

ಬ್ರಹ್ಮಾಂಡಸೃಷ್ಟಿಗೆ ವಿಷ್ಣು ನೆರವು

ರುದ್ರಾವತಾರ ವರ್ಣನ – ಎಂಬ ಅಧ್ಯಾಯದಲ್ಲಿ ನಾರದ ತನ್ನ ತಂದೆ ಬ್ರಹ್ಮನಿಗೆ ಲಿಂಗೋತ್ಪತ್ತಿ ನಂತರದ ಚರಿತ್ರೆಯ ಬಗ್ಗೆ ಕೇಳುತ್ತಾನೆ. ಆಗ ಬ್ರಹ್ಮನು ಶಿವಚರಿತ್ರೆಯ ಸ್ವರೂಪ ಮತ್ತು ಸೃಷ್ಟಿಯ ಕ್ರಮವನ್ನ ತಿಳಿಸುತ್ತಾನೆ.

‘ಎಲೈ ನಾರದನೇ, ಲಿಂಗೋತ್ಪತ್ತಿಯಾದನಂತರ ಶಿವಸ್ವರೂಪನೂ ಆದ್ಯಂತರಹಿತನೂ ಆದ ದೇವನು ನಮ್ಮನ್ನು ಹರಸಿ ಅಂತರ್ಧಾನನಾದ. ನಾನೂ ಮತ್ತು ವಿಷ್ಣುಲೋಕದ ಸೃಷ್ಟಿ ಮತ್ತು ಪಾಲನೆಗಳಿಗಾಗಿ ನಮ್ಮ ಹಂಸ ಮತ್ತು ವರಾಹರೂಪಗಳನ್ನು ಉಪಸಂಹಾರ ಮಾಡಿದೆವು’ ಎಂದು ಬ್ರಹ್ಮ ಹೇಳುತ್ತಾನೆ. ಆಗ ಮಧ್ಯ ಪ್ರವೇಶಿಸಿದ ನಾರದ ‘ನೀವಿಬ್ಬರು ಹಂಸ ಮತ್ತು ವರಾಹಗಳ ರೂಪವನ್ನೇ ಧರಿಸಲು ಕಾರಣವೇನು?’ ಎಂದು ಪ್ರಶ್ನಿಸುತ್ತಾನೆ.

ಆಗ ಬ್ರಹ್ಮ ‘ಎಲೈ ನಾರದ, ಹಂಸವು ನಿಶ್ಚಲವಾಗಿ ಮೇಲಗಡೆ ಹಾರುವುದು. ಅದಕ್ಕೆ ಊರ್ಧ್ವಗತಿಯಿರುವುದು. ಹಾಲು–ನೀರುಗಳನ್ನು ಬೇರೆಮಾಡುವಂತೆ ಆ ಹಂಸಕ್ಕೆ ಇದು ತತ್ವ, ಇದು ಅತತ್ವವೆಂಬ ವಿವೇಕಜ್ಞಾನವಿರುವುದು. ಅದರಂತೆ ಜ್ಞಾನ ಮತ್ತು ಅಜ್ಞಾನಗಳ ತತ್ವವನ್ನೂ ತಿಳಿಯಬಲ್ಲದು. ಈ ಎಲ್ಲಾ ಕಾರಣಗಳಿಂದ ಹಂಸವು ಉತ್ತಮವಾದ ಪಕ್ಷಿ. ಅದಕ್ಕಾಗಿಯೇ ಬ್ರಹ್ಮನಾದ ನಾನು ಹಂಸರೂಪವನ್ನು ಧರಿಸಿದೆ. ಆದರೆ ನನಗೆ ಜ್ಯೋತಿಸ್ವರೂಪವಾದ ಪರಮೇಶ್ವರತತ್ವದ ವಿವೇಕ ಮಾತ್ರ ತಿಳಿಯಲಿಲ್ಲ. ಆದುದರಿಂದ ಪ್ರಯೋಜನವಿಲ್ಲದ ಹಂಸರೂಪವನ್ನು ತ್ಯಜಿಸಿದೆ.

‘ಲಿಂಗದ ಮೂಲವನ್ನು ನೋಡಲು ಭೂಮಿಯನ್ನು ಕೊರೆದುಕೊಂಡು ಹೋಗಬೇಕೆಂದು ಯೋಚಿಸಿದ ವಿಷ್ಣು ಕಾಡುವರಾಹದ ರೂಪವನ್ನು ಧರಿಸಿದ. ಅಲ್ಲದೆ, ವರಾಹರೂಪವು ಭೂಮಿಯನ್ನು ಕಲ್ಪಿಸುವುದು. ಜಗದ್ರಕ್ಷಕನಾದ ವಿಷ್ಣುವು ಜಗತ್ತನ್ನು ರಕ್ಷಿಸಲು ವರಾಹರೂಪವನ್ನು ಧರಿಸಿದ. ಹರಿಯು ವರಾಹರೂಪವನ್ನು ಧರಿಸಿದ್ದರಿಂದ ಆ ಕಲ್ಪಕ್ಕೆ ‘ವಾರಾಹಕಲ್ಪ’ವೆಂದು ಹೆಸರಾಯಿತು’ ಎಂದ ಬ್ರಹ್ಮ, ಮುಂದೆ ಸೃಷ್ಟಿಕ್ರಮವನ್ನು ಹೇಳುತ್ತಾನೆ.

‘ಲೋಕಪಿತಾಮಹನೆನಿಸಿದ ನಾನು, ಶಿವನ ಆಜ್ಞೆಯನ್ನು ಪಾಲಿಸಲು ನಿರ್ಧರಿಸಿದೆ. ಹರಿಯಿಂದ ಸೃಷ್ಟಿಸುವ ಕ್ರಮವನ್ನು ತಿಳಿದು ಸೃಷ್ಟಿಕರ್ಮವನ್ನಾರಂಭಿಸಿದೆ. ನನಗೆ ಸೃಷ್ಟಿಕ್ರಮವನ್ನು ಉಪದೇಶಿಸಿ ಅಂತರ್ಧಾನನಾದ ಹರಿಯು ವೈಕುಂಠಕ್ಕೆ ಹೋಗಿ ವಾಸಮಾಡತೊಡಗಿದ. ಸೃಷ್ಟಿಕಾರ್ಯ ಆರಂಭಿಸಲು ನಾನು ಹಿಂದೆ ಸೃಷ್ಟಿಸಿದ ಜಲರಾಶಿಯಲ್ಲಿ ಅಂಜಲಿಯ(ವೀರ್ಯ)ನ್ನು ಹಾಕಿದೆ. ಅದರಿಂದ ‘ಚತುರ್ವಿಂಶತಿ’ ಎಂಬ ಸಂಜ್ಞೆಯುಳ್ಳ ವಿರಾಟ್‌ರೂಪವೆಂದು ಪ್ರಸಿದ್ಧವಾದ ಜ(ಡ)ಲ ರೂಪದ ಗೋಳವಾಯಿತು. ಆಗ ನನಗೆ ಮುಂದೆ ಏನು ಮಾಡಬೇಕೆಂದು ತೋಚದೆ ವಿಷ್ಣುವನ್ನು ಧ್ಯಾನಿಸುತ್ತಾ, ಹನ್ನೆರಡು ವರ್ಷಗಳ ಪರ್ಯಂತ ಘೋರವಾದ ತಪಸ್ಸನ್ನಾಚರಿಸಿದೆ.

‘ವಿಷ್ಣುವು ನನ್ನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ. ಆಗ ನಾನು ‘ಓ ವಿಷ್ಣುವೇ, ಚತುರ್ವಿಂಶತಿ ಸಂಜ್ಞವಾದ ಈ ವಿರಾಡ್ರೂಪದ ಗೋಳವು ಚೈತನ್ಯವುಳ್ಳದ್ದಾಗಿಲ್ಲ, ಜಡವಾಗಿದೆ. ಶಿವನ ಅನುಗ್ರಹದಿಂದ ಆವಿರ್ಭವಿಸಿದ ನೀನು, ಈ ಅಂಡವನ್ನು ಪ್ರವೇಶಿಸಿ ಗೋಳಕ್ಕೆ ಚೈತನ್ಯ ನೀಡು’ ಎಂದು ಕೋರಿದೆ. ಅದರಂತೆ ಹರಿಯು ಮಹಾರೂಪವನ್ನು ಧರಿಸಿ ಆ ಅಂಡವನ್ನು ಪ್ರವೇಶಿಸಿದ. ಸಾವಿರಾರು ತಲೆಗಳುಳ್ಳ, ಸಾವಿರಾರು ಕಣ್ಣುಗಳುಳ್ಳ, ಸಾವಿರಾರು ಕಾಲುಗಳುಳ್ಳ ವಿರಾಡ್ರೂಪವನ್ನು ಧರಿಸಿದ್ದ ವಿಷ್ಣು, ಅಂಡವನ್ನು ಸಂಪೂರ್ಣವಾಗಿ ವ್ಯಾಪಿಸಿದ. ಇದರಿಂದ ‘ಚತುರ್ವಿಂಶತಿ’ ಎಂದು ಹೆಸರುಳ್ಳ ಆ ಅಂಡವು ಸಚೇತನವಾಯಿತು. ಅಂಡದಲ್ಲಿ ಹರಿಯು ಪಾತಾಳ ಮೊದಲುಗೊಂಡು ಏಳು ಲೋಕಗಳಿಗೆ ಅಧಿಪತಿಯಾಗಿ ವಿರಾಟ ಪುರುಷರೂಪದಿಂದ ಪ್ರಕಾಶಿಸಿದ. ಎಲ್ಲ ಲೋಕಗಳಿಗೂ ಮೇಲ್ಭಾಗದಲ್ಲಿ ಕೈಲಾಸವೆಂಬ ಸುಂದರವಾದ ನಗರವನ್ನು ಶಂಕರನು ತನ್ನ ವಾಸಕ್ಕಾಗಿ ಕಲ್ಪಿಸಿಕೊಂಡ. ನಾನು ಸೃಷ್ಟಿಸಿದ ಬ್ರಹ್ಮಾಂಡವೆಲ್ಲ ನಾಶವಾದರೂ, ವಿಷ್ಣು-ಪರಮೇಶ್ವರ ವಾಸಿಸುವ ವೈಕುಂಠ-ಕೈಲಾಸಲೋಕಗಳಿಗೆ ಮಾತ್ರ ನಾಶವಿಲ್ಲ. ಅಂಥ ಚಿರಾವಸ್ಥೆ ಆ ಎರಡು ಲೋಕಗಳಿಗಿವೆ.

‘ಏಳು ಲೋಕಗಳು ಸೃಷ್ಟಿಯಾದ ನಂತರ ನನ್ನಿಂದ ಅಂಧಕಾರ ಸದೃಶವಾದ ಮತ್ತು ಪಾಪವನ್ನು ಬೆಳೆಸುವಂತಹ ಅವಿದ್ಯಾ, ಅಸ್ಮಿತ, ರಾಗ, ದ್ವೇಷ, ಮೋಹ ಎಂಬ ಐದು ವಸ್ತುಗಳು ಜನಿಸಿದುವು. ಅವುಗಳಿಂದ ಸ್ಥಾವರ ಸೃಷ್ಟಿಸಿದೆ. ಅಂದರೆ ಅಚಲವಾದ ಪರ್ವತ ಮೊದಲಾದ ಸುಖದುಃಖಾದಿಗಳನ್ನು ತಿಳಿಯಲಾರದ ಜಡವಸ್ತುಗಳು’ ಎಂದು ಸ್ಪಷ್ಟಪಡಿಸುತ್ತಾನೆ ಬ್ರಹ್ಮ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದೆಹಲಿಯ ಜಹಾಂಗೀರ್‌ಪುರಿ ಹಿಂಸಾಚಾರದ ಬಳಿಕ ಎರಡು ನಿಮಿಷದ ವಿಡಿಯೊವೊಂದು ವೈರಲ್ ಆಗಿದೆ. ಕೆಲವು ಯುವಕರು ಪೊಲೀಸರ ಸಮ್ಮುಖದಲ್ಲೇ ಕಲ್ಲು ತೂರಾಟ ನಡೆಸುತ್ತಿರುವ ದೃಶ್ಯ ಇಲ್ಲಿದೆ. ಯುವಕರ ಜೊತೆಗಿದ್ದ ಕೆಲವು ಪೊಲೀಸರೂ ಕಲ್ಲುತೂರಾಟ ನಡೆಸಿದ ದೃಶ್ಯ ದಾಖಲಾಗಿದೆ. ಈ ವಿಡಿಯೊವನ್ನು ಟ್ವಿಟರ್ ಮೊದಲಾದ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿರುವ ಕೆಲವರು, ‘ನಿರ್ದಿಷ್ಟ ಸಮುದಾಯವೊಂದನ್ನು (ಮುಸ್ಲಿಂ) ಗುರಿಯಾಗಿಸಿಕೊಂಡು ಬಲಪಂಥೀಯ ಸಂಘಟನೆಯವರು ಈ ಕೃತ್ಯ ಎಸಗಿದ್ದಾರೆ’ ಎಂದು ಆರೋಪಿಸಿದ್ದಾರೆ.



ಈ ವಿಡಿಯೊವನ್ನು ಪರಿಶೀಲಿಸಿದ ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ತಂಡ, ಜಹಾಂಗೀರ್‌ಪುರಿ ಹಿಂಸಾಚಾರಕ್ಕೂ ಇದಕ್ಕೂ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದೆ. 2020ರ ಜನವರಿಯಲ್ಲಿ ಈ ವಿಡಿಯೊವನ್ನು ಚಿತ್ರೀಕರಿಸಲಾಗಿದೆ. ಉತ್ತರ ಪ್ರದೇಶ ಫಿರೋಜಾಬಾದ್‌ನಲ್ಲಿ ಆಗ ನಡೆಯುತ್ತಿದ್ದ ಸಿಎಎ, ಎನ್‌ಆರ್‌ಸಿ ವಿರುದ್ಧದ ಪ್ರತಿಭಟನೆಯ ವೇಳೆ ಇದನ್ನು ಚಿತ್ರೀಕರಿಸಲಾಗಿದೆ. ಮುಸ್ಲಿಂ ಸಮುದಾಯಕ್ಕೆ ಸೇರಿದ ಜನರ ಆಸ್ತಿಪಾಸ್ತಿಗಳಿಗೆ ಬೆಂಕಿ ಹಚ್ಚುವ ಹಾಗೂ ಅವರ ಮೇಲೆ ಕಲ್ಲು ತೂರಾಟ ನಡೆಸುವ ಈ ವಿಡಿಯೊವನ್ನು ಸ್ಥಳೀಯರು ಚಿತ್ರೀಕರಿಸಿದ್ದಾರೆ ಎಂದು ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಜೀವನ- ಉಜ್ಜೀವನ

ಭುಕ್ತಿಪಥ ಮುಕ್ತಿಪಥ ಬೇರೆಬೇರೆಯವಲ್ಲ |
ಯುಕ್ತದಿಂದೆರಡುಮಂಚುಗಳೊಂದೆ ಪಥಕೆ ||
ಸತ್ತ್ವ ಶೋಧನೆ ಲೋಕಸಂಸ್ಕಾರದಿಂ ನಿನಗೆ |
ಶಕ್ತಿಯಧ್ಯಾತ್ಮಕದು – ಮಂಕುತಿಮ್ಮ || 616 ||

ಪದ-ಅರ್ಥ: ಭುಕ್ತಿಪಥ = ಭೋಗಜೀವನದ ದಾರಿ, ಮುಕ್ತಿಪಥ = ಆತ್ಮೋದ್ಧಾರದ ದಾರಿ, ಯುಕ್ತದಿಂದೆರಡುಮಂಚುಗಳೊಂದೆ = ಯುಕ್ತದಿಂದ (ಆಚರಣೆಯಿಂದ) + ಎರಡೂ + ಅಂಚುಗಳು + ಒಂದೆ, ಶಕ್ತಿಯಧ್ಯಾತ್ಮಕದು = ಶಕ್ತಿಯು + ಅಧ್ಯಾತ್ಮಕ್ಕೆ + ಅದು.

ವಾಚ್ಯಾರ್ಥ: ಭೋಗಜೀವನದ ಮತ್ತು ಆತ್ಮೋದ್ಧಾರದ ದಾರಿಗಳು ಬೇರೆ ಬೇರೆಯಲ್ಲ, ಸರಿಯಾಗಿ ನೋಡಿದರೆ ಅವು ಎರಡೂ ಒಂದೇ ಪಥದ ಅಂಚುಗಳು. ಲೋಕಸಂಸ್ಕಾರದಿಂದ ಸತ್ತ್ವದ ಶೋಧನೆಯಾಗುತ್ತದೆ. ಅದೇ ಅಧ್ಯಾತ್ಮಕ್ಕೆ ಶಕ್ತಿ.

ವಿವರಣೆ: ಭುಕ್ತಿಪಥ ಸಂಸಾರದ ಮಾರ್ಗ. ಮುಕ್ತಿಪಥ ಸಂಸಾರದಿಂದ ಬಿಡುಗಡೆ ಪಡೆದು ಮೋಕ್ಷ ಪಡೆಯುವ ಮಾರ್ಗ. ಒಂದು ಸಂಸಾರ ಮುಖವಾಗಿರುವುದು ಇನ್ನೊಂದು ಸಂಸಾರದಿಂದ ಪಾರು ಮಾಡುವುದು. ತೋರಿಕೆಗೆ ಎರಡೂ ಮಾರ್ಗಗಳು ಪರಸ್ಪರ ವಿರುದ್ಧವಾದವುಗಳು ಎನ್ನಿಸುತ್ತದೆ. ಆದರೆ ಸರಿಯಾಗಿ ಯೋಚಿಸಿದರೆ ಈ ಎರಡೂ ಕೂಡ ಒಂದೇ ಮಾರ್ಗದ ಎರಡು ಅಂಚುಗಳು ಇದ್ದ ಹಾಗೆ.

ಅಧ್ಯಾತ್ಮದಲ್ಲಿ ಉಜ್ಜೀವನ ಎಂಬ ಒಂದು ಪದ ಬಳಕೆಯಾಗುತ್ತದೆ. ಜೀವನ ಮತ್ತು ಉಜ್ಜೀವನಗಳು ಬೇರೆ ಬೇರೆಯಾದರೂ, ಒಂದನ್ನು ಬಿಟ್ಟು ಮತ್ತೊಂದು ಇರಲಾರದು. ಜೀವನ ತಾಪವಾದರೆ ಉಜ್ಜೀವನ ತಪ, ಜೀವನ ಚಿಂತೆಯಾದರೆ, ಉಜ್ಜೀವನ ಚಿಂತನೆ. ಒಂದು ಮಾವಿನ ಮರವಿದೆ. ಅದರಲ್ಲಿ ಮೊದಲು ಹೂವಾಯಿತು. ಹೂವು ಕಾಯಿಯಾಯಿತು. ಕಾಯಿ ಚಿಕ್ಕದಿದ್ದಾಗ ಒಗರಾಗಿತ್ತು. ಸ್ವಲ್ಪ ಬೆಳೆದ ಮೇಲೆ ಕಾಯಿ ದೊಡ್ಡದಾಯಿತು, ಹಸಿಯಾಯಿತು, ಬಿರುಸಾಯಿತು. ಈಗ ಅದರ ರುಚಿ ಹುಳಿ. ಕಾಯಿಯನ್ನು ಮರದಲ್ಲೇ ಬಿಟ್ಟರೆ, ಸ್ವಲ್ಪ ದಿನಗಳಲ್ಲಿ ಅದಕ್ಕೆ ಬಂಗಾರದ ಬಣ್ಣ ಬರುತ್ತದೆ. ಅದರ ರುಚಿ ಹುಳಿಯಿಂದ ಬದಲಾಗಿ ಸಿಹಿಯಾಗುತ್ತದೆ. ಇದೆಲ್ಲ ಆಗುವುದು ಕಾಯಿ ಮರದಲ್ಲಿ ಇದ್ದಾಗ ಮಾತ್ರ. ಅದನ್ನು ಪುಟ್ಟ ಕಾಯಿ ಇದ್ದಾಗಲೇ ಕಿತ್ತಿ ತೆಗೆದರೆ ಅದು ಹಣ್ಣಾಗದೇ ಹಾಗೆಯೇ ಒಗರಾಗಿ ಉಳಿದು ಕೆಟ್ಟು ಹೋಗುತ್ತದೆ. ಹಾಗೆಂದರೆ ಹೂವು ಕಾಯಿಯಾಗಿ, ಹಣ್ಣಾಗುವುದಕ್ಕೆ ಮರ ಬೇಕೇ ಬೇಕು. ಆದರೆ ಹಣ್ಣು ಪೂರ್ಣ ಪಕ್ವವಾದ ಕ್ಷಣ ಅದು ತೊಟ್ಟು ಕಳಚಿಕೊಂಡು, ಮರದಿಂದ ಬೇರೆಯಾಗಿ ಕೆಳಗೆ ಬೀಳುತ್ತದೆ. ಅಂದರೆ ಹಣ್ಣಾಗುವುದಕ್ಕೆ ಮರ ಅವಶ್ಯ. ಹಣ್ಣಾದ ಮೇಲೆ ಮರದ ಅವಶ್ಯಕತೆ ಇಲ್ಲ. ಇದನ್ನೇ ಉಜ್ಜೀವನ ಕ್ರಿಯೆ ಎನ್ನುತ್ತಾರೆ. ಇದಕ್ಕೊಂದು ಸುಂದರ ಉದಾಹರಣೆಯೆಂದರೆ ನೀರಿನಲ್ಲಿ ಹಾರಿ ಈಜುವುದು. ನದಿಯನ್ನು ದಾಟಬೇಕಾದರೆ ನೀರಿನಲ್ಲಿ ಹಾರಿಕೊಳ್ಳಬೇಕು. ಈಜುವುದು ಎಂದರೆ, ನೀರಿನಲ್ಲಿದ್ದು, ನೀರನ್ನು ಹಿಂದೆ ತಳ್ಳಬೇಕು. ಆಗ ನಾವು ಮುಂದಕ್ಕೆ ಸಾಗಿ ನದಿಯನ್ನು ದಾಟಬಹುದು.

ಸಂಸಾರವನ್ನು ದಾಟುವುದು ಎಂದರೆ ಮೊದಲು ಸಂಸಾರದಲ್ಲಿರಬೇಕು. ಈಜುವಾಗ ನೀರನ್ನು ಹಿಂದೆ ತಳ್ಳಿದಂತೆ, ಸಂಸಾರದ ಭೋಗಗಳನ್ನು ಆದಷ್ಟು ಹಿಂದಕ್ಕೆ ತಳ್ಳುತ್ತಾ ಇದ್ದರೆ ಅಧ್ಯಾತ್ಮದಲ್ಲಿ ಮುಂದೆ ಹೋಗುತ್ತೇವೆ. ಲೋಕಸಂಸಾರದ ಘಟನೆಗಳು ನಮ್ಮನ್ನು ಮುಗಿಸುತ್ತವೆ. ಒಂದು ಸಲ ಅದು ಮಾಗಿದರೆ, ಹಣ್ಣಿನಂತೆ, ಸಂಸಾರದ ಬದುಕಿನಿಂದ ಅನಾಯಾಸವಾಗಿ ಹೊರಬರುತ್ತದೆ. ಮುಕ್ತಿಪಥವೆಂಬ ಉಜ್ಜೀವನಕ್ಕೆ ಭುಕ್ತಿಪಥವೆಂಬ ಸಂಸಾರ ಅತ್ಯವಶ್ಯಕ. ಸಂಸಾರವಿಲ್ಲದೆ ಮಾಗುವಿಕೆಯಿಲ್ಲ, ಮಾಗುವಿಕೆ ಇಲ್ಲದೆ ಮುಕ್ತಿ ಇಲ್ಲ. ಅದನ್ನೇ ಕಗ್ಗ ಹೇಳುತ್ತದೆ, ಭುಕ್ತಿಪಥ ಮತ್ತು ಮುಕ್ತಿ ಪಥಗಳೆರಡೂ ಒಂದೇ ದಾರಿಯ ಎರಡು ಅಂಚುಗಳು ಮತ್ತು ಸಂಸಾರದನುಭವಗಳೇ ಅಧ್ಯಾತ್ಮದ ಶಕ್ತಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಏಪ್ರಿಲ್ 28, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ಚೈತ್ರ ಕೃಷ್ಣತ್ರಯೋದಶಿ ಗಂ. 24-27 ನಕ್ಷತ್ರ: ಉತ್ತರಾಭಾದ್ರಾ ಗಂ. 17-40 ಯೋಗ: ವೈಧೃತಿ ಗಂ. 16-28 ಕರಣ: ಗರಜೆ ಗಂ. 12-22, ಮೇಷ ಮಾಸದ 14 ನೇ ದಿನ. ರಾಹುಕಾಲ: ಮಧ್ಯಾಹ್ನ 01:30 –03:00 ಸೂರ್ಯೋದಯ: 06-14 ಸೂರ್ಯಾಸ್ತ: 06-42 ಮುಸ್ಲಿಂ ದಿನಾಂಕ: 26 ರಂಜಾನ್ ದಿನ ವಿಶೇಷ: ಪಕ್ಷ ಪ್ರದೋಷ
ಅದೃಷ್ಟ ಸಂಖ್ಯೆ: 3, 8

ಮೇಷ: ಮನೆಯಲ್ಲಿನ ವ್ಯವಹಾರಗಳಲ್ಲಿ ಈ ದಿನ ಸಕಾರಾತ್ಮಕ ಪ್ರತಿಕ್ರಿಯೆಗಳನ್ನು ಕಾಣುವಿರಿ. ನೀವು ನಿರೀಕ್ಷಿಸಿದ ಉದ್ಯಮದಲ್ಲಿ ಅಲ್ಲದೆ ಬೇರೆ ಕಡೆಯೂ ಅವಕಾಶ ದೊರೆಯಲಿದೆ. ಸಂಬಳದ ಮೇಲೆ ಇನ್ನಿತರ ಉತ್ಪತ್ತಿಯೂ ಸಿಗುವುದು.

ವೃಷಭ: ವಂಶಪಾರಂಪರ್ಯವಾಗಿ ಬಂದ ನಿಮ್ಮ ವ್ಯಾಪಾರ, ವ್ಯವಹಾರ ಅಥವಾ ವೃತ್ತಿಯಲ್ಲಿ ಈ ದಿನ ಮತ್ತಷ್ಟು ಏಳಿಗೆ ಕಾಣಲಿದೆ. ಕುಟುಂಬವರ್ಗದಲ್ಲಿ ನಿಮ್ಮ ಸಲಹೆಗಳಿಗೆ ಹೆಚ್ಚಿನ ಆದ್ಯತೆ ದೊರೆಯಲಿದೆ. ಕಪ್ಪು ಬಣ್ಣ ಅದೃಷ್ಟ ಬದಲಿಸಲಿದೆ.

ಮಿಥುನ: ಹಿಂದಿನ ಸೋಲು ನಿಮ್ಮನ್ನು ಬಾಧಿಸುತ್ತಿದ್ದರೂ, ಹೊಸತನದಲ್ಲಿ ಜಯ ಕಾಣುವಿರಿ. ರಾಜಕೀಯ ವ್ಯಕ್ತಿಗಳಿಗೆ ಸ್ವಂತ ಕ್ಷೇತ್ರದಲ್ಲಿ ದುರಹಂಕಾರಿ ಎನ್ನುವ ಪಟ್ಟ ಸಿಗುವ ಸಾಧ್ಯತೆ. ವಿದ್ಯಾರ್ಥಿಗಳ ಮನೋಕಾಮನೆಗಳು ಪೂರ್ಣಗೊಳ್ಳುವುದು.

ಕರ್ಕಾಟಕ: ಉದ್ಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಭಡ್ತಿ ದೊರೆಯುವ ಸಂಭವ. ಬದುಕಿನಲ್ಲಿ ನೆಲೆ ನಿಂತ ನೆಮ್ಮದಿ. ಬಾಲ್ಯದಲ್ಲಿ ಕಲಿತ ಅಥವಾ ತಿಳಿದುಕೊಂಡಿದ್ದ ಕೆಲ ವಿಷಯಗಳು ಈಗ ನಿಮ್ಮ ಉಪಯೋಗಕ್ಕೆ ಬರಲಿದೆ.

ಸಿಂಹ: ಸ್ವಯಂಕೃತ ಅಪರಾಧದಿಂದ ಜೀವನದಲ್ಲಿ ಉಲ್ಲಾಸವನ್ನು ಕಳೆದುಕೊಳ್ಳುವ ಸಮಯ ಎದುರಾಗಲಿದೆ. ಕಲ್ಲಿನ ಅಥವಾ ಟೈಲ್ಸ್ ಕೆಲಸ ಮಾಡುವವರು ಉದ್ಯೋಗದಲ್ಲಿ ಜಾಗ್ರತೆ ವಹಿಸಿ.

ಕನ್ಯಾ: ಹೊಸ ಆಸೆಗಳನ್ನು ಈಡೇರಿಸಿಕೊಳ್ಳುವಂತಹ ಉತ್ತಮ ಅವಕಾಶಗಳು ಎದುರಾಗುವುದು. ಹೊಸ ವ್ಯವಹಾರಗಳ ಚಾಲನೆಗೆ ಉತ್ತಮ ಮಾರ್ಗದರ್ಶನ ಹೊಂದುವಿರಿ. ಗಂಡ-ಹೆಂಡತಿಯ ಮಧ್ಯದಲ್ಲಿ ಅನಗತ್ಯ ವಿವಾದ ಬೇಡ.

ತುಲಾ: ಚಿಂತೆ ಮತ್ತು ತೊಂದರೆಗಳು ದೂರಾಗಿ ಹಿಂದಿನ ಸಂತೋಷವನ್ನು ಪುನಃ ಪಡೆಯುವಿರಿ. ಗೃಹಿಣಿಯರು ಆಹಾರ ತಯಾರಿಕೆಯ ವಿಚಾರದಲ್ಲಿ ಉತ್ತಮವಾದ ಹೊಗಳಿಕೆಯ ಮಾತುಗಳನ್ನು ಎದುರು ನೋಡಬಹುದು.

ವೃಶ್ಚಿಕ: ಸ್ವಲ್ಪ ಜಾಗ್ರತೆ ವಹಿಸಿದಲ್ಲಿ ನೀವು ಕೈಗೊಂಡ ಪೂರ್ವನಿಯೋಜಿತ ಕಾರ್ಯಗಳೆಲ್ಲಾ ಉತ್ತಮ ರೀತಿಯಲ್ಲಿ ನಡೆಯುವುದು. ಮಕ್ಕಳ ಆರೋಗ್ಯ ಏರುಪೇರಾಗಬಹುದು. ವ್ಯವಹಾರದಲ್ಲಿ ಕೊಂಚ ಹಿನ್ನಡೆಯುಂಟಾಗುವ ಸಾಧ್ಯತೆ.

ಧನು: ಈ ದಿನ ದಿನಗೂಲಿ ನೌಕರರಿಗೆ ಅನುಕೂಲ ವಾತಾವರಣ ಸಿಗಲಿದೆ. ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಆಲಸ್ಯ ತೋರಿ ಬರುವುದು. ಹೊಸ ವಾಹನ ಖರೀದಿ ಯೋಗ. ಚಿಂತೆ ಮತ್ತು ಭಯವನ್ನು ದೂರ ಮಾಡಲು ಪ್ರಯತ್ನಿಸಿ.

ಮಕರ: ಮಾನಸಿಕ ನೆಮ್ಮದಿಗಾಗಿ ಪುಣ್ಯಕ್ಷೇತ್ರ ದರ್ಶನ ಮಾಡಲಿರುವಿರಿ. ನಿಮ್ಮ ಸಲಹೆ ಸೂಚನೆಗಳನ್ನು ಹೆಚ್ಚು ಚರ್ಚಿಸದೆ, ನಿಮ್ಮ ಮೇಲಿನ ನಂಬಿಕೆಯಿಂದಾಗಿ ಮೇಲಧಿಕಾರಿಗಳು ನಿಮ್ಮ ನಿರ್ಧಾರಗಳನ್ನು ಒಪ್ಪಿಕೊಳ್ಳುವರು.

ಕುಂಭ: ಅಣ್ಣತಮ್ಮಂದಿರ ನಡುವಿನ ವಿಚಾರದಲ್ಲಿ ನೀವು ಈಗ ತೆಗೆದುಕೊಂಡಿದ್ದ ನಿರ್ಧಾರಗಳು ಸರಿಯಾಗಿದೆಯೇ ಎಂದು ಇನ್ನೊಮ್ಮೆ ಪರಾಮರ್ಶಿಸಿಕೊಳ್ಳಿ. ಸತ್ಯ, ಧರ್ಮ, ನೀತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಿರಿ.


ಮೀನ: ನಾಲ್ಕು ಜನರ ಮಧ್ಯದಲ್ಲಿ ನಾಯಕತ್ವ ಪ್ರಾಪ್ತಿಯಾಗಲಿದೆ. ತಾಯಿ ಆರೋಗ್ಯ ಸುಧಾರಿಸಲಿದೆ. ಪ್ರಯಾಣ ಅಂದುಕೊಂಡಂತೆ ಸುಗಮವಾಗಿರುವುದಿಲ್ಲ. ಆದ್ದರಿಂದ ರಾಹುಕಾಲದ ನಂತರದ ಸಮಯದಲ್ಲಿ ಸಂಚಾರ ಮಾಡಿ.

ಪದಬಂಧ 4941

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಬೇರೊಂದು ಸ್ಥಳಕ್ಕೆ ಹೋಗುವುದು (5)
4.ತಾಪವಿದ್ದಾಗಲೇ ತೋರಿಸಿದ ಶೌರ್ಯ! (3)
5.ಅಡಿಪಾಯ ಹಾಕುವಾಗ ತಯಾರಿಸಿದ ಸಿಹಿ ಖಾದ್ಯ (3)
7.ಬೆಂಕಿಗೆ ಗಾಳಿಯೂದುವ ಸಲಕರಣೆ (2)
8.ಈ ತೂತು ಅಲಂಕಾರದಲ್ಲಿ ಮನಸ್ತಾಪವೂ ಆದೀತು! (2)
11.ಜ್ಯೋತಿಷ್ಯ ರಾಶಿಯಲ್ಲಿನ ಜೋಡಿ (3)
13.ಇದು ಹೊಸತು (3)
14.ವಿವೇಕ ಕಳೆದುಕೊಂಡವನು (5)

ಮೇಲಿಂದ ಕೆಳಕ್ಕೆ
1.ಹೋಲಿಕೆಗೊಂದು ಪರ್ಯಾಯ ಪದ (3)
2.ಈತ ನೆಲೆಗೊಳಿಸುವವನು (3)
3.ಪಾಲು ಕೇಳಿ ಬಂದಿರುವ ಅಂಚೆ! (3)
4.ಪ್ರಗತಿಶೀಲ ಮನೋಭಾವದವನು (5)
6.ಕಡಲಿನ ಮೇಲೆ ಕೈಗೊಳ್ಳುವ ಪಯಣ (5)
9.ಲಿಖಿತ ಮೂಲಕ ಮಾಡಿಕೊಳ್ಳುವ ಅರ್ಜಿ (3)
10.ಇದು ಅದ್ವಿತೀಯವಾದುದು (3)
12.ಕಿಂಕರನ ಸೇವೆ (3)



4940ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಮಾದ 4.ಗಬ್ಬುನಾತ
6.ಮನಸಿಜ 8.ಜಿಬರು
11.ಮುದುಕ 13.ಹಸುಗೂಸು
17.ತಡಗುಣಿ 18.ಕಗ್ಗೊಲೆ

ಮೇಲಿಂದ ಕೆಳಕ್ಕೆ:
1.ಪ್ರಮೇಯ 2.ದಗಲ್ಬಾಜಿ
3.ಆಲಸಿ 5.ತಮ
7.ಜಯಂತಿ 9.ರುಸುಮು
10.ಸಂದೇಹ 12.ಕರಣಿಕ
14.ಸುರಭಿ 15.ಸುತ
16.ಉಯ್ಯಾಲೆ

ಸುಡೊಕು 5327

	6			2		5		
5					7		2	3
	2		5			6		7
8		1		3		7		9
			9	7	8		1	
9		2		5		3		6
7		3		9				
	8		7		5	9	3	
		9		8				5


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5326 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ಷೇರುಪೇಟೆ ವಹಿವಾಟು




ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,200
ಇಂದಿನ ಅಂತ್ಯ	17,038
▼	162
ದಿನದ ಕನಿಷ್ಠ	17,110

ವಿನಿಮಯ ದರ

$ ಡಾಲರ್	76.55
£ ಪೌಂಡ್	96.33
€ ಯುರೊ	81.2
¥ ಯೆನ್ (100ಕ್ಕೆ)	59.8

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100 ಮೊಟ್ಟೆಗೆ ₹380
12 ಮೊಟ್ಟೆಗೆ ₹55
ಮೈಸೂರು
100 ಮೊಟ್ಟೆಗೆ ₹382

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1665 (1650)
ಸೋಯಾ (ರಿಫೈನ್ಡ್)	₹1600 (1585)
ಸೂರ್ಯಕಾಂತಿ (ರಿಫೈನ್ಡ್)	₹1930 (1900)
ಪಾಮೋಲಿನ್	₹1557 (1517)

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1000-1500
ಮಧ್ಯಮ	₹800-1000
ಸಣ್ಣ	₹500-700

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹10000-15000

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹164
ಆರ್‌ಎಸ್‌ಎಸ್-5 ₹158
ಗುಡ್ ಲಾಟ್ ₹154

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 430- 450
ನಡುಗೋಲು 500-550
ರಾಶಿ 600-650
ರಾಶಿ ಉತ್ತಮ 650-700
ಜರಡಿ 750 - 800
ಹೆರಕಿದ್ದು 1,100-1,150
ಹಸಿರು ಸಾಧಾರಣ 600-700
ಹಸಿರು ಉತ್ತಮ 900-950
ಹಸಿರು ಅತಿ ಉತ್ತಮ 1,200-1,250
ಕಾಳು ಮೆಣಸು - 500

ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-45000
ಹಳತು 46000-54000
ಹೊನ್ನಾಳಿ
ರಾಶಿ 48100-48100
ಕಾರ್ಕಳ
ಹೊಸತು 40000-45000
ಕುಮಟಾ
ಚಿಪ್ಪು 26699-31019
ಕೋಕ 18509-29999
ಫ್ಯಾಕ್ಟರಿ 10109-20169
ಹಳೆಚಾಲಿ 46019-49369
ಹೊಸಚಾಲಿ 35699-39719
ಪುತ್ತೂರು
ಕೋಕ 11000-26000
ಹೊಸತು 27500-45000
ಶಿವಮೊಗ್ಗ
ಬೆಟ್ಟೆ 50009-53589
ಗೊರಬಲು 17250-36609
ರಾಶಿ 43339-48599
ಸರಕು 56510-80205
ಸಿದ್ದಾಪುರ
ಬಿಳಿಗೋಟು 24399-32699
ಕೋಕ 22299-30912
ಹಳೆಚಾಲಿ 43144-43144
ಹೊಸಚಾಲಿ 35309-40099
ಕೆಂಪುಗೋಟು 26911-33999
ರಾಶಿ 44899-48099
ತಟ್ಟಿಬೆಟ್ಟೆ 37000-43099
ಶಿರಸಿ
ಬೆಟ್ಟೆ 22618-47100
ಬಿಳಿಗೋಟು 21531-33409
ಚಾಲಿ 23696-40959
ರಾಶಿ 35869-49891
ತುಮಕೂರು
ರಾಶಿ 47500-49000
ಯಲ್ಲಾಪುರ
ಬಿಳಿಗೋಟು 27312-32399
ಚಾಲಿ 37212-40999
ಕೋಕ 18009-30109
ಕೆಂಪುಗೋಟು 30211-34611
ರಾಶಿ 48864-54899
ತಟ್ಟಿಬೆಟ್ಟೆ 39399-47399

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15,850	15850	220.15 ಸೆಂಟ್ಸ್
ಎಸಿ	8540	8,300	8,500	
ಆರ್‌ಪಿ	9500	9,500	9,450	ಲಂಡನ್
ಆರ್‌ಸಿ	4305	4,050	4,275	2054 ಡಾಲರ್ಸ್

ಕೊಬ್ಬರಿ ಧಾರಣೆ



ಪುತ್ತೂರು (ಇತರೆ) ₹4500-10500

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹400-723
ದ್ವಿತಳಿ (ಬಿ.ವಿ) ₹455-699

ಮುಂಬೈ ಧಾರಣೆ

ಶೇಂಗಾ
27-4-2022

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10000-10050
ದಪ್ಪ ಮಧ್ಯಪ್ರದೇಶ(ಹೊಸ)	11000-11050
ದಪ್ಪ ಗುಜರಾತ್(ಹೊಸ)	10000-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1675 (1660)
ಒಂದು ವಾರದ ಡೆಲಿವರಿ	1670 (1655)
ಸೋಯಾ ಕಚ್ಚಾ	1595 (1565)
ಪಾಮ್ ವಾರದ ಡೆಲಿವರಿ	1555 (1515)
ಸೂರ್ಯಕಾಂತಿ ಎಣ್ಣೆ ಕಚ್ಚಾ	1870 (1850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
51,400 (51,850)
ಬೆಳ್ಳಿ ಕೆ.ಜಿ 65,250 (65,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮೇ 17ರಿಂದ ಎಲ್‌ಐಸಿ ಷೇರುಗಳ ವಹಿವಾಟು ಸಾಧ್ಯತೆ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಷೇರುಗಳು ಮೇ 17ರಂದು ಷೇರು ಪೇಟೆಗಳಲ್ಲಿ ವಹಿವಾಟು ಆರಂಭಿಸುವ ಸಾಧ್ಯತೆ ಇದೆ. ಕೇಂದ್ರ ಸರ್ಕಾರವು ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ಎಲ್‌ಐಸಿಯ 22.13 ಕೋಟಿ ಷೇರುಗಳನ್ನು ಮಾರಾಟ ಮಾಡುತ್ತಿದೆ.

ಮೇ 4ರಿಂದ 9ರವರೆಗೆ ಐಪಿಒಗೆ ಬಿಡ್ ಸಲ್ಲಿಸಲು ಅವಕಾಶ ಇರಲಿದೆ. ಪ್ರತಿ ಷೇರಿನ ಬೆಲೆಯನ್ನು ₹ 902–949ಕ್ಕೆ ನಿಗದಿ ಮಾಡಲಾಗಿದೆ. ಬಿಡ್ ಸಲ್ಲಿಸಿದವರಿಗೆ ಷೇರುಗಳು ದೊರೆತರೆ ಅವು ಮೇ 16ರಂದು ಅವರ ಡಿ–ಮ್ಯಾಟ್ ಖಾತೆಗಳಿಗೆ ವರ್ಗಾವಣೆ ಆಗಲಿವೆ. ಕನಿಷ್ಠ 15 ಷೇರುಗಳಿಗೆ ಬಿಡ್ ಸಲ್ಲಿಸಬೇಕು.

ರಿಲಯನ್ಸ್ ಮೌಲ್ಯ ₹19 ಲಕ್ಷ ಕೋಟಿ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಮಾರುಕಟ್ಟೆ ಮೌಲ್ಯವು ಬುಧವಾರ ₹ 19 ಲಕ್ಷ ಕೋಟಿಯ ಗಡಿಯನ್ನು ದಾಟಿತ್ತು. ಈ ಮಟ್ಟವನ್ನು ದಾಟಿದ ಭಾರತದ ಮೊದಲ ಕಂಪನಿ ರಿಲಯನ್ಸ್ ಇಂಡಸ್ಟ್ರೀಸ್.

ಬುಧವಾರದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆಯಲ್ಲಿ ಕಂಪನಿಯ ಷೇರು ಮೌಲ್ಯವು ₹ 2,827.10ಕ್ಕೆ ತಲುಪಿತ್ತು. ದಿನದ ಕೊನೆಯಲ್ಲಿ ಅದು ₹ 2,777.90ಕ್ಕೆ ತಲುಪಿತು.

ಷೇರು ಮೌಲ್ಯವು ಹೆಚ್ಚಳ ಆಗಿದ್ದಾಗ ಕಂಪನಿಯ ಮಾರುಕಟ್ಟೆ ಬಂಡವಾಳದ ಮೌಲ್ಯವು ₹ 19.12 ಲಕ್ಷ ಕೋಟಿಗೆ ತಲುಪಿತ್ತು. ದಿನದ ಕೊನೆಯಲ್ಲಿ ಅದು ₹ 18.79 ಲಕ್ಷ ಕೋಟಿಗೆ ಇಳಿಯಿತು. ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ಮಾರ್ಚ್‌ನಲ್ಲಿ ₹ 18 ಲಕ್ಷ ಕೋಟಿಯ ಗಡಿ ದಾಟಿತ್ತು. ಹಿಂದಿನ ವರ್ಷದ ಅಕ್ಟೋಬರ್ 13ರಂದು ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 17 ಲಕ್ಷ ಕೋಟಿಯ ಗಡಿ ದಾಟಿತ್ತು.

ಕಂಪನಿಯ ಷೇರು ಮೌಲ್ಯವು ಈ ವರ್ಷದಲ್ಲಿ ಶೇ 17.30ರಷ್ಟು ಹೆಚ್ಚಳ ಕಂಡಿದೆ.

ಈ ನಡುವೆ, ರಿಲಯನ್ಸ್ ಕಂಪನಿಯು ಸಂಯುಕ್ತ ಅರಬ್ ಸಂಸ್ಥಾನಗಳ (ಯುಎಇ) ತಾಜಿಜ್ ಕಂಪನಿಯ ಜೊತೆ ಒಪ್ಪಂದವೊಂದಕ್ಕೆ ಸಹಿ ಹಾಕಿದ್ದು, ಸಾಂಪ್ರದಾಯಿಕ ಹಾಗೂ ಅಸಾಂಪ್ರದಾಯಿಕ ಸಂಪನ್ಮೂಲಗಳನ್ನು ಅರಸುವಲ್ಲಿ ಜಂಟಿಯಾಗಿ ಕೆಲಸ ಮಾಡಲಿವೆ.

ಲಾಭ ಗಳಿಕೆ ಮಾರಾಟ, ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ಬ್ಯಾಂಕಿಂಗ್, ಹಣಕಾಸು ಮತ್ತು ಐ.ಟಿ. ವಲಯದ ಷೇರುಗಳನ್ನು ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಮಾರಾಟ ಮಾಡಿದ ಪರಿಣಾಮವಾಗಿ ದೇಶದ ಷೇರುಪೇಟೆ ಸೂಚ್ಯಂಕಗಳು ಬುಧವಾರ ಕುಸಿತ ಕಂಡವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 537 ಅಂಶ, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 162 ಅಂಶ ಕುಸಿದವು.

‘ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರ ಹೆಚ್ಚಿಸಿದರೆ ಜಾಗತಿಕ ಮಟ್ಟದಲ್ಲಿ ಆರ್ಥಿಕ ಬೆಳವಣಿಗೆಯು ಮಂದಗತಿಗೆ ತಿರುಗಬಹುದೇ ಎಂಬ ಆಲೋಚನೆಯಲ್ಲಿ ಹೂಡಿಕೆದಾರರು ಇದ್ದಾರೆ. ಚೀನಾದಲ್ಲಿನ ಲಾಕ್‌ಡೌನ್ ಹಾಗೂ ರಷ್ಯಾ–ಉಕ್ರೇನ್ ಯುದ್ಧ ಕೂಡ ಮಂದಗತಿಯ ಬೆಳವಣಿಗೆಗೆ ದಾರಿ ಮಾಡಿಕೊಡುವುದೇ ಎಂಬ ಚಿಂತೆಯೂ ಅವರಲ್ಲಿದೆ. ಇದರಿಂದಾಗಿ ಹೂಡಿಕೆದಾರರ ಹಣವು ಷೇರು ಮಾರುಕಟ್ಟೆಗಳಿಂದ ಸುರಕ್ಷಿತ ಹೂಡಿಕೆಗಳ ಕಡೆ ಹರಿದುಹೋಗುತ್ತಿದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.89ರಷ್ಟು ಹೆಚ್ಚಾಗಿ, ಪ್ರತಿ ಬ್ಯಾರೆಲ್‌ಗೆ 105.81 ಡಾಲರ್‌ಗೆ ತಲುಪಿದೆ.

ರೂಪಾಯಿಗೆ ನೆರವಾದ ಎಲ್‌ಐಸಿ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಬುಧವಾರ 8 ಪೈಸೆಯಷ್ಟು ಹೆಚ್ಚಾಗಿದೆ. ಮೇ ತಿಂಗಳಿನಲ್ಲಿ ಎಲ್‌ಐಸಿ ಐಪಿಒ ಇರುವ ಕಾರಣ, ವಿದೇಶಿ ಹೂಡಿಕೆ ಹೆಚ್ಚಾಗಬಹುದು ಎಂಬ ನಿರೀಕ್ಷೆ ಕೂಡ ರೂಪಾಯಿ ಮೌಲ್ಯ ಹೆಚ್ಚಲು ಒಂದು ಕಾರಣ ಎಂದು ತಜ್ಞರು ಹೇಳಿದ್ದಾರೆ.

‘ಎಲ್‌ಐಸಿ ಐಪಿಒ ವಿದೇಶಿ ಬಂಡವಾಳ ಆಕರ್ಷಿಸುವ ನಿರೀಕ್ಷೆ ಇದೆ. ಇದು ರೂಪಾಯಿ ಮೌಲ್ಯವೃದ್ಧಿಗೆ ನೆರವಾಗಲಿದೆ’ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸಂಶೋಧನಾ ವಿಶ್ಲೇಷಕ ದಿಲೀಪ್ ಪರಮಾರ್ ಹೇಳಿದ್ದಾರೆ.

ಅನಿರ್ಬಂಧಿತ ಅಭಿವ್ಯಕ್ತಿ ಕಾನೂನಿಗೆ ಹೊಂದಿಕೆ ಆಗುವುದು: ಮಸ್ಕ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ತಮ್ಮನ್ನು ತಾವು ‘ಅನಿರ್ಬಂಧಿತ ಅಭಿವ್ಯಕ್ತಿಯ ಪ್ರತಿಪಾದಕ’ ಎಂದು ಕರೆದುಕೊಂಡಿರುವ ಉದ್ಯಮಿ ಇಲಾನ್ ಮಸ್ಕ್, ತಮ್ಮ ಪ್ರಕಾರ, ಅನಿರ್ಬಂಧಿತ ಅಭಿವ್ಯಕ್ತಿ ಎಂದರೆ ಕಾನೂನಿಗೆ ಹೊಂದಿಕೆಯಾಗುವಂತದ್ದು ಎಂದು ಟ್ವಿಟರ್‌ನಲ್ಲಿ ವಿವರಿಸಿದ್ದಾರೆ.

‘ಅನಿರ್ಬಂಧಿತ ಅಭಿವ್ಯಕ್ತಿ ಎಂದರೆ, ಕಾನೂನಿಗೆ ಹೊಂದಿಕೆಯಾಗುವುದು ಎಂದರ್ಥ. ಕಾನೂನನ್ನು ಮೀರಿ ಹೋಗುವ ಸೆನ್ಸಾರ್‌ಶಿಪ್ ಅನ್ನು ನಾನು ವಿರೋಧಿಸುತ್ತೇನೆ. ಸೀಮಿತ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಯಸುವ ಜನರು, ಆ ಸಂಬಂಧ ಕಾನೂನು ತರುವಂತೆ ಸರ್ಕಾರವನ್ನು ಕೇಳಿಕೊಳ್ಳುತ್ತಾರೆ. ಕಾನೂನನ್ನು ಮೀರಿ ನಡೆದುಕೊಳ್ಳುವುದು, ಜನರ ಇಚ್ಛೆಗೆ ವ್ಯತಿರಿಕ್ತವಾದುದು’ ಎಂದು ಅವರು ಹೇಳಿದ್ದಾರೆ.

ಪ್ರಮುಖ ಸಾಮಾಜಿಕ ಜಾಲತಾಣವಾದ ಟ್ವಿಟರ್ ಅನ್ನು 44 ಬಿಲಿಯನ್ ಡಾಲರ್ (₹3.37 ಲಕ್ಷ ಕೋಟಿ) ಮೊತ್ತಕ್ಕೆ ಖರೀದಿಸಲು ಇಲಾನ್ ಮಸ್ಕ್ ಅವರು ಒಪ್ಪಂದ ಮಾಡಿಕೊಂಡಿದ್ದಾರೆ. ಈ ಒಪ್ಪಂದದ ಬೆನ್ನಲೇ ಪರ–ವಿರೋಧದ ಚರ್ಚೆ ನಡೆಯುತ್ತಿದೆ.

ಸಂಕ್ಷಿಪ್ತ ಸುದ್ದಿ

ಮಾಧ್ಯಮ ಕಂಪನಿ ಆರಂಭಿಸಿದ ಅದಾನಿ ಎಂಟರ್‌ಪ್ರೈಸಸ್

ನವದೆಹಲಿ (ಪಿಟಿಐ): ಎಎಂಜಿ ಮೀಡಿಯಾ ನೆಟ್‌ವರ್ಕ್ಸ್ ಹೆಸರಿನಲ್ಲಿ ಮಾಧ್ಯಮ ಕಂಪನಿಯೊಂದನ್ನು ಆರಂಭಿಸಿರುವುದಾಗಿ ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ಮುಂಬೈ ಷೇರುಪೇಟೆಗೆ ಬುಧವಾರ ಮಾಹಿತಿ ನೀಡಿದೆ.

ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಅಂಗಸಂಸ್ಥೆಯಾಗಿರುವ ಇದು ಮುಂದಿನ ದಿನಗಳಲ್ಲಿ ಕಾರ್ಯಾಚರಣೆ ಆರಂಭಿಸಲಿದೆ.

‘ಪ್ರಕಾಶನ, ಜಾಹೀರಾತು, ಪ್ರಸಾರ, ವಿತರಣೆ ಮುಂತಾದ ಮಾಧ್ಯಮ ಸಂಬಂಧಿ ವಹಿವಾಟುಗಳನ್ನು ನಡೆಸಲು ಎಎಂಜಿ ಮೀಡಿಯಾ ನೆಟ್‌ವರ್ಕ್ಸ್ ಲಿಮಿಟೆಡ್ ಕಂಪನಿಯನ್ನು ಆರಂಭಿಸಲಾಗಿದೆ’ ಎಂದು ಅದಾನಿ ಎಂಟರ್‌ಪ್ರೈಸಸ್ ಹೇಳಿದೆ.

ಐಪಿಪಿಬಿಗೆ ಕೇಂದ್ರದ ನೆರವು

ನವದೆಹಲಿ (ಪಿಟಿಐ): ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್‌ಗೆ (ಐಪಿಪಿಬಿ) ₹ 820 ಕೋಟಿ ನೆರವು ಒದಗಿಸಲು ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಈ ನೆರವಿನಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಚಟುವಟಿಕೆ ವಿಸ್ತರಿಸಲು ಐಪಿಪಿಬಿಗೆ ಅನುಕೂಲ ಆಗಲಿದೆ. ಐಪಿಪಿಬಿ ಈಗ ಐದು ಕೋಟಿಗೂ ಹೆಚ್ಚು ಗ್ರಾಹಕರನ್ನು, 1.36 ಲಕ್ಷ ಶಾಖೆಗಳನ್ನು ಹೊಂದಿದೆ. ಇಲ್ಲಿನ ಖಾತೆಗಳಲ್ಲಿ ಸರಿಸುಮಾರು ಶೇಕಡ 48ರಷ್ಟು ಖಾತೆಗಳು ಮಹಿಳೆಯರದ್ದು.

ಹಣಕಾಸಿನ ಒಳಗೊಳ್ಳುವಿಕೆ ವಿಚಾರವಾಗಿ ಸರ್ಕಾರ ಹೊಂದಿರುವ ಗುರಿಯನ್ನು ತಲುಪಲು ಈ ಹಣಕಾಸಿನ ನೆರವು ಮುಖ್ಯ ಪಾತ್ರ ವಹಿಸಲಿದೆ ಎಂದು ಮೂಲಗಳು ವಿವರಿಸಿವೆ.

ಜೋಯಾಲುಕ್ಕಾಸ್‌ನಲ್ಲಿ ಅಕ್ಷಯ ತೃತೀಯಾ ಕೊಡುಗೆ

ಬೆಂಗಳೂರು: ಚಿನ್ನಾಭರಣ ಮಾರಾಟ ಕಂಪನಿಯಾಗಿರುವ ಜೋಯಾಲುಕ್ಕಾಸ್, ಅಕ್ಷಯ ತೃತೀಯಾ ಸಂದರ್ಭದಲ್ಲಿ ಆಭರಣ ಖರೀದಿಸುವವರಿಗೆ ಉಚಿತ ಗಿಫ್ಟ್ ವೋಚರ್‌ಗಳನ್ನು ನೀಡಲಿದೆ. ₹ 50 ಸಾವಿರಕ್ಕಿಂತ ಹೆಚ್ಚಿನ ಮೊತ್ತದ ವಜ್ರ, ಕತ್ತರಿಸದ ವಜ್ರ ಮತ್ತು ಅಮೂಲ್ಯ ಆಭರಣ ಖರೀದಿಸಿದರೆ ₹ 2,000 ಮೌಲ್ಯದ ವೋಚರ್ ಸಿಗಲಿದೆ.

₹ 50 ಸಾವಿರಕ್ಕಿಂತ ಹೆಚ್ಚಿನ ಮೊತ್ತದ ಚಿನ್ನಾಭರಣ ಖರೀದಿಗೆ ₹ 1,000 ಮೌಲ್ಯದ ಗಿಫ್ಟ್ ವೋಚರ್, ₹ 10 ಸಾವಿರ ಮೌಲ್ಯದ ಬೆಳ್ಳಿ ಆಭರಣ ಖರೀದಿಸಿದರೆ ₹ 500 ಮೌಲ್ಯದ ಗಿಫ್ಟ್ ವೋಚರ್ ಸಿಗಲಿದೆ ಎಂದು ಪ್ರಕಟಣೆ ತಿಳಿಸಿದೆ. ಗ್ರಾಹಕರು ಎಸ್‌ಬಿಐ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ಮೂಲಕ ವಹಿವಾಟು ನಡೆಸಿದರೆ ಹೆಚ್ಚುವರಿಯಾಗಿ ಶೇ 5ರಷ್ಟು ರಿಯಾಯಿತಿ ಇರಲಿದೆ.

ಜೋಯಾಲುಕ್ಕಾಸ್ ಕಂಪನಿಯ ಎಲ್ಲ ಮಳಿಗೆಗಳಲ್ಲಿ ಮೇ 3ರವರೆಗೆ ಈ ಕೊಡುಗೆಗಳು ಜಾರಿಯಲ್ಲಿ ಇರಲಿವೆ. ಆಭರಣಗಳಿಗೆ ಆಜೀವ ಉಚಿತ ನಿರ್ವಹಣೆ, ಬೈ-ಬ್ಯಾಕ್ ಖಾತರಿಯನ್ನು ಕೂಡ ಕಂಪನಿ ನೀಡಿದೆ.

ಏರ್ ಏಷ್ಯಾ ಇಂಡಿಯಾ ಸ್ವಾಧೀನಕ್ಕೆ ಮುಂದಾದ ಟಾಟಾ

ಬೆಂಗಳೂರು (ರಾಯಿಟರ್ಸ್): ಕಡಿಮೆ ವೆಚ್ಚದ ಏರ್ ಏಷ್ಯಾ ಇಂಡಿಯಾ ವಿಮಾನಯಾನ ಕಂಪನಿಯ ಅಷ್ಟೂ ಷೇರುಗಳನ್ನು ಖರೀದಿಸಲು ಟಾಟಾ ಸಮೂಹದ ಏರ್ ಇಂಡಿಯಾ, ಭಾರತೀಯ ಸ್ಪರ್ಧಾ ಆಯೋಗಕ್ಕೆ (ಸಿಸಿಐ) ಪ್ರಸ್ತಾವ ಸಲ್ಲಿಸಿದೆ. ಏರ್ ಏಷ್ಯಾದಲ್ಲಿ ಟಾಟಾ ಸಮೂಹವು ಶೇಕಡ 83.67ರಷ್ಟು ಷೇರುಗಳನ್ನು ಈಗಾಗಲೇ ಹೊಂದಿದೆ.

‘ಇದು ನಿರೀಕ್ಷಿತ ನಡೆ. ಬೇರೆ ಬೇರೆ ವಿಮಾನಯಾನ ಕಂಪನಿಗಳಲ್ಲಿ ಟಾಟಾ ಸಮೂಹ ಷೇರುಗಳನ್ನು ಹೊಂದಿರುವುದರಿಂದ ಹೆಚ್ಚಿನ ಪ್ರಯೋಜನವೇನೂ ಆಗದು’ ಎಂದು ಕಾನೂನು ಸಲಹಾ ಸಂಸ್ಥೆ ಸರಿನ್ ಆ್ಯಂಡ್ ಕಂಪನಿಯ ಕಾರ್ಯಾಚರಣೆ ಮುಖ್ಯಸ್ಥೆ ವಿನಮ್ರಾ ಲೊಂಗಾನಿ ಹೇಳಿದ್ದಾರೆ. ‘ಉದ್ದೇಶಿತ ಸ್ವಾಧೀನದಿಂದ ದೇಶದ ವಿಮಾನಯಾನ ಕ್ಷೇತ್ರದಲ್ಲಿನ ಸ್ಪರ್ಧಾತ್ಮಕ ವಾತಾವರಣದಲ್ಲಿ ಕೆಟ್ಟ ಬದಲಾವಣೆ ಆಗುವುದಿಲ್ಲ’ ಎಂದು ಪ್ರಸ್ತಾವದಲ್ಲಿ ಹೇಳಲಾಗಿದೆ.

ಕ್ಯಾಷ್‌ಬ್ಯಾಕ್ ಮೊರೆಹೋದ ವಾಟ್ಸ್‌ಆ್ಯಪ್

ನವದೆಹಲಿ (ರಾಯಿಟರ್ಸ್): ವಾಟ್ಸ್‌ಆ್ಯಪ್ ಕಂಪನಿಯು ತನ್ನ ಪಾವತಿ ಸೇವೆಗಳನ್ನು ಭಾರತದಲ್ಲಿ ಹೆಚ್ಚಿನ ಜನ ಬಳಸುವಂತೆ ಆಗಬೇಕು ಎಂಬ ಉದ್ದೇಶದಿಂದ ಕೆಲವು ಕೊಡುಗೆಗಳನ್ನು ನೀಡಲು ಮುಂದಾಗಿದೆ.

ಭಾರತದಲ್ಲಿ ಒಟ್ಟು 10 ಕೋಟಿ ಜನರಿಗೆ ಪಾವತಿ ಸೇವೆಗಳನ್ನು ಒದಗಿಸಲು ವಾಟ್ಸ್‌ಆ್ಯಪ್ ಈಚೆಗೆ ಒಪ್ಪಿಗೆ ಪಡೆದುಕೊಂಡಿದೆ.

ಮೇ ಅಂತ್ಯದೊಳಗೆ ವಾಟ್ಸ್‌ಆ್ಯಪ್, ಕ್ಯಾಷ್‌ಬ್ಯಾಕ್ ರೂಪದಲ್ಲಿ ಗ್ರಾಹಕರಿಗೆ ₹ 33ರಷ್ಟು ಕೊಡುಗೆ ನೀಡುವುದನ್ನು ಆರಂಭಿಸಲಿದೆ. ಒಟ್ಟು ಮೂರು ವಹಿವಾಟುಗಳಿಗೆ ಇಷ್ಟು ಕ್ಯಾಷ್‌ಬ್ಯಾಕ್ ಸಿಗಲಿದೆ. ವಹಿವಾಟಿನ ಮೊತ್ತ ಎಷ್ಟೇ ಇದ್ದರೂ, ಈ ಕ್ಯಾಷ್‌ಬ್ಯಾಕ್ ಖಚಿತ ಎಂದು ಮೂಲಗಳು ಹೇಳಿವೆ.



ವೃದ್ಧಿಮಾನ್ ಸಹಾ ಸ್ಫೋಟಕ ಅರ್ಧಶತಕ; ಉಮ್ರಾನ್ ಮಲಿಕ್‌ಗೆ ಐದು ವಿಕೆಟ್

ರಶೀದ್ ಮ್ಯಾಜಿಕ್; ಗುಜರಾತ್ ಜಯಭೇರಿ



ರಶೀದ್ ಖಾನ್ ಬ್ಯಾಟಿಂಗ್– ಪಿಟಿಐ ಚಿತ್ರ

ಮುಂಬೈ: ಅಂತಿಮ ಓವರ್‌ನ ಕೊನೆಯ ನಾಲ್ಕು ಎಸೆತಗಳಲ್ಲಿ ಮೂರು ಸಿಕ್ಸರ್ ಸಿಡಿಸಿದ ರಶೀದ್ ಖಾನ್ ಗುಜರಾತ್ ಟೈಟನ್ಸ್ ತಂಡಕ್ಕೆ ರೋಮಾಂಚಕ ಜಯ ಗಳಿಸಿಕೊಟ್ಟರು. ಜಯದತ್ತ ಸಾಗಿದ್ದ ಸನ್‌ರೈಸರ್ಸ್ ಹೈದರಾಬಾದ್ ತಂಡ ಸೋಲಿನ ಕಹಿಯುಂಡಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 196 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಗುಜರಾತ್ ಐದು ವಿಕೆಟ್‌ಗಳಿಂದ ಗೆದ್ದು ಸನ್‌ರೈಸರ್ಸ್‌ನ ಗೆಲುವಿನ ನಾಗಾಲೋಟಕ್ಕೆ ತಡೆ ಹಾಕಿತು.

ಟೈಟನ್ಸ್‌ಗೆ ಆರಂಭಿಕ ಬ್ಯಾಟರ್ ವೃದ್ಧಿಮಾನ್ ಸಹಾ (68, 38ಎ, 4X11, 6X1) ಸ್ಫೋಟಕ ಅರ್ಧಶತಕದ ಮೂಲಕ ಉತ್ತಮ ಅಡಿಪಾಯ ಹಾಕಿಕೊಟ್ಟರು. ಅಗ್ರ ಕ್ರಮಾಂಕದ ಇತರ ಆಟಗಾರರು ವೈಫಲ್ಯ ಕಂಡರು. ಆದರೆ 5ನೇ ಕ್ರಮಾಂಕದ ರಾಹುಲ್ ತೆವಾಟಿಯಾ ಅವರ ವಿರೋಚಿತ ಆಟದ ನೆರವಿನಿಂದ ತಂಡದಲ್ಲಿ ಭರವಸೆ ಮೂಡಿತ್ತು.ಅವರಿಗೆ ರಶೀದ್ ಖಾನ್ ಉತ್ತಮ ಬೆಂಬಲ ನೀಡಿದರು. ಹೀಗಾಗಿ ಅಂತಿಮ ಓವರ್‌ನಲ್ಲಿ ಗೆಲುವಿಗೆ 22 ರನ್ ಬೇಕಾಗಿತ್ತು. ಚೆಂಡು ಜಾನ್ಸನ್ ಕೈಯಲ್ಲಿತ್ತು. ಮೊದಲ ಎಸೆತವನ್ನು ತೆವಾಟಿಯಾ ಸಿಕ್ಸರ್‌ಗೆ ಅಟ್ಟಿದರು. ಎರಡನೇ ಎಸೆತದಲ್ಲಿ ಒಂಟಿ ರನ್ ಗಳಿಸಿದರು. ನಿರ್ಣಾಯಕ ಹಂತದಲ್ಲಿ ಬಂದ ಮೂರನೇ ಎಸೆತವನ್ನು ಲಾಂಗ್ ಆನ್ ಮೇಲಿಂದ ರಶೀದ್ ಸಿಕ್ಸರ್‌ಗೆ ಅಟ್ಟಿದರು. 4ನೇ ಎಸೆತದಲ್ಲಿ ರನ್ ಗಳಿಸಲು ಸಾಧ್ಯವಾಗಲಿಲ್ಲ. ಲೋ ಫುಲ್‌ಟಾಸ್ ಆಗಿ ಬಂದ ಐದನೇ ಎಸೆತವನ್ನು ಎಕ್ಸ್‌ಟ್ರಾ ಕವರ್ ಮೇಲಿಂದ ಸಿಕ್ಸರ್‌ಗೆ ಎತ್ತಿದ ರಶೀದ್ ಅಭಿಮಾನಿಗಳಲ್ಲಿ ಸಂಭ್ರಮ ಮೂಡಿಸಿದರು. ಕೊನೆಯ ಎಸೆತದಲ್ಲಿ ಮೂರು ರನ್ ಬೇಕಾಗಿದ್ದಾಗ ಫೈನ್ ಲೆಗ್ ಮೇಲಿಂದ ಸಿಕ್ಸರ್ ಗಳಿಸಿದ ರಶೀದ್ ತಂಡವನ್ನು ಜಯದ ದಡ ಸೇರಿಸಿದರು.

ಟಾಸ್ ಗೆದ್ದ ಗುಜರಾತ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸನ್‌ರೈಸರ್ಸ್ ತಂಡ ಆರಂಭಿಕ ಆಘಾತದ ನಂತರವೂ ದಿಟ್ಟ ಹೋರಾಟ ತೋರಿತು. ಆರಂಭಿಕ ಅಭಿಷೇಕ್ ಶರ್ಮಾ ಮತ್ತು ನಾಲ್ಕನೇ ಕ್ರಮಾಂಕದ ಏಡನ್ ಮರ್ಕರಂ ಅರ್ಧಶತಕಗಳ ಬಲದಿಂದ ತಂಡ 20 ಓವರ್‌ಗಳಲ್ಲಿ 6ಕ್ಕೆ 195 ರನ್ ಗಳಿಸಿತು.

ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಗುಜರಾತ್ ತಂಡದ ಅನುಭವಿ ಬೌಲರ್ ಮೊಹಮ್ಮದ್ ಶಮಿ ಎಸೆತದಲ್ಲಿ ಕೇನ್ ವಿಲಿಯಮ್ಸನ್ ಕ್ಲೀನ್‌ಬೌಲ್ಡ್ ಆದರು. ಐದನೇ ಓವರ್‌ನಲ್ಲಿ ರಾಹುಲ್ ತ್ರಿಪಾಠಿಯನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಶಮಿ ಸಂಭ್ರಮಿಸಿದರು. ಈ ಹಂತದಲ್ಲಿ ಕ್ರೀಸ್‌ನಲ್ಲಿದ್ದ ಅಭಿಷೇಕ್ ಜೊತೆಗೂಡಿದ ಏಡನ್ ಇನಿಂಗ್ಸ್‌ಗೆ ಜೀವ ತುಂಬಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 96 ರನ್ ಸೇರಿಸಿದರು. ಅಭಿಷೇಕ್ 33 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಮರ್ಕರಂ 50ರ ಗಡಿ ಮುಟ್ಟಲು 35 ಎಸೆತಗಳನ್ನು ಆಡಿದರು.

16ನೇ ಓವರ್‌ನಲ್ಲಿ ಅಲ್ಜರಿ ಜೋಸೆಫ್ ಎಸೆತದಲ್ಲಿ ಅಭಿಷೇಕ್ ಕ್ಲೀನ್‌ಬೌಲ್ಡ್ ಆಗಿ ನಿರ್ಗಮಿಸಿದರು. ನಿಕೊಲಸ್ ಪೂರನ್ ವಿಕೆಟ್ ಶಮಿ ಕಬಳಿಸಿದರೆ, ವಾಷಿಂಗ್ಟನ್ ಸುಂದರ್ ರನ್‌ಔಟ್ ಆದರು. 18ನೇ ಓವರ್‌ನಲ್ಲಿ ಮರ್ಕರಂ ಕೂಡ ಔಟಾದರು.

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್ 6ಕ್ಕೆ 195 (20 ಓವರ್‌ಗಳಲ್ಲಿ)

ಅಭಿಷೇಕ್ ಬಿ ಅಲ್ಜರಿ 65 (42 ಎ, 4x6, 6x3), ವಿಲಿಯಮ್ಸನ್ ಬಿ ಶಮಿ 5 (8 ಎ, 4x1), ತ್ರಿಪಾಠಿ ಎಲ್‌ಬಿಡಬ್ಲ್ಯು ಬಿ ಶಮಿ 16 (10 ಎ, 4x2, 6x1), ಮರ್ಕರಮ್ ಸಿ ಮಿಲ್ಲರ್ ಬಿ ಯಶ್ 56 (40 ಎ, 4x2, 6x3), ಪೂರನ್ ಸಿ ಶುಭಮನ್ ಬಿ ಶಮಿ 3 (5 ಎ), ವಾಷಿಂಗ್ಟನ್ ರನ್‌ಔಟ್ (ಅಭಿನವ್) 3 (4 ಎ), ಶಶಾಂಕ್ ಔಟಾಗದೆ 25 (6 ಎ, 4x1, 6x3), ಜಾನ್ಸನ್ ಔಟಾಗದೆ 8 (5 ಎ, 6x1)

ಇತರೆ (ಲೆಗ್‌ಬೈ 1, ವೈಡ್ 14) 14

ವಿಕೆಟ್ ಪತನ: 1-26 (ಕೇನ್ ವಿಲಿಯಮ್ಸನ್, 2.5), 2-44 (ರಾಹುಲ್ ತ್ರಿಪಾಠಿ, 4.6), 3-140 (ಅಭಿಷೇಕ್ ಶರ್ಮಾ, 15.1), 4-147 (ನಿಕೊಲಸ್ ಪೂರನ್, 16.3), 5-161 (ಏಡನ್ ಮರ್ಕರಮ್, 17.6), 6-162 (ವಾಷಿಂಗ್ಟನ್ ಸುಂದರ್, 18.1)

ಬೌಲಿಂಗ್: ಮೊಹಮ್ಮದ್ ಶಮಿ 4-0-39-3, ಯಶ್ ದಯಾಳ್ 4-0-24-1, ಅಲ್ಜರಿ ಜೋಸೆಫ್ 4-0-35-1, ರಶೀದ್ ಖಾನ್ 4-0-45-0, ಲಾಕಿ ಫರ್ಗ್ಯುಸನ್ 4-0-52-0

ಗುಜರಾತ್ ಟೈಟನ್ಸ್ 5ಕ್ಕೆ 199 (20 ಓವರ್‌ಗಳಲ್ಲಿ)

ಸಹಾ ಬಿ ಉಮ್ರಾನ್ 68 (38ಎ, 4X11, 6X1), ಶುಭಮನ್ ಬಿ ಉಮ್ರಾನ್ 22 (24ಎ, 4X1, 6X1), ಹಾರ್ದಿಕ್ ಸಿ ಜಾನ್ಸನ್ ಬಿ ಉಮ್ರಾನ್ 10 (6ಎ, 4X2), ಮಿಲ್ಲರ್ ಬಿ ಉಮ್ರಾನ್ 17 (19ಎ, 4X1), ರಾಹುಲ್ ಔಟಾಗದೆ 40 (21ಎ, 4X4, 6X2), ಅಭಿನವ್ ಬಿ ಉಮ್ರಾನ್ 0 (1ಎ), ರಶೀದ್ ಔಟಾಗದೆ 31 (11ಎ, 6X4)

ಇತರೆ (ಲೆಗ್‌ಬೈ 1, ವೈಡ್ 10) 11

ವಿಕೆಟ್ ಪತನ: 1-69 (ಶುಭಮನ್ ಗಿಲ್, 7.4), 2-85 (ಹಾರ್ದಿಕ್ ಪಾಂಡ್ಯ, 9.2), 3-122 (ವೃದ್ಧಿಮಾನ್ ಸಹಾ, 13.2), 4-139 (ಡೇವಿಡ್ ಮಿಲ್ಲರ್, 15.5), 5-140 (ಅಭಿನವ್ ಮನೋಹರ್, 15.6)

ಬೌಲಿಂಗ್: ಭುವನೇಶ್ವರ ಕುಮಾರ್ 4-0-33-0, ಮಾರ್ಕೊ ಜಾನ್ಸೆನ್ 4-0-63-0, ಟಿ.ನಟರಾಜನ್ 4-0-43-0, ವಾಷಿಂಗ್ಟನ್ ಸುಂದರ್ 4-0-34-0, ಉಮ್ರಾನ್ ಮಲಿಕ್ 4-0-25-5

ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 5 ವಿಕೆಟ್‌ಗಳ ಜಯ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	8	7	1	0	0	14	0.371
ರಾಜಸ್ಥಾನ	8	6	2	0	0	12	0.561
ಹೈದರಾಬಾದ್	8	5	3	0	0	10	0.600
ಲಖನೌ	8	5	3	0	0	10	0.334
ಬೆಂಗಳೂರು	9	5	4	0	0	10	-0.572
ಪಂಜಾಬ್	8	4	4	0	0	8	-0.419
ಡೆಲ್ಲಿ	7	3	4	0	0	6	0.715
ಕೋಲ್ಕತ್ತ	8	3	5	0	0	6	0.080
ಚೆನ್ನೈ	8	2	6	0	0	4	-0.538
ಮುಂಬೈ	8	0	8	0	0	0	-1.000

*ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	499
ರಾಹುಲ್	ಲಖನೌ	368
ಹಾರ್ದಿಕ್	ಗುಜರಾತ್	305

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯುಜುವೇಂದ್ರ	ರಾಜಸ್ಥಾನ	18
ಉಮ್ರಾನ್	ಹೈದರಾಬಾದ್	15
ನಟರಾಜನ್	ಹೈದರಾಬಾದ್	15

ಅಭ್ಯಾಸ ಆರಂಭಿಸಿದ ಮಾರ್ಷ್, ಸೀಫರ್ಟ್

ಮುಂಬೈ (ಪಿಟಿಐ): ಕೋವಿಡ್‌ನಿಂದ ಚೇತರಿಸಿಕೊಂಡಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಮಿಚೆಲ್ ಮಾರ್ಷ್ ಮತ್ತು ವಿಕೆಟ್‌ಕೀಪರ್ ಬ್ಯಾಟರ್ ಟಿಮ್ ಸೀಫರ್ಟ್ ಅವರು ಬುಧವಾರ ಅಭ್ಯಾಸ ಮಾಡಿದರು.

'ಇವರಿಬ್ಬರಿಗೂ ಹೋದ ವಾರ ಕೋವಿಡ್ ಇರುವುದು ಖಚಿತವಾಗಿತ್ತು. ಚಿಕಿತ್ಸೆ ಮತ್ತು ಕಡ್ಡಾಯ ಕ್ವಾರಂಟೈನ್ ನಂತರ ಅವರು ಅಭ್ಯಾಸಕ್ಕೆ ಮರಳಿದ್ದಾರೆ. ಗುರುವಾರ ವಾಂಖೆಡೆ ಕ್ರೀಡಾಂಗಣದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಡೆಲ್ಲಿ ಆಡಲಿದ್ದು, ಮಾರ್ಷ್ ಕಣಕ್ಕಿಳಿಯುವ ನಿರೀಕ್ಷೆ ಇದೆ. 'ಸೀಫಿ ಮತ್ತು ಮಾರ್ಷ್ ಅಭ್ಯಾಸಕ್ಕೆ ಮರಳಿರುವುದು ಸಂತಸದ ವಿಷಯ' ಎಂದು ಡೆಲ್ಲಿ ಕ್ಯಾಪಿಟಲ್ಸ್ ಟ್ವೀಟ್ ಮಾಡಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್



ಬುಧವಾರ ಬೆಂಗಳೂರಿಗೆ ಬಂದ ಫಿಬಾ ಏಷ್ಯಾಕಪ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಟ್ರೋಫಿಯನ್ನು ವಿಧಾನಸೌಧದ ಮುಂಭಾಗದಲ್ಲಿ ಸ್ವಾಗತಿಸಲಾಯಿತು. ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್‌ನ ಉಪಾಧ್ಯಕ್ಷ ಆಧವ್ ಅರ್ಜುನ, ಅಧ್ಯಕ್ಷ ಕೆ.ಗೋವಿಂದರಾಜ್, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ, ಬ್ಯಾಸ್ಕೆಟ್‌ಬಾಲ್ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಚಂದ್ರಮುಖಿ ಶರ್ಮಾ ಇದ್ದಾರೆ –ಪ್ರಜಾವಾಣಿ ಚಿತ್ರ

ಪಿಎಸ್‌ಜಿ ಆಟಗಾರ್ತಿ ಮೇಲೆ ಹಲ್ಲೆ: ಬಂಧನ

ವೆರ್ಸಾಯಿಲ್ಸ್ (ಎಎಫ್‌ಪಿ): ಪ್ಯಾರಿಸ್ ಸೇಂಟ್ ಜರ್ಮನ್ ಕ್ಲಬ್‌ನ ಮಹಿಳಾ ತಂಡದ ಸದಸ್ಯೆ ಖೈರಾ ಹಮ್ರೊಯ್ ಮೇಲೆ ರಸ್ತೆಯಲ್ಲಿ ಹಲ್ಲೆ ನಡೆಸಿದ ಶಂಕೆಯ ಮೇಲೆ ವ್ಯಕ್ತಿಯೊಬ್ಬನನ್ನು ಫ್ರೆಂಚ್ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಫ್ರಾನ್ಸ್ ರಾಜಧಾನಿಯಲ್ಲಿ ಕಳೆದ ವರ್ಷ ನಡೆದ ಘಟನೆಯಲ್ಲಿ ಹಮ್ರೊಯಿ ಅವರನ್ನು ಕಾರಿನಿಂದ ಹೊರಗೆಳೆದು ಕಬ್ಬಿಣದ ಸಲಾಕೆಯಿಂದ ಕಾಲಿಗೆ ಬಡಿಯಲಾಗಿತ್ತು. ಬಂಧಿತ ವ್ಯಕ್ತಿಯು ಹಮ್ರೊಯಿ ಅವರ ಜೊತೆಗೆ ತಂಡದಲ್ಲಿ ಆಡುತ್ತಿದ್ದ ಅಮಿನತ ಡಯಾಲೊ ಅವರ ಗೆಳೆಯ ಎಂದು ಮೂಲಗಳು ತಿಳಿಸಿವೆ.

ಅಟ್ಯಾಪಟ್ಯಾ: ಪಾಟೀಲ ಅಧ್ಯಕ್ಷ


ಡಾ. ವಿ.ಡಿ. ಪಾಟೀಲ

ಹುಬ್ಬಳ್ಳಿ: ಭಾರತ ಅಟ್ಯಾಪಟ್ಯಾ ಫೆಡರೇಷನ್ ಅಧ್ಯಕ್ಷರಾಗಿ ಧಾರವಾಡದ ಯುನಿವರ್ಸಿಟಿ ಪಬ್ಲಿಕ್ ಶಾಲೆ ಮತ್ತು ಪಿ.ಯು. ಕಾಲೇಜಿನ ದೈಹಿಕ ಶಿಕ್ಷಣ ಉಪನ್ಯಾಸಕ ಡಾ. ವೀರನಗೌಡ ಡಿ. ಪಾಟೀಲ ಸತತ ಮೂರನೇ ಬಾರಿ ಆಯ್ಕೆಯಾಗಿದ್ದಾರೆ.

ಮಹಾರಾಷ್ಟ್ರದ ಡಾ. ದೀಪಕ್ ಪಿ. ಕವೀಶ್ವರ (ಪ್ರಧಾನ ಕಾರ್ಯದರ್ಶಿ), ಪುದುಚೇರಿಯ ವಿ. ಶಿವಕುಮಾರ್, ಜಮ್ಮು ಕಾಶ್ಮೀರದ ವಾಸೀಂ ರಜಾಖಾನ್, ಆಂಧ್ರದ ಈ. ಮುಕೇಶ್ (ಉಪಾಧ್ಯಕ್ಷರು), ಪಂಜಾಬ್‌ನ ಪಿ.ಎಸ್. ಲಾಂಬಾ (ಖಜಾಂಚಿ), ಪಶ್ಚಿಮ ಬಂಗಾಳದ ಸಪ್ನಾ ಚಕ್ರವರ್ತಿ, ಮಹಾರಾಷ್ಟ್ರದ ಡಾ. ಅಮರಕಾಂತ ಚಾಕೊಲೆ, ಮಧ್ಯಪ್ರದೇಶದ ಕಪಿಲ್ ಬನ್ಸೆ, ಜಾರ್ಖಂಡ್‌ನ ಅಜಯ್ ಝಾ (ಜಂಟಿ ಕಾರ್ಯದರ್ಶಿಗಳು), ಆಂಧ್ರದ ಆರ್. ಡಿ. ಪ್ರಸಾದ, ರಾಜಸ್ಥಾನದ ಪುಷ್ಪೇಂದ್ರ ಸಿಂಗ್, ತಮಿಳುನಾಡಿನ ಎನ್. ಶಿವಸುಬ್ರಮಣಿಯನ್, ದೆಹಲಿಯ ನಿತಿನ್, ಹಿಮಾಚಲಪ್ರದೇಶದ ಅನಿಲ್ ಸೊಂಕುಲನ್, ಮಣಿಪುರದ ಒನಾಮ್ ಕುಮಾರ್ ಸಿಂಗ್ ಹಾಗೂ ಗೋವಾದ ಪ್ರಿಸ್ಕೊ ಪಿ. (ಕಾರ್ಯಕಾರಿ ಸಮಿತಿ ಸದಸ್ಯರು) ಪದಾಧಿಕಾರಿಗಳಾಗಿ ಆಯ್ಕೆಯಾದರು.

ಖರೀದಿಗೆ ರೂಬಲ್‌ನಲ್ಲಿ ಪಾವತಿಸಲು ವಿಫಲ; ರಷ್ಯಾದಿಂದ ಸ್ನೇಹಪರವಲ್ಲದ ರಾಷ್ಟ್ರಗಳ ಹಣೆಪಟ್ಟಿ

ಪೋಲೆಂಡ್, ಬಲ್ಗೇರಿಯಾಕ್ಕೆ ಗ್ಯಾಸ್ ಸ್ಥಗಿತ

ಮಾಸ್ಕೊ/ವಾರ್ಸಾ/ ಪಕ್ರೊಸ್ಕ್ (ಎಪಿ/ ಎಎಫ್‌ಪಿ): ರೂಬಲ್‌ಗಳಲ್ಲಿ ಹಣ ಪಾವತಿಸಲು ವಿಫಲವಾದ ಕಾರಣಕ್ಕೆ ಐರೋಪ್ಯ ಒಕ್ಕೂಟದ ಪೋಲೆಂಡ್ ಮತ್ತು ಬಲ್ಗೇರಿಯಾ ದೇಶಗಳಿಗೆ ರಷ್ಯಾದ ಸರ್ಕಾರಿ ಸ್ವಾಮ್ಯದ ಇಂಧನ ದೈತ್ಯ ಕಂಪನಿ ಗ್ಯಾಜ್‌ಪ್ರೋಮ್ ಬುಧವಾರದಿಂದಲೇ ನೈಸರ್ಗಿಕ ಅನಿಲ ಸರಬರಾಜು ಸ್ಥಗಿತಗೊಳಿಸಿದೆ.

ಉಕ್ರೇನ್ ಮೇಲಿನ ಆಕ್ರಮಣ ವಿರೋಧಿಸಿ ಐರೋಪ್ಯ ಒಕ್ಕೂಟ ರಷ್ಯಾದ ಮೇಲೆ ಹೇರಿದ್ದ ಆರ್ಥಿಕ ನಿರ್ಬಂಧಗಳಿಗೆ ಪ್ರತೀಕಾರವಾಗಿ ಗ್ಯಾಜ್‌ಪ್ರೋಮ್ ಈ ಕ್ರಮ ತೆಗೆದುಕೊಂಡಿದೆ. 'ರಷ್ಯಾ ನೈಸರ್ಗಿಕ ಅನಿಲ ಕುರಿತಂತೆ ಬೆದರಿಕೆ ತಂತ್ರ (ಬ್ಲ್ಯಾಕ್‌ಮೇಲ್) ಅನುಸರಿಸುತ್ತಿದೆ' ಎಂದು ಪೋಲೆಂಡ್, ಬಲ್ಗೇರಿಯಾ ಆರೋಪಿಸಿವೆ.

ನೈಸರ್ಗಿಕ ಅನಿಲ ಖರೀದಿಗೆ ಡಾಲರ್ ಬದಲು, ರೂಬಲ್‌ನಲ್ಲಿ ಪಾವತಿಸುವ ಹೊಸ ವಿಧಾನವು ಆರ್ಥಿಕ ವಲಯದಲ್ಲಿ ಅಭೂತಪೂರ್ವ ಸ್ನೇಹಿ ವ್ಯವಸ್ಥೆಯಾಗಿದೆ. ಇದನ್ನು ವಿರೋಧಿಸುವವರನ್ನು ಸ್ನೇಹಪರವಲ್ಲದ ದೇಶಗಳೆಂದು ಪರಿಗಣಿಸಿ, ಇಂತಹ ಕ್ರಮ ತೆಗೆದುಕೊಳ್ಳುವುದು ಅನಿವಾರ್ಯ' ಎಂದು ಪುಟಿನ್ ಆಡಳಿತ ಕಚೇರಿ ಕ್ರೆಮ್ಲಿನ್ ವಕ್ತಾರ ಡೆಮಿಟ್ರಿ ಪೆಸ್ಕೊವ್ ತಿಳಿಸಿದರು.

ಯುರೋಪಿಯನ್ ಕಮಿಷನ್ ಮುಖ್ಯಸ್ಥೆ ಉರ್ಸುಲಾ ವನ್ ಡೆರ್ ಲೆಯೆನ್ ಅವರು, 'ನೈಸರ್ಗಿಕ ಅನಿಲದಿಂದ ನಮ್ಮನ್ನು ಬ್ಲ್ಯಾಕ್‌ಮೇಲ್ ಮಾಡುವ ರಷ್ಯಾದ ಮತ್ತೊಂದು ಪ್ರಯತ್ನವಿದು. ಇದು ಅಸಮರ್ಥನೀಯ' ಎಂಬ ಆರೋಪಕ್ಕೆ ತಿರುಗೇಟು ನೀಡಿರುವ ಪೆಸ್ಕೊವ್, 'ನಿಮಗೆ ತಿಳಿದಿರುವಂತೆ, ಅವರನ್ನು ನಿರ್ಬಂಧಿಸಲಾಗಿದೆ. ಸರಳವಾಗಿ ಹೇಳುವುದಾದರೆ ನಮಗೆ ಮೀಸಲಾಗಿದ್ದ ಸಂಪನ್ಮೂಲದಲ್ಲಿ ಗಣನೀಯ ಪ್ರಮಾಣದಷ್ಟು ಕದ್ದಿದ್ದಾರೆ. ಇದು ಹೊಸ ಪಾವತಿ ವ್ಯವಸ್ಥೆಯ ಪರಿವರ್ತನೆಗೆ ಕಾರಣ. ಇದರಲ್ಲಿ 'ಬ್ಲ್ಯಾಕ್‌ಮೇಲ್' ಪ್ರಶ್ನೆಯೇ ಇಲ್ಲ' ಎಂದು ಹೇಳಿದರು.


ಕೀವ್‌ನಲ್ಲಿ ಸ್ಥಾಪಿಸಿದ್ದ ಉಕ್ರೇನ್–ಸೋವಿಯತ್ ರಷ್ಯಾ ಒಕ್ಕೂಟದ ಸ್ನೇಹ ಸಂಕೇತದ ಐತಿಹಾಸಿಕ ಸ್ಮಾರಕಗಳನ್ನು ಬುಧವಾರ ಅಧಿಕಾರಿಗಳು ನಾಶಪಡಿಸಿದರು–ಪಿಟಿಐ ಚಿತ್ರ

ಗ್ಯಾಜ್‌ಪ್ರೋಮ್ ನಮ್ಮ ದೇಶಕ್ಕೆ ಗ್ಯಾಸ್ ಪೂರೈಕೆ ನಿಲ್ಲಿಸಿರುವುದು ಒಪ್ಪಂದದ ಸಂಪೂರ್ಣ ಉಲ್ಲಂಘನೆ ಮತ್ತು ಇದು ಬ್ಲಾಕ್‌ಮೇಲ್. ಈ ದಂಧೆಗೆ ನಾವು ಬಲಿಯಾಗುವುದಿಲ್ಲ
ಕಿರಿಲ್ ಪೆಟ್ಕೊವ್, ಬಲ್ಗೇರಿಯಾ ಪ್ರಧಾನಿ

ಆಸ್ಟ್ರಿಯಾದ ತೈಲ ಮತ್ತು ಅನಿಲ ಕಂಪನಿ ಒಎಂವಿ ರಷ್ಯಾದ ಬ್ಯಾಂಕ್‌ನಲ್ಲಿ ಖಾತೆ ತೆರೆದು, ರಷ್ಯಾದ ಅನಿಲ ಸರಬರಾಜಿಗೆ ರೂಬಲ್‌ಗಳಲ್ಲಿ ಹಣ ಪಾವತಿಸಲು ಒಪ್ಪಿದೆ ಕಾರ್ಲ್
ನೆಹಮ್ಮರ್, ಆಸ್ಟ್ರೀಯಾದ ಛಾನ್ಸೆಲರ್

ರಷ್ಯಾ ವಿರುದ್ಧ ವಾರ್ಸಾ ಹೇರಿದ ಹೊಸ ನಿರ್ಬಂಧಗಳಿಗೆ ಸೇಡಿನ ಕ್ರಮವಾಗಿ ಗ್ಯಾಜ್‌ಪ್ರೋಮ್ ಈ ಪ್ರತೀಕಾರ ತೆಗೆದುಕೊಂಡಿರುವುದು ಸ್ಪಷ್ಟವಾಗಿದೆ
ಮಾಥಿಯುವ್ಸ್ ಮೊರಾವಿಯಸ್ಕಿ, ಪೋಲೆಂಡ್ ಪ್ರಧಾನಿ



ಅಧ್ಯಕ್ಷ ಪುಟಿನ್ ಅವರು ಕಳೆದ ತಿಂಗಳೇ, 'ಅನಿಲ ಖರೀದಿಸಲು ಸ್ನೇಹಪರವಲ್ಲದ ದೇಶಗಳು ರೂಬಲ್ ಖಾತೆಗಳನ್ನು ತೆರೆಯಬೇಕು, ಇಲ್ಲವೇ ಅವರ ಅನಿಲ ಕೊಳಾಯಿಗಳು ಬಂದ್ ಆಗಲಿವೆ' ಎಂದು ಎಚ್ಚರಿಕೆ ನೀಡಿದ್ದರು.

ಉಕ್ರೇನ್‌ನಲ್ಲಿನ ಸೇನಾ ಕಾರ್ಯಾಚರಣೆಗೆ ಪ್ರತಿಕ್ರಿಯೆಯಾಗಿ ರಷ್ಯಾ ಮೇಲೆ ಪಾಶ್ಚಾತ್ಯ ರಾಷ್ಟ್ರಗಳು ಭಾರಿ ಆರ್ಥಿಕ ನಿರ್ಬಂಧಗಳನ್ನು ಹೇರಿವೆ. ವಿದೇಶದಲ್ಲಿ ಇರಿಸಿದ್ದ ರಷ್ಯಾದ ವಿದೇಶಿ ಮೀಸಲು ಹಣ ಸುಮಾರು ₹ 22.80 ಲಕ್ಷ ಕೋಟಿ ಮುಟ್ಟುಗೋಲಿಗೆ ಒಳಗಾಗಿದೆ.

63ನೇ ದಿನದ ಬೆಳವಣಿಗೆಗಳು

- ಮರಿಯುಪೋಲ್‌ನ ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರದ ಮೇಲೆ ಮಂಗಳವಾರ ತಡರಾತ್ರಿ ರಷ್ಯಾ ಪಡೆಗಳು 35 ಬಾರಿ ವಾಯು ದಾಳಿ ನಡೆಸಿವೆ. 500ಕ್ಕೂ ಹೆಚ್ಚು ಉಕ್ರೇನ್ ಸೈನಿಕರು ಮತ್ತು ನಾಗರಿಕರು ಗಾಯಗೊಂಡಿದ್ದಾರೆ– ಉಕ್ರೇನ್ ಅಧಿಕಾರಿಗಳು
- ಅಜೋವ್‌ಸ್ಟಾಲ್‌ನಿಂದ ನಾಗರಿಕರನ್ನು ಸ್ಥಳಾಂತರಕ್ಕೆ ಪುಟಿನ್ ಒಪ್ಪಿದ್ದು, ರೆಡ್‌ಕ್ರಾಸ್ ನೆರವಿನಲ್ಲಿ ಇದು ನಡೆಯಲಿದೆ–ವಿಶ್ವಸಂಸ್ಥೆ
- ಮೊಲ್ಡೊವಾ ವಿನಂತಿಸಿದರೆ ಉಕ್ರೇನ್, ಟ್ರಾನ್ಸ್‌ನಿಸ್ಟ್ರಿಯಾ ವಶಪಡಿಸಿಕೊಳ್ಳಲಿವೆ ಎಂದು ಝೆಲೆನ್‌ಸ್ಕಿ ಅವರ ಸಲಹೆಗಾರ ಒಲೆಕ್ಸಿ ಅರೆಸ್ಟೊವಿಚ್ ಹೇಳಿಕೆಗೆ, ಕ್ರೆಮ್ಲಿನ್ ವಕ್ತಾರ ಪೆಸ್ಕೊವ್ 'ಇದು ಪ್ರಚೋದನಾಕಾರಿ' ಎಂದಿದ್ದಾರೆ
- ರೊಮೇನಿಯಾ ಗಡಿಯ ಮೂಲಕ ಪಾಶ್ಚಾತ್ಯ ರಾಷ್ಟ್ರಗಳು ಉಕ್ರೇನ್‌ಗೆ ಪೂರೈಸಿದ್ದ ಭಾರಿ ಪ್ರಮಾಣದ ಶಸ್ತ್ರಾಸ್ತ್ರ ನಾಶಪಡಿಸಲಾಗಿದೆ– ರಷ್ಯಾ ರಕ್ಷಣಾ ಸಚಿವಾಲಯದ ವಕ್ತಾರ ಮೇಜರ್ ಜನರಲ್ ಐಗೋರ್ ಕೊನಶೆಂಕವ್
- ಬ್ರಿಟನ್ನಿನ 287 ಸಂಸದರು ದೇಶ ಪ್ರವೇಶಿಸದಂತೆ ಹೊಸ ನಿರ್ಬಂಧ ಹೇರಲಾಗಿದೆ– ರಷ್ಯಾ ವಿದೇಶಾಂಗ ಸಚಿವಾಲಯ

'ಯುದ್ಧ ಬಿಟ್ಟು, ಮಾತುಕತೆಗೆ ಗಮನ ಹರಿಸಿ'

ನವದೆಹಲಿ (ಪಿಟಿಐ): 'ಉಕ್ರೇನ್ ಸಂಘರ್ಷ ಶಮನಕ್ಕೆ ಯುದ್ಧ ಕೊನೆಗೊಳಿಸಲು ಗಮನ ಹರಿಸುವುದು ಮತ್ತು ಮಾತುಕತೆ ಮುಂದುವರಿಸುವುದೇ ಉತ್ತಮ ಮಾರ್ಗ. ಈ ಬಿಕ್ಕಟ್ಟಿನ ಬಗ್ಗೆ ಭಾರತದ ನಿಲುವು ಅಂತಹ ಉತ್ತಮ ಮಾರ್ಗದತ್ತ ಮುನ್ನಡೆಸಲಿದೆ' ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಬುಧವಾರ ಹೇಳಿದ್ದಾರೆ.

ಭಾರತದ ಪ್ರಮುಖ ವಿದೇಶಾಂಗ ನೀತಿ ಮತ್ತು ಭೌಗೋಳಿಕ– ಆರ್ಥಿಕ ಸಮ್ಮೇಳನದ 'ರೈಸಿನಾ ಮಾತುಕತೆ'ಯ ಅಧಿವೇಶನದ ಸಂವಾದದಲ್ಲಿ ಎದುರಾದ ಪ್ರಶ್ನೆಯೊಂದಕ್ಕೆ ಜೈಶಂಕರ್ ಈ ಅಭಿಪ್ರಾಯ ವ್ಯಕ್ತಪಡಿಸಿದರು.

'ಉಕ್ರೇನ್ ಮೇಲಿನ ರಷ್ಯಾದ ಆಕ್ರಮಣವನ್ನು ಭಾರತ ಖಂಡಿಸಿಲ್ಲ' ಎಂದು ಟೀಕಿಸಿದ್ದ ಐರೋಪ್ಯ ದೇಶಗಳು ಮತ್ತು ಅಮೆರಿಕಕ್ಕೆ ಜೈಶಂಕರ್ ಮಂಗಳವಾರವಷ್ಟೇ ತಿರುಗೇಟು ನೀಡಿದ್ದರು.

'ಕಳೆದ ವರ್ಷ ಅಫ್ಗಾನಿಸ್ತಾನದಲ್ಲಿ ಏನಾಯಿತು (ನ್ಯಾಟೊ ಪಡೆ ಹಿಂಪಡೆದು ತಾಲಿಬಾನ್ ಆಡಳಿತಕ್ಕೆ ಆಸ್ಪದ ಕಲ್ಪಿಸಿದ ಅಮೆರಿಕ ಒಪ್ಪಂದ) ಎಂಬುದರ ಜತೆಗೆ, ಪಾಶ್ಚಾತ್ಯ ಶಕ್ತಿಶಾಲಿ ದೇಶಗಳು ಏಷ್ಯಾದಲ್ಲಿ ಯಾವಾಗಲೂ ಸವಾಲುಗಳನ್ನು ಒಡ್ಡುವುದು ಸಹಜ' ಎಂದು ಅಮೆರಿಕ ಮತ್ತು ಐರೋಪ್ಯ ದೇಶಗಳ ವಿರುದ್ಧ ಪರೋಕ್ಷವಾಗಿ ಟೀಕಾ ಪ್ರಹಾರ ನಡೆಸಿದರು.

'ನಾವು ನಿನ್ನೆ ಉಕ್ರೇನ್‌ನಲ್ಲಿ ಸಾಕಷ್ಟು ಸಮಯ ಕಳೆದವು. ನಮ್ಮ ಅಭಿಪ್ರಾಯಗಳನ್ನು ವಿವರಿಸಿದೆವು. ನಮ್ಮ ಮನಸ್ಸಿನಲ್ಲಿರುವ ಉತ್ತಮ ಮಾರ್ಗವೆಂದರೆ ಯುದ್ಧ ಕೊನೆಗೊಳಿಸಿ, ಮಾತುಕತೆ ಮುಂದುವರಿಸುವ ಮಾರ್ಗಗಳನ್ನು ಕಂಡುಕೊಳ್ಳುವುದಾಗಿದೆ. ಈ ನಿಟ್ಟಿನಲ್ಲಿ ಮುಂದಡಿ ಇಡಲು, ನಮ್ಮ ನಿಲುವು ಉತ್ತಮ ಆಯ್ಕೆಗಳಲ್ಲಿ ಒಂದೆನಿಸಿದೆ' ಎಂದು ಹೇಳಿದರು.

ನಮೋ ಘಾಟ್ ಶೀಘ್ರ ಪ್ರವಾಸಿ ತಾಣ

ವಾರಾಣಸಿ(ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿನಿಧಿಸುವ ಲೋಕಸಭಾ ಕ್ಷೇತ್ರ ವಾರಾಣಸಿಯಲ್ಲಿರುವ ನಮೋ ಘಾಟ್ ಎಂದೇ ಖ್ಯಾತವಾದ ಖಿಡಕಿಯಾ ಘಾಟ್ ಶೀಘ್ರವೇ ಪ್ರವಾಸಿ ತಾಣವಾಗಿ ಹೊರಹೊಮ್ಮಲಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

3 ಶಿಲ್ಪಗಳಿರುವ ಈ ಘಾಟ್ ಅನ್ನು ₹35 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಪ್ರಧಾನಿ ಮೋದಿ ಅವರೇ ಇದನ್ನು ಉದ್ಘಾಟಿಸುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ವಾರಾಣಸಿಯಲ್ಲಿರುವ 85ನೇ ಘಾಟ್ ಇದಾಗಿದ್ದು, 25 ಅಡಿಯ 2 ಶಿಲ್ಪಗಳು ಮತ್ತು 15 ಅಡಿಯ ಶಿಲ್ಪವು ಗಂಗಾ ನದಿಗೆ ನಮಸ್ಕರಿಸುವ ಭಂಗಿಯಲ್ಲಿದೆ ಎಂದರು.

'ಭಾರತ-ಫಿಜಿ ಸಂಬಂಧ ಗಟ್ಟಿ' (ನವದೆಹಲಿ ವರದಿ): 'ಭಾರತ ಮತ್ತು ಫಿಜಿ ನಡುವಿನ ಸಂಬಂಧಗಳು ಪರಸ್ಪರ ಗೌರವ ಮತ್ತು ಸಹಕಾರಗಳ ಮೇಲೆ ನಿಂತಿವೆ. ಈ ಸಂಬಂಧಗಳು ಮತ್ತಷ್ಟು ಗಟ್ಟಿಯಾಗಲಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಫಿಜಿಯ ಸುವಾದಲ್ಲಿ ಸ್ಥಾಪಿಸಿರುವ ಶ್ರೀ ಸತ್ಯ ಸಾಯಿ ಸಂಜೀವಿನಿ ಮಕ್ಕಳ ಹೃದಯ ಆಸ್ಪತ್ರೆ ಉದ್ಘಾಟನೆಯಲ್ಲಿ ವರ್ಚುವಲ್ ಮೂಲಕ ಮಾತನಾಡಿದರು.

ಸಂಕ್ಷಿಪ್ತ ಸುದ್ದಿ

ಬಿಲಾವಲ್ ಭುಟ್ಟೊ ಅಧಿಕಾರ ಸ್ವೀಕಾರ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ವಿದೇಶಾಂಗ ಸಚಿವರಾಗಿ ಬಿಲಾವಲ್ ಭುಟ್ಟೊ ಜರ್ದಾರಿ ಅವರು ಬುಧವಾರ ಪ್ರಮಾಣ ಸ್ವೀಕರಿಸಿದರು. ಅಮೆರಿಕ ಜೊತೆಗೆ ಬಾಂಧವ್ಯ ವೃದ್ಧಿ ಮತ್ತು ಭಾರತ ಜೊತೆಗಿನ ಶಾಂತಿ ಮಾತುಕತೆ ಪ್ರಕ್ರಿಯೆ ಆರಂಭಿಸುವ ಸವಾಲು ಇವರ ಮುಂದಿದೆ.

2018ರಲ್ಲಿ ಅವರು ಸಂಸತ್ತಿಗೆ ಆಯ್ಕೆಯಾಗಿದ್ದು, ಇದೇ ಮೊದಲ ಬಾರಿ ಅವರಿಗೆ ಪ್ರಮುಖ ಹೊಣೆಗಾರಿಕೆ ಸಿಕ್ಕಿದೆ.

ಸೂಕಿಗೆ ಐದು ವರ್ಷ ಜೈಲು ಶಿಕ್ಷೆ

ಯಾಂಗೋನ್ (ಎಎಫ್‌ಪಿ): ನ್ಯಾಷನಲ್ ಲೀಗ್ ಫಾರ್ ಡೆಮಾಕ್ರಸಿ ಪಕ್ಷದ ನಾಯಕಿ ಆಂಗ್ ಸಾನ್ ಸೂಕಿ ಅವರಿಗೆ ಮ್ಯಾನ್ಮಾರ್‌ನ ಜುಂಟಾ ನ್ಯಾಯಾಲಯ, ಭ್ರಷ್ಟಾಚಾರ ಪ್ರಕರಣದಲ್ಲಿ ಐದು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

₹4.60 ಕೋಟಿ ಮೌಲ್ಯದ ಚಿನ್ನ, ನಗದು ಲಂಚವಾಗಿ ಪಡೆದ ಆರೋಪ ಸೂಕಿ ಅವರ ಮೇಲಿತ್ತು. ಅಧಿಕೃತ ರಹಸ್ಯ ಕಾಯ್ದೆಯ ಉಲ್ಲಂಘನೆ, ಚುನಾವಣೆಯಲ್ಲಿ ವಂಚನೆ, ಭ್ರಷ್ಟಾಚಾರ ಸೇರಿ ಹಲವು ಪ್ರಕರಣಗಳು ಸೂಕಿ ವಿರುದ್ಧ ದಾಖಲಾಗಿವೆ. ಮ್ಯಾನ್ಮಾರ್‌ನಲ್ಲಿ ಕ್ಷಿಪ್ರ ದಂಗೆ ನಡೆದು, ಸೇನಾ ಆಡಳಿತ ಬಂದ ಮೇಲೆ 2021ರ ಫೆಬ್ರುವರಿಯಿಂದ ಅವರನ್ನು ಬಂಧನದಲ್ಲಿರಿಸಿದೆ.

ಇಸ್ರೇಲ್ ಕ್ಷಿಪಣಿ ದಾಳಿ: 9 ಸಾವು

ಬೈರುತ್ (ಎಎಫ್‌ಪಿ): ಸಿರಿಯಾದ ರಾಜಧಾನಿ ಡಮಾಸ್ಕಸ್‌ನ ಹೊರ ವಲಯದ ಮೇಲೆ ಇಸ್ರೇಲ್ ಬುಧವಾರ ಕ್ಷಿಪಣಿ ದಾಳಿ ನಡೆಸಿದ್ದು, ಸಿರಿಯಾದ ಐವರು ಯೋಧರು ಸೇರಿ 9 ಮಂದಿ ಮೃತಪಟ್ಟಿದ್ದಾರೆ. ಮೂವರು ಗಾಯಗೊಂಡಿದ್ದಾರೆ. ಇಸ್ರೇಲ್‌ನ ದಕ್ಷಿಣ ಭಾಗದಿಂದ ಮಧ್ಯರಾತ್ರಿ ಕ್ಷಿಪಣಿ ಪ್ರಯೋಗಿಸಲಾಗಿದೆ. ಇರಾನ್ ಸೇನೆಯ ಶಸ್ತ್ರಾಸ್ತ್ರ ಕೋಠಿ ಮತ್ತು ನೆಲೆ ಗುರಿಯಾಗಿಸಿ ಈ ದಾಳಿ ನಡೆದಿದೆ ಎಂದು ಸಿರಿಯಾ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಜಿಮ್ನಾಸ್ಟಿಕ್ಸ್: ಅನುರಾಧಾ ಆಯ್ಕೆ


ಅನುರಾಧಾ

ಬೆಂಗಳೂರು: ಕರ್ನಾಟಕದ ಅನುರಾಧಾ ನಮಶಿವಾಯ ಅವರು ಬುಧವಾರ ಮಹಿಳಾ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್ ಅಂತರರಾಷ್ಟ್ರೀಯ ಜಡ್ಜ್ ಆಗಿ ನೇಮಕಗೊಂಡಿದ್ದಾರೆ. ಕರ್ನಾಟಕ ಜಿಮ್ನಾಸ್ಟಿಕ್ಸ್ ಸಂಸ್ಥೆಯ ಗೌರವ ಉಪಾಧ್ಯಕ್ಷರಾಗಿರುವ ಅನುರಾಧಾ, ಈ ಪ್ರಮಾಣಪತ್ರ ಪಡೆದ ದಕ್ಷಿಣ ಭಾರತದ ಮೊದಲ ಮಹಿಳೆಯಾಗಿದ್ದಾರೆ.

ವಿಶ್ವ 10ಕೆ: ಇದ್ರಿಸ್, ಒಬಿರಿ ಆಕರ್ಷಣೆ

ಬೆಂಗಳೂರು: 5000 ಮೀಟರ್ಸ್ ಓಟದ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಹಾಲಿ ವಿಶ್ವ ಚಾಂಪಿಯನ್‌ಗಳಾಗಿರುವ ಮುಕ್ತಾರ್ ಇದ್ರಿಸ್ ಮತ್ತು ಹೆಲೆನ್ ಒಬಿರಿ ಅವರು ಟಿಸಿಎಸ್ ಬೆಂಗಳೂರು ವಿಶ್ವ 10ಕೆ ಸ್ಪರ್ಧೆಗೆ ಪ್ರಮುಖ ಆಕರ್ಷಣೆಯಾಗಲಿದ್ದಾರೆ.

ಉದ್ಯಾನನಗರಿಯಲ್ಲಿ ಮೇ 15ರಂದು ನಡೆಯಲಿರುವ ಪ್ರತಿಷ್ಠಿತ ಸ್ಪರ್ಧೆಯಲ್ಲಿ ಇಥಿಯೋಪಿಯಾದ ಇದ್ರಿಸ್ ಮತ್ತು ಕೆನ್ಯಾದ ಹೆಲೆನ್ ಸ್ಪರ್ಧಿಸಲಿದ್ದಾರೆ ಎಂದು 10ಕೆ ಪ್ರಾಯೋಜಕ ಸಂಸ್ಥೆ ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ಬುಧವಾರ ತಿಳಿಸಿದೆ.

5000 ಮೀಟರ್ಸ್‌ನಲ್ಲಿ ಇದ್ರಿಸ್ 2 ಬಾರಿ ವಿಶ್ವಚಾಂಪಿಯನ್ ಆಗಿದ್ದಾರೆ.

ಖೇಲೊ ಇಂಡಿಯಾ ವಿವಿ ಕ್ರೀಡಾಕೂಟ: ಐದು ಕೂಟ ದಾಖಲೆ; ಮತ್ತೆ ಮಿಂಚಿದ ಶಿವ ಶ್ರೀಧರ್

ಆ್ಯನ್ ದಾಖಲೆ; ಜೈನ್ ಮೇಲುಗೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇಟ್‌ಲಿಫ್ಟಿಂಗ್‌ನ ಕ್ಲೀನ್ ಆ್ಯಂಡ್ ಜರ್ಕ್‌ನಲ್ಲಿ ಮಂಗಳೂರು ವಿಶ್ವವಿದ್ಯಾಲಯದ ಆ್ಯನ್ ಮರಿಯ ರಾಷ್ಟ್ರೀಯ ದಾಖಲೆ ಬರೆದ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ನಾಲ್ಕನೇ ದಿನ ಆತಿಥೇಯ ಜೈನ್ ವಿವಿ ಅಗ್ರಸ್ಥಾನದಲ್ಲಿ ಮುಂದುವರಿದಿದೆ.

ಹಾಲಿ ರಾಷ್ಟ್ರೀಯ ಚಾಂಪಿಯನ್ ಆ್ಯನ್ ಮರಿಯ, ಜೈನ್ ವಿವಿ ಆವರಣದಲ್ಲಿ ಬುಧವಾರ ಬೆಳಿಗ್ಗೆ ನಡೆದ ಮಹಿಳೆಯರ 87 ಕೆಜಿ ವಿಭಾಗದಲ್ಲಿ ಒಟ್ಟು 230 ಕೆಜಿ (101 + 129) ಭಾರ ಎತ್ತಿ ಚಿನ್ನದ ಪದಕಕ್ಕೆ ಮುತ್ತಿಕ್ಕಿದರು. ಕ್ಲೀನ್ ಆ್ಯಂಡ್ ಜರ್ಕ್‌ನಲ್ಲಿ ರಾಷ್ಟ್ರೀಯ ದಾಖಲೆ ಮುರಿದರು. 55 ಕೆಜಿ ವಿಭಾಗದಲ್ಲಿ ಲಕ್ಷ್ಮಿ ಕಂಚಿನ ಪದಕ ಗಳಿಸಿದರು. ಇವರಿಬ್ಬರೂ ಆಳ್ವಾಸ್ ಕಾಲೇಜಿನ ವಿದ್ಯಾರ್ಥಿಗಳು.

ಆತಿಥೇಯ ಜೈನ್ ಕಾಲೇಜು ಬುಧವಾರವೂ ಪಾರಮ್ಯ ಮುಂದುವರಿಸಿತು. 11 ಚಿನ್ನದೊಂದಿಗೆ ಒಟ್ಟು 17 ಪದಕ ಗಳಿಸಿರುವ ಜೈನ್ ವಿವಿ ಚಿನ್ನ ಗಳಿಕೆಯಲ್ಲಿ ಎರಡಂಕಿ ಮೊತ್ತ ದಾಟಿದ ಮೊದಲ ತಂಡ ಎನಿಸಿಕೊಂಡಿತು. ಮುಂಬೈ ವಿವಿಯನ್ನು ಹಿಂದಿಕ್ಕಿದ ಪುಣೆಯ ಸಾವಿತ್ರಿಬಾಯಿ ಫುಲೆ ವಿವಿ 5 ಚಿನ್ನದೊಂದಿಗೆ 18 ಪದಕ ಗಳಿಸಿ ಎರಡನೇ ಸ್ಥಾನದಲ್ಲಿದೆ. ಪಂಜಾಬ್, ಮದ್ರಾಸ್, ಅಣ್ಣಾ ಮತ್ತು ಮುಂಬೈ ವಿವಿಗಳು ಕೂಡ ತಲಾ 5 ಚಿನ್ನ ಗಳಿಸಿವೆ. ಕರ್ನಾಟಕದ 8 ವಿವಿಗಳು ಪದಕ ಪಟ್ಟಿಯಲ್ಲಿ ಸೇರಿಕೊಂಡಿವೆ.


ಪುರುಷರ ಬ್ಯಾಡ್ಮಿಂಟನ್ ಫೈನಲ್‌ನಲ್ಲಿ ಷಟಲ್ ಹಿಂದಿರುಗಿಸಿದ ಜೈನ್ ವಿವಿಯ ರಘು ಮರಿಸ್ವಾಮಿ –ಪ್ರಜಾವಾಣಿ ಚಿತ್ರ/ವಿ.ಪುಷ್ಕರ್

ಬುಧವಾರ 5 ಕೂಟ ದಾಖಲೆ ಮತ್ತು ಒಂದು ರಾಷ್ಟ್ರೀಯ ದಾಖಲೆ ನಿರ್ಮಾಣವಾಯಿತು.

ನಾಲ್ಕನೇ ದಿನದ ಫಲಿತಾಂಶಗಳು: ಈಜು: ಪುರುಷರ 400 ಮೀ ವೈಯಕ್ತಿಕ ಮೆಡ್ಲೆ: ಶಿವ ಶ್ರೀಧರ್ (ಜೈನ್ ವಿವಿ)-1. ಕಾಲ: 4:38.98 (ಕೂಟ ದಾಖಲೆ. ಹಳೆಯದು: 4:47.13, ಶಿವ ಶ್ರೀಧರ್); ಸಿದ್ಧಾಂತ್ ಸೇಜ್ವಾಲ್ (ಪಂಜಾಬ್ ವಿವಿ)-2, ಜತಿನ್ (ಬೆಂಗಳೂರು ವಿವಿ)-3; 4x100 ಮೀ ಮೆಡ್ಲೆ ರಿಲೆ:ಅಣ್ಣಾ ವಿವಿ-1.ಕಾಲ: 3:55.07 (ಕೂಟ ದಾಖಲೆ. ಹಳೆಯದು: 4:06.53, ಡೆಲ್ಲಿ ವಿವಿ), ಜೈನ್ ವಿವಿ-2, ಅದಮಾಸ್ ವಿವಿ-3; 200 ಮೀ ಫ್ರೀಸ್ಟೈಲ್: ಅನುರಾಗ್ ದಾಗಾರ್ (ಪಂಜಾಬ್)-1. ಕಾಲ: 1:55.75 (ಕೂಟ ದಾಖಲೆ. ಹಳೆಯದು: 2:01.28, ಸಿದ್ಧಾಂತ್ ಸೇಜ್ವಾಲ್), ಸತ್ಯಸಾಯಿ ಕೃಷ್ಣನ್ (ಮದ್ರಾಸ್)-2, ಗೌರವ್ ಚವಾಣ್ (ಶಿವಾಜಿ)-3; 100 ಮೀ ಬಟರ್‌ಫ್ಲೈ: ಶಿವ ಶ್ರೀಧರ್ (ಜೈನ್)-1. ಕಾಲ: 56.26 (ಕೂಟ ದಾಖಲೆ. ಹಳೆಯದು: 56.76, ಮಹಿರ್ ಆಮ್ರೆ), ಆರ್ಯನ್ ಪಾಂಚಾಲ್ (ಗುಜರಾತ್)-2, ಸಮೀರ್ ಸೇಜ್ವಾಲ್ (ಪಂಜಾಬ್)-3. ಮಹಿಳೆಯರ 800 ಮೀ ಫ್ರೀಸ್ಟೈಲ್: ಪ್ರೀತಾ (ಬೆಂಗಳೂರು)-1. ಕಾಲ: 10:10.15, ವರ್ಷಾ (ಮದ್ರಾಸ್)-2, ಅಭಿಷಿಕ್ತ (ರಾಮಚಂದ್ರ ಸಂಸ್ಥೆ)-3; 200 ಮೀ ಬಟರ್‌ಫ್ಲೈ: ಕಲ್ಯಾಣಿ ಸಕ್ಸೇನ (ನರ್ಮದಾ)-1. ಕಾಲ: 2:31.98, ಸುಚೇತನ (ನಿರ್ಮಾ)-2, ಸೃಷ್ಟಿ ಉಪಾಧ್ಯ (ಜಾಧವಪುರ್)-3; 200 ಮೀ ಫ್ರೀಸ್ಟೈಲ್: ವರ್ಷಾ (ಮದ್ರಾಸ್)-1. ಕಾಲ: 2:18.26 ಸಾಧ್ವಿ ದುರಿ (ಪುಣೆ)-2, ಪ್ರೀತ (ಬೆಂಗಳೂರು)-3; 100 ಮೀ ಬಟರ್‌ಫ್ಲೈ: ಸೃಷ್ಟಿ ಉಪಾಧ್ಯ (ಜಾಧವಪುರ್)-1. ಕಾಲ: 1:06.69 (ಕೂಟ ದಾಖಲೆ. ಹಳೆಯದು: 1:07.36, ಸಾಧ್ವಿ ದುರಿ); ದಾಮಿನಿಗೌಡ (ರಾಜೀವ್ ಗಾಂಧಿ)-2, ಡಾಲ್ಫಿ ಸಾರಂಗ್ (ನರ್ಮದಾ)-3; 4x100 ಮೀ ಮೆಡ್ಲೆ: ಮದ್ರಾಸ್-1. ಕಾಲ: 4:59.17, ಜಾಧವಪುರ್-2, ಜೈನ್-3.

ವೇಟ್‌ಲಿಫ್ಟಿಂಗ್: ಮಹಿಳೆಯರ 87 + ಕೆಜಿ: ಆ್ಯನ್ ಮರಿಯ (ಮಂಗಳೂರು)-1. ಭಾರ: 101 + 129ಕೆಜಿ; ಒಟ್ಟು 230 ಕೆಜಿ (ಕ್ಲೀನ್ ಆ್ಯಂಡ್ ಜರ್ಕ್‌ನಲ್ಲಿ ರಾಷ್ಟ್ರೀಯ ದಾಖಲೆ. ಹಳೆಯದು: 128 ಕೆಜಿ, ಮನ್‌ಪ್ರೀತ್ ಕೌರ್, ರಾಷ್ಟ್ರೀಯ ಚಾಂಪಿಯನ್‌ಷಿಪ್ 2022); ಸತ್ಯಜ್ಯೋತಿ (ನಾಗಾರ್ಜುನ)-2, ಮುಸ್ಕಾನ್ ಸಿಂಗ್ (ಕುರುಕ್ಷೇತ್ರ)-3; ಪುರುಷರ 109 + ಕೆಜಿ: ರುದ್ರಮಾಯನ್ (ಮನೋನ್ಮಣಿಯಂ)-1. ಭಾರ: 150 + 176ಕೆಜಿ; ಒಟ್ಟು 326 ಕೆಜಿ, ಕುಶಾಲ್ ಗೌಡ (ಜೈನ್)-2, ಅಖಿಲ್ ಸಾರಂಗಿ (ನಾಗಾರ್ಜುನ)-3. ಶೂಟಿಂಗ್: 10 ಮೀ ಏರ್ ರೈಫಲ್ ಮಿಶ್ರ ತಂಡ: ಸಾವಿತ್ರಿಬಾಯಿ ಫುಲೆ ವಿವಿ-1, ಮಣಿಪಾಲ್ ವಿವಿ-2, ಕುರುಕ್ಷೇತ್ರ-3; ಟ್ರ್ಯಾಪ್ ಮಿಶ್ರ ತಂಡ: ಮಾನವ್ ರಚನಾ ವಿವಿ-1, ಡೆಲ್ಲಿ-2, ಗುರುನಾನಕ್-3. ಬ್ಯಾಡ್ಮಿಂಟನ್: ಜೈನ್ ವಿವಿ-1, ಎಸ್‌ಆರ್‌ಎಂ-2, ಸಾವಿತ್ರಿಬಾಯಿ ಫುಲೆ-3; ಮಹಿಳೆಯರ ವಿಭಾಗ: ಜೈನ್-1, ಮದುರೈ-2, ಎಸ್‌ಆರ್‌ಎಂ-3; ಬ್ಯಾಸ್ಕೆಟ್‌ಬಾಲ್: ಪುರುಷರ ವಿಭಾಗ: ಪಂಜಾಬ್ ವಿವಿಗೆ ಜಾಮಿಯಾ ಇಸ್ಲಾಮಿಯಾ ವಿರುದ್ಧ 85-84ರಲ್ಲಿ ಜಯ. ಮಹಿಳಾ ವಿಭಾಗ: ಮದ್ರಾಸ್ ವಿವಿಗೆ ಎಸ್‌ಆರ್‌ಎಂ ವಿವಿ ವಿರುದ್ಧ 65-48ರಲ್ಲಿ ಜಯ.


ಕ್ರೀಡಾಕೂಟದ ಅಂಗವಾಗಿ ಆರಂಭಗೊಂಡ ಪ್ಯಾರಾಸೇಲಿಂಗ್‌ನಲ್ಲಿ ಪಾಲ್ಗೊಂಡ ಅಥ್ಲೀಟ್ ಗಾಳಿಯಲ್ಲಿ ತೇಲಿದರು —ಪ್ರಜಾವಾಣಿ ಚಿತ್ರ/ಬಿ.ಕೆ.ಜನಾರ್ದನ್

ಸೈನಾ, ಸಿಂಧು ಮುನ್ನಡೆ

ಮನಿಲಾ, ಫಿಲಿಪ್ಪೀನ್ಸ್ (ಪಿಟಿಐ): ಭಾರತದ ಸೈನಾ ನೆಹ್ವಾಲ್, ಪಿ.ವಿ. ಸಿಂಧು ಮತ್ತು ಕಿದಂಬಿ ಶ್ರೀಕಾಂತ್ ಅವಗರು ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ತಡೆ ದಾಟಿದ್ದಾರೆ. ಆದರೆ ಲಕ್ಷ್ಯ ಸೇನ್ ಮತ್ತು ಬಿ.ಸಾಯಿ ಪ್ರಣೀತ್ ಸವಾಲು ಮೊದಲ ಸುತ್ತಿನಲ್ಲಿಯೇ ಅಂತ್ಯವಾಯಿತು.

ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಸೈನಾ 21-15, 17-21, 21-13ರಿಂದ ದಕ್ಷಿಣ ಕೊರಿಯಾದ ಸಿಮ್ ಯೂಜಿನ್ ಅವರಿಗೆ ಸೋಲುಣಿಸಿದರು.

ಮೊದಲ ಸುತ್ತಿನಲ್ಲಿ ಸಿಂಧು 18-21, 27-25, 21-9ರಿಂದ ಚೀನಾ ತೈಪೆಯ ಪೈ ಯು ಪೊ ಅವರನ್ನು ಮಣಿಸಿದರು. ಪುರುಷರ ಸಿಂಗಲ್ಸ್‌ನಲ್ಲಿ ಶ್ರೀಕಾಂತ್ 22-20, 21-15ರಿಂದ ಚೀನಾದ ವೆಂಗ್ ಹಾಂಗ್ ಯಾಂಗ್ ಅವರನ್ನು ಸೋಲಿಸಿದರು.

ಲಕ್ಷ್ಯ ಸೇನ್ ಮೊದಲ ಪಂದ್ಯದಲ್ಲಿ ಚೀನಾದ 21-12, 10-21, 19-21ರಿಂದ ಲೀ ಶಿ ಫೆಂಗ್ ಎದುರು ನಿರಾಸೆ ಅನುಭವಿಸಿದರು.

ಆಟೊ ಚಾಲಕ ತಂದೆ; ಕ್ರೀಡಾಸಕ್ತೆ ತಾಯಿ: ಆಳ್ವಾಸ್ ವಿದ್ಯಾರ್ಥಿನಿಗೆ ಸಾಯ್‌ನಲ್ಲಿ ತರಬೇತಿ

ತೂಕ ಇಳಿಸುವ ಯತ್ನಕ್ಕೆ ಒಲಿದ ಪದಕ

• ವಿಕ್ರಂ ಕಾಂತಿಕೆರೆ

ಬೆಂಗಳೂರು: ನಿತ್ಯವೂ ಮುಂಜಾನೆ ತ್ರಿಶೂರ್ ನಗರದ ಆಟೊ ಸ್ಟ್ಯಾಂಡ್‌ಗೆ ಹೋಗುವ ತಿಮೋತಿ ಬುಧವಾರ ಬೆಳಿಗ್ಗೆ ಮನೆಯಲ್ಲೇ ಇದ್ದರು. ಮೊಬೈಲ್ ಫೋನ್‌ನಲ್ಲಿ ದೂರದರ್ಶನದ ಯುಟ್ಯೂಬ್ ಚಾನಲ್ ಮೇಲೆ ಅವರ ದೃಷ್ಟಿ ನೆಟ್ಟಿತ್ತು. ನಡತ್ತರದಲ್ಲಿರುವ ಮನೆಯಲ್ಲಿ ಅವರ ಜೊತೆ ಪತ್ನಿ ಜೆಮಿನಿಯೂ ಇದ್ದರು.

ಅವರ ನಿರೀಕ್ಷೆ ಹುಸಿಯಾಗಲಿಲ್ಲ. ಮಹಿಳೆಯರ ವೇಟ್‌ಲಿಫ್ಟಿಂಗ್‌ನ 87 ಕೆಜಿ ವಿಭಾಗದ ಹಣಾಹಣಿ ಮುಗಿಯುತ್ತಿದ್ದಂತೆ ಮನೆಯಲ್ಲಿ ಖುಷಿಯ ಅಲೆ ಎದ್ದಿತು. ಇತ್ತ, ಭಾರತ ಕ್ರೀಡಾ ಪ್ರಾಧಿಕಾರದ ಬೆಂಗಳೂರಿನ ಪ್ರಾದೇಶಿಕ ಕೇಂದ್ರದಲ್ಲೂ ಮೂಡುಬಿದಿರೆಯ ಆಳ್ವಾಸ್ ಕಾಲೇಜಿನಲ್ಲೂ ಕೊಣಾಜೆಯ ಮಂಗಳೂರು ವಿವಿ ಆವರಣದಲ್ಲೂ ಸಂತಸ ಮನೆಮಾಡಿತು.

ವೇಟ್‌ಲಿಫ್ಟಿಂಗ್‌ನಲ್ಲಿ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನ ಗೆದ್ದ ಆ್ಯನ್ ಮರಿಯಾ ಜನಿಸಿ ಬೆಳೆದದ್ದು ಕೇರಳದಲ್ಲಾದರೂ ಕ್ರೀಡಾ ಸಾಧನೆಗೆ ನೆಲೆ ಕಂಡುಕೊಂಡದ್ದು ಕರ್ನಾಟಕದಲ್ಲಿ. ಹೀಗಾಗಿ ದಕ್ಷಿಣ ಕನ್ನಡದಿಂದ ಬೆಂಗಳೂರಿನವರೆಗೆ ಅವರ ಕ್ರೀಡಾಸಂಬಂಧ ಹಬ್ಬಿದೆ. ಆಳ್ವಾಸ್ ಕಾಲೇಜಿನ ಎಂ.ಎ ವಿದ್ಯಾರ್ಥಿನಿಯಾಗಿರುವ ಅವರು ಸಾಯ್‌ನಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ತೂಕ ಇಳಿಸಲು ಹೋಗಿ ಚಿನ್ನ ಗೆದ್ದ ಹುಡುಗಿ: ಆ್ಯನ್ ಅವರ ತಾಯಿ ಅಥ್ಲೀಟ್. ಮದುವೆಯಾದ ನಂತರ ಸಂಸಾರದ ಜವಾಬ್ದಾರಿಯಿಂದಾಗಿ ಕ್ರೀಡಾಕ್ಷೇತ್ರ ಬಿಟ್ಟರು. ತಂದೆ ವಾಹನ ಚಾಲಕ. 33 ವರ್ಷ ಟ್ರಕ್ ಓಡಿಸಿದ ನಂತರ ಮೊಣಕಾಲಿನ ನೋವಿನಿಂದಾಗಿ ಈಗ ಆಟೊ ಚಾಲನೆ ಮಾಡುತ್ತಿದ್ದಾರೆ.


ದಾಖಲೆಯೊಂದಿಗೆ ಪದಕ ಗೆದ್ದ ಖುಷಿಯಲ್ಲಿ ಆ್ಯನ್ ಮರಿಯ –ಪ್ರಜಾವಾಣಿ ಚಿತ್ರ

> **ತಂದೆ ಮುಂಜಾನೆ 3.30ಕ್ಕೆ ಎದ್ದು ಆಟೊದೊಂದಿಗೆ ನಗರಕ್ಕೆ ಹೋಗುತ್ತಿದ್ದರು. ಅವರಿಗಾಗಿ ತಾಯಿಯೂ ಬೇಗ ಏಳುತ್ತಿದ್ದರು. ಅವರಿಬ್ಬರ ತ್ಯಾಗಕ್ಕೆ ಬೆಲೆ ಕಟ್ಟಲಾಗದು.**
> **ಆ್ಯನ್ ಮರಿಯ,** ವೇಟ್‌ಲಿಫ್ಟರ್

> **ಮಗಳ ಸಾಧನೆಗೆ ನಾವಿಬ್ಬರು ಜೊತೆಯಾಗಿದ್ದೇವೆ ನಿಜ. ಆದರೆ ಇದರ ಹಿಂದಿನ ಪ್ರಯತ್ನವೆಲ್ಲವೂ ಆಕೆಯದು. ಆಕೆಯ ಬಗ್ಗೆ ಅಭಿಮಾನ ಮೂಡಿದೆ.**
> **ತಿಮೋತಿ,** ಆ್ಯನ್ ಮರಿಯ ಅವರ ತಂದೆ

ಬಾಲ್ಯದಲ್ಲಿ ದಪ್ಪ ಇದ್ದ ಮರಿಯಳ ತೂಕ ಇಳಿಸುವುದಕ್ಕಾಗಿ ತಾಯಿ, ಆಕೆಯನ್ನು ಕ್ರೀಡಾ ತರಬೇತಿಗೆ ಕಳುಹಿಸಿದರು. ಆಕೆಯ ದೇಹದಾರ್ಢ್ಯ ಕಂಡ ಸಾಯ್ ತ್ರಿಶೂರ್ ಕೇಂದ್ರದವರು ವೇಟ್‌ಲಿಫ್ಟಿಂಗ್ ತರಬೇತಿ ನಿಡಲಾರಂಭಿಸಿದರು. ಇದಕ್ಕೆ ಫಲ ಸಿಕ್ಕಿತು. ಸಬ್ ಜೂನಿಯರ್ ವಿಭಾಗದಲ್ಲೇ ಪದಕ ಗೆಲ್ಲಲು ಶುರು ಮಾಡಿದರು. 'ದೊಡ್ಡ ಮೊತ್ತವೇನೂ ಇಲ್ಲಿಯವರೆಗೆ ಸಿಗಲಿಲ್ಲ. ಆದರೂ ಸ್ವಲ್ಪ ಪ್ರಯೋಜನವಾಗಿದೆ. ಎಲ್ಲಕಿಂತ ವಿಶೇಷವಾಗಿ ನನ್ನ ಸಾಧನೆಯಿಂದ ಮನೆಯಲ್ಲಿ ಸಂತಸ ಮೂಡಿದೆ. ಇದು ಸಂಸಾರದಲ್ಲಿ ಸಂಕಷ್ಟದ ಭಾರ ಇಳಿಯಲು ನೆರವಾಗಿದೆ' ಎಂದು 'ಪ್ರಜಾವಾಣಿ' ಜೊತೆ ಮಾತನಾಡಿದ ಮರಿಯ ಹೇಳಿದರು.

ದಾಖಲೆ ಮೇಲೆ ದಾಖಲೆ: ಸಬ್‌ಜೂನಿಯರ್ ವಿಭಾಗದ ಕಂಚಿನೊಂದಿಗೆ ಮೊದಲ ಪದಕ ಗೆದ್ದ ಮರಿಯ ನಂತರ ಅಖಿಲ ಭಾರತ ಅಂತರ ಸಾಯ್ ಕೂಟದಲ್ಲಿ ಚಿನ್ನಕ್ಕೆ ಮುತ್ತಿಕ್ಕಿದ್ದರು. ಕಳೆದ ಬಾರಿಯ ಖೇಲೊ ಇಂಡಿಯಾ ವಾರ್ಸಿಟಿ ಗೇಮ್ಸ್‌ನಲ್ಲಿ ಚಿನ್ನ ಗೆದ್ದಿದ್ದ ಅವರು ಕಳೆದ ವರ್ಷ ರಾಷ್ಟ್ರೀಯ ಚಾಂಪಿಯನ್ ಕೂಡ ಆಗಿದ್ದರು. ಈ ವರ್ಷ ಮಾರ್ಚ್‌ನಲ್ಲಿ ನಡೆದ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನ ಸ್ನ್ಯಾಚ್‌ನಲ್ಲಿ 103 ಕೆಜಿ, ಕ್ಲೀನ್ ಆ್ಯಂಡ್ ಜರ್ಕ್‌ನಲ್ಲಿ 128 ಕೆಜಿ ಭಾರ ಎತ್ತುವ ಮೂಲಕ 231 ಕೆಜಿ ಸಾಧನೆಯೊಂದಿಗೆ ರಾಷ್ಟ್ರೀಯ ದಾಖಲೆ ಮಾಡಿದ್ದರು.

ಜಿಮ್‌ನಲ್ಲಿ ಕೆಲಸ ಮಾಡುತ್ತ ಅಭ್ಯಾಸ


ಲಕ್ಷ್ಮಿ

ಮಂಗಳೂರು ವಿವಿಗೆ ವೇಟ್‌ಲಿಫ್ಟಿಂಗ್‌ನಲ್ಲಿ ಕಂಚಿನ ಪದಕ ಗೆದ್ದುಕೊಟ್ಟ ಚಿತ್ರದುರ್ಗ ಜಿಲ್ಲೆಯ ಬರಮಸಾಗರದ ಬಿ.ಲಕ್ಷ್ಮಿ ಬೆಂಗಳೂರಿನ ಸಾಯ್ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಇಲ್ಲಿನ ಜಿಮ್‌ನಲ್ಲಿ ಅರೆಕಾಲಿಕ ಕೆಲಸ ಮಾಡಿ ಗಳಿಸಿದ ಹಣವನ್ನು ವೇಟ್‌ಲಿಫ್ಟಿಂಗ್ ತರಬೇತಿಗಾಗಿ ಬಳಸಿಕೊಳ್ಳುತ್ತಿರುವುದಾಗಿ ಅವರು ಹೇಳಿದ್ದಾರೆ. ಅವರು ಆಳ್ವಾಸ್ ಕಾಲೇಜಿನ ಕಂಪ್ಯೂಟರ್ ವಿಜ್ಞಾನದ ಡಿಪ್ಲೋಮಾ ವಿದ್ಯಾರ್ಥಿನಿ.


ಸೆಮಿಫೈನಲ್‌ನ ಮೊದಲ ಲೆಗ್‌ನಲ್ಲಿ ರಿಯಲ್ ಮ್ಯಾಡ್ರಿಡ್ ತಂಡದ ಲೂಕಾ ಮಾಡ್ರಿಚ್ ಮತ್ತು ಮ್ಯಾಂಚೆಸ್ಟರ್ ಸಿಟಿಯ ಕೆವಿನ್ ಡಿ ಬ್ರೂನ್ ನಡುವೆ ಚೆಂಡಿಗಾಗಿ ಪೈಪೋಟಿ– ಎಎಫ್‌ಪಿ ಚಿತ್ರ

ಚಾಂಪಿಯನ್ಸ್ ಲೀಗ್ ಫುಟ್‌ಬಾಲ್: ಮ್ಯಾಂಚೆಸ್ಟರ್‌ಗೆ ರೋಚಕ ಜಯ

ಮ್ಯಾಂಚೆಸ್ಟರ್ (ರಾಯಿಟರ್ಸ್): ಕರೀಂ ಬೆಂಜೆಮಾ ಎರಡು ಗೋಲುಗಳು ವ್ಯರ್ಥವಾದವು. ಮ್ಯಾಂಚೆಸ್ಟರ್ ಸಿಟಿ ಎಫ್‌ಸಿ ತಂಡವು ಯುಇಎಫ್‌ಎ ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಮೊದಲ ಲೆಗ್‌ನಲ್ಲಿ 4-3ರಿಂದ ರಿಯಲ್ ಮ್ಯಾಡ್ರಿಡ್ ತಂಡಕ್ಕೆ ಸೋಲುಣಿಸಿತು.

ಎಥಿಹಾಡ್ ಕ್ರೀಡಾಂಗಣದಲ್ಲಿ ಮಂಗಳವಾರ ರಾತ್ರಿ ನಡೆದ ಜಿದ್ದಾಜಿದ್ದಿನ ಪಂದ್ಯದ ಎರಡನೇ ನಿಮಿಷದಲ್ಲೇ ಕೆವಿನ್ ಡಿ ಬ್ರೂನ್ ಹೆಡರ್ ಗೋಲು ಗಳಿಸಿ ಮ್ಯಾಂಚೆಸ್ಟರ್ ಸಿಟಿಗೆ ಮುನ್ನಡೆ ತಂದುಕೊಟ್ಟರು. ಇದು ಲೀಗ್‌ನ ನಾಲ್ಕರ ಘಟ್ಟದಲ್ಲಿ ದಾಖಲಾದ ಅತೀ ವೇಗದ ಗೋಲಾಗಿತ್ತು.

11ನೇ ನಿಮಿಷದಲ್ಲಿ ಗೇಬ್ರಿಯಲ್ ಜೇಸಸ್ ಮೂಲಕ ಸಿಟಿ ಮುನ್ನಡೆ ಹೆಚ್ಚಿತು. 33ನೇ ನಿಮಿಷದಲ್ಲಿ ತಮ್ಮ ಮೊದಲ ಗೋಲು ಗಳಿಸಿದ ಬೆಂಜೆಮಾ ರಿಯಲ್ ಮ್ಯಾಡ್ರಿಡ್ ಹಿನ್ನಡೆಯನ್ನು 1-2ಕ್ಕೆ ತಗ್ಗಿಸಿದರು. 53ನೇ ನಿಮಿಷದಲ್ಲಿ ಫಿಲ್ ಫೊಡೆನ್ ಮೂಲಕ ಮ್ಯಾಂಚೆಸ್ಟರ್ ಮೇಲುಗೈ ಸಾಧಿಸಿತು. ಇದಾದ ಎರಡೇ ನಿಮಿಷದಲ್ಲಿ ವಿನಿಸಿಯಸ್ ಜೂನಿಯರ್ ಮ್ಯಾಡ್ರಿಡ್ ತಂಡಕ್ಕೆ ಮತ್ತೊಂದು ಗೋಲು ಗಳಿಸಿಕೊಟ್ಟರು.

74ನೇ ನಿಮಿಷದಲ್ಲಿ ಬರ್ನಾರ್ಡೊ ಸಿಲ್ವಾ ಮ್ಯಾಂಚೆಸ್ಟರ್ ಸಿಟಿ ಪರ ಕಾಲ್ಚಳಕ ತೋರಿದರು. 82ನೇ ನಿಮಿಷದಲ್ಲಿ ಬೆಂಜೆಮಾ ಪೆನಾಲ್ಟಿ ಅವಕಾಶದಲ್ಲಿ ಮತ್ತೊಂದು ಗೋಲು ಗಳಿಸಿದರು.

ಸೆಮಿಫೈನಲ್‌ನ ಎರಡನೇ ಲೆಗ್‌ನಲ್ಲಿ ಉತ್ತಮ ಸಾಮರ್ಥ್ಯ ತೋರಿದರೆ, ರಿಯಲ್ ಮ್ಯಾಡ್ರಿಡ್‌ಗೆ ಪ್ರಶಸ್ತಿ ಸುತ್ತು ತಲುಪುವ ಅವಕಾಶ ಇದೆ.